ಗುರುವಾರ, ಸೆಪ್ಟೆಂಬರ್ 18, 2025 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕಲಾಪ್ರದರ್ಶನ
ಕಲಬುರಗಿಯ ಡಿ.ಎ.ಆರ್. ಪೊಲೀಸ್ ಮೈದಾನದಲ್ಲಿ ನಡೆದ ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ವೀರಗಾಸೆ ನೃತ್ಯ ಪ್ರದರ್ಶನ ನಡೆಯಿತು

ಅಗ್ರಸ್ಥಾನಕ್ಕೆ ವರುಣ್
ಭಾರತದ ಲೆಗ್‌ಬ್ರೇಕ್ ಬೌಲರ್ ವರುಣ್ ಚಕ್ರವರ್ತಿ ಅವರು ಬುಧವಾರ ಪ್ರಕಟವಾದ ಐಸಿಸಿ ಟಿ20 ರ‍್ಯಾಂಕಿಂಗ್ ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ

SHOWROOMS: KARNATAKA: BENGALURU: RENAULT **BANNERGHATTA ROAD** Ph: 9289220872, RENAULT **MYSORE ROAD** Ph: 8527240549, RENAULT **SILK BOARD** Ph: 8527240654, RENAULT **WHITEFIELD** Ph: 8527240685, RENAULT **JP NAGAR** Ph: 8527240626, RENAULT **KALYAN NAGAR** Ph: 8527236137 & 8722866664, RENAULT **SARJAPURA** Ph: 8448481374, 8746811000 & 8496915111, RENAULT **YELAHANKA** Ph: 8527234592, RENAULT **YESWANTHPUR** Ph: 9311832962. RENAULT **TUMKUR** Ph: 8527234251.

ದೇಶಕ್ಕೆ ಜಾತಿ ಸಮಸ್ಯೆ: ಹೈಕೋರ್ಟ್ ಕಳವಳ

ಒಂದು ಸಮುದಾಯವನ್ನು ಓಲೈಸುತ್ತಿರುವ ಕಾರಣ ಸಮಸ್ಯೆ ಹೆಚ್ಚುತ್ತಿದೆ: ನ್ಯಾಯಪೀಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯರನ್ನು ಭಾರತೀಯರು ಎಂದು ನೋಡದೆ, ಆ ಜಾತಿ, ಈ ಜಾತಿ ಎಂದು ನೋಡುತ್ತಿರುವುದೇ ಸಮಸ್ಯೆಯ ಮೂಲವಾಗಿದೆ. ರಾಜಕೀಯ ಪಕ್ಷಗಳು, ಸಮಾಜದ ಒಂದು ಸಮುದಾಯದ ಜನರನ್ನು ಮಾತ್ರವೇ ಓಲೈಕೆ ಮಾಡುತ್ತಿರುವ ಕಾರಣ ಸಮಸ್ಯೆ ಹೆಚ್ಚಾಗುತ್ತಿದೆ' ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

'ನನ್ನ ವಿರುದ್ಧ ಕೊಪ್ಪಳ ನಗರ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ ವಿಜಯಪುರ ಕ್ಷೇತ್ರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಯತ್ನಾಳ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ, 'ಸನಾತನ ಧರ್ಮಕ್ಕೆ ಸೇರಿದ ವ್ಯಕ್ತಿ ಮಾತ್ರ ದಸರಾ ಉದ್ಘಾಟಿಸಬೇಕು. ದಲಿತ ಸಮುದಾಯಕ್ಕೆ ಸೇರಿದ ಮಹಿಳೆ ದಸರಾ ಉದ್ಘಾಟಿಸುವಂತಿಲ್ಲ ಎಂದು ಅರ್ಜಿದಾರರು ಹೇಳಿಲ್ಲ. ಅವರ ಹೇಳಿಕೆಯನ್ನು ತಪ್ಪಾಗಿ ವರದಿ ಮಾಡಲಾಗಿದೆ' ಎಂದು ಆಕ್ಷೇಪಿಸಿದರು.

ಈ ಸಂಬಂಧ ಬಸನಗೌಡ ಪಾಟೀಲ ಯತ್ನಾಳ ನೀಡಿದ್ದಾರೆ ಎನ್ನಲಾದ ಹೇಳಿಕೆಯ ಪೆನ್ ಡ್ರೈವ್ ಅನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯ ಪ್ರಾಸಿಕ್ಯೂಷನ್‌ನ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ ಮತ್ತು ಹೆಚ್ಚುವರಿ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, 'ವಿಶ್ವವೇ ಇಂದು ಜಾಗತಿಕ ಗ್ರಾಮವಾಗಿದೆ. ಮನುಷ್ಯರನ್ನು ಮನುಷ್ಯರು ಎಂದು ಪರಿಗಣಿಸುವುದನ್ನು ಅರ್ಜಿದಾರರು ಕಲಿಯಬೇಕಿದೆ' ಎಂದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ಮೌಖಿಕವಾಗಿ ಕಳವಳ ವ್ಯಕ್ತಪಡಿಸಿತಲ್ಲದೆ, 'ಪೊಲೀಸರು ಯತ್ನಾಳ ವಿರುದ್ಧ ಯಾವುದೇ ಆತುರದ ಕ್ರಮ ಕೈಗೊಳ್ಳಬಾರದು. ಯತ್ನಾಳ ತನಿಖೆಗೆ ಸಹಕರಿಸಬೇಕು' ಎಂದು ಆದೇಶಿಸಿತು. ಅಂತೆಯೇ, ಯತ್ನಾಳ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಮುಂದೂಡಿತು.

ಪ್ರಕರಣವೇನು?: ಯತ್ನಾಳ ಅವರು, 'ದಸರಾದಲ್ಲಿ ಚಾಮುಂಡಿ ದೇವಿಗೆ ಸನಾತನ ಧರ್ಮದವರು ಮಾತ್ರ ಹೂವು ಮುಡಿಸಬೇಕು. ದಲಿತ ಮಹಿಳೆಗೂ ಇದಕ್ಕೆ ಅವಕಾಶವಿಲ್ಲ ಎಂಬ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ ಅವರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ನಿಷೇಧ ಕಾಯ್ದೆ-1989ರ ಕಲಂ 1 (ಎಸ್) ಮತ್ತು ಭಾರತೀಯ ನ್ಯಾಯ ಸಂಹಿತಾ-2023ರ ಕಲಂ 352ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ಜಾತಿ ಸಮೀಕ್ಷೆ ವಿರುದ್ಧ 'ಜಾಗೃತಿ ವಕೀಲರ ವೇದಿಕೆ' ವತಿಯಿಂದ ವಕೀಲರು ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ ರೆಡ್ಡಿ, ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ್ ಇತರರು ಇದ್ದರು ಪ್ರಜಾವಾಣಿ ಚಿತ್ರ

ಜಾತಿವಾರು ಸಮೀಕ್ಷೆ ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ

ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಬಗ್ಗೆ ಸಮೀಕ್ಷೆ ನಡೆಸಲು ಉದ್ದೇಶಿಸಿರುವ ಸರ್ಕಾರದ ನಡೆಯನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲಾಗಿದೆ.

ಪದಾಂಕಿತ ಹಿರಿಯ ವಕೀಲರೂ ಆದ ಕೆ.ಎನ್. ಸುಬ್ಬಾರೆಡ್ಡಿ ಸೇರಿದಂತೆ ಒಟ್ಟು ನಾಲ್ವರು ಸಲ್ಲಿಸಿರುವ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ.

ಅರ್ಜಿಯಲ್ಲಿ ಆಯೋಗದ ಅಧ್ಯಕ್ಷ, ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ರಾಜ್ಯ ಹಿಂದುಳಿದ ವರ್ಗಗಳ ಇಲಾಖೆಯ ಕಾರ್ಯದರ್ಶಿ, ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿ ಮತ್ತು ಭಾರತ ಜನಗಣತಿ ಆಯೋಗ ಹಾಗೂ ರಿಜಿಸ್ಟ್ರಾರ್ ಜನರಲ್ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಕೋರಿಕೆ ಏನು?: 'ಸರ್ಕಾರವು 1,500 ಜಾತಿಗಳು ಮತ್ತು ಉಪಜಾತಿಗಳನ್ನು ಸೂಕ್ತ ರೀತಿಯಲ್ಲಿ ವರ್ಗೀಕರಣ ಮಾಡದೆ ಒಂದರೊಳಗೊಂದು ಮಿಶ್ರಣ ಮಾಡಿದೆ. ಇದು ಕಾನೂನು ವಿರೋಧಿ, ಅಧಿಕಾರ ವ್ಯಾಪ್ತಿ ಮೀರಿದ, ಏಕಪಕ್ಷೀಯ ಮತ್ತು ಕಾನೂನು ಉಲ್ಲಂಘನೆಯ ನಡೆಯಾಗಿದೆ. ಅಷ್ಟಕ್ಕೂ, ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಜಾತಿಗಣತಿ (ಜಾತಿವಾರು ಸಮೀಕ್ಷೆ) ನಡೆಸುವ ಅಧಿಕಾರ ಇಲ್ಲ. ಹಾಗಾಗಿ, ಸರ್ಕಾರ ನಡೆಸಲು ಉದ್ದೇಶಿಸಿರುವ ಈ ಗಣತಿಯನ್ನು ಕೂಡಲೇ ಸ್ಥಗಿತಗೊಳಿಸಲು ಆದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಚಟಿಕೆ ಸುದ್ದಿ

ಶರಾವತಿ: ಸಭೆ ಇಂದು

ಕಾರವಾರ: ಉದ್ದೇಶಿತ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಸಂಬಂಧಿಸಿದಂತೆ ಉತ್ತರ ಕನ್ನಡ ಜಿಲ್ಲೆಯ ಜನರಿಂದ ಅಹವಾಲು ಆಲಿಕೆ ಸಭೆ ಸೆಪ್ಟೆಂಬರ್ 18ರಂದು ಬೆಳಿಗ್ಗೆ 9ಕ್ಕೆ ಹೊನ್ನಾವರ ತಾಲ್ಲೂಕು ಗೇರುಸೊಪ್ಪದ ಗುತ್ತಿಕನ್ನಿಕಾ ದೇವಾಲಯ ಸಭಾಂಗಣದಲ್ಲಿ ಜಿಲ್ಲಾಡಳಿತ ಹಮ್ಮಿಕೊಂಡಿದೆ.

'ಯೋಜನೆಗೆ ಸಂಬಂಧಿಸಿದ ಅಹವಾಲು ಆಲಿಕೆ ಸಭೆಯಲ್ಲಿ ಯುವಜನರು, ಪರಿಸರ ತಜ್ಞರು ಮತ್ತಿತರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಯೋಜನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮವನ್ನು ಸಭೆಯಲ್ಲಿ ತಿಳಿಸಬೇಕು' ಎಂದು ಶರಾವತಿ ಉಳಿಸಿ ಹೋರಾಟ ಸಮಿತಿ ತಿಳಿಸಿದೆ.

ನಟೇಶ್ ವಿರುದ್ಧ ಪ್ರಕರಣ ದಾಖಲಿಸಿ

ಮೈಸೂರು: ಸಾಮಾಜಿಕ ಕಾರ್ಯಕರ್ತ ಎಸ್.ಶ್ರೀನಿವಾಸ್ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ, ಹಿಂದೆ ಮುಡಾ ಆಯುಕ್ತರಾಗಿದ್ದ ಡಿ.ಬಿ.ನಟೇಶ್ ವಿರುದ್ಧ ಪ್ರಕರಣ ದಾಖಲಿಸುವಂತೆ ಇಲ್ಲಿನ ಎಂಟನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಫ್‌ಎಂಸಿ ನ್ಯಾಯಾಲಯವು ಮಂಗಳವಾರ ಆದೇಶಿಸಿದೆ.

'ತಮ್ಮ ವಿರುದ್ಧದ ನನ್ನ ದೂರಿಗೆ ಸಂಬಂಧಿಸಿ ಜಿಲ್ಲಾಧಿಕಾರಿ ಮುಂದೆ ವಿಚಾರಣೆಗೆ ಹಾಜರಾಗದಂತೆ ಮಾಡಲು ಅಧಿಕಾರಿಯು ನನ್ನ ಮೇಲೆ ರೌಡಿಗಳನ್ನು ಕಳಿಸಿದ್ದರು. ಆ ಬಗ್ಗೆ ಪೊಲೀಸ್ ಆಯುಕ್ತರಿಗೂ ದೂರು ಸಲ್ಲಿಸಿದ್ದೆ. 2022ರ ಮಾರ್ಚ್ 10ರಂದು ಅಧಿಕಾರಿಯನ್ನು ಭೇಟಿಯಾಗಿ ಅವರ ಆಡಿಯೊ ರೆಕಾರ್ಡ್ ಮಾಡುತ್ತಿದ್ದೆ. ಆಗ ಹಲ್ಲೆ ನಡೆಸಿದ್ದರು. ಸರ್ಕಾರಿ ಕೆಲಸಕ್ಕೆ ಅಡ್ಡಿ ಆರೋಪದಡಿ ಪೊಲೀಸರಿಗೆ ನನ್ನ ವಿರುದ್ಧವೇ ದೂರು ನೀಡಿದ್ದರು. ಈ ಬಗ್ಗೆ ನ್ಯಾಯಾಲಯಕ್ಕೆ ಸೂಕ್ತ ದಾಖಲೆಯನ್ನು ಸಲ್ಲಿಸಿದ್ದೆ' ಎಂದು ಶ್ರೀನಿವಾಸ್ ತಿಳಿಸಿದರು.

ನ್ಯಾಯಾಲಯವು ನಟೇಶ್ ವಿರುದ್ಧ ಮೊಬೈಲ್ ಫೋನ್ ಕಳವು, ಪ್ರಾಣ ಬೆದರಿಕೆ, ಕೈಯಲ್ಲಿ ಹಲ್ಲೆ ಹಾಗೂ ಅಕ್ರಮ ತಡೆ ಆರೋಪದಲ್ಲಿ ಪ್ರಕರಣ ದಾಖಲಿಸುವಂತೆ ಆದೇಶಿಸಿದೆ.

'ನ್ಯಾಯಾಲಯದಿಂದ ಆದೇಶ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು' ಎಂದು ಲಕ್ಷ್ಮಿಪುರಂ ಠಾಣೆ ಇನ್‌ಸ್ಪೆಕ್ಟರ್ ರವಿಶಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.

ಸುದ್ದಿ 2 ನಿಮಿಷ

ಸಮೀಕ್ಷೆ ಮುಂದೂಡುವುದೇ ಸೂಕ್ತ: ಆರ್. ಅಶೋಕ

ಬೆಂಗಳೂರು: ಜಾತಿಗಳನ್ನು ಒಡೆಯುವ ಉದ್ದೇಶದ ಸಾಮಾಜಿಕ– ಶೈಕ್ಷಣಿಕ ಸಮೀಕ್ಷೆಯನ್ನು ಮುಂದೂಡುವುದು ಉತ್ತಮ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಪ್ರಯುಕ್ತ ಜಯನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, 'ಜಾತಿಗಳ ಮಧ್ಯೆ ಸಂಘರ್ಷ ಸೃಷ್ಟಿಸುವ ಸಮೀಕ್ಷೆಗೆ ಹಣವನ್ನು ಹಾಳು ಮಾಡುವುದು ಬೇಡ' ಎಂದು ತಿಳಿಸಿದರು.

ದಸರಾ ಹಬ್ಬ ಇರುವುದರಿಂದ ಸಮೀಕ್ಷೆ ಮುಂದೂಡಬೇಕು. ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ನಡೆಯುತ್ತಿಲ್ಲ. ಆರ್ಥಿಕ ಸ್ಥಿತಿ ಹಾಳಾಗಿ ಹೋಗಿದೆ. ಬೆಳೆ ಹಾನಿ ಪರಿಹಾರಕ್ಕೆ ಹಣ ಕೊಡಲು ಗತಿ ಇಲ್ಲ. ಅನುದಾನ ನೀಡುವುದರಲ್ಲೂ ತಾರತಮ್ಯ ಮಾಡಲಾಗುತ್ತಿದೆ. ಇಂತಹ ದುಸ್ಥಿತಿಯಲ್ಲಿ ಸಮೀಕ್ಷೆಯ ಅಗತ್ಯವಿದೆಯೇ ಎಂದು ಪ್ರಶ್ನಿಸಿದರು.

ಕುಲ ಕುಲವೆಂದು ಹೊಡೆದಾಡದಿರಿ ಎಂದು ಕನಕದಾಸರು ಹೇಳಿದ್ದರು. ಆದರೆ ಸಿದ್ದರಾಮಯ್ಯ ಆ ತತ್ವಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಕುಲ– ಕುಲಗಳ ನಡುವೆ ಸಂಘರ್ಷ ತಂದಿಡುವ ಕೆಲಸ ಮಾಡುತ್ತಿದ್ದಾರೆ. ಅದಕ್ಕಾಗಿ ಕ್ರೈಸ್ತರಲ್ಲೂ ಹಿಂದೂ ಜಾತಿಗಳನ್ನು ತಂದಿದ್ದಾರೆ. ಹಿಂದೆ ವೀರಶೈವ– ಲಿಂಗಾಯತರನ್ನು ಒಡೆದಿದ್ದರು. ಮತ್ತೆ ಅದೇ ಕೆಲಸ ಮಾಡಲು ಹೊರಟರೆ ಕಾಂಗ್ರೆಸ್ ಪಕ್ಷವೇ ಒಡೆದು ಹೋಗುತ್ತದೆ ಎಂದು ಹೇಳಿದರು.



ಮತ ಕಳವಿನ ಕುರಿತ ಕಾಂಗ್ರೆಸ್ ಆರೋಪ ಅವರಿಗೆ ತಿರುಗುಬಾಣವಾಗುತ್ತಿದೆ. ಅದಕ್ಕೆ ಮಾಲೂರು ಶಾಸಕರ ಪ್ರಕರಣವೇ ಸಾಕ್ಷಿ ಎಂದು ಅಶೋಕ ಅವರು ತಿಳಿಸಿದರು.

'ಬಿಜೆಪಿ, ವೀರಶೈವ ಮಹಾಸಭಾ ಪ್ರತ್ಯೇಕ ಅಭಿಪ್ರಾಯ'

ಬೆಂಗಳೂರು: 'ಜಾತಿವಾರು ಸಮೀಕ್ಷೆಯ ವೇಳೆ ಧರ್ಮದ ಕಾಲಂನಲ್ಲಿ ವೀರಶೈವ ಲಿಂಗಾಯತರು ಏನು ಬರೆಯಬೇಕೆಂಬ ವಿಚಾರದಲ್ಲಿ ಬಿಜೆಪಿಯವರದ್ದು ಒಂದು ಅಭಿಪ್ರಾಯ, ವೀರಶೈವ ಮಹಾಸಭಾದವರದ್ದು ಮತ್ತೊಂದು ಅಭಿಪ್ರಾಯವಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಸಮೀಕ್ಷೆಯಲ್ಲಿ ವೀರಶೈವ ಲಿಂಗಾಯತರು ಹಿಂದೂ ಎಂದೇ ಬರೆಯಿಸಬೇಕೆಂಬ ಬಿಜೆಪಿ ನಾಯಕರ ಹೇಳಿಕೆಯ ಬಗ್ಗೆ ಸುದ್ದಿಗಾರರು ಗಮನಸೆಳೆದಾಗ ಪ್ರತಿಕ್ರಿಯಿಸಿದ ಅವರು, 'ಈ ವಿಷಯದ ಬಗ್ಗೆ ಚರ್ಚೆ ಮಾಡೋಣ' ಎಂದರು.

'ಯಡಿಯೂರಪ್ಪ ಅವರ ಮಗಳೇ ವೀರಶೈವ ಮಹಾಸಭಾ ಮಹಿಳಾ ಘಟಕದ ಅಧ್ಯಕ್ಷರಾಗಿದ್ದಾರೆ. ದಾವಣಗೆರೆಯಲ್ಲಿ ನಡೆದ ಸಮಾವೇಶದಲ್ಲಿ ಯಡಿಯೂರಪ್ಪ ಅವರೂ ಭಾಗಿಯಾಗಿದ್ದರು. ಅಲ್ಲಿ ನಿರ್ಣಯ ಅಂಗೀಕರಿಸಿದಾಗ ಯಡಿಯೂರಪ್ಪ ಮತ್ತು ಅವರ ಪುತ್ರ ವಿಜಯೇಂದ್ರ ಕೂಡಾ ಇದ್ದರು' ಎಂದರು.

'ಈ ವಿಚಾರದಲ್ಲಿ ಬಿಜೆಪಿಯವರು ದ್ವಿಪಾತ್ರ ಮಾಡುತ್ತಿದ್ದಾರೆ' ಎಂದೂ ತಿರುಗೇಟು ನೀಡಿದರು.

'ಲಿಂಗಾಯತ ಎಂದೇ ನಮೂದಿಸಿ'

ಜಾತಿವಾರು ಸಮೀಕ್ಷೆ; ಹಿಂದೂಗಳೆಂದು ಬರೆಯಿಸಬೇಡಿ– ಸ್ವಾಮೀಜಿಗಳ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿವಾರು ಸಮೀಕ್ಷೆಯ ವೇಳೆ ಧರ್ಮದ ಕಾಲಂನಲ್ಲಿ 'ಲಿಂಗಾಯತ' ಎಂದೇ ನಮೂದಿಸಬೇಕು ಎಂದು ಲಿಂಗಾಯತ ಮಠಾಧೀಶರ ಒಕ್ಕೂಟ, ಜಾಗತಿಕ ಲಿಂಗಾಯತ ಮಹಾಸಭಾ, ರಾಷ್ಟ್ರೀಯ ಬಸವದಳ ಮತ್ತು ಲಿಂಗಾಯತ ಧರ್ಮ ಮಹಾಸಭಾ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹೇಳಿವೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಭಾಲ್ಕಿ ಮಠದ ಬಸವ ಲಿಂಗ ಪಟ್ಟದೇವರು, ಗದಗ ತೋಂಟದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ, ಬಸವ ಧರ್ಮ ಪೀಠದ ಅಧ್ಯಕ್ಷೆ ಮಾತೆ ಗಂಗಾದೇವಿ, ಬೆಳಗಾವಿ ರುದ್ರಾಕ್ಷಿ ಮಠದ ಅಲ್ಲಮಪ್ರಭು ಸ್ವಾಮೀಜಿ, ಬೇಲಿಮಠದ ಶಿವರುದ್ರ ಸ್ವಾಮೀಜಿ, 'ಜಾತಿವಾರು ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ 'ವೀರಶೈವ ಲಿಂಗಾಯತ' ಹಾಗೂ 'ಹಿಂದೂ'ಗಳೆಂದು ನಮೂದಿಸಬಾರದು' ಎಂದು ಹೇಳಿದರು.

'ಲಿಂಗಾಯತ ಪ್ರತ್ಯೇಕ ಸ್ವತಂತ್ರ ಧರ್ಮವಾಗಿದ್ದು, ಇದರಲ್ಲಿ 97 ಉಪ ಪಂಗಡಗಳಿವೆ. ಇದುವರೆಗೂ ನಡೆದ ಜಾತಿ ಗಣತಿಗಳಲ್ಲಿ ಅರಿವಿನ ಕೊರತೆಯಿಂದ ಲಿಂಗಾಯತರು ತಮ್ಮ ಧರ್ಮವನ್ನು ಹಿಂದೂ ಎಂದು ಬರೆಯಿಸಿದ್ದಾರೆ. 2027ರ ಮಾರ್ಚ್‌ನಲ್ಲಿ ನಡೆಯಲಿರುವ ಜಾತಿ ಜನಗಣತಿಯಲ್ಲಿ ಎಲ್ಲ ಲಿಂಗಾಯತರು ಧರ್ಮದ ಕಾಲಂನಲ್ಲಿ 'ಲಿಂಗಾಯತ' ಎಂದು ನಮೂದಿಸಬೇಕು. ಹಿಂದೂಗಳೆಂದು ಬರೆಯಿಸಬಾರದು. ಜಾತಿಯ ಕಾಲಂನಲ್ಲಿ ಉಪ ಪಂಗಡಗಳ ಹೆಸರು ಬರೆಯಿಸಬೇಕು. ಎಲ್ಲ ಲಿಂಗಾಯತರು ಹಿಂದೂಗಳೆಂದು ಬರೆಯಿಸುವಂತೆ ಹೇಳುವ ಮೂಲಕ ಕೆಲ ಲಿಂಗಾಯತ ವಿರೋಧಿ ಸಂಸ್ಥೆಗಳು ದಾರಿ ತಪ್ಪಿಸುತ್ತಿವೆ' ಎಂದು ದೂರಿದರು.

'2023ರಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆ ಕೂಡ ಲಿಂಗಾಯತರು ಹಿಂದೂಗಳಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. 2002ರಲ್ಲಿ ಜಾತಿಗೆ ಸಂಬಂಧಿಸಿದಂತೆ ಹೊರಡಿಸಿದ ಆದೇಶದಲ್ಲಿ ರಾಜ್ಯ ಸರ್ಕಾರವು ಕೆಲವರ ಒತ್ತಾಯಕ್ಕೆ ಮಣಿದು ವೀರಶೈವ ಲಿಂಗಾಯತವೆಂದು ಅಧಿಸೂಚನೆ ಹೊರಡಿಸಿದ್ದು ತಪ್ಪು' ಎಂದರು.

'ಲಿಂಗಾಯತ ಧರ್ಮದಲ್ಲಿ 97 ಉಪ ಪಂಗಡಗಳಿದ್ದು, ವೀರಶೈವ ಒಂದು ಉಪ ಪಂಗಡ ಮಾತ್ರ. ವೀರಶೈವದಲ್ಲಿ ಲಿಂಗಾಯತವಿಲ್ಲ. ಆದ್ದರಿಂದ 'ವೀರಶೈವ ಲಿಂಗಾಯತ' ಎನ್ನುವುದು ತಪ್ಪು. ಇದೇ ತಪ್ಪನ್ನು ಅಖಿಲ ಭಾರತ ವೀರಶೈವ ಮಹಾಸಭೆಯು ಮುಂದುವರಿಸುತ್ತಿದೆ. ಇದರಲ್ಲಿ ಆ ಸಂಘಟನೆಗಳ ಪದಾಧಿಕಾರಿಗಳ ರಾಜಕೀಯ ಹಿತಾಸಕ್ತಿ ಅಡಗಿದೆ. ಇಂತಹ ರಾಜಕಾರಣಿಗಳ ಮಾತನ್ನು ಲಿಂಗಾಯತರು ಕೇಳಬಾರದು' ಎಂದು ಕರೆ ನೀಡಿದರು.

ಸರ್ಕಾರದ ವಿರುದ್ಧ ಏಕತಾ ಸಮಾವೇಶ: ಬೊಮ್ಮಾಯಿ

ಗದಗ: 'ಸಮೀಕ್ಷೆ ಹೆಸರಿನಲ್ಲಿ ವೀರಶೈವ ಲಿಂಗಾಯತ ಸಮಾಜ ಒಡೆಯಲು ಯತ್ನಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಒಗ್ಗಟ್ಟು ಪ್ರದರ್ಶಿಸಲು ನಾಡಿನ ಎಲ್ಲ ಮಠಾಧೀಶರ ನೇತೃತ್ವದಲ್ಲಿ ಸೆ.19ರಂದು ಹುಬ್ಬಳ್ಳಿಯಲ್ಲಿ ಏಕತಾ ಸಮಾವೇಶ ನಡೆಯಲಿದೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

'ಏಕತಾ ಸಮಾವೇಶಕ್ಕೆ ಅಖಿಲ ಭಾರತ ವೀರಶೈವ ಮಹಾಸಭಾ ಕೈಜೋಡಿಸಿದೆ. ನಾನು ಕೂಡ ಮಹಾಸಭಾ ಜತೆಗೆ ಮಾತನಾಡಿರುವೆ' ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ರಾಜ್ಯ ಸರ್ಕಾರ ಕ್ರಿಶ್ಚಿಯನ್ ಅಂತ ಎಲ್ಲಾ ಜಾತಿಯಲ್ಲಿ ಉಲ್ಲೇಖ ಮಾಡಿದೆ. ಲಿಂಗಾಯತರು, ಬ್ರಾಹ್ಮಣರು, ಒಕ್ಕಲಿಗರು, ಎಸ್‌ಸಿ, ಎಸ್‌ಟಿಯನ್ನೂ ಬಿಟ್ಟಿಲ್ಲ. ಯಾವುದೇ ಸಮೀಕ್ಷೆಯಲ್ಲಿ ಮತಾಂತರಕ್ಕೆ ಬೇರೆ ಕೋಡ್ ಇಲ್ಲ. ಆದರೆ, ಈವಾಗ ಯಾರು ಹುಟ್ಟು ಹಾಕಿದ್ದಾರೋ ಗೊತ್ತಿಲ್ಲ. ಬೇರೆ ಜಾತಿಯಲ್ಲಿ ಉಪಜಾತಿಗಳನ್ನು ಸೃಷ್ಟಿಸಿದ್ದಾರೆ. ವೀರಶೈವ ಲಿಂಗಾಯತ, ಲಿಂಗಾಯತ ವೀರಶೈವ ಅಂತ ಮಾಡಿದ್ದಾರೆ. ಹೀಗಾದರೆ ಹೇಗೆ ಅದಕ್ಕೆ ಅರ್ಥವಿದೆಯೇ' ಎಂದು ಪ್ರಶ್ನಿಸಿದರು.

ಬೇಡಿಕೆ ಮೇರೆಗೆ ಕ್ರಿಶ್ಚಿಯನ್ ಕಾಲಂ ಸೃಷ್ಟಿ: ಸಚಿವ ಶಿವರಾಜ ತಂಗಡಗಿ

ಕೊಪ್ಪಳ: 'ಜಾತಿಗಳ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಪಟ್ಟಿಯಲ್ಲಿ ಹಿಂದೂ ಜಾತಿಗಳ ಮುಂದೆ ಕ್ರಿಶ್ಚಿಯನ್, ಮುಸ್ಲಿಂ ಎನ್ನುವ ಉಪಜಾತಿಗಳ ಪಟ್ಟಿಯನ್ನು ಬೇಡಿಕೆ ಮೇರೆಗೆ ತಯಾರಿಸಲಾಗಿದೆ. ಆದರೆ, ಜನ ತಮ್ಮ ಜಾತಿಯನ್ನು ದಾಖಲಿಸಲು ಸಂಪೂರ್ಣ ಸ್ವತಂತ್ರರಾಗಿದ್ದಾರೆ' ಎಂದು ಹಿಂದುಳಿದ ವರ್ಗಗಳ ಸಚಿವ ಶಿವರಾಜ ತಂಗಡಗಿ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಟ್ಟಿಯಲ್ಲಿ ಸೃಜಿಸಲಾಗಿರುವ ಕಾಲಂಗಳ ಬಗ್ಗೆ ಆಕ್ಷೇಪವಿದ್ದರೆ ಆಯೋಗಕ್ಕೆ ದೂರು ನೀಡಲಿ. ಪಟ್ಟಿಯಲ್ಲಿ ನಾಸ್ತಿಕ ಕಾಲಂ ಕೂಡ ನೀಡಲಾಗಿದೆ. ಸಮೀಕ್ಷೆ ಆರಂಭವಾಗುವ ಮೊದಲೇ ಬಿಜೆಪಿ ಈ ವಿಷಯದಲ್ಲಿ ವಿನಾಕಾರಣ ರಾಜಕಾರಣ ಮಾಡಿ ಜನರ ದಾರಿ ತಪ್ಪಿಸುತ್ತಿದೆ' ಎಂದರು.

'ಅಕ್ರಮ ವಲಸೆಗೆ ಯಾರು ಹೊಣೆ?'

ಮಡಿಕೇರಿ: 'ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇದೆ. ದೇಶದೊಳಗೆ ಅಕ್ರಮ ವಲಸಿಗರು ಬರುತ್ತಿದ್ದಾರೆ ಎಂದರೆ ಅದಕ್ಕೆ ಯಾರು ಹೊಣೆ?' ಎಂದು ಕಾರ್ಮಿಕ ಖಾತೆ ಸಚಿವ ಸಂತೋಷ್ ಎಸ್. ಲಾಡ್ ಪ್ರಶ್ನಿಸಿದರು.

'ಬಿಜೆಪಿಯು ಅಧಿಕಾರಕ್ಕೆ ಬಂದ ನಂತರ ವಲಸಿಗರನ್ನು ಒಳಗೆ ಬಿಟ್ಟುಕೊಳ್ಳುತ್ತಿದೆಯೇ ಹೊರತು, ಯಾವ ಅಕ್ರಮ ವಲಸಿಗರನ್ನೂ ಹೊರಗೆ ಕಳಿಸಿಲ್ಲ. ಆದರೆ, ನಾವು ರಾಜ್ಯದಲ್ಲಿರಬಹುದಾದ ಅಕ್ರಮ ವಲಸಿಗರ ಪತ್ತೆಗಾಗಿ ಪ್ರಯತ್ನಿಸುತ್ತಿದ್ದೇವೆ' ಎಂದು ಬುಧವಾರ ತಿಳಿಸಿದರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ ಆಯೋಜಿಸಿದ್ದ ಸಭೆಯಲ್ಲಿ ಸ್ವಾಮೀಜಿಗಳು, ಮುಖಂಡರು ಭಾಗವಹಿಸಿದ್ದರು

'ಈಡಿಗ' ಎಂದೇ ದಾಖಲಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ಸೌಲಭ್ಯಗಳನ್ನು ಪಡೆಯಬೇಕಾದರೆ ನಮ್ಮ ಒಗ್ಗಟ್ಟನ್ನು ಪ್ರದರ್ಶಿಸಿ, ಜಾತಿವಾರು ಸಮೀಕ್ಷೆಯಲ್ಲಿ 26 ಉಪ ಪಂಗಡಗಳನ್ನು ಒಳಗೊಂಡ ಈಡಿಗ ಸಮುದಾಯವನ್ನು 'ಈಡಿಗ' ಎಂದೇ ನಮೂದಿಸಬೇಕು' ಎಂದು ಕರ್ನಾಟಕ ಆರ್ಯ ಈಡಿಗರ ಸಂಘದ ಸಭೆಯಲ್ಲಿ ಒಕ್ಕೊರಲಿನ ತೀರ್ಮಾನ ಕೈಗೊಳ್ಳಲಾಗಿದೆ.

ಸೋಲೂರಿನ ಆರ್ಯ ಈಡಿಗ ಮಹಾಸಂಸ್ಥಾನ ಮಠದ ವಿಖ್ಯಾತನಂದ ಸ್ವಾಮೀಜಿ, ಗರ್ತಿಕೆರೆಯ ನಾರಾಯಣ ಗುರು ಪೀಠದ ರೇಣುಕಾನಂದ ಸ್ವಾಮೀಜಿ, ದೇವಿಕಾನಂದ ಸ್ವಾಮೀಜಿ, ಚಿಕ್ಕಬಳ್ಳಾಪುರದ ಶಿವಸಾಯಿ ಸ್ವಾಮೀಜಿ, ಈಡಿಗರ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ, ಉಪಾಧ್ಯಕ್ಷ ಟಿ. ಶಿವಕುಮಾರ್, ಬಿಲ್ಲವ ಸಂಘದ ಅಧ್ಯಕ್ಷ ವೇದಕುಮಾರ್, ಈಡಿಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಶ್ರೀನಿವಾಸ್, ಈಡಿಗರ ಸಂಘದ ನಿರ್ದೇಶಕರಾದ ವಾಸನ್, ಪುರುಷೋತ್ತಮ್, ಮಂಜುನಾಥ್ ಅವರು ಬುಧವಾರ ನಡೆದ ಸಭೆಯಲ್ಲಿ ಭಾಗವಹಿಸಿದ್ದರು.

ಸಭೆ ಬಳಿಕ ಮಾತನಾಡಿದ ತಿಮ್ಮೇಗೌಡ, 'ಜಾತಿವಾರು ಸಮೀಕ್ಷೆಯ ನೆಪದಲ್ಲಿ ಒಂದಾಗುವ ಕಾಲ ಕೂಡಿ ಬಂದಿದೆ. ಈಡಿಗ ಸಮುದಾಯದವರು ಸಮೀಕ್ಷೆಯ ಜಾತಿ ಕಾಲಂ ನಂಬರ್ 9ರಲ್ಲಿ 'ಈಡಿಗ', ಉಪ ಜಾತಿ ಕಲಂನಲ್ಲಿ 'ದೀವರು' ಎಂದು ನಮೂದಿಸಬೇಕು. ರಾಜ್ಯದೆಲ್ಲಡೆ ಈ ಕುರಿತು ಜಾಗೃತಿ ಮೂಡಿಸಲಾಗುವುದು' ಎಂದರು.

ವಿಖ್ಯಾತಾನಂದ ಸ್ವಾಮೀಜಿ ಮಾತನಾಡಿ, 'ಈಡಿಗ ಸಮುದಾಯ 26 ಉಪ ಪಂಗಡಗಳನ್ನು ಒಳಗೊಂಡ ಜನಾಂಗವಾಗಿದೆ. ಪ್ರತಿಯೊಬ್ಬರೂ ಸಮೀಕ್ಷೆಯಲ್ಲಿ ಈಡಿಗ ಎಂದು ಬರೆಯಿಸಿದರೆ ನಮ್ಮ ಒಗ್ಗಟ್ಟನ್ನು ತೋರಿಸಿದಂತಾಗುತ್ತದೆ' ಎಂದರು.

ಗರ್ತಿಕೆರೆಯ ನಾರಾಯಣ ಗುರು ಪೀಠದ ರೇಣುಕಾನಂದ ಸ್ವಾಮೀಜಿ ಮಾತನಾಡಿ, 'ಈಡಿಗ ಸಮುದಾಯ ಪ್ರಸ್ತುತ ಸಮೀಕ್ಷೆಯ ಸಂದರ್ಭದಲ್ಲಿ ನಮ್ಮ ಒಗ್ಗಟ್ಟನ್ನು ಪ್ರದರ್ಶಿಸುವ ಅವಶ್ಯ ಇದೆ' ಎಂದು ಹೇಳಿದರು.

ಪತ್ರಕರ್ತ ಲಕ್ಷ್ಮಣ ಕೊಡಸೆ ಮಾತನಾಡಿ, 'ಶಿವಮೊಗ್ಗ ಜಿಲ್ಲೆಯಲ್ಲಿ ಜಾತಿ ನಮೂದಿಸುವ ಕುರಿತು ಗೊಂದಲವಿದೆ. ಇದನ್ನು ಅವರಿಗೆ ಸಂಘ ಮನವರಿಕೆ ಮಾಡಬೇಕಿದೆ. ಕುರುಬ ಸಮುದಾಯದ ಮಾದರಿಯಲ್ಲಿ ಸಂಘದ ವತಿಯಿಂದ ಜನಾಂಗೀಯ ಅಧ್ಯಯನ ನಡೆಸುವುದು ಅಗತ್ಯವಿದೆ' ಎಂದು ಹೇಳಿದರು.

ನಿಧನ ವಾರ್ತೆ

ಪರಮೇಶ್ವರಪ್ಪ



ಬೆಂಗಳೂರು: ನಿವೃತ್ತ ಐಎಫ್‌ಎಸ್ ಅಧಿಕಾರಿ ಎಸ್.ಪರಮೇಶ್ವರಪ್ಪ (89) ಅವರು ನಗರದ ಆರ್‌ಎಂವಿ 2ನೇ ಹಂತದಲ್ಲಿದ್ದ ಸ್ವಗೃಹದಲ್ಲಿ ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಪರಮೇಶ್ವರಪ್ಪ ಅವರ ಅಂತ್ಯಸಂಸ್ಕಾರವು ಹುಟ್ಟೂರು ಹಿರಿಯೂರು ಬಳಿಯ ಐಮಂಗಲದ ತೋಟದಲ್ಲಿ ಬುಧವಾರ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

3 ಕುಟುಂಬಗಳ ಕಪಿಮುಷ್ಟಿಯಲ್ಲಿ ಸಮುದಾಯ

'ಧರ್ಮ ಜಾಗೃತಿ ಸಮಾವೇಶ'ದಲ್ಲಿ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪ

ಸಂತೇಬೆನ್ನೂರು (ದಾವಣಗೆರೆ): ರಾಜ್ಯದ ವೀರಶೈವ ಲಿಂಗಾಯತ ಸಮುದಾಯವು ದಾವಣಗೆರೆ, ಶಿವಮೊಗ್ಗ ಹಾಗೂ ಬೀದರ್‌ನ ಮೂರು ಕುಟುಂಬಗಳ ಕಪಿಮುಷ್ಟಿಯಲ್ಲಿದೆ. ರಾಜಕೀಯ ಲಾಭಕ್ಕಾಗಿ ಸಮುದಾಯದ ಹಿತಾಸಕ್ತಿ ಬಲಿಕೊಡುವ ಕೆಲಸವನ್ನು ಒಗ್ಗೂಡಿ ಮಾಡಲಾಗುತ್ತಿದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

ಚನ್ನಗಿರಿ ತಾಲ್ಲೂಕಿನ ಮರಡಿ ಗ್ರಾಮದಲ್ಲಿ ಬಸವೇಶ್ವರ ವಿನಾಯಕ ಗೆಳೆಯರ ಬಳಗ ಬುಧವಾರ ಹಮ್ಮಿಕೊಂಡಿದ್ದ 'ಧರ್ಮ ಜಾಗೃತಿ ಸಮಾವೇಶ'ದಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ಕುಟುಂಬಗಳ ಹೆಸರು ಹೇಳದೇ ವಾಗ್ದಾಳಿ ನಡೆಸಿದರು.

'ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ಧರ್ಮದ ಕಾಲಂನಲ್ಲಿ ವೀರಶೈವ - ಲಿಂಗಾಯತರು ಹಿಂದೂ ಎಂದು ಬರೆಯಿಸಬೇಡಿ' ಎಂಬ ಈಶ್ವರ ಖಂಡ್ರೆ ನಿರ್ಧಾರ ಏಕಪಕ್ಷೀಯವಾಗಿದೆ. 'ವೀರಶೈವ–ಲಿಂಗಾಯತರು ಒಗ್ಗೂಡಿ ಹಿಂದೂ ಧರ್ಮ ರಕ್ಷಿಸಬೇಕು' ಎಂಬ ಒತ್ತಾಯ ಕೂಡ ರಾಜಕೀಯ ಪ್ರೇರಿತವಾಗಿದೆ. ಜನರಿಗೆ ಇಂತಹ ಸಲಹೆ ನೀಡುವುದಕ್ಕೂ ಮುನ್ನ ನಿಮ್ಮ ಧರ್ಮ ಯಾವುದು ಎಂಬುದನ್ನು ಮೊದಲು ಸ್ಪಷ್ಟಪಡಿಸಿ' ಎಂದು ಆಗ್ರಹಿಸಿದರು.

'ಭಾರತದಲ್ಲಿ 6 ಧರ್ಮಗಳು ಮಾತ್ರ ಅಧಿಕೃತ. ವೀರಶೈವ– ಲಿಂಗಾಯತ ಅಧಿಕೃತ ಧರ್ಮವಲ್ಲ. ವೀರಶೈವ ಲಿಂಗಾಯತ ಸಮುದಾಯವನ್ನು ಒಗ್ಗೂಡಿಸುವ ಪ್ರಯತ್ನಕ್ಕೆ ಯಾರೂ ಅಡ್ಡಿಪಡಿಸಿಲ್ಲ. ಹೊಂದಾಣಿಕೆ ರಾಜಕಾರಣದಲ್ಲಿ ಪ್ರಾಮಾಣಿಕತೆ ಮರೆಯಾಗಿದೆ' ಎಂದರು.

ಕಲ್ಯಾಣ ಕರ್ನಾಟಕ ಇಲಾಖೆ ಯೋಜನೆ ಸಚಿವರಿಗೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿಗೆ ಸ್ಥಾಪನೆಗೊಳ್ಳುವ ಪ್ರತ್ಯೇಕ ಇಲಾಖೆಯು ಯೋಜನೆ ಮತ್ತು ಸಾಂಖ್ಯಿಕ ಸಚಿವರ ಅಧೀನದಲ್ಲಿ ಕಾರ್ಯನಿರ್ವಹಿಸಲಿದೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಿಬ್ಬಂದಿ ಕೊರತೆ ಇರುವ ಕಾರಣ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಮತ್ತು ಆ ಪ್ರದೇಶದ 7 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡುವ ಅಧಿಕಾರ ನೀಡಲು ಸರ್ಕಾರ ತೀರ್ಮಾನಿಸಿದೆ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿಯವರೇ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸುತ್ತಾರೆ. ಮಂಡಳಿಯ ಎಲ್ಲ ಅಧಿಕಾರಿ, ಸಿಬ್ಬಂದಿಯನ್ನು ಒಳಗೊಂಡ ಇಲಾಖೆಯು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮತ್ತು ಅನುಚ್ಛೇದ 371 ಜೆಗೆ ಸಂಬಂಧಿಸಿದ ವಿಷಯ ನಿರ್ವಹಿಸುತ್ತದೆ.

ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಳಕ್ಕೆ ಮುಂದಾದಲ್ಲಿ 'ಸುಪ್ರೀಂ'ಗೆ ಅರ್ಜಿ

ಪುಣೆ(ಪಿಟಿಐ): ಕರ್ನಾಟಕ ಸರ್ಕಾರವು ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಳ ಮಾಡಲು ಮುಂದಾದಲ್ಲಿ ಅದನ್ನು ಪ್ರಶ್ನಿಸಿ ರಾಜ್ಯವು ಸುಪ್ರೀಂ ಕೋರ್ಟ್ ಮೆಟ್ಟಿಲೇರಲಿದೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಬುಧವಾರ ಹೇಳಿದರು.

'ಅಣೆಕಟ್ಟೆ ಎತ್ತರ ಹೆಚ್ಚಿಸುವ ಕರ್ನಾಟಕದ ಈ ಪ್ರಸ್ತಾವವನ್ನು ಮಹಾರಾಷ್ಟ್ರ ವಿರೋಧಿಸುತ್ತಿದೆ. ಈಗ ತನ್ನ ಯೋಜನೆಗೆ ಕರ್ನಾಟಕ ಮುಂದಾದಲ್ಲಿ, ಅದರ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು' ಎಂದರು.

ಬಾಗಲಕೋಟೆಯಲ್ಲಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಕಚೇರಿ: 835 ಹುದ್ದೆಗಳಲ್ಲಿ, 486 ಹುದ್ದೆಗಳು ಖಾಲಿ

ಯುಕೆಪಿ: ಭೂಸ್ವಾಧೀನಕ್ಕಿಲ್ಲ ಅಧಿಕಾರಿ ವರ್ಗ

• ಬಸವರಾಜ ಹವಾಲ್ದಾರ

ಮುಖ್ಯಾಂಶಗಳು

- ಅರ್ಧಕ್ಕೂ ಹೆಚ್ಚು ಹುದ್ದೆ ಖಾಲಿ
- 25ಸಾವಿರಕ್ಕೂ ಹೆಚ್ಚು ಪ್ರಕರಣ
- ಪ್ರಭಾರಿ ಅಧಿಕಾರಿಗಳೇ ಗತಿ

ಬಾಗಲಕೋಟೆ: ಕೃಷ್ಣಾಮೇಲ್ದಂಡೆ ಯೋಜನೆಯ (ಯುಕೆಪಿ) ಮೂರನೇ ಹಂತದ ಯೋಜನೆಯಲ್ಲಿ ಸ್ವಾಧೀನವಾದ ಭೂಮಿಗೆ ಪರಿಹಾರ ನಿಗದಿ ಮಾಡಲಾಗಿದೆ. ಆದರೆ, ಯೋಜನೆಗೆ ಬೇಕಾದ 1,04,301 ಎಕರೆ ಸ್ವಾಧೀನ ಮಾಡಿಕೊಳ್ಳಬೇಕಾದ ಪುನರ್‌ವಸತಿ, ಪುನರ್‌ನಿರ್ಮಾಣ ಮತ್ತು ಭೂಸ್ವಾಧೀನ ಕಚೇರಿಯು ಸಿಬ್ಬಂದಿ ಕೊರತೆ ಎದುರಿಸುತ್ತಿದೆ.

ಬಾಗಲಕೋಟೆ ನವನಗರದಲ್ಲಿರುವ ಯುಕೆಪಿ ಕಚೇರಿಗೆ 835 ಹುದ್ದೆಗಳು ಮಂಜೂರಾಗಿವೆ. ಅದರಲ್ಲಿ 349 ಮಂದಿ ಕಾರ್ಯ ನಿರ್ವಹಿಸುತ್ತಿದ್ದು, 486 ಹುದ್ದೆಗಳು ಖಾಲಿ ಇವೆ.

ಐವರು ಪುನರ್‌ವಸತಿ ಅಧಿಕಾರಿಗಳ ಪೈಕಿ ನಾಲ್ಕು, 11 ವಿಶೇಷ ಭೂಸ್ವಾಧೀನಾಧಿಕಾರಿಗಳ ಪೈಕಿ ಐದು, 16 ವಿಶೇಷ ತಹಶೀಲ್ದಾರ್ (ಗ್ರೇಡ್ 2) ಪೈಕಿ 14 ಹುದ್ದೆಗಳು ಖಾಲಿ ಇವೆ. ಮೂರು–ನಾಲ್ಕು ಜನರ ಕೆಲಸವನ್ನು ಒಬ್ಬರೇ ಮಾಡಬೇಕಾದ ಸ್ಥಿತಿ ಇದೆ.

ಮುಳುಗಡೆ ಆಗುವ 75,563 ಎಕರೆಯಲ್ಲಿ ಕೇವಲ 2,543 ಎಕರೆ ಮಾತ್ರ ಸ್ವಾಧೀನವಾಗಿದೆ. ಕಾಲುವೆ ನಿರ್ಮಾಣಕ್ಕೆ 51,837 ಎಕರೆ ಭೂಮಿ ಮತ್ತು ಪುನರ್‌ವಸತಿ ಕೇಂದ್ರಗಳಿಗೆ 2,700 ಎಕರೆ ಭೂಸ್ವಾಧೀನ ಆಗಬೇಕಿದೆ.

ಪ್ರಭಾರಿಗಳೇ ಗತಿ: ಕಚೇರಿಯ ಪ್ರಮುಖ ಹುದ್ದೆಗಳಾದ ಆಯುಕ್ತ, ಮಹಾ ವ್ಯವಸ್ಥಾಪಕ, ಉಪ ಮಹಾವ್ಯವಸ್ಥಾಪಕ ಹುದ್ದೆಗಳಿಗೆ ಪ್ರಭಾರಿ ಅಧಿಕಾರಿಗಳಿದ್ದಾರೆ.

ಕೃಷ್ಣ ಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿರುವ ಮೋಹನರಾಜ್ ಕೆ.ಪಿ, ಆಯುಕ್ತರಾಗಿದ್ದಾರೆ. ಬಾಗಲಕೋಟೆ ಜಿಲ್ಲಾಧಿಕಾರಿ ಸಂಗಪ್ಪ, ಮಹಾ ವ್ಯವಸ್ಥಾಪಕರಾಗಿದ್ದರೆ, ತೋಟಗಾರಿಕೆ ವಿಶ್ವವಿದ್ಯಾಲಯದ ಕುಲಸಚಿವ ಮಹಾದೇವ ಮುರಗಿ ಉಪ ಮಹಾವ್ಯವಸ್ಥಾಪಕರು.

1995 ರಿಂದ 2006ರವರೆಗೆ 11 ವರ್ಷ ಎಸ್.ಎಂ. ಜಾಮದಾರ ಆಯುಕ್ತರಾಗಿದ್ದರು. ನಂತರ 2006 ರಿಂದ ಈವರೆಗಿನ 19 ವರ್ಷಗಳಲ್ಲಿ 28 ಅಧಿಕಾರಿಗಳು ಬದಲಾಗಿದ್ದಾರೆ. ಅದರಲ್ಲಿ ಬಹುತೇಕರು ಬೇರೆ ಹುದ್ದೆಯೊಂದಿಗೆ ಈ ಹುದ್ದೆಯಲ್ಲಿ ಪ್ರಭಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ಜಪ್ತಿಗೆ ಬೆದರಿದ ಸಿಬ್ಬಂದಿ: ಸ್ವಾಧೀನವಾಗಿರುವ ಭೂಮಿಗೆ ಹೆಚ್ಚಿನ ಪರಿಹಾರ ನೀಡಬೇಕು ಎಂದು ರೈತರು ನ್ಯಾಯಾಲಯಕ್ಕೆ ಹೋಗಿರುವ ಪ್ರಕರಣಗಳ ಸಂಖ್ಯೆ 25 ಸಾವಿರಕ್ಕೂ ಹೆಚ್ಚಿದೆ. ಕೋರ್ಟ್‌ಗೆ ಹಾಜರಾಗುವುದು, ಉತ್ತರ ಸಿದ್ಧಪಡಿಸುವುದೇ ಸಿಬ್ಬಂದಿಯ ಕೆಲಸವಾಗಿದೆ.

'ವಾರದಲ್ಲಿ ಒಂದಿಲ್ಲೊಂದು ಪ್ರಕರಣದಲ್ಲಿ ಹಣ ಪಾವತಿಸದ ಕಾರಣಕ್ಕೆ ಕಚೇರಿಯ ವಸ್ತುಗಳ ಜಪ್ತಿಗೆ ನ್ಯಾಯಾಲಯಗಳು ಆದೇಶ ನೀಡುತ್ತವೆ. ಕುರ್ಚಿ, ಕಂಪ್ಯೂಟರ್, ಟೇಬಲ್‌ಗಳನ್ನು ಜಪ್ತಿ ಮಾಡಲಾಗುತ್ತದೆ. ಕಂಪ್ಯೂಟರ್‌ನಲ್ಲೇ ಸಾಕಷ್ಟು ದಾಖಲೆಗಳು ಇರುವುದರಿಂದ ಆಗಾಗ ಕೆಲಸಕ್ಕೆ ಅಡ್ಡಿಯಾಗುತ್ತಲೇ ಇರುತ್ತದೆ' ಎಂದು ಕಚೇರಿಯ ಸಿಬ್ಬಂದಿ ದೂರಿದರು.

ಬಾಗಲಕೋಟೆ ನವನಗರದಲ್ಲಿರುವ ಪುನರ್‌ವಸತಿ, ಪುನರ್‌ನಿರ್ಮಾಣ ಮತ್ತು ಭೂಸ್ವಾಧೀನ ಕಚೇರಿ

> ಪ್ರಾಧಿಕಾರ ರಚಿಸಿ, ವಿಶೇಷ ಆಯುಕ್ತರ ನೇಮಕ ಮಾಡಲು ನಿರ್ಧರಿಸಲಾಗಿದೆ. ಉಳಿದ ಸಿಬ್ಬಂದಿಯ ನೇಮಕಾತಿಯೂ ಆಗಲಿದೆ
>
> **ಆರ್.ಬಿ. ತಿಮ್ಮಾಪುರ**
> ಜಿಲ್ಲಾ ಉಸ್ತುವಾರಿ ಸಚಿವ

'ಕಾಡುಗೊಲ್ಲ' ಎಂದೇ ಬರೆಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸಂದರ್ಭದಲ್ಲಿ ಕಾಡುಗೊಲ್ಲ ಸಮಾಜದವರು 'ಕಾಡುಗೊಲ್ಲ' ಎಂದೇ ನಮೂದಿಸಬೇಕು ಎಂದು ರಾಜ್ಯ ಕಾಡುಗೊಲ್ಲ ಸಮುದಾಯದ ಮುಖಂಡ ಇ. ದೊಡ್ಡನಾಗಯ್ಯ ಮತ್ತು ವಿಶ್ವರೂಪ ಕಾಡುಗೊಲ್ಲರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಸಿ.ಕುಮಾರ್ ಮನವಿ ಮಾಡಿದ್ದಾರೆ.

ಧರ್ಮದ ಕಾಲಂನಲ್ಲಿ ಹಿಂದೂ ಹಾಗೂ ಜಾತಿಕಾಲಂನಲ್ಲಿ ಕಾಡುಗೊಲ್ಲ ಎಂದೇ ನಮೂದಿಸಬೇಕು. ಬೇರೆ ಉಪ ಜಾತಿಯನ್ನು ನಮೂದಿಸಬಾರದು. ಉಪಜಾತಿಯಲ್ಲಿಯೂ ಕಾಡುಗೊಲ್ಲ ಎಂದೇ ನಮೂದಿಸಬೇಕು. ಬೇರೆ ಯಾವುದೇ ಒತ್ತಡಕ್ಕೆ ಮಣಿಯಬಾರದು ಎಂದು ತಿಳಿಸಿದ್ದಾರೆ.

ಕಾಡುಗೊಲ್ಲರು ಬಡ ಸಮುದಾಯವಾಗಿದ್ದು, ಶಿಕ್ಷಣದಲ್ಲಿ ಹಿಂದುಳಿದಿದ್ದಾರೆ. ಪ್ರಾಥಮಿಕ ಹಂತದಲ್ಲಿಯೇ ವಿದ್ಯಾಭ್ಯಾಸ ಮೊಟಕುಗೊಳಿಸಿ ಇಂದಿಗೂ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಪಶುಸಂಗೋಪನೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುವ ಸಮುದಾಯವಾಗಿದೆ. ಇಂದಿಗೂ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಹಿಂದುಳಿದಿರುವ ಈ ಜನಾಂಗವು ಕಾಡು ಮತ್ತು ತಾಲ್ಲೂಕಿನ ಗಡಿಯ ಅಂಚಿನಲ್ಲಿ, ಗುಡ್ಡಗಾಡು, ಪ್ರದೇಶಗಳಲ್ಲಿ ಅಲ್ಪ ಸ್ವಲ್ಪ ಇರುವ ಜಮೀನುನಲ್ಲಿ ವ್ಯವಸಾಯ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಪಡೆಯಲು ಪೂರಕವಾಗುವಂತೆ ಸಮೀಕ್ಷೆಯಲ್ಲಿ ನಿಖರವಾದ ಮಾಹಿತಿ ನೀಡಬೇಕು ಎಂದು ಕೋರಿದ್ದಾರೆ.

ಗುರುವಾರ, ಸೆಪ್ಟೆಂಬರ್ 18, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 259 | ಪುಟ 18

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗೊಂಬೆ ಕುಣಿತ

ಪ್ರಧಾನಿ ನರೇಂದ್ರ ಮೋದಿ ಜನ್ಮದಿನದ ಅಂಗವಾಗಿ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೊಂಬೆ ವೇಷಧಾರಿ ಗಮನ ಸೆಳೆದರು

ಯುವ ಸಂಭ್ರಮ

ಮೈಸೂರಿನಲ್ಲಿ ನಡೆಯುತ್ತಿರುವ ದಸರಾ 'ಯುವ ಸಂಭ್ರಮ'ದಲ್ಲಿ ಅರಕಲಗೂಡಿನ ಏಕತಾರಿ ಸಾಂಸ್ಕೃತಿಕ ತಂಡದ ವಿದ್ಯಾರ್ಥಿಗಳು 'ಕಂಸಾಳೆ' ಪ್ರದರ್ಶನ ಮಾಡಿದರು

ಸೆನ್ಸೆಕ್ಸ್ 82,693 | ನಿಫ್ಟಿ 25,330 | $/₹ 87.85 | ಚಿನ್ನ (Std. 10g) ₹1,15,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,34,800 (ಬೆಂಗಳೂರು)

ಕರ್ನಾಟಕ: ಎಸ್‌ಐಆರ್‌ಗೆ ಮುನ್ನುಡಿ

ಬಿಹಾರ ಮಾದರಿಯಲ್ಲೇ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಹಾರದ ಮಾದರಿಯಲ್ಲಿಯೇ ರಾಜ್ಯದಲ್ಲಿಯೂ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಯಲಿದೆ. ರಾಜ್ಯದ ಎಲ್ಲ ಮತದಾರರು ಎಸ್‌ಐಆರ್‌ಗೆ ಒಳಪಡಲಿದ್ದು, ಮತದಾರರ ಗುರುತಿನ ಚೀಟಿ, ಮತದಾರರ ಪಟ್ಟಿ ಮತ್ತು ಮತಗಟ್ಟೆಗಳು ಬದಲಾಗಲಿವೆ.

ರಾಜ್ಯದಲ್ಲಿ ನಡೆಯಲಿರುವ ಎಸ್‌ಐಆರ್ ಕುರಿತಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ಬುಧವಾರ ಪತ್ರಕರ್ತರಿಗೆ ಕಾರ್ಯಾಗಾರ ನಡೆಸಿತು. ಅಲ್ಲಿ, ಎಸ್‌ಐಆರ್ ಪ್ರಕ್ರಿಯೆಯ ವಿವರಗಳನ್ನು ಒದಗಿಸಿದೆ.

ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದಲ್ಲಿ ಎಸ್‌ಐಆರ್‌ಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಮಟ್ಟದ ಅಧಿಕಾರಿಗಳಿಗೆ ತರಬೇತಿ ಪೂರ್ಣಗೊಂಡಿದೆ. ಅಧೀನ ಅಧಿಕಾರಿ ಮತ್ತು ಸಿಬ್ಬಂದಿಗೆ ತರಬೇತಿ ನಡೆಯುತ್ತಿದ್ದು, ಸೆಪ್ಟೆಂಬರ್ 25ರೊಳಗೆ ಪೂರ್ಣಗೊಳ್ಳಲಿದೆ. ▸7

3.40 ಕೋಟಿ
2002ರ ಮತದಾರರ ಪಟ್ಟಿಯಲ್ಲಿದ್ದವರು

5.40 ಕೋಟಿ
2025ರ ಮತದಾರರ ಪಟ್ಟಿಯಲ್ಲಿರುವವರು

- 58,000 ಮತಗಟ್ಟೆಗಳು
- 25,000 ಮತಗಟ್ಟೆ ಅಧಿಕಾರಿಗಳು

2002ರಲ್ಲಿ ಎಸ್‌ಐಆರ್ ನಡೆದಿದ್ದರೂ ಆ ದಾಖಲೆಗಳನ್ನು ಡಿಜಿಟಲ್ ಸ್ವರೂಪಕ್ಕೆ ಪರಿವರ್ತಿಸಿಲ್ಲ. ಹೀಗಾಗಿ ಅವುಗಳನ್ನು ಬಳಸಿಕೊಳ್ಳಲು ಸಾಧ್ಯವಿಲ್ಲ. ಈಗ ಡಿಜಿಟಲ್ ಸ್ವರೂಪದಲ್ಲೂ ದಾಖಲೆ ಸಂಗ್ರಹಿಸಲಾಗುತ್ತದೆ

ವಿ.ಅನ್ಬುಕುಮಾರ್, ರಾಜ್ಯ ಮುಖ್ಯ ಚುನಾವಣಾಧಿಕಾರಿ

ಗರಿಷ್ಠ 90 ದಿನಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ: ಅನ್ಬುಕುಮಾರ್

- ಪ್ರತಿ ಮತಗಟ್ಟೆಗೆ ಏಜೆಂಟರನ್ನು ನೇಮಕ ಮಾಡುವಂತೆ ರಾಜಕೀಯ ಪಕ್ಷಗಳಿಗೆ ಸೂಚಿಸಲಾಗಿದೆ
- ಗ್ರಾಮ ಪಂಚಾಯಿತಿ, ನಗರ ಪ್ರದೇಶದ ವಾರ್ಡ್‌ಗಳಲ್ಲಿ ವೈಫೈ ಸವಲತ್ತು ಇರುವ ಶಿಬಿರ ಆರಂಭಿಸಿ ಎಸ್‌ಐಆರ್ ನಡೆಸಲಾಗುತ್ತದೆ. ಚುನಾವಣಾ ಆಯೋಗದ ಪೋರ್ಟಲ್‌ಗೆ ಅಪ್‌ಲೋಡ್ ಮಾಡಲಾಗುತ್ತದೆ
- ಅಂದಾಜು ಐದು ಕೋಟಿ ಮತದಾರರಿಗಾಗಿ 10 ಕೋಟಿಯಷ್ಟು ಎನ್ಯುಮರೇಷನ್ ಫಾರ್ಮ್‌ಗಳನ್ನು ಸಿದ್ಧಪಡಿಸಲಾಗಿದೆ
- ಒಬ್ಬ ಮತದಾರರಿಗೆ ಸೇರಿದ ಹಲವು ಚೀಟಿಗಳು ಇದ್ದರೆ, ಅವುಗಳ ವಿವರ ಶೇ 60ರಷ್ಟು ಹೊಂದಾಣಿಕೆಯಾದರೆ ಅದನ್ನು ತಂತ್ರಾಂಶದ ಮೂಲಕ ಪತ್ತೆ ಮಾಡಲಾಗುತ್ತದೆ
- ಬಿಎಲ್‌ಒಗಳಿಗೆ ಗೌರವಧನವನ್ನು ₹6,000ದಿಂದ ₹12,000ಕ್ಕೆ ಹೆಚ್ಚಿಸಲಾಗಿದೆ. ಎಸ್‌ಐಆರ್‌ನಲ್ಲಿ ಭಾಗಿಯಾಗುವವರಿಗೆ ಹೆಚ್ಚುವರಿಯಾಗಿ ₹6,000 ನೀಡಲಾಗುತ್ತದೆ
- ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಭಾಗಿಯಾಗಿರುವ ಸುಮಾರು 10,000 ನಮೂನೆ 6, ನಮೂನೆ 7 ಮತ್ತು ನಮೂನೆ 8 ಅನ್ನು ಶೀಘ್ರವೇ ವಿಲೇವಾರಿ ಮಾಡುವಂತೆ ನಿರ್ದೇಶನ ನೀಡಲಾಗಿದೆ. ಅವು ವಿಲೇವಾರಿ ಆಗದಿದ್ದರೆ, ಸಂಬಂಧಿತ ಮತದಾರರಿಗೆ ಎನ್ಯುಮರೇಷನ್ ಫಾರ್ಮ್ ಸೃಜಿಸಲಾಗುವುದಿಲ್ಲ

ಮೊದಲೇ ಸುದ್ದಿ ಪ್ರಕಟಿಸಿದ್ದ 'ಪ್ರಜಾವಾಣಿ'

ರಾಜ್ಯದಲ್ಲಿ, ಬಿಹಾರ ಮಾದರಿಯಲ್ಲೇ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ನಡೆಸಲು ಚುನಾವಣಾ ಆಯೋಗ ಸಿದ್ಧತೆ ನಡೆಸಿದೆ ಎಂದು ಆಗಸ್ಟ್ 11ರ ಸಂಚಿಕೆಯಲ್ಲಿ 'ಪ್ರಜಾವಾಣಿ' ವಿಶೇಷ ವರದಿ ಪ್ರಕಟಿಸಿತ್ತು.

'ರಾಜ್ಯಗಳ ಅರ್ಧಕ್ಕಿಂತ ಹೆಚ್ಚು ಮತದಾರರು ದಾಖಲೆ ಸಲ್ಲಿಸಬೇಕಾಗಲಿಕ್ಕಿಲ್ಲ'

ನವದೆಹಲಿ (ಪಿಟಿಐ): ದೇಶದಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಮುಂದಾಗಿರುವ ಚುನಾವಣಾ ಆಯೋಗವು, ಪರಿಷ್ಕರಣೆ ವೇಳೆ ರಾಜ್ಯಗಳಲ್ಲಿನ ಅರ್ಧಕ್ಕಿಂತ ಹೆಚ್ಚು ಮತದಾರರು ಯಾವುದೇ ದಾಖಲೆಯನ್ನು ನೀಡಬೇಕಾಗಿಲ್ಲ ಎಂದು ಬುಧವಾರ ಹೇಳಿದೆ. ▸7

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಲಬುರಗಿಯಲ್ಲಿ ಹೈದರಾಬಾದ್ ಕರ್ನಾಟಕ ವಿಮೋಚನೆಯ ರೂವಾರಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಗೆ ಕಲ್ಯಾಣ ಕರ್ನಾಟಕ ಉತ್ಸವದ ಅಂಗವಾಗಿ ಬುಧವಾರ ಮಾಲಾರ್ಪಣೆ ಮಾಡಿದರು. ಸಚಿವರಾದ ಪ್ರಿಯಾಂಕ್ ಖರ್ಗೆ, ಡಿ.ಸುಧಾಕರ್, ಬೈರತಿ ಸುರೇಶ್, ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್, ಶಾಸಕರಾದ ಅಲ್ಲಮಪ್ರಭು ಪಾಟೀಲ, ಶಶೀಲ್ ನಮೋಶಿ, ಜಗದೇವ ಗುತ್ತೇದಾರ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

'ಕಲ್ಯಾಣ'ದ ಸರ್ವಾಂಗೀಣ ಅಭಿವೃದ್ಧಿ

ಪ್ರತ್ಯೇಕ ಸಚಿವಾಲಯಕ್ಕೆ ವಾರದಲ್ಲೇ ಅಧಿಸೂಚನೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಸಚಿವಾಲಯ ಸ್ಥಾಪಿಸುವ ಕುರಿತು ವಾರದೊಳಗೆ ಹುದ್ದೆಗಳ ಸಹಿತ ಅಧಿಸೂಚನೆ ಹೊರಡಿಸಲಾಗುವುದು ಎಂದು ಭರವಸೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ಕಲ್ಯಾಣ' ಭಾಗದ ಪ್ರಗತಿಯ ಮಂತ್ರವನ್ನು ಜಪಿಸಿದರು.

ಹೈದರಾಬಾದ್ ಕರ್ನಾಟಕ ವಿಮೋಚನಾ ದಿನದ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ 'ಕಲ್ಯಾಣ ಕರ್ನಾಟಕ ಉತ್ಸವ'ದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

'ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಯಾಗದ ಹೊರತು ಸಂಪೂರ್ಣ ರಾಜ್ಯದ ಅಭಿವೃದ್ಧಿ ಅಸಾಧ್ಯ' ಎಂದು ಪ್ರತಿಪಾದಿಸಿದ ಮುಖ್ಯಮಂತ್ರಿ, 'ಈ ಭಾಗದ ಜನರ ತಲಾ ಆದಾಯ ಹೆಚ್ಚಿಸುವುದರ ಜೊತೆಗೆ ಶಿಕ್ಷಣ, ಆರೋಗ್ಯ, ಉದ್ಯೋಗ, ಮೂಲ ಸೌಕರ್ಯ ಸುಧಾರಣೆ ಸೇರಿ ಸರ್ವಾಂಗೀಣ ಅಭಿವೃದ್ಧಿಯೇ ಸರ್ಕಾರದ ಗುರಿ' ಎಂಬ ಇಂಗಿತವನ್ನು ವ್ಯಕ್ತಪಡಿಸಿದರು. ▸12

'ಏಮ್ಸ್: ಕೇಂದ್ರದಿಂದ ಅಸಹಕಾರ'

'ರಾಯಚೂರಿನಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಮಹಾವಿದ್ಯಾಲಯ (ಏಮ್ಸ್) ಸ್ಥಾಪಿಸಲು ಅಗತ್ಯವಿರುವ ಎಲ್ಲಾ ನೆರವು ನೀಡಲು ನಮ್ಮ ಸರ್ಕಾರ ಸಿದ್ಧವಿದೆ. ಈ ಬಗ್ಗೆ ಕೇಂದ್ರಕ್ಕೆ ಹಲವು ಪತ್ರಗಳನ್ನೂ ಬರೆದಿದ್ದೇವೆ. ಕೇಂದ್ರ ಸಚಿವರನ್ನೂ ಭೇಟಿ ಮಾಡಿ ಮನವಿ ಮಾಡಿದ್ದೇವೆ. ಹೀಗಿದ್ದರೂ ಕೇಂದ್ರ ಸರ್ಕಾರ ಕಿಂಚಿತ್ತೂ ಸಹಕಾರ ನೀಡುತ್ತಿಲ್ಲ' ಎಂದು ಅಸಮಧಾನ ವ್ಯಕ್ತಪಡಿಸಿದ ಸಿದ್ದರಾಮಯ್ಯ, 'ಏಮ್ಸ್ ಪ್ರಾರಂಭಿಸಲು ಕೇಂದ್ರ ಸರ್ಕಾರ ಕೂಡಲೇ ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಮತ್ತಷ್ಟು ಮೃತದೇಹಗಳ ಅವಶೇಷ ಪತ್ತೆ

ಪ್ರಜಾವಾಣಿ ವಾರ್ತೆ

ಧರ್ಮಸ್ಥಳ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧಗಳಲ್ಲಿನ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಪಕ್ಕದ ಬಂಗ್ಲೆಗುಡ್ಡೆಯ ಕಾಡಿನಲ್ಲಿ ಬುಧವಾರ ಶೋಧ ಕಾರ್ಯವನ್ನು ಮತ್ತೊಮ್ಮೆ ಆರಂಭಿಸಿದೆ.

ಕಾಡಿನಲ್ಲಿ ಬುಧವಾರ ನಡೆದ ಶೋಧ ಕಾರ್ಯದಲ್ಲಿ ಒಂಬತ್ತು ಕಡೆ ಮೃತದೇಹಗಳ ಅವಶೇಷಗಳು ಸಿಕ್ಕಿವೆ. ಆರು ತಲೆಬುರುಡೆಗಳು ಸಿಕ್ಕಿವೆ ಎಂಬ ಮಾಹಿತಿ ಇದೆ. ಆದರೆ ಇದನ್ನು ಎಸ್‌ಐಟಿ ಖಚಿತಪಡಿಸಿಲ್ಲ.

'ಶೋಧ ಕಾರ್ಯದ ವೇಳೆ ಮೃತದೇಹಗಳ ಅವಶೇಷಗಳು ಸಿಕ್ಕಿರುವುದು ನಿಜ. ಆದರೆ, ಇನ್ನೂ ಶೋಧ ಕಾರ್ಯ ಪೂರ್ಣಗೊಂಡಿಲ್ಲ. ಹಾಗಾಗಿ ಈ ಹಂತದಲ್ಲಿ ಯಾವುದೇ ಮಾಹಿತಿ ಬಹಿರಂಗಪಡಿಸಲು ಸಾಧ್ಯವಿಲ್ಲ' ಎಂದು ಎಸ್‌ಐಟಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಮೃತದೇಹಗಳ ಅವಶೇಷ ಸಿಕ್ಕಿರುವ ಐದು ಸ್ಥಳಗಳ ಮಹಜರು ಪೂರ್ಣಗೊಳಿಸಿರುವ ಎಸ್‌ಐಟಿ, ಅಲ್ಲಿ ಸಿಕ್ಕ ಮೂಳೆಗಳು ಹಾಗೂ ತಲೆ ಬುರುಡೆಗಳನ್ನು ವಶಕ್ಕೆ ಪಡೆದಿದೆ. ಇನ್ನುಳಿದ ಕಡೆ ಮಹಜರು ಕಾರ್ಯ ಗುರುವಾರವೂ ಮುಂದುವರಿಯಲಿದೆ ಎಂದು ಗೊತ್ತಾಗಿದೆ.

ಎಸ್‌ಐಟಿಯ ಎಸ್.ಪಿ.ಗಳಾದ ಜಿತೇಂದ್ರ ಕುಮಾರ್ ದಯಾಮ ಹಾಗೂ ಸಿ.ಎ.ಸೈಮನ್ ಮತ್ತಿತರ ಅಧಿಕಾರಿಗಳು ಶೋಧ ಕಾರ್ಯದ ನೇತೃತ್ವ ವಹಿಸಿದ್ದರು. ▸12

ತಿಮರೋಡಿ ವಿರುದ್ಧ ಮತ್ತೆ ಎಫ್‌ಐಆರ್

ಉಜಿರೆಯ ಮಹೇಶ್ ಶೆಟ್ಟಿ ತಿಮರೋಡಿ ಮನೆಯಲ್ಲಿ ಎಸ್‌ಐಟಿ ಅಧಿಕಾರಿಗಳು ಮಹಜರು ನಡೆಸಿದ ಸಂದರ್ಭದಲ್ಲಿ ಕಬ್ಬಿಣದ ಎರಡು ತಲವಾರು ಹಾಗೂ ಒಂದು ಬಂದೂಕು ಸಿಕ್ಕಿರುವ ಬಗ್ಗೆ ಪ್ರಕರಣದ ತನಿಖಾಧಿಕಾರಿಯಾಗಿರುವ ಎಸ್‌ಪಿ ಸಿ.ಎ.ಸೈಮನ್ ನೀಡಿದ ದೂರಿನ ಅನ್ವಯ ಬೆಳ್ತಂಗಡಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ▸12

ನೀರಜ್ ಚೋಪ್ರಾ–ನದೀಂ ಫೈನಲ್‌ಗೆ

ಟೋಕಿಯೊ (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ನೀರಜ್ ಚೋಪ್ರಾ ಮತ್ತು ಪ್ಯಾರಿಸ್ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಪಾಕಿಸ್ತಾನದ ಅರ್ಷದ್ ನದೀಂ ಅವರು ವಿಶ್ವ ಅಥ್ಲೆಟಿಕ್ಸ್ ಜಾವೆಲಿನ್ ಥ್ರೋ ಫೈನಲ್ ಪ್ರವೇಶಿಸಿದ್ದಾರೆ.

ಬುಧವಾರ ನಡೆದ ಎ ಗುಂಪಿನ ಅರ್ಹತಾ ಸುತ್ತಿನಲ್ಲಿ ಚೋಪ್ರಾ ಅವರು ತಮ್ಮ ಮೊದಲ ಎಸೆತದಲ್ಲಿಯೇ 84.50 ಮೀಟರ್ ಸಾಧನೆ ಮಾಡಿದರು. ಅದರೊಂದಿಗೆ ಫೈನಲ್‌ಗೆ ಲಗ್ಗೆ ಇಟ್ಟರು. ಈ ಸುತ್ತಿನ ಮೊದಲ ಥ್ರೋ ಮಾಡುವ ಅವಕಾಶ ನೀರಜ್ ಅವರಿಗೆ ಲಭಿಸಿತ್ತು.

ಬಿ ಗುಂಪಿನ ಅರ್ಹತಾ ಸುತ್ತಿನಲ್ಲಿ ಕಣಕ್ಕಿಳಿದಿದ್ದ ಪಾಕಿಸ್ತಾನದ ನದೀಂ ಅವರು ಮೂರನೇ ಥ್ರೋನಲ್ಲಿ 85.28 ಮೀ ಸಾಧನೆ ಮಾಡಿ ಅಂತಿಮ ಸುತ್ತು ಪ್ರವೇಶಿಸಿದರು. ಇದರೊಂದಿಗೆ 'ಬದ್ಧ ಪ್ರತಿಸ್ಪರ್ಧಿ' ದೇಶಗಳ ಇಬ್ಬರು ಅಥ್ಲೀಟ್‌ಗಳ ಪೈಪೋಟಿ ಗುರುವಾರ ನಡೆಯಲಿದೆ. ಹೋದ ವರ್ಷ ಪ್ಯಾರಿಸ್‌ನಲ್ಲಿ ನಡೆದಿದ್ದ ಒಲಿಂಪಿಕ್ ಕೂಟದಲ್ಲಿ ಇಬ್ಬರೂ ಪೈಪೋಟಿ ನಡೆಸಿದ್ದರು. ಅದರ ನಂತರ ಇವರಿಬ್ಬರ ನಡುವಣ ಮೊದಲ ಸ್ಪರ್ಧೆ ಇದಾಗಿದೆ.



ಮುಡಾ: ಇ.ಡಿ ಕಸ್ಟಡಿಗೆ ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಿದ್ದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬಂಧನಕ್ಕೆ ಒಳಗಾಗಿರುವ ಮುಡಾ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ಅವರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ 9 ದಿನ ಇ.ಡಿ ಕಸ್ಟಡಿಗೆ ನೀಡಿ ಆದೇಶಿಸಿದೆ.

ದಿನೇಶ್ ಕುಮಾರ್ ಅವರನ್ನು ಇ.ಡಿ ಅಧಿಕಾರಿಗಳು ಮಂಗಳವಾರ (ಸೆ.16) ಬಂಧಿಸಿದ್ದರು. ಬುಧವಾರ ಸಂಜೆ 4.30ಕ್ಕೆ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಮುಂದೆ ತೆರೆದ ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು.

ಈ ವೇಳೆ ಆರೋಪಿ ಪರ ವಕೀಲರು ಮಧ್ಯಂತರ ಜಾಮೀನಿಗೆ ಮನವಿ ಮಾಡಿದರು. ಆದರೆ, ಇ.ಡಿ ಪರ ವಕೀಲರ ಮನವಿಯನ್ನು ಮಾನ್ಯ ಮಾಡಿದ ನ್ಯಾಯಾಧೀಶರು ಆರೋಪಿ ದಿನೇಶ್ ಕುಮಾರ್ ಅವರನ್ನು ಇದೇ 26ರವರೆಗೆ ಇ.ಡಿ ಕಸ್ಟಡಿಗೆ ಒಪ್ಪಿಸಿ ಆದೇಶಿಸಿದರು.

'ಬಿಪಿಎಲ್ ಅನರ್ಹಗೊಂಡರೆ ಎಪಿಎಲ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ಎಪಿಎಲ್ ಕಾರ್ಡ್‌ಗಳಾಗಿ ಬದಲಿಸಲಾಗುವುದು. ಹೊಸ ಬಿಪಿಎಲ್ ಕಾರ್ಡ್‌ಗಳಿಗೆ ಮುಂದಿನ ತಿಂಗಳು ಅರ್ಜಿ ಆಹ್ವಾನಿಸಲು ಆಹಾರ ಇಲಾಖೆ ನಿರ್ಧರಿಸಿದೆ. ಈಗ ರದ್ದುಪಡಿಸಿದಷ್ಟು ಕಾರ್ಡ್‌ಗಳನ್ನು ವಿತರಿಸಲು ಮಾತ್ರ ಹೊಸದಾಗಿ ಅವಕಾಶ ಇದೆ.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಆಹಾರ ಸಚಿವ ಕೆ.ಎಚ್. ಮುನಿಯಪ್ಪ, 'ಸರ್ಕಾರದ ಮಾನದಂಡಗಳ ಅನ್ವಯ ಬಿಪಿಎಲ್ ಕಾರ್ಡ್‌ಗಳನ್ನು ಪರಿಷ್ಕರಿಸಲಾಗುವುದು. ಅನರ್ಹವೆಂದು ಕಂಡುಬಂದರೆ ಎಪಿಎಲ್‌ಗೆ ವರ್ಗಾವಣೆ ಮಾಡುತ್ತೇವೆ. ಯಾವ ಪಡಿತರ ಚೀಟಿಯನ್ನೂ ರದ್ದು ಮಾಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಎಲ್ಲ ಕಾರ್ಡ್‌ಗಳನ್ನು ಪರಿಷ್ಕರಣೆ ಮಾಡುತ್ತೇವೆ. ಬಿಪಿಎಲ್‌ನಿಂದ ಎಪಿಎಲ್‌ಗೆ ವರ್ಗಾವಣೆ ಮಾಡಿದ ಸಂದರ್ಭದಲ್ಲಿ ಏನಾದರೂ ಸಣ್ಣಪುಟ್ಟ ಸಮಸ್ಯೆಯಾದರೆ 24 ಗಂಟೆಯ ಒಳಗೆ ಸರಿಪಡಿಸಿ ಆಹಾರಧಾನ್ಯ ಹಂಚಿಕೆ ಮಾಡಲಾಗುವುದು' ಎಂದರು.

'ದಕ್ಷಿಣ ಭಾರತದ ರಾಜ್ಯಗಳ ಪೈಕಿ ಕರ್ನಾಟಕ ದಲ್ಲಿ ಬಿಪಿಎಲ್ ಕಾರ್ಡ್‌ಗಳು ಅತಿ ಹೆಚ್ಚು ಇವೆ. ಶೇಕಡ 75ರಷ್ಟು ಬಿಪಿಎಲ್ ಕಾರ್ಡ್‌ಗಳು ಕರ್ನಾಟಕ ದಲ್ಲಿವೆ. ಹೀಗಾಗಿ, ಬಿಪಿಎಲ್ ಕಾರ್ಡ್‌ಗಳ ಪರಿಷ್ಕರಣೆ ಅನಿವಾರ್ಯವಾಗಿದೆ' ಎಂದರು.



ಮಳೆನಾಡಾಗಿದ್ದ ಕೋಲಾರ ಬೆಂಗಾಡಿದ್ದೇಕೆ?: ಭೂವಿಜ್ಞಾನಿಗಳ ಹೊಸ ಶೋಧ

ನಂದಗುಡಿ 'ರಾಗಿಗುಡ್ಡ': ಲಕ್ಷ ವರ್ಷಗಳ ನಂಟು

● ಎಸ್.ರವಿಪ್ರಕಾಶ್

ಬೆಂಗಳೂರು: ಇಂದು ಬಿರು ಬಿಸಿಲು, ಒಣ ಭೂಮಿ, ನೀರಿನ ಕೊರತೆಯಿಂದ ಬೆಂಡಾಗಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲವು ಪ್ರದೇಶ ಮತ್ತು ಕೋಲಾರ ಜಿಲ್ಲೆಯ ಭೂಭಾಗ ಒಂದಾನೊಂದು ಕಾಲದಲ್ಲಿ ಈಗಿನ ಮಲೆನಾಡಿನಂತೆ ಹೆಚ್ಚು ಮಳೆ ಬೀಳುವ ತೇವದಿಂದ ಕೂಡಿದ ಹಸಿರಿನಿಂದ ನಳನಳಿಸುವ ಪ್ರದೇಶವಾಗಿತ್ತು ಎಂದರೆ ನಂಬುತ್ತೀರಾ?

ಹೌದು, ಭೂವಿಜ್ಞಾನಿಗಳಾದ ಬಿ.ಸಿ.ಪ್ರಭಾಕರ್, ಕೆ.ಎನ್.ರಾಧಿಕಾ, ಆರ್.ಶಂಕರ್ ಮತ್ತು ಎಚ್.ಎಸ್.ಎಂ. ಪ್ರಕಾಶ್ ಅವರು ನಡೆಸಿರುವ ಹೊಸ ಅಧ್ಯಯನದಿಂದ ಈ ವಿಸ್ಮಯಕಾರಿ ಸಂಗತಿ ಬೆಳಕಿಗೆ ಬಂದಿದೆ.

ಅದರಲ್ಲೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ನಂದಗುಡಿಯ 'ರಾಗಿಗುಡ್ಡ' ಪ್ರದೇಶ ಕರ್ನಾಟಕ ಮಾತ್ರವಲ್ಲ, ಭಾರತದಲ್ಲೇ ಭೂವಿಸ್ಮಯದ ತಾಣವಾಗಿದೆ.

ಭೂಮೇಲ್ಮೈನಿಂದ ಸುಮಾರು 150 ಅಡಿ ಎತ್ತರ ಮತ್ತು ಸಾವಿರಕ್ಕೂ ಹೆಚ್ಚು ಅಡಿ ಸುತ್ತಳತೆಯ ಈ ಗುಡ್ಡ ಸುತ್ತಲಿನ ಸಮತಟ್ಟಾದ ಮೇಲ್ಮೈನಿಂದ ಎದ್ದು ಕಾಣುತ್ತದೆ.

ಈ ಗುಡ್ಡದ ಮಹತ್ವ ಏನೆಂದರೆ ಲಕ್ಷಾಂತರ ವರ್ಷಗಳ ಹಿಂದೆ ಸಂಭವಿಸಿದ ವಿಶಿಷ್ಟ ಶೀತಲೀಕರಣ ಪ್ರಕ್ರಿಯೆ ಕುರುಹಾಗಿ ಇದು ಮೈದಳೆದಿದೆ. ಗುಡ್ಡದ ಒಡಲಿನಲ್ಲಿ ಜಂಬಿಟ್ಟಿಗೆ ಇದೆ. ಜಂಬಿಟ್ಟಿಗೆ (ಲ್ಯಾಟರೈಟ್) ಎಂಬ ನೈಸರ್ಗಿಕ ಶಿಲೆಯ ನಿರ್ಮಾಣದ ಸುದೀರ್ಘ ಪ್ರಕ್ರಿಯೆಯೇ ಒಂದು ಕುತೂಹಲಕರ ಕಥನ.

ಲಕ್ಷಾಂತರ ವರ್ಷಗಳ ಹಿಂದೆ ಈ ಪ್ರದೇಶದಲ್ಲಿದ್ದ ವಿಶಿಷ್ಟ ಹವಾಮಾನ, ಭೂಪ್ರಕ್ರಿಯೆ ಮತ್ತು ಶೀತಲೀಕರಣದ ಪರಿಣಾಮ, ಭೂಮಿಯ ವಿವಿಧ ಸ್ತರಗಳಲ್ಲಿ ಕುತೂಹಲಕರ ಖನಿಜಗಳು ಸೃಷ್ಟಿಯಾಗಿವೆ. ಕೋಲಾರ ಜಿಲ್ಲೆಯ ಬಹುಪಾಲು ಪ್ರದೇಶವು ಲ್ಯಾಟರೈಟ್ ಮತ್ತು ಲ್ಯಾಟರೈಟ್‌ನಿಂದಾದ ಮಣ್ಣಿನಿಂದ ಆವೃತವಾಗಿದೆ. ನಂದಗುಡಿಯ ರಾಗಿಗುಡ್ಡ ಲ್ಯಾಟರೈಟ್ ಪ್ರಕ್ರಿಯೆಯ ಪ್ರತಿನಿಧಿಯಂತೆ ಗಮನ ಸೆಳೆಯುತ್ತಿದೆ. ಹೀಗಾಗಿ, ಭೂವಿಜ್ಞಾನಿಗಳಿಗೆ ಹೆಚ್ಚಿನ ಸಂಶೋಧನೆಯ ಆಯಸ್ಕಾಂತ ಬಿಂದುವಾಗಿ ಸೆಳೆಯುತ್ತಿದೆ ಎನ್ನುತ್ತಾರೆ ಭೂವಿಜ್ಞಾನಿಗಳು.

ಈ ಸಂಶೋಧನೆಗೆ ವೆಸ್ಕೋ ಕಂಪನಿಯ ಮುಖ್ಯಸ್ಥ ಕೆ.ಎಸ್. ಶಿವಕುಮಾರ್ ಅವರು ಕರ್ನಾಟಕ ಅಸೋಸಿಯೇಷನ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್ ಸಂಸ್ಥೆಗೆ ಯೋಜನಾ ರೂಪದಲ್ಲಿ ಧನ ಸಹಾಯ ಮಾಡಿದೆ ಎಂದು ವಿಜ್ಞಾನಿಗಳು ವಿವರಿಸಿದ್ದಾರೆ.

ಲ್ಯಾಟರಟೈಸೇಶನ್ ಪ್ರಕ್ರಿಯೆ ಏನು?

ಲಾಟರಟೈಸೇಶನ್ ಎಂದರೆ ಮೂಲ ಗಡಸು ಕಲ್ಲನ್ನು ಭೌತಿಕವಾಗಿ ಹಾಗೂ ರಾಸಾಯನಿಕವಾಗಿ ಪರಿವರ್ತಿಸಿ ಮೆದು ಕಲ್ಲಿನ ರೂಪವನ್ನು ಕೊಡುವ ಕ್ರಿಯೆ ಆಗಿದೆ. ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರದ ಸುತ್ತಮುತ್ತ ಗೀರುಶಿಲೆ ಮತ್ತು ಗ್ರ್ಯಾನೈಟ್ ಕಲ್ಲುಗಳು ಸರ್ವೇ ಸಾಮಾನ್ಯ. ಈ ಕಲ್ಲುಗಳು ವಿಶಿಷ್ಟ ಹವಾಗುಣ ಪರಿಸ್ಥಿತಿಯಲ್ಲಿ ಲ್ಯಾಟರೈಟ್ ಆಗಿ ಮಾರ್ಪಾಡಾಗುತ್ತವೆ. ನಂದಗುಡಿಯ ಸುತ್ತಮುತ್ತ ನೈಸ್ ಎಂಬ ಬೂದಿ ಬಣ್ಣದ ಗಡಸು ಶಿಲೆ ಇದ್ದು, ಇದು ಲಕ್ಷಾಂತರ ವರ್ಷಗಳ ಸವಕಳಿ ಮತ್ತು ರಾಸಾಯನಿಕ ಶೀತಲೀಕರಣಕ್ಕೆ ಒಳಪಟ್ಟು ಕಂದು ಬಣ್ಣದ ಮೆದುವಾದ ಶಿಲೆಯಾಗಿ ಮಾರ್ಪಟ್ಟಿದೆ. ಇದಕ್ಕೆ ಉಷ್ಣವಲಯದ (ಟ್ರಾಫಿಕಲ್) ಹವಾಗುಣವಿರಬೇಕು.



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಬಗೆಹರಿದ 'ಕಾವೇರಿ' ಸಮಸ್ಯೆ

ಒಂದು ದಿನ ಮೊದಲೇ ಮುಕ್ತಾಯಗೊಂಡ ಕಾಮಗಾರಿ

ಪ್ರಜಾವಾಣಿ ವಾರ್ತೆ

ಜಲಮಂಡಳಿಯ ನಿರ್ವಹಣಾ ಕಾಮಗಾರಿಯನ್ನು ಎರಡೇ ದಿನದಲ್ಲಿ ಮುಗಿಸಿದ

ಬೆಂಗಳೂರು: ತುರ್ತು ನಿರ್ವಹಣೆ ಸಂಬಂಧ ಕೈಗೊಂಡಿದ್ದ ಕಾಮಗಾರಿಯನ್ನು ನಿಗದಿಗಿಂತ ಮೊದಲೇ ಪೂರ್ಣಗೊಳಿಸಲಾಗಿದೆ. ಹೀಗಾಗಿ ಕಾವೇರಿ ನೀರು ಸರಬರಾಜಿನಲ್ಲಿ ಆಗಿದ್ದ ವ್ಯತ್ಯಯವನ್ನು ಒಂದು ದಿನ ಮೊದಲೇ ಸರಿಪಡಿಸಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಿರ್ದೇಶನದಂತೆ ಹೊರ ರಾಜ್ಯಗಳಿಂದ ಕಾರ್ಮಿಕರನ್ನು ಕರೆಸಿಕೊಂಡು ಹಗಲು-ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸಲು ಗುತ್ತಿಗೆದಾರರಿಗೆ ಸೂಚಿಸಲಾಯಿತು.

ಎರಡು ದಿನಗಳಲ್ಲಿ ಕೆಲಸ ಮುಗಿಸಿ ಬುಧವಾರ ಬೆಳಿಗ್ಗೆಯಿಂದ ನಗರದ ಎಲ್ಲಾ ಭಾಗಗಳಲ್ಲಿ ನೀರು ಸರಬರಾಜು ಪ್ರಕ್ರಿಯೆ ಪುನರಾರಂಭಿಸಲಾಗಿದೆ ಎಂದು ತಿಳಿಸಿದ್ದಾರೆ.

ಕಾವೇರಿ ನೀರು ಸರಬರಾಜು ಯೋಜನೆಯ ಜಲರೇಚಕ ಯಂತ್ರಾಗಾರಗಳು ಮತ್ತು ಮುಖ್ಯ ಕೊಳವೆ ಮಾರ್ಗಗಳ ಸುಲಲಿತ ಚಾಲನೆಯನ್ನು ಖಚಿತಪಡಿಸಿಕೊಳ್ಳಲು ವಿವಿಧ ತುರ್ತು ನಿರ್ವಹಣೆಯ ಕಾಮಗಾರಿಗಳನ್ನು ಕೈಗೊಳ್ಳಲಾಗಿತ್ತು. ಹೀಗಾಗಿ ಮೂರು ದಿನ ಕುಡಿಯುವ ನೀರಿನಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿಯು ಸಾರ್ವಜನಿಕರಿಗೆ ಮೊದಲೇ ಮಾಹಿತಿ ನೀಡಿತ್ತು.

ಕನ್ನಡ ಮಾತನಾಡಿದರೆ ದಂಡ ಆರೋಪ ಸಾಬೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಮಾರಪಾರ್ಕ್ ಬಡಾವಣೆಯ ಸಿಂಧಿ ಪ್ರೌಢಶಾಲೆಯಲ್ಲಿ ಕನ್ನಡದಲ್ಲಿ ಮಾತನಾಡುವ ವಿದ್ಯಾರ್ಥಿಗಳಿಗೆ ದಂಡ ವಿಧಿಸುತ್ತಾರೆ ಎಂಬ ಅಂಶ ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳ ಪರಿಶೀಲನೆ ವೇಳೆ ದೃಢಪಟ್ಟಿದೆ.

ಕೇಂದ್ರ ಪಠ್ಯಕ್ರಮ ಅನುಸರಿಸುವ (ಸಿಬಿಎಸ್‌ಇ) ಈ ಶಾಲೆಯಲ್ಲಿ ನಿತ್ಯವೂ ವಿದ್ಯಾರ್ಥಿಗಳು ಆಂಗ್ಲ ಭಾಷೆಯಲ್ಲೇ ಸಂಭಾಷಣೆ ನಡೆಸಬೇಕು. ಶಾಲಾ ಅವಧಿಯಲ್ಲಿ ಯಾವುದೇ ವಿದ್ಯಾರ್ಥಿ ಕನ್ನಡ ಸೇರಿದಂತೆ ತಮ್ಮ ಮಾತೃಭಾಷೆ ಬಳಸಿದರೆ ಅವರಿಗೆ ದಂಡ ವಿಧಿಸಲಾಗುತ್ತಿದೆ ಎಂದು ಹಲವು ಪೋಷಕರು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ದೂರು ನೀಡಿದ್ದರು.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು, ಪರಿಶೀಲನೆ ನಡೆಸುವಂತೆ ಶಾಲಾ ಶಿಕ್ಷಣ ಇಲಾಖೆಗೆ ಸೂಚಿಸಿದ್ದರು.

'ಇದರ ನಂತರ ಇಲಾಖೆಯ ಉಪ ನಿರ್ದೇಶಕರ ನೇತೃತ್ವದ ತಂಡ ಶಾಲೆಗೆ ಭೇಟಿ ನೀಡಿ, ದಂಡ ವಿಧಿಸುತ್ತಿರುವ ಅಂಶವನ್ನು ಖಚಿತಪಡಿಸಿದೆ.

'ಶಾಲಾ ಅವಧಿಯಲ್ಲಿ ಕನ್ನಡದಲ್ಲಿ ಮಾತನಾಡುವ ವಿದ್ಯಾರ್ಥಿಗಳಿಗೆ ದಂಡ ವಿಧಿಸುತ್ತಿರುವುದು ಅಧಿಕಾರಿಗಳ ಭೇಟಿ ವೇಳೆ ದೃಢಪಟ್ಟಿದೆ. ಹಲವು ವಿದ್ಯಾರ್ಥಿಗಳು ಈ ಕುರಿತು ಲಿಖಿತವಾಗಿ ಖಚಿತಪಡಿಸಿದ್ದಾರೆ.'

'ಕನ್ನಡ ಮಾತನಾಡಿದ್ದಕ್ಕಾಗಿ ದಂಡ ವಿಧಿಸುವುದು ಅಧಿಕೃತವಾಗಿ ಸ್ವಾತಂತ್ರ್ಯದ ಹರಣವೂ ಆಗಿದೆ. ಹಾಗಾಗಿ, ಶಾಲೆಗೆ ನೀಡಿರುವ ನಿರಾಕ್ಷೇಪಣಾ ಪತ್ರವನ್ನು (ಎನ್‌ಒಸಿ) ತಕ್ಷಣ ಹಿಂಪಡೆಯಬೇಕು' ಎಂದು ಪುರುಷೋತ್ತಮ ಬಿಳಿಮಲೆ ಅವರು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದಾರೆ.

70 ದಾಟಿದವರಿಗೂ 'ಆಯುಷ್ಮಾನ್ ಭಾರತ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 70 ವರ್ಷ ದಾಟಿದ ಹಿರಿಯರಿಗೆ ಕೇಂದ್ರ ಸರ್ಕಾರದ ವಯೋ ವಂದನಾ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಪ್ರಯೋಜನಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಸ್ತರಿಸಿ ಆದೇಶ ಹೊರಡಿಸಿದೆ.

ಎಪ್ಪತ್ತು ವರ್ಷ ಮತ್ತು ಅದಕ್ಕಿಂತ ಹೆಚ್ಚಿನವರಿಗೆ ಚಿಕಿತ್ಸೆಗಾಗಿ ₹5 ಲಕ್ಷ ಟಾಪ್ ಅಪ್ ಒದಗಿಸಲಾಗುವುದು. ಅರ್ಹ ಹಿರಿಯರು ಬಯಸುವವರೆಗೆ ನೋಂದಣಿಗಾಗಿ ಆಯುಷ್ಮಾನ್ ಅಪ್ಲಿಕೇಶನ್‌ನಲ್ಲಿ ಮತ್ತು ವೆಬ್ ಪೋರ್ಟಲ್‌ನಲ್ಲಿ (beneficiary.nha.in) ಪ್ರತ್ಯೇಕ ಮಾಡ್ಯೂಲ್ ರಚಿಸಲಾಗಿದೆ. ನೋಂದಣಿ ಮಾಡಿಕೊಂಡವರಿಗೆ ವಿಶಿಷ್ಟವಾದ ಆಯುಷ್ಮಾನ್ ಕಾರ್ಡ್ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

ಒಂದೇ ದಿನ 500 ನಂದಿನಿ ಮಳಿಗೆ ಶುರು

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳವು (ಕೆಎಂಎಫ್) ಬುಧವಾರ ಏಕಕಾಲಕ್ಕೆ 500 ನಂದಿನಿ ಮಳಿಗೆಗಳನ್ನು ರಾಜ್ಯದಾದ್ಯಂತ ಆರಂಭಿಸಿದೆ. ಕಲಬುರಗಿಯಲ್ಲಿ ಬುಧವಾರ ನಡೆದ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ವಿಶೇಷ ಸಂದರ್ಭದಲ್ಲಿ ನಂದಿನಿ ಮಳಿಗೆಗಳಿಗೆ ಮುಖ್ಯಮಂತ್ರಿ ಚಾಲನೆ ನೀಡಿದರು.

ವಿಚಾರಣೆ ನಡೆಸಿ ಆದೇಶ ಕಾಯ್ದಿರಿಸಿದ ಕೋರ್ಟ್

ದರ್ಶನ್‌ಗೆ ದಿಂಬು, ಹಾಸಿಗೆ: ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯಾಲಯವು ಆದೇಶ ನೀಡಿದ್ದ ನಂತರವೂ ಆರೋಪಿ ದರ್ಶನ್ ಅವರಿಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ತಲೆದಿಂಬು ಹಾಗೂ ಹಾಸಿಗೆ ನೀಡಿಲ್ಲ' ಎಂದು ಆರೋಪಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಬುಧವಾರ ನಡೆಸಿದ 27ನೇ ಸಿಸಿಎಚ್ ನ್ಯಾಯಾಲಯವು ಆದೇಶ ಕಾಯ್ದಿರಿಸಿತು. ಸೆ.19ರಂದು(-ಶುಕ್ರವಾರ) ಆದೇಶ ಪ್ರಕಟಿಸುವುದಾಗಿ ನ್ಯಾಯಾಧೀಶರು ಹೇಳಿದರು.

ವಿಚಾರಣೆ ಪ್ರಾರಂಭ ಆಗುತ್ತಿದ್ದಂತೆಯೇ ದರ್ಶನ್‌ಗೆ ನೀಡಿರುವ ಸೌಲಭ್ಯಗಳ ಕುರಿತ ವರದಿಯನ್ನು ಪ್ರಾಸಿಕ್ಯೂಷನ್ ಪರ ವಕೀಲರು, ದರ್ಶನ್ ಪರ ವಕೀಲರಿಗೆ ನೀಡಿದರು.

'ನ್ಯಾಯಾಲಯವು ಆದೇಶ ಮಾಡಿದ್ದರೂ ಜೈಲಿನ ಅಧಿಕಾರಿಗಳು ಲಘುವಾಗಿ ಪರಿಗಣಿಸಿದ್ದಾರೆ. ಯಾವುದೇ ಸೌಲಭ್ಯವನ್ನೂ ನೀಡಿಲ್ಲ. ಕಂಬಳಿ, ಚಾಪೆ, ನೀಡಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖ ಮಾಡಿದ್ದಾರೆ. ಆದರೆ, ನಾವು ಮನವಿ ಮಾಡಿದ್ದ ಯಾವುದೇ ಸೌಲಭ್ಯವನ್ನೂ ಕೊಟ್ಟಿಲ್ಲ. ಕ್ವಾರಂಟೈನ್ ಸೆಲ್‌ನಲ್ಲೇ ಒಂದು ತಿಂಗಳಿಂದ ಇರಿಸಿದ್ದಾರೆ. ದರ್ಶನ್ ಅವರಿಗೆ ಹಿಂಸೆ ನೀಡಲಾಗುತ್ತಿದೆ' ಎಂದು ದರ್ಶನ್ ಪರ ವಕೀಲರು ಕೋರ್ಟ್ ಗಮನಕ್ಕೆ ತಂದರು.

'ಜೈಲಿನ ಕೈಪಿಡಿ ಹೊರತುಪಡಿಸಿ ಹೆಚ್ಚಿನ ಸೌಲಭ್ಯವನ್ನು ಕೊಟ್ಟಿಲ್ಲ. ಕಂಬಳಿ, ಹೊದಿಕೆ, ಲೋಟ, ತಟ್ಟೆ ನೀಡಲಾಗಿದೆ. ಬೆಳಿಗ್ಗೆ ಹಾಗೂ ಸಂಜೆ 1 ಗಂಟೆ ವಾಕಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ. ಕೈಪಿಡಿಯಂತೆಯೇ ಎಲ್ಲವನ್ನೂ ನೀಡಲಾಗುತ್ತಿದೆ. ಕ್ವಾರಂಟೈನ್ ಸೆಲ್ ವ್ಯವಸ್ಥೆ ಈಗ ಇಲ್ಲ' ಎಂದು ಪ್ರಾಸಿಕ್ಯೂಷನ್ ಪರ ವಕೀಲರು ನ್ಯಾಯಾಧೀಶರ ಗಮನಕ್ಕೆ ತಂದರು.

ವಿಷ ನೀಡಿ ಎಂದಿದ್ದ ದರ್ಶನ್

'ಜೈಲಿನಲ್ಲಿ ಕನಿಷ್ಠ ಮೂಲಸೌಲಭ್ಯಗಳನ್ನೂ ನೀಡುತ್ತಿಲ್ಲ. ಬ್ಯಾರಕ್‌ನಿಂದ ಹೊರಗೆ ಬರುವುದಕ್ಕೂ ಬಿಡುತ್ತಿಲ್ಲ. ಮೈಮೇಲೆ ಬಿಸಿಲು ಬಿದ್ದು ಹಲವು ದಿನಗಳೇ ಆಗಿವೆ. ಕೈಯಲ್ಲಿ ಫಂಗಸ್ ಕಾಣಿಸಿಕೊಂಡಿದೆ (ಚರ್ಮದ ಅಲರ್ಜಿ). ಬೇರೆ ಯಾರಿಗೂ ಬೇಡ; ನನಗೆ ಮಾತ್ರ ವಿಷ ನೀಡಲಿ. ಈ ಸಂಬಂಧ ಕೋರ್ಟ್ ಆದೇಶ ನೀಡಲಿ...' ಎಂದು ಸೆ.9ರಂದು ನಡೆದ ವಿಚಾರಣೆ ವೇಳೆ ದರ್ಶನ್ ಅವರು ನ್ಯಾಯಾಧೀಶರ ಎದುರು ಅಲವತ್ತುಕೊಂಡಿದ್ದರು. ಜೈಲಿನ ಕೈಪಿಡಿಯಂತೆ ಸೌಲಭ್ಯ ಕಲ್ಪಿಸಬಹುದು ಎಂದು ನ್ಯಾಯಾಲಯ ಹೇಳಿತ್ತು.

ಕೆನರಾ ಉತ್ಸವ ನಾಳೆಯಿಂದ

ಬೆಂಗಳೂರು: ಕೆನರಾ ಬ್ಯಾಂಕ್ ಸೆ.19ರಿಂದ 21ರವರೆಗೆ ನಗರದ ಎಂ.ಜಿ.ರಸ್ತೆಯ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ ಕೆನರಾ ಉತ್ಸವವನ್ನು ಹಮ್ಮಿಕೊಂಡಿದೆ.

ಉತ್ಸವದಲ್ಲಿ ಮಹಿಳಾ ಸ್ವಸಹಾಯ ಸಂಘಗಳು, ಗ್ರಾಮೀಣ ಉದ್ಯಮಿಗಳು ಮತ್ತು ಸ್ಥಳೀಯ ಕರಕುಶಲ ಕಲಾವಿದರು ತಯಾರಿಸಿದ ವಿವಿಧ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಬೆಳಿಗ್ಗೆ 11ರಿಂದ ರಾತ್ರಿ 8ರವರೆಗೆ ನಡೆಯಲಿದೆ.

70 ಮಹಿಳಾ ಉದ್ಯಮಿಗಳು ಭಾಗವಹಿಸಲಿರುವ ಈ ಉತ್ಸವದಲ್ಲಿ ಸಿದ್ಧಪಡಿಸಿದ ಉಡುಪುಗಳು, ಗೃಹ ಅಲಂಕಾರ, ಟೆರಾಕೋಟ, ಕರಕುಶಲ, ಕೃತಕ ಆಭರಣ, ಪ್ರಸಾಧನ ಇತ್ಯಾದಿ ಉತ್ಪನ್ನಗಳು ಒಂದೇ ಸೂರಿನಡಿಯಲ್ಲಿ ಲಭ್ಯವಾಗಲಿವೆ.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **M/s. A.J.R Layout** ಪಾಲುದಾರರಾದ ಶ್ರೀ ಎನ್. ಬಸವರಾಜು, ಎನ್. ಶಿವಕುಮಾರ್, ಶ್ರೀಮತಿ ಮೀನ ಎನ್., ಪಿ. ಶಿವಶಂಕರರೆಡ್ಡಿ ಮತ್ತು ರಾಕೇಶ್ ಜಿ., ನಂ.1987, 100 ಅಡ್ಡ ರಸ್ತೆ, ಆಕ್ಸಫರ್ಡ್ ಮೆಡಿಕಲ್ ಕಾಲೇಜು ಹತ್ತಿರ, ಯಡವನಹಳ್ಳಿ, ಅತ್ತಿಬೆಲೆ ಹೋಬಳಿ, ಆನೇಕಲ್ ತಾ।।, ಬೆಂಗಳೂರು ನಗರ ಜಿಲ್ಲೆ ರವರು ಇಂಡ್ಲಬೆಲೆ ಗ್ರಾಮದ ಹೊಸ ಸರ್ವೆ ನಂ. 234 [ಹಳೇ ಸರ್ವೆ ನಂ. 173/P5) ವಿಸ್ತೀರ್ಣ 1 ಎಕರೆ ಹತ್ತು ಗುಂಟೆ ಜಮೀನನ್ನು ಇದರ ಮಾಲೀಕರಾದ ಶ್ರೀ ಕೆ. ಮಂಜುನಾಥ್, ಶ್ರೀ ಕೆ. ಶ್ರೀನಿವಾಸ್, ಶ್ರೀ ಕೆ. ನಾಗರಾಜ್, ಶ್ರೀ ಕೆ. ಸುರೇಶ್ ಮತ್ತು ಶ್ರೀ ಕೆ. ನರೇಂದ್ರಬಾಬು ರವರಿಂದ ಖರೀದಿಸಲು ಇಚ್ಛಿಸಿದ್ದು, ಈ ಸಂಬಂಧ ಕರ್ನಾಟಕ ಸರ್ಕಾರದ **ಅಧಿಕೃತ ಜ್ಞಾಪನ ಸಂಖ್ಯೆ PTCL(A) CR 9/2024-25, ದಿನಾಂಕ: 8/9/2025 ರಂತೆ** ಮಾರಾಟ ಮಾಡಲು ಸರ್ಕಾರ ಪೂರ್ವಾನುಮತಿ ಮಂಜೂರು ಮಾಡಿದ್ದು, ಈ ಮೇಲ್ಕಂಡ ಸ್ವತ್ತಿಗೆ ಸಂಬಂಧಿಸಿದಂತೆ ಹಿತಾಸಕ್ತಿಯುಳ್ಳ ವ್ಯಕ್ತಿಗಳ ಆಕ್ಷೇಪಣೆಗಳೇನಾದರು ಇದ್ದಲ್ಲಿ ಈ ಕೆಳಗಿನ ನನ್ನ ಕಛೇರಿಯ ವಿಳಾಸಕ್ಕೆ 15 ದಿನಗಳೊಳಗೆ ಸಲ್ಲಿಸುವುದು.

ಕಛೇರಿ ವಿಳಾಸ: ಜಿ. ವಿಶ್ವನಾಥರೆಡ್ಡಿ, ಬಿ.ಎ.ಎಲ್.,ಎಲ್.ಎಲ್.ಬಿ., ವಕೀಲರು, ಗೋಪಾಲರೆಡ್ಡಿ ಬಿಲ್ಡಿಂಗ್, ಮಂಚನಹಳ್ಳಿಕ್ರಾಸ್ ಹತ್ತಿರ, ಅತ್ತಿಬೆಲೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.

ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಸಂ.: ಕಾಪಾಅ/ಪಂರಾಇಂವಿ/ಕೆ.ಇಂ-1/ಇ-ಟೆಂಡರ/2025-26/

ದಿನಾಂಕ: 25.08.2025

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 03 (ಏಕ ಲಕೋಟೆ ಪದ್ಧತಿ)

ಈ ಕಛೇರಿಯಿಂದ 2024-25ನೇ ಸಾಲಿನ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ ರವರು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಮೋದನೆಯಾಗಿರುವ ಈ ಕೆಳಕಂಡ ಕಾಮಗಾರಿಗಳಿಗೆ ಸಾಮಾಗ್ರಿಗಳನ್ನು ಪೂರೈಸಲು ನೊಂದಣೀಯಾಗಿರುವ ಮಾರಟದಾರರಿಂದ & ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ ಎನ್‌ರೋಲ್ ಮಾಡಿಸಿರುವ ಅರ್ಹ ಸರಬರಾಜುದಾರರಿಂದ **ಟೆಂಡರ್‌ಗಳನ್ನು** ಆಹ್ವಾನಿಸಲಾಗಿದೆ. ಸರಬರಾಜುದಾರರು ಭರ್ತಿ ಮಾಡಿದ ಟೆಂಡರ್‌ಗಳನ್ನು ಈ ಕೆಳಗೆ ನಿಗಧಿಪಡಿಸಿರುವಂತೆ **ಇ-procurement portal** ಪದ್ಧತಿಯಂತೆ **http://www.kppp.karnataka.gov.in Online** ಮುಖಾಂತರ ಸಲ್ಲಿಸತಕ್ಕದ್ದು, (ಮ್ಯಾನುಯಲ್ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ). ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಪ್ರಕಟಣೆ ಸಂಖ್ಯೆ:ಪಿ.ಡಬ್ಲ್ಯೂ.ಡಿ.154/ ಎಫ್.ಸಿ.111/2000 ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮಗಳ ಪ್ರಕಾರ ಹಾಗೂ **STANDARD BID DOCUMENTS KG-1** ಮತ್ತು ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ4:ಪಿ.ಸಿ.ಎಲ್ 2008, ಬೆಂಗಳೂರು, ದಿನಾಂಕ:14/10/2008 ರೀತ್ಯಾ ಸ್ವೀಕರಿಸಲಾಗುವುದು. ಪ್ರಕಟಿಸಿರುವ ಯಾವುದಾದರೂ ದಿನಾಂಕವು ಆಕಸ್ಮಿಕವಾಗಿ ರಜಾ ದಿನವಾದಲ್ಲಿ ನಂತರದ ಕಛೇರಿ ಕೆಲಸದ ದಿನವನ್ನು ಪರಿಗಣಿಸಲಾಗುವುದು. (1) ಆಕ್ಷೇಪಣೆ/ ವಿವರಣೆಗಳನ್ನು ಸ್ವೀಕರಿಸುವ ದಿನಾಂಕ: **24.09.2025, ಸಾಯಂಕಾಲ 4:30 ಗಂಟೆ ವರೆಗೆ.** (2) ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 25.09.2025, ಸಂಜೆ 4:30 ಗಂಟೆವರೆಗೆ** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ **26.09.2025 ಸಾಯಂಕಾಲ 5:00 ಗಂಟೆ ಸಾಧ್ಯವಿದ್ದಲ್ಲಿ.**

ಸಹಿ/- ಕಾರ್ಯಪಾಲಕ ಅಭಿಯಂತರರು
ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:200/ಕೆಎಸ್‌ಎಂಸಿಎ/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂ(ವಿ)/ಪ್ರ(ಕಾ)ವ/ತು/ಅಇಂವಿ/ಸಕಾನಿಇಂ-2/25-26/6836-37&6838-39 ದಿನಾಂಕ: 15.09.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಕೆಳಕಂಡ ಕಾಮಗಾರಿಗಳಿಗೆ **ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ** ಟೆಂಡರ್‌ಗಳನ್ನು ಆಹ್ವಾನಿಸಿದೆ.

1) ಬಿಡ್ ವಿಚಾರಣೆ ಸಂಖ್ಯೆ: ಕಪ್ರನಿನಿ/ಮುಇಂ/ಪ್ರ(ಕಾ)/ತು/ಅಇಂ(ಕ)/ಸ.ಕಾನಿಇಂ-2/25-26/0043/ದಿನಾಂಕ: 11.09.2025.

ಸಂಯೋಜಿತ ಪ್ಯಾಕೇಜ್: ಕೆಲಸ ಎ: 400ಕೆವಿ ಐಸಿಟಿ-02 ಎಚ್.ವಿ ಬ್ರೇಕರ್‌ಗಳಿಂದ ದೋಷಪೂರಿತ ಕಾಪರ್ ನಿಯಂತ್ರಣ ಕೇಬಲ್ ಬದಲಾವಣೆ (ಪೂರೈಕೆ ಹಾಗೂ ಬದಲಾವಣೆ ಸೇರಿದಂತೆ).

ಕೆಲಸ ಬಿ: ಐಸಿಟಿಗಳು ಸೇರಿದಂತೆ 400ಕೆವಿ, 220ಕೆವಿ ಲೈನ್‌ಗಳು, 400ಕೆವಿ ಆರ್/ಎಸ್/ ಗುತ್ತೂರಿನಲ್ಲಿ 400ಕೆವಿ ರಿಯಾಕ್ಟರ್‌ಗಳ ದೋಷಪೂರಿತ ಬದಲಾವಣೆ (ತಾಮ್ರ ನಿಯಂತ್ರಣ ಕೇಬಲ್ ಪೂರೈಕೆ ಮತ್ತು ಹಾಕುವುದು. ತಾಮ್ರದ ಕಂಟ್ರೋಲ್ ಕೇಬಲ್ ಸೇರಿದಂತೆ).

2) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮುಇಂ/ಪ್ರ(ಕಾ)ವ/ತು/ಅಇಂವಿ(ಕ)/ ಸಕಾನಿಇಂ-2/2025-26/0042/ದಿನಾಂಕ: 08.09.2025 ರ ಅನ್ವಯ ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆಯಲ್ಲಿ ಹಾನಿಗೊಳಗಾದ 0.6 ಕಿ.ಮೀ. ಉದ್ದದ ಕೊಯೋಟ್ ಕಂಡಕ್ಟರನ್ನು ಬದಲಾಯಿಸುವುದು, 66ಕೆವಿ ಉಪಕೇಂದ್ರ, ಗುತ್ತೂರು ಮತ್ತು 66ಕೆವಿ ಹಲಸಬಾಳು ಮಾರ್ಗದಿಂದ ಅಥವಾ 66ಕೆವಿ ಹರಿಹರ-ಹೊಸಪೇಟೆ ಉಪಕೇಂದ್ರದ ಲೋಡ್ ಅನ್ನು ಮರು-ವಿಂಗಡಣೆ ಮಾಡುವುದು, ಪೂರೈಕೆ, ನಿರ್ಮಾಣ, ಬಿಡುಗಡೆ, ಸಾಗಣೆ, ಲೋಡಿಂಗ್, ಇಳಿಸುವಿಕೆ ಮತ್ತು ಕಾರ್ಯಾರಂಭ ಸೇರಿದಂತೆ ಐಟಂವೈಸ್ ಟೆಂಡರ್ ಆಧಾರದ ಮೇಲೆ.

ಮೇಲ್ಕಂಡ ಟೆಂಡರ್‌ನ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "E Procurement KPTCL" ಅಥವಾ **https://kppp.karnataka.gov.in** ನಲ್ಲಿ ದಿನಾಂಕ: **20.09.2025** ರಂದು ಅಥವಾ ತದನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಇತರ ಯಾವುದೇ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/- **ಮುಖ್ಯ ಇಂಜಿನಿಯರ್(ವಿ), ಪ್ರಸರಣ (ಕಾರ್ಯಾಚರಣೆ) ವಲಯ, ಕ.ವಿ.ಪ್ರ.ನಿ.ನಿ., 1ನೇ ಮಹಡಿ, ಪ್ರಸರಣ ಭವನ, ತುಮಕೂರು 66/11ಕೆವಿ ಉಪಕೇಂದ್ರ ಆವರಣ, ತುಮಕೂರು-573103. ಫೋನ್: 0816-2279074.**

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಆಟೋ_ಎಸ್‌ಐಜಿ_ಸಿಎಸ್‌ಡಿಆರ್-ಪಿಕೆಡಿ ದಿನಾಂಕ : 11-08-2025ಗೆ ತಿದ್ದುಪಡಿ 4

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ತಿದ್ದುಪಡಿ 4, ಎನ್‌ಐಟಿ ಹೆಡ್ಡರ್ ಟೆಂಡರ್ ಬೆಂಗಳೂರು ವಿಭಾಗದ ಚನ್ನಸಂದ್ರ - ಪೆನುಕೊಂಡ ಸೆಕ್ಷನ್ ನಡುವೆ ಸ್ವಯಂಚಾಲಿತ ಸಿಗ್ನಲಿಂಗ್ ಒದಗಿಸುವುದಕ್ಕಾಗಿ ಹಾಲಿ ಇರುವ ಮುಕ್ತಾಯದ ದಿನಾಂಕ ಮತ್ತು ಸಮಯ : 22-09-2025, 11:00 ಗಂಟೆಯನ್ನು 30-09-2025 15:00 ಗಂಟೆಗಳು ಎಂದು ಈ ಮೂಲಕ ಮಾರ್ಪಡಿಸಲಾಗಿದೆ. (ವಿವರಗಳನ್ನು ಈಗಾಗಲೇ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ)	ರೂ. 139,40,69,610.88

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **30-09-2025 ರಂದು 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ / ನಿರ್ಮಾಣ, ಬೆಂಗಳೂರು ದಂಡು

ಪಿಯುಬಿ/476/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

---

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಆಟೋ_ಎಸ್‌ಐಜಿ_ವೈಪಿಆರ್_ಎಎಸ್‌ಕೆ ದಿನಾಂಕ : 08-08-2025ಗೆ ತಿದ್ದುಪಡಿ 4

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ತಿದ್ದುಪಡಿ 4, ಎನ್‌ಐಟಿ ಹೆಡ್ಡರ್ ಟೆಂಡರ್ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಯಶವಂತಪುರ - ಅರಸೀಕೆರೆ ಸೆಕ್ಷನ್ ನಡುವೆ ಸ್ವಯಂಚಾಲಿತ ಸಿಗ್ನಲಿಂಗ್ ಒದಗಿಸುವುದಕ್ಕಾಗಿ ಹಾಲಿ ಇರುವ ಮುಕ್ತಾಯದ ದಿನಾಂಕ ಮತ್ತು ಸಮಯ : 15-09-2025, 15:00 ಗಂಟೆಯನ್ನು 30-09-2025 11:00 ಗಂಟೆಗಳು ಎಂದು ಈ ಮೂಲಕ ಮಾರ್ಪಡಿಸಲಾಗಿದೆ. (ವಿವರಗಳನ್ನು ಈಗಾಗಲೇ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ)	ರೂ. 160,89,45,177.79

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **30-09-2025 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ / ನಿರ್ಮಾಣ, ಬೆಂಗಳೂರು ದಂಡು

ಪಿಯುಬಿ/475/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

---

Warehousing Development and Regulatory Authority

Government of India

NCUI Building, 4th Floor, 3, Siri Institutional Area, August Kranti Marg, Hauz Khas, New Delhi - 110016, Tel. No. 49536496, 49092978

F. No. WDRA-HR0Dep(DIRT)/1/2025-HR/1822 Dated: 03.09.2025

Warehousing Development and Regulatory Authority (WDRA) invites applications from eligible personnel working in the Central/ State Governments/ Central and State PSUs/ Autonomous/ Statutory bodies for the below mentioned post to be filled on deputation/absorption basis:-

Sl. No.	Name of the Post	No. of vacancies
1.	Director (Technical) [Level-13 (Rs. 123100-215900) (7th CPC)]	01

Detailed information may be seen at the Authority's website www.wdra.gov.in. Applications in the prescribed format available on the website may be submitted to the Assistant Director (Human Resource), Warehousing Development and Regulatory Authority, New Delhi, within 45 days from the date of publication of the vacancy circular in Employment News. Corrigendum etc., if any, shall be put up on the WDRA website.

Sd/-
(Venita Solomon)
Assistant Director (HR)

CBC 08109/12/0008/2526

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

SMRITHI 2025
MEMORY WELLNESS DRIVE
WORLD ALZHEIMER'S DAY SPECIAL
NMT ELDERCARE Nightingales Medical Trust Estd 1998
GIFT YOUR ELDERLY PARENTS
THE CARE THEY DESERVE
Join us for SMRITHI 2025
Memory Wellness Drive, a FREE Brain Health & Memory Wellness Screening event!
Benefits for Your Loved Ones:
- Free brain health and memory screening
- Personalized brain health report
- Expert guidance from doctors and counselors
- Tips for healthy aging and independence
- Engaging brain games and activities

Call : 080 42426565
Scan
Date: Sat, 20th Sep 2025 | Time: 9:00 AM – 1:00 PM
Venue: Krishna Rao Park, Basavanagudi, Bengaluru
Early Check = Longer, Healthier, Happier Life
Organized by Nightingales Medical Trust in collaboration with DIA and ARDSI

PUBLIC NOTICE

OUTREACH ASSOCIATION OF VOLUNTEERS FOR RURAL DEVELOPMENT, BENGALURU
TENDER NOTIFICATION
For the GIZ India supported project 'Promotion of ELS cotton in Karnataka state, sealed tenders are invited under two bid tender system (Technical and Financial) from eligible suppliers for the supply of
I) Griege/ Grey fabric cotton bags for picking, Quantity: 11,600; Size 50 cm (L) x 60 cm (W),
II) Griege/ Grey fabric cotton bags for collection and transportation of cotton, Quantity: 11,600; Size 120cm (L) x 90 cm (W) and
III) Griege/ Grey fabric cotton head caps, Quantity: 23,200;Size 30cm (L) x 17 cm (W).
For detailed tender notification, eligibility criteria, and submission guidelines, please visit: www.outreachindia.org
Last date for submission: 08-10-2025
Executive Director
Contact No.: 94490 77530

REAL ESTATE SELLING

House

Mysore

LUXURY 5 BHK House For Sale on Commercial Chamundi Hill Main Road,Prime Location.60x80 North Facing Plot, 80 feet Road. Contact: 9035035399

Sites

Kempegowda Layout

NADA PRABHU Kempegowda layout BDA Site For Sale 30x40, 40x60, 50x80 Contact: 7676900174 6363496142

Commerical

Whitefield

3210SFT,& 1200Sft, Commercial Sites For Sale Near Varthur Sub-Register Office,Within BBMP Limits With 'E'Khatha Call:9353532040

BUSINESS

Business to Business

Business

PROPERTY COLLATERALS/ Joint Developments/ Take overs) R/E Buying Selling School/ Colleges/ Hospitals. Hot Drinks Factory (GOA). Dr. Swamy, Vamshadhara Projects/ Services- 93422247637.

PROPERTY COLLATERALS/ JD's/ Take Overs/ Finance for big Projects, Problem solving. Dr.Swamy Naidu- Vamshadhara Projects And Services. 9342247637.

Business Offers

Finance

AVAIL MSME LOANS EASILY Business Owners can now Avail MSME Loans Upto 1 crore against GST/UDYAM Certificates UNSECURED LOANS Available for both Existing Businesses& Startups Contact-7204995189

INVESTOR REQUIRED in Crores for Health Industry Profit 5% to 30% Serious Persons only Contact - 9035398249

PERSONAL

Change of Name

I,MANUCHA MARY EMMANUEL residing at Sarala Birla Academy BH-3, Jigani Road, Anekal, Bannerghatta Bengaluru-560083 have changed my name to MALUCHA GALSTAUN vide affidavit dtd:07.09.2025 sworn before Notary K.V.Mani, Bengaluru

ANNOUNCEMENT
I, DEVAL JITENDRAKUMAR CHUNILAL, residing at Jada Kheriya, Limkheda, Limkheda Dahod, Gujarat - 389140, have changed my minor daughter's name from DEVAL NIRALEBEN to DEVAL NIRALIBEN vide affidavit dated 17.09.2025 before notary N. Narayanaswamy, Bengaluru.

CHANGE OF NAME
I, RAJESHWARI HATTI & PADMALATA KOTRASHETTAR D/o Chandrashekharappa, residing at No.20, Nagesh Sapota Layout, Harohalli Post, Harohalli Village, Bangalore South District - 562112, declare that the above names pertain to me only. Henceforth I shall be known as PADMALATA KOTRASHETTAR vide affidavit 11.09.2025 before notary Kantharaju S, Ramanagara.

Lost

DOCUMENT LOST
I, Domnicque Paul H, residing at No.1334, 6th Cross, 11th Main, HAL 3rd Stage, Kodihalli, Bangalore- 560008 have lost my Original Marginal Land Allotment Letter, Document No./ Identification: ಸಂಖ್ಯೆ:ಬೆಂಅಪ್ರಾ: ಉಕಾ-1/ಹೆಚ್‌ಎಎಲ್/1334/2011-12. While transit. If found please contact: 9880657624

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ದೇವನಹಳ್ಳಿ ತಾಲ್ಲೂಕು, ಕಾರಹಳ್ಳಿ ಗ್ರಾಮ ಪಂಚಾಯತಿ ಖಾತಾ ನಂ. 9/20 ರ ವಾಸದ ವಿಲ್ಲಾ ಪ್ಲಾಟ್ ನಂ. 20 ರ ಮತ್ತು ಈಗಿನ ದೇವನಹಳ್ಳಿ, ದೇವನಹಳ್ಳಿ ಬ್ಲಾಕ್, ಕಾರಹಳ್ಳಿ ಗ್ರಾಮ ಪಂಚಾಯಿತಿ ಈ ಖಾತಾ ನಂ, 150300200600220054 ರ ಪ್ರೆಸ್ಟೀಜ್ ಗಾಲ್ಫ್‌ಶೈರ್ ಹೆಸರಿನ ಮ್ಯಾನ್ಷನ್ ನಲ್ಲಿರುವ 9778 ಚದರ ಅಡಿಗಳ ಅಳತೆಯಲ್ಲಿನ ನೆಲ, 1ನೇ ಮತ್ತು 2ನೇ ಮಹಡಿಯ ಒಟ್ಟು 8111 ಚದರ ಅಡಿಗಳ ಅಳತೆಯ ಷೆಡ್ಯೂಲ್ ನಲ್ಲಿ ನಮೂದಿಸಿರುವ ಇನ್ನು ಮುಂದೆ ಷೆಡ್ಯೂಲ್ ಪ್ರಾಪರ್ಟಿ ಎಂದು ಕರೆಯಲ್ಪಡುವ ಸಂಪೂರ್ಣ ಸ್ವತ್ತನ್ನು ವಿಲ್ಲಾ ನಂ. 82, ಹಿಲ್‌ಕೌಂಟಿ, ಬಾಚುಪಲ್ಲಿ, ಹೈದರಾಬಾದ್, ತೆಲಂಗಾಣ -560090 ವಿಳಾಸದಲ್ಲಿ ವಾಸವಾಗಿರುವ ಈಗಿನ ಮಾಲೀಕರಾದ ವಲ್ಲಭನೇನಿ ನೀಲಿಮಾ ಮತ್ತು ಧನಂಜಯ ವಲ್ಲಭನೇನಿ ಅವರಿಂದ ಕೊಂಡುಕೊಳ್ಳಲು ಇಚ್ಛಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಸ್ವತ್ತಿನ ಯಾವುದೇ ಭಾಗದ ಮೇಲೆ ಯಾವುದೇ ವ್ಯಕ್ತಿ ವ್ಯಕ್ತಿಗಳು ಹಕ್ಕು ಮಾಲಿಕತ್ವ ಹಿತಾಸಕ್ತಿ ಅಥವಾ ಪರಿಹಾರ ಪಡೆಯುವ ಮತ್ತು ಭೋಗ್ಯದ ವಿವರಗಳನ್ನು ಒಳಗೊಂಡ ಕ್ಲೈಮ್ ಗಳನ್ನು ಹೊಂದಿದ್ದಲ್ಲಿ ಸದರಿ ಮಾಲೀಕರುಗಳ ವಿರುದ್ಧ ಆಕ್ಷೇಪಣೆಗಳಿದ್ದಲ್ಲಿ ಅಥವಾ ಸದರಿ ಮಾಲೀಕರಿಂದ ನಮ್ಮ ಕಕ್ಷಿದಾರರ ಪರವಾಗಿ ಆಗುವ ವ್ಯವಹಾರದ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಅಂತಹವರು ಸದರಿ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿನಗಳ ಒಳಗಾಗಿ** ತಮ್ಮ ಆಕ್ಷೇಪಣೆಯನ್ನು ದಾಖಲಾತಿಗಳ ಪುರಾವೆಯೊಡನೆ ಕೆಳ ಸಹಿದಾರರಿಗೆ ತಿಳಿಸತಕ್ಕದ್ದು. ಇಲ್ಲದಿದ್ದರೆ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿಯ ಯಾವುದೇ ಹಕ್ಕು, ಹಕ್ಕುಬಾದ್ಯತೆ ಅಥವಾ ಆಸಕ್ತಿ ಹೊಂದಿರುವುದಿಲ್ಲವೆಂದು ತಿಳಿಯಲಾಗುವುದು ಮತ್ತು ಇದರಂತೆ ನಮ್ಮ ಕಕ್ಷಿದಾರರು ಈ ಸ್ವತ್ತಿನ ಮೇಲೆ ಇತರರ ಹಕ್ಕು ಇಲ್ಲವೆಂದು ಭಾವಿಸಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ವ್ಯವಹರಿಸಲು ಮುಂದಾಗುವರು.

ಷೆಡ್ಯೂಲ್

ಬೆಂಗಳೂರು ಗ್ರಾಮಾಂತರ ಜಿಲ್ಲಾ ದೇವನಹಳ್ಳಿ ತಾಲ್ಲೂಕು ಕೊಟ್ಟಿಗೆ ತಿಮ್ಮನಹಳ್ಳಿ ಗ್ರಾಮದ ಸರ್ವೆ ನಂ, 5, 6, 7, 16 ರಿಂದ 19, 21, 27 ರಿಂದ 34, ತ್ಯಾಲಗೆರೆ ಗ್ರಾಮದ ಸರ್ವೆ ನಂ. 64 ಮತ್ತು 65, ಸೊನ್ನೇನ ಹಳ್ಳಿ ಗ್ರಾಮದ ಸರ್ವೆ ನಂ. 3, 7, 8, 12 ರಿಂದ 15, 17 ರಿಂದ 23, 64, 65 ಮತ್ತು 77 ಹಾಗೂ ಕಾರಹಳ್ಳಿ ಅಮಾನಿಕೆರೆ ಗ್ರಾಮದ ಸರ್ವೆ ನಂ. 7 ರ ಪರಿವರ್ತಿತ ಜಮೀನು 61 ಎಕರೆ 24.61 ಗುಂಟೆಗಳಲ್ಲಿ ನಿರ್ಮಾಣವಾಗಿರುವ ಪ್ರೆಸ್ಟೀಜ್ ಗಾಲ್ಫ್‌ಶೈರ್ ಎಂದು ಹೆಸರಾಗಿರುವ ದೇವನಹಳ್ಳಿ ತಾಲ್ಲೂಕು ಕಾರಹಳ್ಳಿ ಗ್ರಾಮ ಪಂಚಾಯಿತಿ ಖಾತಾ ನಂ. 9/20 ರ ವಾಸದ ವಿಲ್ಲಾ ಪ್ಲಾಟ್ ನಂ. 20 ರ ಮತ್ತು ಈಗಿನ ದೇವನ ಹಳ್ಳಿ, ದೇವನ ಹಳ್ಳಿ ಬ್ಲಾಕ್ ಕಾರಹಳ್ಳಿ ಗ್ರಾಮ ಈ ಖಾತಾ ನಂ. 150300200600220054 ರ 9778 ಚದರ ಅಡಿಗಳಲ್ಲಿನ ಮ್ಯಾನ್ಷನ್ ನೆಲ, 1ನೇ ಮತ್ತು 2ನೇ ಮಹಡಿಯ ಒಟ್ಟು 8111 ಚದರ ಅಡಿಗಳ ಸಂಪೂರ್ಣ ಸ್ವತ್ತು. ಚಕ್ಕುಬಂದಿ: ಪೂರ್ವಕ್ಕೆ : ಗಾಲ್ಫ್‌ಕೋರ್ಸ್ ಕಡೆಗೆ ತೆರೆದಿದ್ದು, ಪಶ್ಚಿಮಕ್ಕೆ: ಆಂತರಿಕ ರಸ್ತೆ, ಉತ್ತರಕ್ಕೆ: ಮ್ಯಾನ್ಷನ್ ನಂ.21, ದಕ್ಷಿಣಕ್ಕೆ ಮ್ಯಾನ್ಷನ್ ನಂ. 19.

ಸಹಿ/- ಕೆ.ಎನ್. ಗೀತಾ, ವಕೀಲರು,
ಸಿ.ಎಮ್.ಎಸ್. ಇಂಡಸ್‌ಲಾ
ನಂ.101, 1ನೇ ಮಹಡಿ, ಎಂಬೆಸ್ಸಿ ಕ್ಲಾಸಿಕ್, ನಂ. 11, ವಿಠಲ್ ಮಲ್ಯ ರಸ್ತೆ, ಬೆಂಗಳೂರು-560 001
ದೂ. +91 80-40726600

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/16/2025-26 ದಿನಾಂಕ: 16-09-2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಅಟ್ಟೂರು ಗ್ರಾಮದ

ಕ್ರ. ಸಂ.	ಭೂ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ-ಗುಂ	'ಎ' ಖರಾಬು ಗುಂ
1	ಶ್ರೀ ವೈ ಸುಧಾಕರ್ ರೆಡ್ಡಿ ಬಿನ್ ಸುಬ್ಬಾರೆಡ್ಡಿ	18/4	01-00	-
2	ಶ್ರೀ ಆರ್. ಪ್ರತಾಪ್ ಕುಮಾರ್ ರೆಡ್ಡಿ ಬಿನ್ ಲೇಟ್ ಆರ್. ಸುಬ್ರಮಣಿ ರೆಡ್ಡಿ	19/2	01-27	01
3		19/3	00-39	01
4	ಶ್ರೀಮತಿ ವಿ. ವಿಜಯಲಕ್ಷ್ಮೀ ಕೋಂ ವಿ. ಸುಧೀರ್ ಕುಮಾರ್	20/2	00-14	-
5	ಶ್ರೀ ಭಾಸ್ಕರ್ ರೆಡ್ಡಿ ಬಿನ್ ಶ್ರೀ ರಾಮ ರಾಘವರೆಡ್ಡಿ	20/3	00-15	-
6	ಶ್ರೀಮತಿ ರಾಮಿರೆಡ್ಡಿ ನವರತ್ನಮ್ಮ ಕೋಂ ಲೇಟ್ ಆರ್. ಕುಮಾರಸ್ವಾಮಿ ರೆಡ್ಡಿ	20/5	00-15	-
7	ಶ್ರೀ ವೈ ಸುಧಾಕರ್ ರೆಡ್ಡಿ ಬಿನ್ ಸುಬ್ಬಾರೆಡ್ಡಿ	20/6	00-15	-
8	ಶ್ರೀಮತಿ ವಿ. ವಿಜಯಲಕ್ಷ್ಮೀ ಕೋಂ ವಿ. ಸುಧೀರ್ ಕುಮಾರ್	20/10	00-12	-
9	ಶ್ರೀ ಎಂ. ಭಾಸ್ಕರ ರೆಡ್ಡಿ ಬಿನ್ ಶ್ರೀ ರಾಘವರೆಡ್ಡಿ	20/11	01-25	03
10	ಶ್ರೀಮತಿ ವಿ. ವಿಜಯಲಕ್ಷ್ಮೀ ಕೋಂ ವಿ. ಸುಧೀರ್ ಕುಮಾರ್	21/1	00-30 1/2	-
11	ಶ್ರೀಮತಿ ಎಂ. ಸಂಪೂರ್ಣ ಕೋಂ ಧನಂಜಯ ರೆಡ್ಡಿ	24/1ರ ಪೈಕಿ	03-13 1/2	03

ಷರಾ:- ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/2850/ಅಡ್ವಟೋರ್/2025-26

SAATCHI & SAATCHI

ಹಣ ಮಾಡುವುದು ಸುಲಭ. ಹೌದು, ಸುಲಭ. ಜೀವನದಲ್ಲಿ ಹಣ ಮಾಡುವುದು ಕಷ್ಟದ ಕೆಲಸವಲ್ಲ; ಹಣವನ್ನು ಉಳಿಸಿಕೊಳ್ಳುವುದು ಕಷ್ಟದ ಕೆಲಸ
ಜಾನ್ ಮೆಕ್‌ಅಫೀ, ಅಮೆರಿಕದ ಉದ್ಯಮಿ

ದುಡ್ಡಿನಂಥಾ ಮಾತು

ಸಾಲಪತ್ರಗಳು ನೆರವಿಗೆ ಬರುವ ಬಂಧುಮಿತ್ರರು



ಷೇರುಗಳ ಚಂಚಲತೆ ಇಲ್ಲದ, ಎಫ್‌.ಡಿ.ಗಳಲ್ಲಿನ ಕಡಿಮೆ ಬಡ್ಡಿಯ ಕೊರಗು ಇಲ್ಲದ ಸಾಲಪತ್ರಗಳು ಮಧ್ಯಮ ವರ್ಗದವರ ನೆರವಿಗೆ ಇರುವ ಹೂಡಿಕೆ ಉತ್ಪನ್ನಗಳು. ಹೂಡಿಕೆಗಳಲ್ಲಿ ಸಾಲಪತ್ರಗಳ ಮಹತ್ವ ಏನು ಎಂಬುದನ್ನು ಈ ಬರಹ ವಿವರಿಸಿದೆ

• ಸೌರವ್ ಘೋಷ್

ದೇಶದ ಮಧ್ಯಮ ವರ್ಗದ ಬಹುತೇಕ ಕುಟುಂಬಗಳಿಗೆ ಹಣಕಾಸಿನ ನಿರ್ವಹಣೆ ಅಂದರೆ ನಿತ್ಯದ ವೆಚ್ಚಗಳು, ಮುಂದಿನ ದಿನಗಳಿಗಾಗಿನ ಉಳಿತಾಯ ಹಾಗೂ ಅನಿರೀಕ್ಷಿತ ವೆಚ್ಚಗಳ ನಡುವೆ ಸಮತೋಲನ ಸಾಧಿಸುವುದು. ಆದರೆ, ಹೂಡಿಕೆಯ ವಿಚಾರ ಬಂದಾಗಲೆಲ್ಲ ಹಲವರು ಕಡಿಮೆ ಲಾಭ ತಂದುಕೊಡುವ ನಿಶ್ಚಿತ ಠೇವಣಿಗಳು ಹಾಗೂ ಹೆಚ್ಚಿನ ಲಾಭ ನೀಡಬಹುದಾದ ಮಾರುಕಟ್ಟೆ ಆಧಾರಿತ ಹೂಡಿಕೆಗಳ ನಡುವೆ ಯಾವುದು ಸೂಕ್ತ ಎಂಬ ಗೊಂದಲಕ್ಕೆ ಬೀಳುತ್ತಾರೆ.

ಬೆಲೆ ಏರಿಕೆಯು ಹೆಚ್ಚಾಗುತ್ತಲೇ ಇರುವ, ಮಾರುಕಟ್ಟೆಯ ಚಲನೆಯು ಅನಿಶ್ಚಿತವಾಗಿರುವ ಸಂದರ್ಭದಲ್ಲಿ ಕಡಿಮೆ ಲಾಭದ ಹೂಡಿಕೆಗಳಾಗಲಿ, ಹೆಚ್ಚು ಲಾಭ ನೀಡಬಹುದಾದರೂ ಹೆಚ್ಚಿನ ರಿಸ್ಕ್ ಇರುವ ಹೂಡಿಕೆಗಳಾಗಲಿ ಸೂಕ್ತವಾಗಲಿಕ್ಕಿಲ್ಲ. ಸ್ಥಿರವಾದ ಬೆಳವಣಿಗೆ, ನಿರಂತರ ವರಮಾನ ಹಾಗೂ ಮನಸ್ಸಿಗೆ ನೆಮ್ಮದಿಯನ್ನು ನೀಡುವ ಹೂಡಿಕೆಯ ಒಂದು ಮಾರ್ಗ ಇದ್ದರೆ ಹೇಗೆ?!

ಸಾಲಪತ್ರಗಳು (ಬಾಂಡ್‌ಗಳು) ಈ ಸ್ಥಾನವನ್ನು ತುಂಬಬಲ್ಲವು. ಸಾಲಪತ್ರಗಳನ್ನು ಬಹುತೇಕರು ಉಪೇಕ್ಷೆ ಮಾಡುವುದೇ ಹೆಚ್ಚು. ಹೀಗಿದ್ದರೂ, ಇವು ಕುಟುಂಬಗಳ ಹಣಕಾಸಿನ ಯೋಜನೆಗೆ ಸ್ಥಿರತೆ ತಂದುಕೊಡಬಲ್ಲವು, ನಿರಂತರ ಆದಾಯವನ್ನೂ ಕೊಡಬಲ್ಲವು.

ಸಾಲಪತ್ರಗಳು ಏಕೆ ಮುಖ್ಯ?

ಸ್ಥಿರತೆ ಹಾಗೂ ಹಣದುಬ್ಬರದ ಪ್ರಮಾಣ ಮೀರಿದ ಲಾಭದ ನಡುವೆ ಸಮತೋಲನವನ್ನು ಸಾಧಿಸಲು ಸಾಲಪತ್ರಗಳು ಅಗತ್ಯ. ಇವು ನಿಶ್ಚಿತ ವರಮಾನ ನೀಡುತ್ತವೆ, ಸಾಮಾನ್ಯವಾಗಿ ಇವು ನಿಶ್ಚಿತ ಠೇವಣಿಗಳಿಗಿಂತ ಹೆಚ್ಚಿನ ಲಾಭ ನೀಡುತ್ತವೆ. ವಾರ್ಷಿಕವಾಗಿ ಇವು ಶೇ 8ರಿಂದ ಶೇ 15ರವರೆಗೆ ಲಾಭ ತಂದುಕೊಡಬಲ್ಲವು. ಇದು ಸಾಲಪತ್ರದ ರೇಟಿಂಗ್‌ಅನ್ನೂ ಅವಲಂಬಿಸಿದೆ.

ಸಾಲಪತ್ರ ಖರೀದಿಸುವುದು ಅಂದರೆ ಸರ್ಕಾರಕ್ಕೆ ಅಥವಾ ಕಂಪನಿಗೆ ಸಾಲ ಕೊಡುವುದು ಎಂದು ಅರ್ಥ. ಹೀಗೆ ಸಾಲ ನೀಡಿದ್ದಕ್ಕೆ ಪ್ರತಿಯಾಗಿ ನಿಶ್ಚಿತ ಬಡ್ಡಿ ಸಿಗುತ್ತದೆ. ನಿಗದಿತ ಅವಧಿಯ ನಂತರದಲ್ಲಿ ಆರಂಭಿಕ ಹೂಡಿಕೆಯ ಮೊತ್ತ ಕೂಡ ಸಿಗುತ್ತದೆ. ಸಾಲಪತ್ರಗಳು ದಶಕಗಳಿಂದಲೂ ವಿಶ್ವಸನೀಯ ಹೂಡಿಕೆಯ ಉತ್ಪನ್ನವಾಗಿ ಇವೆ. ಆದರೆ ತೀರಾ ಈಚಿನವರೆಗೆ ಸಾಲಪತ್ರಗಳಲ್ಲಿ ಅತಿ ಶ್ರೀಮಂತರು ಮಾತ್ರ ಹೂಡಿಕೆ ಮಾಡುತ್ತಿದ್ದರು. ಏಕೆಂದರೆ, ಅವುಗಳಲ್ಲಿ ಹೂಡಿಕೆ ಮಾಡುವವರು ತೊಡಗಿಸಬೇಕಿದ್ದ ಕನಿಷ್ಠ ಮೊತ್ತವೇ ದೊಡ್ಡದಿತ್ತು, ಸಾಲಪತ್ರಗಳನ್ನು ಖರೀದಿಸುವ ಪ್ರಕ್ರಿಯೆಯೂ ಸಂಕೀರ್ಣವಾಗಿತ್ತು.

ಆದರೆ ಸೆಬಿ ನೋಂದಾಯಿತ ಆನ್‌ಲೈನ್ ಸಾಲಪತ್ರ ವೇದಿಕೆಗಳು ಈ ಪ್ರಕ್ರಿಯೆಯನ್ನು ಸುಲಭಗೊಳಿಸಿವೆ. ಈಗ ದೇಶದ ಯಾವುದೇ ಕುಟುಂಬವು ಸರ್ಕಾರದ ಅಥವಾ ಕಾರ್ಪೊರೇಟ್ ಕಂಪನಿಯ ಸಾಲಪತ್ರದಲ್ಲಿ ₹1,000ದಷ್ಟು ಸಣ್ಣ ಮೊತ್ತ ಬಳಸಿ ಹೂಡಿಕೆ ಮಾಡಬಹುದು.

ಹಣದುಬ್ಬರ ಮೀರುವುದು, ರಿಸ್ಕ್ ಕಡಿಮೆ ಮಾಡುವುದು

ನಿಶ್ಚಿತ ಠೇವಣಿಗಳಿಂದ ಸಿಗುವ ಲಾಭವು ಹಣದುಬ್ಬರ ಪ್ರಮಾಣಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರುವ ಸಂದರ್ಭಗಳು ಕಡಿಮೆ. ಆದರೆ ಸಾಲಪತ್ರಗಳು, ಅದರಲ್ಲೂ ಮುಖ್ಯವಾಗಿ ಹೂಡಿಕೆಗೆ ಯೋಗ್ಯವಾದ ಉತ್ತಮ ದರ್ಜೆಯ ಕಾರ್ಪೊರೇಟ್ ಸಾಲಪತ್ರಗಳು, ಹೆಚ್ಚಿನ ಲಾಭವನ್ನು ತಂದುಕೊಡುತ್ತವೆ. ಈ ಮೂಲಕ ಅವು ಹೂಡಿಕೆದಾರರಿಗೆ ಹಣದುಬ್ಬರ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಲಾಭ ಗಳಿಸಲು ನೆರವಾಗುತ್ತವೆ. ಅಲ್ಲದೆ, ಈ ಸಾಲಪತ್ರಗಳು ಈಕ್ವಿಟಿಗಳಲ್ಲಿ ಕಂಡುಬರುವಂತಹ ಚಂಚಲತೆಗೆ ಒಳಗಾಗುವುದಿಲ್ಲ. ಹೀಗಾಗಿ, ಈ ಬಗೆಯ ಸಾಲಪತ್ರಗಳಲ್ಲಿ ಹೂಡಿಕೆಯು ರಿಸ್ಕ್ ಹೆಚ್ಚು ಬೇಡ ಎನ್ನುವವರಿಗೆ ಬಹಳ ಸೂಕ್ತವಾಗುತ್ತದೆ.

ಸಾಲಪತ್ರಗಳ ಮೌಲ್ಯವು ಸ್ಥಿರವಾಗಿ ಇರುತ್ತದೆ, ಸಾಲಪತ್ರದ ಅವಧಿಯ ಉದ್ದಕ್ಕೂ ಲಾಭ ಅಥವಾ ಅದು ನೀಡುವ ಆದಾಯದ ಪ್ರಮಾಣವು ನಿಶ್ಚಿತವಾಗಿರುತ್ತದೆ. ಇದರಿಂದಾಗಿ ಹೂಡಿಕೆಯ ಮೊತ್ತಕ್ಕೆ ಸ್ಥಿರತೆ ಸಿಗುತ್ತದೆ. ಬಂಡವಾಳ ಮಾರುಕಟ್ಟೆಗಳಲ್ಲಿ ಎಷ್ಟೇ ಕುಸಿತ ಕಂಡುಬಂದರೂ, ಸಾಲಪತ್ರಗಳಲ್ಲಿ ಹಣ ತೊಡಗಿಸಿದವರು ಭೀತಿಗೆ ಒಳಗಾಗಿ ಅವುಗಳನ್ನು ಮಾರಾಟ ಮಾಡುವ ಅಗತ್ಯ ಇರುವುದಿಲ್ಲ.

ಮಧ್ಯಮ ವರ್ಗಕ್ಕೆ ಪ್ರಯೋಜನ ಹೇಗೆ?

ಮೂವತ್ತು ವರ್ಷ ಮೀರಿರುವ, ನಲವತ್ತು ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಪ್ಪ–ಅಮ್ಮ ಹಾಗೂ ಒಂದು ಪುಟ್ಟ ಮಗು ಇರುವ ಕುಟುಂಬವೊಂದನ್ನು ಉದಾಹರಣೆಗೆ ಪರಿಗಣಿಸೋಣ. ಈ ಕುಟುಂಬಕ್ಕೆ ಸಣ್ಣ ಪ್ರಮಾಣದಲ್ಲಿ ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯ ಇದೆ. ಹೂಡಿಕೆಗೆ ₹10 ಲಕ್ಷ ಹಣ ಕುಟುಂಬದ ಬಳಿ ಇದೆ. ಈ ಕುಟುಂಬಕ್ಕೆ ಹೂಡಿಕೆಯ ಯೋಜನೆಯನ್ನು ಹೀಗೆ ರೂಪಿಸಬಹುದು:

- **₹3 ಲಕ್ಷ (ಒಟ್ಟು ಮೊತ್ತದಲ್ಲಿ ಶೇ 30ರಷ್ಟು) ಸಾಲಪತ್ರ ಹಾಗೂ ನಿಶ್ಚಿತ ಆದಾಯದ ಉತ್ಪನ್ನಗಳಲ್ಲಿ**
- **₹2 ಲಕ್ಷ (ಶೇ 20ರಷ್ಟು) ಆಪದ್ಧನದ ರೂಪದಲ್ಲಿ**
- **₹5 ಲಕ್ಷ (ಶೇ 50ರಷ್ಟು) ಈಕ್ವಿಟಿಗಳಲ್ಲಿ ಹಾಗೂ ಚಿನ್ನದಲ್ಲಿ**

ದೀರ್ಘಾವಧಿಯಲ್ಲಿ ಹೂಡಿಕೆಯ ಮೌಲ್ಯವೃದ್ಧಿಯು ಈಕ್ವಿಟಿಯ ಗುರಿಯಾಗಿದ್ದರೂ, ಅವು ಚಂಚಲವಾಗಿರುತ್ತವೆ. ಆಪದ್ಧನದ ರೂಪದಲ್ಲಿ ಇರಿಸುವ ಹಣಕ್ಕೆ ಖಾತರಿ ಇರುತ್ತದೆಯಾದರೂ, ಅಲ್ಲಿ ಹೆಚ್ಚಿನ ಲಾಭ ಗಳಿಕೆ ಇರುವುದಿಲ್ಲ. ಆದರೆ ಸಾಲಪತ್ರಗಳಲ್ಲಿ ಮಾಡಿದ ಹೂಡಿಕೆಯು ಸ್ಥಿರ ಲಾಭ ನೀಡುತ್ತದೆ ಮತ್ತು ಒಟ್ಟಾರೆ ಕಡಿಮೆ ರಿಸ್ಕ್ ಹೊಂದಿರುತ್ತದೆ.

ಸಾಲಪತ್ರಗಳ ಒಳ್ಳೆಯ ಪೋರ್ಟ್‌ಫೋಲಿಯೊ ಒಂದು ಎಎಎ, ಎಎ, ಎ ಮತ್ತು ಬಿಬಿಬಿ ಶ್ರೇಯಾಂಕದ ಸಾಲಪತ್ರಗಳನ್ನು ಹೊಂದಿರುತ್ತದೆ. ಹೆಚ್ಚಿನ ಶ್ರೇಯಾಂಕದ (ಎಎಎ ಮತ್ತು ಎಎ) ಸಾಲಪತ್ರಗಳು ಹೆಚ್ಚು ಸುರಕ್ಷಿತ. ಎ ಮತ್ತು ಬಿಬಿಬಿ ಶ್ರೇಯಾಂಕದ ಸಾಲಪತ್ರಗಳು ತುಸು ಹೆಚ್ಚಿನ ಲಾಭವನ್ನು ನೀಡುತ್ತವೆ. ಸರಾಸರಿ ಲೆಕ್ಕದಲ್ಲಿ ಹೇಳುವುದಾದರೆ, ವೈವಿಧ್ಯಮಯವಾದ ಸಾಲಪತ್ರಗಳ ಪೋರ್ಟ್‌ಫೋಲಿಯೊ ವಾರ್ಷಿಕ ಅಂದಾಜು ಶೇ 12ರಷ್ಟು ಲಾಭ ತಂದುಕೊಡಬಲ್ಲದು. ಅಂದರೆ ₹3 ಲಕ್ಷದ ಸಾಲಪತ್ರಗಳ ಪೋರ್ಟ್‌ಫೋಲಿಯೊ ವಾರ್ಷಿಕವಾಗಿ ₹36 ಸಾವಿರ (ಅಥವಾ ತಿಂಗಳಿಗೆ ₹3 ಸಾವಿರ) ಆದಾಯ ತಂದುಕೊಡಬಲ್ಲದು. ಈ ನಿಶ್ಚಿತ ಆದಾಯವು ಕುಟುಂಬಗಳಿಗೆ ತಿಂಗಳ ಖರ್ಚು ನಿರ್ವಹಿಸಲು ನೆರವಿಗೆ ಬರುತ್ತದೆ.

ಅದರಲ್ಲೂ ಮುಖ್ಯವಾಗಿ, ಉದ್ಯೋಗ ಕಳೆದುಕೊಂಡ ಸಂದರ್ಭದಲ್ಲಿ ಅಥವಾ ವೈದ್ಯಕೀಯ ತುರ್ತು ಸಂದರ್ಭಗಳು ಎದುರಾದಾಗ ಇಂತಹ ಆದಾಯಗಳು ಒಂದಿಷ್ಟು ಅನುಕೂಲ ಮಾಡಿಕೊಡುತ್ತವೆ.

ಆದರೆ ವ್ಯಕ್ತಿಯ ವಯಸ್ಸು, ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯ ಆಧರಿಸಿ ಹೂಡಿಕೆ ಯೋಜನೆಗಳು ಬದಲಾಗುತ್ತವೆ ಎಂಬುದು ಗಮನದಲ್ಲಿ ಇರಲಿ.

ದೀರ್ಘಾವಧಿ ಗುರಿಗಳಿಗೆ ಆಸರೆ

ಭಾರತದಲ್ಲಿ ಕುಟುಂಬ ಮಟ್ಟದಲ್ಲಿ ಉಳಿತಾಯ ಮಾಡುವುದು ಸಾಮಾನ್ಯವಾಗಿ ಮಕ್ಕಳ ಶಿಕ್ಷಣಕ್ಕಾಗಿ, ಸ್ವಂತ ಮನೆಯೊಂದನ್ನು ಹೊಂದುವುದಕ್ಕಾಗಿ, ನಿವೃತ್ತಿಯ ನಂತರದ ಬದುಕಿಗಾಗಿ. ದೀರ್ಘಾವಧಿಯ ಹಣಕಾಸಿನ ಗುರಿಗಳನ್ನು ಸಾಧಿಸಲು ಈಕ್ವಿಟಿ ಹೂಡಿಕೆಗಳು ಹೆಚ್ಚು ಸೂಕ್ತವಾಗುತ್ತವೆ.

ಆದರೆ, ಜವಾಬ್ದಾರಿಗಳು ಹೆಚ್ಚುತ್ತ ಸಾಗಿ, ಜೀವನದ ಮಹತ್ವದ ಹಣಕಾಸಿನ ಗುರಿಗಳು ಹತ್ತಿರವಾದಂತೆಲ್ಲ, ಅಂದರೆ ಶಿಕ್ಷಣಕ್ಕೆ ಮಾಡಬೇಕಿರುವ ವೆಚ್ಚಗಳು ಸನಿಹಕ್ಕೆ ಬಂದಂತೆಲ್ಲ, ಸ್ಥಿರವಾದ ಗಳಿಕೆ ಹಾಗೂ ಊಹೆಗೆ ಸಿಗಬಹುದಾದ ವರಮಾನವು ಹೆಚ್ಚು ಮುಖ್ಯವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸಾಲಪತ್ರಗಳು ಮಹತ್ವದ್ದಾಗುತ್ತವೆ.

ನಿವೃತ್ತಿಯ ಸನಿಹಕ್ಕೆ ಬಂದಾಗ, ಸಾಲಪತ್ರಗಳಿಂದ ಕಾಲಕಾಲಕ್ಕೆ ಆದಾಯ ಪಡೆದುಕೊಳ್ಳುವುದು ಹೆಚ್ಚು ಮಹತ್ವ ಪಡೆದುಕೊಳ್ಳುತ್ತದೆ. ಇದು ನಿವೃತ್ತರಾದವರಿಗೆ ತಮ್ಮ ಜೀವನಶೈಲಿಯನ್ನು ಹಾಗೆಯೇ ಉಳಿಸಿಕೊಳ್ಳಲು, ಕೆಟ್ಟ ಸಂದರ್ಭಗಳಲ್ಲಿ ತಮ್ಮ ಇತರ ಹೂಡಿಕೆಗಳನ್ನು ನಗದೀಕರಿಸಿಕೊಳ್ಳುವ ಅಗತ್ಯ ಎದುರಾಗದಂತೆ ನೋಡಿಕೊಳ್ಳುತ್ತದೆ.

ಹೂಡಿಕೆ ಸುಲಭ: ಒಬಿಪಿಪಿ ವೇದಿಕೆಗಳ ಕಾರಣದಿಂದಾಗಿ ಈಗ ಸಾಲಪತ್ರಗಳಲ್ಲಿ ಹೂಡಿಕೆ ಮಾಡುವುದು ಷೇರುಗಳಲ್ಲಿ ಹೂಡಿಕೆ ಮಾಡಿದಷ್ಟೇ ಸುಲಭ. ಆನ್‌ಲೈನ್ ವೇದಿಕೆಗಳ ಮೂಲಕ ತಮಗೆ ಬೇಕಾದ ಸರ್ಕಾರಿ ಸಾಲಪತ್ರ ಅಥವಾ ಕಾರ್ಪೊರೇಟ್ ಸಾಲಪತ್ರವನ್ನು ಆಯ್ಕೆ ಮಾಡಿಕೊಂಡರೆ ಆಯಿತು. ಹೂಡಿಕೆ ಸಂದರ್ಭದಲ್ಲಿ ಅನುಸರಿಸಬೇಕಿರುವ ಪ್ರಕ್ರಿಯೆಗಳೂ ಬಹಳ ಕಡಿಮೆ. ಪ್ರಕ್ರಿಯೆಗಳು ಸಂಪೂರ್ಣವಾಗಿ ಪಾರದರ್ಶಕವಾಗಿ ಇರುವ ಕಾರಣದಿಂದಾಗಿ ಎಲ್ಲರಿಗೂ ಈ ಹೂಡಿಕೆ ಉತ್ಪನ್ನಗಳನ್ನು ಅರ್ಥ ಮಾಡಿಕೊಳ್ಳುವುದೂ ಸುಲಭ.

ಇಂದಿನ ಅನಿಶ್ಚಿತ ಸನ್ನಿವೇಶದಲ್ಲಿ ಸಾಲಪತ್ರಗಳು ಶ್ರೀಮಂತರಿಗೆ ಮಾತ್ರವೇ ಅಲ್ಲ. ಅವು ದೇಶದ ಮಧ್ಯಮ ವರ್ಗದ ಕುಟುಂಬಗಳಿಗೆ ಸೂಕ್ತವಾದ ಆಯ್ಕೆಯಾಗುತ್ತವೆ. ಹೂಡಿಕೆ ಮಾಡಲು ಸಿಗುವ ಮೊತ್ತದಲ್ಲಿ ಶೇ 20ರಿಂದ ಶೇ 30ರವರೆಗಿನ ಪಾಲನ್ನು ಸಾಲಪತ್ರಗಳಲ್ಲಿ ತೊಡಗಿಸುವ ಮೂಲಕ ನಿಶ್ಚಿತ ವರಮಾನ ಪಡೆಯಬಹುದು, ಹಣದುಬ್ಬರದ ಪ್ರಮಾಣ ಮೀರಿದ ಲಾಭ ಪಡೆಯಬಹುದು, ಮುಖ್ಯ ಆದಾಯ ಮೂಲಕ್ಕೆ ಪೂರಕವಾಗಿ ಇನ್ನೊಂದು ಆದಾಯ ಮೂಲವನ್ನು ಸೃಷ್ಟಿಸಿಕೊಳ್ಳಬಹುದು.

ನಿಶ್ಚಿತ ಸಂದರ್ಭಗಳಲ್ಲಿ ಸಾಲಪತ್ರಗಳು ಪ್ರತಿ ಕುಟುಂಬದ ನೆರವಿಗೆ ಬರುವ ಮಿತ್ರರು.

ಲೇಖಕ ಜಿರಾಫ್ ಸಂಸ್ಥೆಯ ಸಹ ಸಂಸ್ಥಾಪಕ

ಏನಿದು ಆರ್‌ಇಐಟಿ? ಇದಕ್ಕೇಕೆ ಮಹತ್ವ?

ಆರ್‌ಇಐಟಿ ಏನು ಮಾಡುತ್ತವೆ?

ಆರ್‌ಇಐಟಿಗಳು ಆದಾಯ ತಂದುಕೊಡುವ ರಿಯಲ್ ಎಸ್ಟೇಟ್ ಆಸ್ತಿಗಳ ಮಾಲೀಕತ್ವ ಹೊಂದಿರುತ್ತವೆ ಅಥವಾ ಅಂತಹ ಆಸ್ತಿಗಳನ್ನು ನಿರ್ವಹಿಸುತ್ತಿರುತ್ತವೆ. ಅವು ಹೂಡಿಕೆದಾರರಿಗೆ ಆಸ್ತಿಯನ್ನು ನೇರವಾಗಿ ಖರೀದಿಸದೆಯೇ ಅವುಗಳ ಆದಾಯದಲ್ಲಿ ಒಂದು ಪಾಲನ್ನು ಪಡೆದುಕೊಳ್ಳಲು ನೆರವಾಗುತ್ತವೆ.

20% ಭಾರತದಲ್ಲಿ ಸಾಂಸ್ಥಿಕ ರಿಯಲ್ ಎಸ್ಟೇಟ್‌ನಲ್ಲಿ ಆರ್‌ಇಐಟಿ ಪಾಲು

80% ಸಾಂಸ್ಥಿಕ ರಿಯಲ್ ಎಸ್ಟೇಟ್‌ನಲ್ಲಿ ಇತರರ ಪಾಲು

96% ಅಮೆರಿಕದಲ್ಲಿ ಸಾಂಸ್ಥಿಕ ರಿಯಲ್ ಎಸ್ಟೇಟ್‌ನಲ್ಲಿ ಆರ್‌ಇಐಟಿ ಪಾಲು

6-7% ಭಾರತದಲ್ಲಿ ಆರ್‌ಇಐಟಿಗಳಿಂದ ಸಿಗುವ ವಾರ್ಷಿಕ ವರಮಾನ ಪ್ರಮಾಣ

3-5% ಆರ್‌ಇಐಟಿಯಲ್ಲಿ ತೊಡಗಿಸುವ ಬಂಡವಾಳದ ಮೌಲ್ಯ ವೃದ್ಧಿ ಸಾಧ್ಯತೆ

2.5%-3.5% ಅಮೆರಿಕದಲ್ಲಿ ಆರ್‌ಇಐಟಿಗಳಲ್ಲಿನ ಹೂಡಿಕೆಯಿಂದ ಸಿಗುವ ವಾರ್ಷಿಕ ವರಮಾನ ಪ್ರಮಾಣ

5 ದೇಶದ ಷೇರುಪೇಟೆಗಳಲ್ಲಿ ನೋಂದಾಯಿತ ಆಗಿರುವ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳು

ಅವುಗಳು ಯಾವುವು?
- ಬ್ರೂಕ್‌ಫೀಲ್ಡ್ ಇಂಡಿಯಾ ರಿಯಲ್ ಎಸ್ಟೇಟ್ ಟ್ರಸ್ಟ್
- ಎಂಬಸಿ ಆಫೀಸ್ ಪಾರ್ಕ್ಸ್ ಆರ್‌ಇಐಟಿ
- ಮೈಂಡ್‌ಸ್ಪೇಸ್ ಬ್ಯುಸಿನೆಸ್ ಪಾರ್ಕ್ಸ್ ಆರ್‌ಇಐಟಿ
- ನೆಕ್ಸಸ್ ಸೆಲೆಕ್ಟ್ ಟ್ರಸ್ಟ್
- ನಾಲೆಜ್ ರಿಯಾಲ್ಟಿ ಟ್ರಸ್ಟ್

ಆಧಾರ: ಕ್ರೆಡಾಯ್ ಮತ್ತು ಅನರಾಕ್ ಜಂಟಿಯಾಗಿ ಸಿದ್ಧಪಡಿಸಿರುವ 'ಇಂಡಿಯನ್ ಆರ್‌ಇಐಟಿ' ವರದಿ

ಆರ್‌ಇಐಟಿಗಳನ್ನು ಮ್ಯೂಚುವಲ್ ಫಂಡ್‌ಗಳು 'ಈಕ್ವಿಟಿ' ಎಂದು ಪರಿಗಣಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು ಒಪ್ಪಿಗೆ ನೀಡಿದೆ.

ಲಾರ್ಸನ್ ಆ್ಯಂಡ್ ಟೊಬ್ರೊ

ಬ್ರೋಕರೇಜ್ ಮಾತು

ದೇಶದಲ್ಲಿ ಎಂಜಿನಿಯರಿಂಗ್ ಮತ್ತು ಮೂಲಸೌಕರ್ಯ ನಿರ್ಮಾಣ ಕ್ಷೇತ್ರದ ಪ್ರಮುಖ ಕಂಪನಿಯಾಗಿರುವ ಲಾರ್ಸನ್ ಆ್ಯಂಡ್ ಟೊಬ್ರೊ (ಎಲ್ ಆ್ಯಂಡ್ ಟಿ) ಷೇರಿನ ಬೆಲೆ ₹4,200ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಹೇಳಿದೆ.

ಎಲ್ ಆ್ಯಂಡ್ ಟಿಯು ₹2,500 ಕೋಟಿಯಿಂದ ₹5 ಸಾವಿರ ಕೋಟಿವರೆಗಿನ ಮೊತ್ತದ ಎರಡು ದೊಡ್ಡ ಕಾರ್ಯಾದೇಶಗಳನ್ನು ಪಡೆದಿದೆ. ಇವು ದೇಶದ ಮೂಲಸೌಕರ್ಯ ವಲಯದ ಪ್ರಮುಖ ಕ್ಷೇತ್ರಗಳು.

ಇಷ್ಟೇ ಅಲ್ಲದೆ ಕಂಪನಿಯು, ನಾಗರಿಕ ಅಣುಶಕ್ತಿ ಕೆಲಸಗಳಿಗೆ ಸಂಬಂಧಿಸಿದ ಕೆಲಸವೊಂದಕ್ಕಾಗಿ ಎನ್‌ಪಿಸಿಐಎಲ್‌ನಿಂದ ₹1 ಸಾವಿರ ಕೋಟಿಯಿಂದ ₹2,500 ಕೋಟಿ ಮೊತ್ತದ ಕಾರ್ಯಾದೇಶ ಪಡೆದಿದೆ. ಇದು ಮಹತ್ವದ ಮೂಲಸೌಕರ್ಯ ಮತ್ತು ಸರ್ಕಾರದ ಪ್ರಮುಖ ಬಂಡವಾಳ ವೆಚ್ಚದ ಯೋಜನೆಗಳನ್ನು ನಿಭಾಯಿಸುವಲ್ಲಿ ಕಂಪನಿಯು ಹೊಂದಿರುವ ಪ್ರಬಲ ಸ್ಥಾನವನ್ನು ತಿಳಿಸುತ್ತದೆ ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ.

ಕೊಲ್ಲಿ ಸಹಕಾರ ವಲಯದಲ್ಲಿ (ಜಿಸಿಸಿ) ಕಂಪನಿಯು ವಿಸ್ತರಣೆ ಕಂಡಿರುವುದರಿಂದ ವರಮಾನ ಮೂಲಗಳು ಹೆಚ್ಚುತ್ತವೆ. 2024–25ನೇ ಹಣಕಾಸು ವರ್ಷದಿಂದ 2027–28ನೇ ಹಣಕಾಸು ವರ್ಷದವರೆಗೆ ಕಂಪನಿಯ ತೆರಿಗೆ ನಂತರದ ಲಾಭದ (ಪಿಎಟಿ) ವಾರ್ಷಿಕ ಸಂಯುಕ್ತ ಬೆಳವಣಿಗೆ ದರವು (ಸಿಎಜಿಆರ್) ಶೇ 20ರಷ್ಟಿರಲಿದೆ ಎಂದು ಬ್ರೋಕರೇಜ್ ಸಂಸ್ಥೆ ಅಂದಾಜು ಮಾಡಿದೆ ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಕಂಪನಿಯ ಷೇರಿನ ಮೌಲ್ಯವು ₹3,685.10 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ | ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Prose
Gentleman of Rio en Medio

Read and respond:

Read the passage carefully and answer the questions set on it (………Contd)

But the performance was not yet over. Once again the old man let out a loud cry. Once again the monkey lay still on the pavement. The man picked up the 'dead' monkey and clutching it in his arms began to weep. The same young man stepped forward and threw some money into the hat. Again the crowd followed suit except Robert. Smiling to himself, he went on his way, amazed at the man's audacity.

1. Robert went to the other side of the road because……………….

a) he wanted to help the old man by giving him some money
b) he wanted to see why a crowd had gathered
c) he was curious to watch the monkey's tricks
d) he had seen one of his friends over there.

Ans: (b) he wanted to see why the crowd had gathered

2. The word "pavement" in the fifth line of para 1 is……………

a) a temporary tent which is used for public entertainment
b) a path at the side of a road for people to walk on
c) a small building made of wood
d) a shelf on the road

Ans:(b) a path at the side of the road for people to walk on

3.The old man let out a loud cry suddenly in order to…………………………………………

a) keep the monkey quiet for some time
b) let the crowd know that his monkey was dead
c) let the crowd know that he was a poor man
d) show that he was hurt.

Ans: (b) let the crowd know that his monkey was dead

4. Why did the old man begin to weep?

Ans: To gain the sympathy of the crowd.

5. What wise thing did Robert do after he watched the monkey's tricks for the second time?

Ans: Robert did not throw money into the hat. He had been fooled once and would not be fooled again by the old man into believing that his monkey was dead.

Learn grammar through communication:

'If' clause is used when

1 It is possible to fulfil conditions. (Open condition-type 1 condition)
2 It is theoretically possible to fulfil conditions. (Improbable condition type 2 condition)
3 It is impossible to fulfil conditions.(Impossible condition type 3 condition)

Examples of TYPE 3 are given for you.

Study the given situations. They suggest that it is impossible that the condition will be fulfilled as it refers to the past. One is done for you.

Task 1: Rohini and her friends were on a picnic. They couldn't take photographs as John forgot to carry his camera. How did John express his feelings?

Rohini: John, did you bring your camera?
John: Oh! Sorry.
Rohini: It's ok.
John: If I had brought my camera, we'd have taken some photographs.

Task 2: Complete Hemanth's mother's reaction

Hemanth moved to the edge of the compound to pluck guava fruits. He lost balance, fell down and broke his leg. His mother said, "If you had not moved______________".

Ans;- "If you had not moved to the edge of the compound, you wouldn't have fallen and broken your legs."

Task 3: In the inter-school cricket match, the captain of your school team chose only one fast bowler. As a result, your team-lost the game.

Your reaction: If the captain of our team ______________ (complete the sentence)

Ans:- If the captain of our team had chosen more than one fast bowler, we wouldn't have lost the game.

OR

If the captain of our team had chosen more than one fast bowler, we would have won the game.

Task 4: Monsoon rains failed. Farmers couldn't grow crops. Newspaper reported:

Had it rained ______________
(complete the sentence)

Ans:- Had it rained sufficiently, the farmers could have grown crops.

Task 5: Shanthanu scored less marks in English. Therefore he couldn't get a seat in the college he wanted.

Guess the response of his father: ________

Ans:- If you had scored good/more marks in English, you could have got a seat in the college of your choice.

OR

If you hadn't scored such low marks in English, you could have got a seat in the college you wanted.

(Contd)

Biology

PRINCIPLES OF INHERITANCE AND VARIATION

2. Write a note on Red Green colour blindness.

Ans:- (…….Contd)

skip generation pattern during this transmission from one generation to the next. This is of two types, they are – Monochromatism and Dichromatism.

A person with Monochromatism is totally colourblind even in the bright light. Such individuals are called monochromats.

A person with Dichromatism is partially colourblind. Such individuals are called Dichromats. There are three defects in these individuals. They are – Protanopia, Deuteronopia, Tritanopia

(i) Protanopia – an individual cannot recognise red and green colour.
(ii) Deuteronopia – an individual fails to distinguish red- green colours in the visible light. This disease is also called Daltonism.
(iii) Tritanopia - an individual cannot distinguish between green and blue colours.

3. What is the importance of Mendelism?

Ans:- The importance of Mendelism are –

(1) **Improvement of plants** - Hybridisation is used for obtaining improved varieties of plants. This process results in combinations of desirable characters of two or more species of varieties. In other words, desirable characters of one species are transferred to the other. Laws of inheritance have helped the plant breeders in this regard.

(2) Improvement of animals – Mendelism has enabled the animal breeders to improve the races of the domestic animals. Hybridisation through artificial insemination has proved highly successful in improving the quality of milk, meat, egg and other animal products.

(3) Improvement of human race – Laws of heredity postulated by Mendel are equally applicable to mankind.

(4) Disputed parentage – Study of the inheritance of the blood group can solve this.

(5) Genetic counselling- With the knowledge of mendelism genetic counsellor can predict the possibility of the heredity defect in future (unconceived child) and even direct genetic disorder in early foetus.

4. What is multiple allelism?

Ans:- The phenomenon of a gene occurring in multiple forms is called multiple allelism or gene polymorphism.

Blood groups in man, coat colour in rabbits, eye colour in Drosophila, self-sterility gene in Nicotiana are some of the examples for multiple allelism.

5. What is the importance of having a knowledge of Blood groups?

Ans:- The importance of having a knowledge of Blood groups – is to

(i) understand the human population
(ii) identify criminals
(iii) have successful blood transfusion
(iv) solve disputed parentage

6. What is meant by blood transfusion? Why is it necessary to identify the blood groups before transfusion?

Ans:- Injecting blood of donor to the recipient to make up the loss in the recipient's body is called blood transfusion.

Identification of different blood groups is very important for blood transfusion because if unmatched bloods are mixed blood clumping will take place and the patient will die within some time.

7. A plant with purple flowers was crossed with white flowers producing 50 plants with purple flowers. On selfing, the plants produced 470 plants with purple flowers and 160 with white flowers. Explain the genetic mechanism accounting for the above result.

Ans:- In F_2 generation ratio of purple to white flower is approximately 3 : 1 so the ratio can be classified under Mendelian Monohybrid cross. The cross further explains the following facts:

(a) F_1 is represented only by one parental forms, ie., purple flower plant.

(b) Both the parents i.e., purple and white flowered plants appear in F_2 generation.

8. In human beings blue eye colour is recessing to brown eye. A brown-eyed man has blue-eyed mother.

(a) What is the genotype of man and his mother?
(b) What is the possible genotype of his father?

Ans:- (a) the genotype of man is Bb
(b) the genotype of his mother is bb
(c) the possible genotype of his father is BB or Bb

9. In tomato plants, the gene for purple stem (P) is dominant for green stem (p) and the gene for red fruit (R) is dominant to its allele for the yellow fruit (r). If two tomato plants heterozygous for both the traits are crossed, state what proportion of offspring are expected to have

(a) purple stem and yellow fruits
(b) green stem and red fruits
(c) purple stems and red fruits

Ans:- Genotype of parents *(Contd)*

ವಿಷ್ಣು ಕುಟುಂಬದ ನಿಂದನೆ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದಿವಂಗತ ವಿಷ್ಣುವರ್ಧನ್ ಅವರ ಕುಟುಂಬದ ಸದಸ್ಯರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟ ಪದಗಳನ್ನು ಬಳಸಿ ನಿಂದನೆ ಮಾಡಲಾಗಿದ್ದು, ವಿಷ್ಣುವರ್ಧನ್ ಅವರ ಅಳಿಯ, ಕಲಾವಿದ ಅನಿರುದ್ಧ್ ಅವರು ತಿಲಕ್‌ನಗರ ಠಾಣೆಗೆ ದೂರು ನೀಡಿದ್ದಾರೆ.

'ನಗರದ ಅಭಿಮಾನ್ ಸ್ಟುಡಿಯೊದಲ್ಲಿದ್ದ ವಿಷ್ಣುವರ್ಧನ್ ಅವರ ಸಮಾಧಿಯನ್ನು ತೆರವು ಮಾಡಲಾಗಿದ್ದು, ಈ ವಿಚಾರವಾಗಿ ನಮ್ಮ ಕುಟುಂಬದವರ ಬಗ್ಗೆ ಕೆಟ್ಟದಾಗಿ ಕಮೆಂಟ್ ಮಾಡಲಾಗುತ್ತಿದೆ. ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಲಾಗುತ್ತಿದೆ. ಕೆಟ್ಟದಾಗಿ ಕಮೆಂಟ್ ಹಾಕಿದವರನ್ನು ಪತ್ತೆ ಮಾಡಿ ಕ್ರಮ ಕೈಗೊಳ್ಳಬೇಕು' ಎಂದು ಕೋರಿ ಅನಿರುದ್ಧ್ ಅವರು ದೂರು ನೀಡಿದ್ದಾರೆ.

ದೂರು ಆಧರಿಸಿ ಗಂಭೀರ ಸ್ವರೂಪವಲ್ಲದ ಪ್ರಕರಣ(ಎನ್‌ಸಿಆರ್) ದಾಖಲಿಸಿಕೊಳ್ಳಲಾಗಿದೆ. ನ್ಯಾಯಾಲಯದ ಅನುಮತಿ ಪಡೆದು ಎಫ್‌ಐಆರ್ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.

'ನಕಾರಾತ್ಮಕವಾಗಿ ಸಂದೇಶ ಕಳುಹಿಸಿದರೆ ಸುಮ್ಮನಿರುವುದಿಲ್ಲ ಎಂದು ಈ ಹಿಂದೆಯೇ ಎಚ್ಚರಿಸಿದ್ದೆ. ಆದರೂ ಸಾಮಾಜಿಕ ಮಾಧ್ಯಮಗಳಲ್ಲಿ ಕುಟುಂಬದವರ ವಿರುದ್ಧ ಕೀಳಾಗಿ ಕಮೆಂಟ್ ಮಾಡುತ್ತಿದ್ದು, ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಅನಿರುದ್ಧ್ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ವಿಡಿಯೊ ಹೇಳಿಕೆಯನ್ನು ಪೋಸ್ಟ್ ಮಾಡಿದ್ದಾರೆ.

ಸ್ವತ್ತು ಮಾರಾಟಕ್ಕೆ ಮಾಲೀಕರ ಸೃಷ್ಟಿ

ಜಮೀನು ಕೊಡಿಸುವುದಾಗಿ ನಂಬಿಸಿ ₹31.34 ಕೋಟಿ ವಂಚನೆ

• ಆದಿತ್ಯ ಕೆ.ಎ.

ಬೆಂಗಳೂರು: ನಿವೇಶನ ಹಾಗೂ ಭೂಮಿ ಖರೀದಿಸಲು ಹೆಚ್ಚಿನವರು ಆಸಕ್ತಿ ತೋರುತ್ತಿದ್ದು, ನಗರದ ಹೊರವಲಯದಲ್ಲಿ ರಿಯಲ್ ಎಸ್ಟೇಟ್ ವಹಿವಾಟು ಭಾರಿ ಪ್ರಮಾಣದಲ್ಲಿ ಪ್ರಗತಿ ಕಂಡಿದೆ. ನಿವೇಶನ ಖರೀದಿದಾರರ ಸಂಖ್ಯೆ ಹೆಚ್ಚಾದಂತೆಯೇ ವಂಚನೆ ಜಾಲವೂ ರಾಜಧಾನಿಯಲ್ಲಿ ಮತ್ತೆ ಸಕ್ರಿಯವಾಗಿದೆ.

ದಾಖಲಾತಿ ಪರಿಶೀಲನೆ ನಡೆಸದೇ ನಿವೇಶನ ಖರೀದಿಸಲು ಮುಂಗಡ ಹಣ ಪಾವತಿಸಿ ಹಣ ಕಳೆದುಕೊಳ್ಳುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಹಣ ಕಳೆದುಕೊಂಡವರು ಪೊಲೀಸ್ ಠಾಣೆಯ ಮೆಟ್ಟಿಲೇರುತ್ತಿದ್ದಾರೆ.

ಈ ಸಂಬಂಧ ನಗರದ 11 ಉಪ ವಿಭಾಗದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನೂರಾರು ಪ್ರಕರಣಗಳು ದಾಖಲಾಗಿವೆ. ಕಳೆದ ಒಂದು ತಿಂಗಳಲ್ಲೇ 30ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ದೊಡ್ಡ ಮೊತ್ತದ ವಂಚನೆ ನಡೆದಿದ್ದ ಪ್ರಕರಣಗಳನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಸ್ಥಿರಾಸ್ತಿಯ ಮೇಲೆ ಹೂಡಿಕೆ ಮಾಡಿದರೆ ಹಣ ಸುರಕ್ಷಿತ ಎನ್ನುವ ಭಾವನೆಯಿಂದ ಹಲವರು ನೆಲಮಂಗಲ, ದೇವನಹಳ್ಳಿ, ಕಗ್ಗಲೀಪುರ, ಕನಕಪುರ ರಸ್ತೆ, ಸೋಮನಹಳ್ಳಿ, ಚಲ್ಲಘಟ್ಟ, ಹೆಸರಘಟ್ಟ, ಬಾಗಲೂರು, ನೈಸ್ ರಸ್ತೆಯ ಸುತ್ತಮುತ್ತ ನಿವೇಶನ ಖರೀದಿಸಲು ಆಸಕ್ತಿ ತೋರುತ್ತಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ವಂಚಕರು ಹಾಗೂ ರೌಡಿಗಳು ನಕಲಿ ದಾಖಲೆ ಸೃಷ್ಟಿಸಿ ವಂಚಿಸುತ್ತಿದ್ದಾರೆ. ಅಲ್ಲದೇ ನಕಲಿ ಮಾಲೀಕರನ್ನೂ ಸೃಷ್ಟಿಸುತ್ತಿದ್ದಾರೆ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ. ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಕೊಲೆ, ಕೊಲೆ ಯತ್ನ ಪ್ರಕರಣಗಳೂ ನಡೆಯುತ್ತಿವೆ.

ನಗರದ ಹಲವು ಭಾಗಗಳಲ್ಲಿ ಯಾರದ್ದೋ ನಿವೇಶನ ತೋರಿಸಿ ಹಣ ಪಡೆದು ವಂಚನೆ ಮಾಡುತ್ತಿರುವವರ ಜಾಲ ಸಕ್ರಿಯವಾಗಿದೆ. ಅಲ್ಲದೇ ಒಂದೇ ನಿವೇಶನವನ್ನು ಇಬ್ಬರಿಗೆ ಮಾರಾಟ ಮಾಡಿರುವುದು ಹಾಗೂ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿರುವ ನಿವೇಶನ ತೋರಿಸಿ ಮಾರಾಟ ಮಾಡುತ್ತಿರುವ ಪ್ರಕರಣಗಳೂ ವರದಿ ಆಗುತ್ತಿವೆ. ದಾಖಲೆ ಪರಿಶೀಲನೆ ನಡೆಸದೇ ನಿವೇಶನ ಖರೀದಿಸುವ ಆಸೆಗೆ ಬಿದ್ದು, ಹಣ ಕಳೆದುಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚಾಗಿದೆ ಎಂದು ಮೂಲಗಳು ಹೇಳಿವೆ.

ಸಿಸಿಬಿಯಿಂದ ತನಿಖೆ ಚುರುಕು: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಗೋವಾ ರಾಜ್ಯದ ಪ್ರಮುಖ ಸ್ಥಳದಲ್ಲಿ ಜಮೀನು ಕೊಡಿಸುವುದಾಗಿ ನಂಬಿಸಿ, ₹31.34 ಕೋಟಿ ವಂಚನೆ ನಡೆಸಲಾಗಿದ್ದು, ಈ ಸಂಬಂಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಣ ಕಳೆದುಕೊಂಡ ಸುರೇಶ್ ಜೈನ್ ಹಾಗೂ ಬಾದಲ್ ಜೈನ್ ಎಂಬುವವರು ದೂರು ನೀಡಿದ್ದು, ಸಿಸಿಬಿ ಪೊಲೀಸರು ಪ್ರಕರಣದ ತನಿಖೆ ಚುರುಕುಗೊಳಿಸಿದ್ದಾರೆ.

ನಾಗವಾರ, ಕಾಡುಗೋಡಿ, ವಿಕ್ಟೋರಿಯಾ ಲೇಔಟ್, ಪಿಳ್ಳಪ್ಪ ಗಾರ್ಡನ್‌ನ 12 ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸಿಸಿಬಿ ಮೂಲಗಳು ಹೇಳಿವೆ.

'ಆರೋಪಿಗಳೆಲ್ಲರೂ ಪರಿಚಯಸ್ಥರಾಗಿದ್ದು, ಒಂದು ತಂಡವಾಗಿ ಕೆಲಸ ಮಾಡುತ್ತಿದ್ದರು ಎಂಬುದು ಇದುವರೆಗೂ ನಡೆದ ತನಿಖೆಯಿಂದ ಗೊತ್ತಾಗಿದೆ. ಸ್ವತ್ತಿನ ಮಾಲೀಕರಲ್ಲದ ವ್ಯಕ್ತಿಗಳನ್ನು ಕರೆತಂದು, ಅವರೇ ನಿಜವಾದ ಮಾಲೀಕರು ಎಂದು ಆರೋಪಿಗಳು ನಂಬಿಸುತ್ತಿದ್ದರು. ನಕಲಿ ದಾಖಲೆಗಳನ್ನು ಸಿದ್ಧಪಡಿಸುತ್ತಿದ್ದ ಆರೋಪಿಗಳು, ಅಗ್ರಿಮೆಂಟ್, ಸೇಲ್ ಡೀಡ್ ಮಾಡಿಕೊಡುತ್ತೇವೆ ಎಂದು ನಂಬಿಸುತ್ತಿದ್ದರು. ಸೆ.6ರಂದು ದಾಖಲಾದ ಪ್ರಕರಣದಲ್ಲಿ ಸೈಯದ್ ಫರಾತ್ ಉಲ್ಲಾ, ನಾಜೀಯ ಜಾನ್, ಮಧುರನಾಥ್, ಶ್ರೀನಿವಾಸ್, ಗೌತಮ್ ಜೈನ್, ಎಂ.ಶಂಕರ್, ಪ್ರದೀಪ್, ಜೋಶಿ, ಸೈಫ್, ಸೋಮು, ಜಮೀರ್ ಉಲ್ಲಾ ಖಾನ್, ಪರೀಷ್ ಎಂಬುವವರು ₹31.34 ಕೋಟಿ ಪಡೆದುಕೊಂಡಿದ್ದಾರೆ ಎಂದು ಉಲ್ಲೇಖಿಸಲಾಗಿದೆ. ಹಣ ವರ್ಗಾವಣೆ ಆಗಿರುವ ದಾಖಲೆಗಳನ್ನು ದೂರುದಾರರಿಂದ ಪಡೆದುಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಸಕ್ರಿಯಗೊಂಡಿರುವ ವಂಚನೆ ಜಾಲ
- 30ಗಳಲ್ಲಿ 30ಕ್ಕೂ ಹೆಚ್ಚು ಪ್ರಕರಣ ದಾಖಲು
- ತನಿಖೆ ಚುರುಕುಗೊಳಿಸಿರುವ ಸಿಸಿಬಿ ಪೊಲೀಸರು

ನಿವೇಶನ ಖರೀದಿಸುವವರು ಮೂಲ ದಾಖಲೆಗಳನ್ನು ಪರಿಶೀಲಿಸಿಕೊಳ್ಳಬೇಕು. ಹಣ ನೀಡುವುದಕ್ಕೂ ಮೊದಲು ಕಾನೂನು ತಜ್ಞರ ಸಲಹೆ ಪಡೆಯಬೇಕು

ಸೀಮಂತ್‌ಕುಮಾರ್
ನಗರ ಪೊಲೀಸ್ ಕಮಿಷನರ್

'ಬೇಲಿ ಹಾಕಿದ್ದರು...'

'ನಗರದ ಬನಶಂಕರಿಯಲ್ಲಿ ಬಿಡಿಎ ಅಭಿವೃದ್ಧಿಪಡಿಸಿದ್ದ ನಿವೇಶನವನ್ನು ಈ ಹಿಂದೆ ಖರೀದಿಸಿದ್ದೆ. ವರ್ಗಾವಣೆ ಆಗಿದ್ದರಿಂದ ಕಳೆದ ಹತ್ತು ವರ್ಷಗಳಿಂದ ಮೈಸೂರಿನಲ್ಲಿ ನೆಲಸಿದ್ದೇನೆ. ನಿವೇಶನದ ಸ್ಥಿತಿ ನೋಡಿಕೊಂಡು ಬರಲು ಇತ್ತೀಚೆಗೆ ನಗರಕ್ಕೆ ಬಂದಿದ್ದೆ. ಆದರೆ, ಆ ನಿವೇಶನಕ್ಕೆ ಯಾರೋ ಬೇಲಿ ಹಾಕಿರುವುದು ಕಂಡುಬಂತು. ಠಾಣೆಗೆ ದೂರು ನೀಡಿದ್ದೇನೆ' ಎಂದು ವ್ಯಕ್ತಿಯೊಬ್ಬರು ತಿಳಿಸಿದರು.

ಜನರಿಗೆ ಭಯ

'ಸೈಬರ್ ವಂಚನೆ ಪ್ರಕರಣಗಳಿಗೆ ಕಡಿವಾಣ ಬಿದ್ದಿಲ್ಲ. ವಾಟ್ಸ್‌ಆ್ಯಪ್‌ಗೆ ಬಂದ ಯಾವುದಾದರೂ ಲಿಂಕ್ ಮೇಲೆ ಕ್ಲಿಕ್ ಮಾಡಿದರೆ ಬ್ಯಾಂಕ್ ಖಾತೆಗಳಿಂದ ಹಣ ಖಾಲಿಯಾಗುವ ಭಯ ಜನರನ್ನು ಕಾಡುತ್ತಿದೆ. ಇದೇ ಕಾರಣಕ್ಕೆ ಸಾಮಾಜಿಕ ಜಾಲತಾಣಗಳ ಮೂಲಕ ಜನರು ನಿವೇಶನಕ್ಕಾಗಿ ಹುಡುಕಾಟ ನಡೆಸುತ್ತಿದ್ದಾರೆ. ಈ ರೀತಿಯ ಹುಡುಕಾಟ ನಡೆಸಿದವರ ಮಾಹಿತಿ ಸಂಗ್ರಹಿಸುವ ಆರೋಪಿಗಳು, ಯಾರದ್ದೋ ನಿವೇಶನ ತೋರಿಸಿ ಹಣ ಪಡೆದು ವಂಚಿಸುತ್ತಿರುವ ಪ್ರಕರಣಗಳು ನಗರದಲ್ಲಿ ಪ್ರತಿನಿತ್ಯ ವರದಿ ಆಗುತ್ತಿವೆ' ಎಂದು ಮೂಲಗಳು ಹೇಳಿವೆ.

ಮುನಿರತ್ನ ವಿರುದ್ಧದ ಪ್ರಕರಣ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ವಜಾಗೊಳಿಸಿದೆ.

'ನನ್ನ ವಿರುದ್ಧ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಬೇಕು' ಎಂದು ಕೋರಿ ಮುನಿರತ್ನ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಈ ಪ್ರಕರಣದಲ್ಲಿ ಮುನಿರತ್ನ ಸೇರಿದಂತೆ ನಾಲ್ವರ ವಿರುದ್ಧ ವಿಶೇಷ ತನಿಖಾ ದಳ (ಎಸ್‌ಐಟಿ) ವಿಚಾರಣಾ ನ್ಯಾಯಾಲಯಕ್ಕೆ ಬಿ ಅಂತಿಮ ವರದಿ ಸಲ್ಲಿಸಿರುವುದನ್ನು ಪರಿಗಣಿಸಿದ ನ್ಯಾಯಪೀಠ ಅರ್ಜಿಗಳನ್ನು ವಜಾಗೊಳಿಸಿ ಆದೇಶಿಸಿತು.

ಪ್ರಕರಣವೇನು?: ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಸಂತ್ರಸ್ತೆಯು ಮೇ 20ರಂದು ದೂರು ದಾಖಲಿಸಿದ್ದರು. 'ಬಿಜೆಪಿ ಕಾರ್ಯಕರ್ತೆಯಾಗಿದ್ದ ನನ್ನ ಮೇಲೆ ಮುನಿರತ್ನ ಅವರು ತಮ್ಮ ಸಹಚರರಿಂದ 2023ರ ಜೂನ್ 11ರಂದು ಅವರ ಕಣ್ಣೆದುರು ಅತ್ಯಾಚಾರ ಮಾಡಿಸಿದ್ದಾರೆ' ಎಂದು ಆರೋಪಿಸಿ 40 ವರ್ಷದ ಸಂತ್ರಸ್ತೆ ಒಟ್ಟು ಐವರ ವಿರುದ್ಧ ಆರ್‌ಎಂಸಿ ಠಾಣೆಗೆ ದೂರು ನೀಡಿದ್ದರು.

ಈ ಕ್ರಿಮಿನಲ್ ಪ್ರಕರಣದಲ್ಲಿ ಮೊದಲ ಆರೋಪಿಯನ್ನಾಗಿಸಿ ಮುನಿರತ್ನ ಮತ್ತು ನಂದಿನಿ ಲೇಔಟ್‌ನ ವಸಂತ ಕುಮಾರ್, ಚನ್ನಕೇಶವ, ಆಶ್ರಯ ನಗರದ ಕಮಲ್ ಹಾಗೂ ಅನಾಮಧೇಯ ವ್ಯಕ್ತಿಯೊಬ್ಬನನ್ನು ಹೆಸರಿಸಲಾಗಿತ್ತು. ದೂರಿನ ಅನ್ವಯ ಐಪಿಸಿ ಸೆಕ್ಷನ್‌ಗಳಾದ 376 ಡಿ, 270, 323, 354, 504, 506,509 ಹಾಗೂ 34ರ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

ನಕಲಿ ದಾಖಲೆ ಸೃಷ್ಟಿಸಿಕೊಡುತ್ತಿದ್ದ ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಕಲಿ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿ, ಅಂಗವಿಕಲ ಕೋಟಾದ ಮೀಸಲಾತಿ ಅಡಿ ಸರ್ಕಾರಿ ವೈದ್ಯಕೀಯ ಸೀಟು ಪಡೆಯಲು ಯತ್ನಿಸಿದ್ದವರಿಗೆ ನೆರವು ನೀಡಿದ್ದ ಮೂವರು ಆರೋಪಿಗಳನ್ನು ಮಲ್ಲೇಶ್ವರ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬೆಂಗಳೂರಿನ ನಂದಿನಿ ಲೇಔಟ್‌ನ ನಿವಾಸಿ, ಶಿಕ್ಷಕ ಭರಮಪ್ಪ, ಹೊಸಪೇಟೆಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಉಮೇಶ್ ಚೌಧರಿ ಹಾಗೂ ಕೊಪ್ಪಳ ಜಿಲ್ಲೆ ಕುಕನೂರು ತಾಲ್ಲೂಕಿನ ಮಂಗಳೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಾಯಕ ಸುಧಾಕರ್ ಬಂಧಿತ ಆರೋಪಿಗಳು. ಆರೋಪಿಗಳಿಂದ ನಕಲಿ ದಾಖಲೆಗಳು ಹಾಗೂ ನಕಲಿ ದಾಖಲೆ ಸೃಷ್ಟಿಸಲು ಬಳಸುತ್ತಿದ್ದ ಉಪಕರಣಗಳನ್ನು ಜಪ್ತಿ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ 10 ದಿನ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಉತ್ತರ ವಿಭಾಗದ ಡಿಸಿಪಿ ನೇಮಗೌಡ ತಿಳಿಸಿದರು. ಸುಧಾಕರ್ ಅವರನ್ನು ಕೆಲಸದಿಂದ ಅಮಾನತು ಮಾಡಲಾಗಿದೆ ಎಂದು ಕೊಪ್ಪಳ ಡಿಎಚ್‌ಒ ಡಾ.ಲಿಂಗರಾಜು ತಿಳಿಸಿದ್ದಾರೆ.

ಮೂವರೂ ಆರೋಪಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಅಭ್ಯರ್ಥಿಗಳಿಗೆ ನೀಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

21 ಅಭ್ಯರ್ಥಿಗಳು ಮತ್ತು ನಕಲಿ ದಾಖಲೆಗಳನ್ನು ಸೃಷ್ಟಿಸಲು ಸಹಕರಿಸಿದ್ದ ನಾಲ್ವರ ವಿರುದ್ಧ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರ ನಿರ್ದೇಶನದಂತೆ ಮುಖ್ಯ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ್ ಅವರು ಮಲ್ಲೇಶ್ವರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಿದ ಪೊಲೀಸರು, ಮೊದಲ ಹಂತದ ಕಾರ್ಯಾಚರಣೆಯಲ್ಲಿ ಮೂವರನ್ನು ಬಂಧಿಸಿದ್ದಾರೆ ಎಂದು ಗೊತ್ತಾಗಿದೆ.

21 ಅಭ್ಯರ್ಥಿಗಳು ಶ್ರವಣ ದೋಷವಿದೆ ಎಂದು ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿದ್ದರು. ಈ ಪೈಕಿ, ಹೆಚ್ಚಿನವರು ಯುಡಿ ಐಡಿ (ಅಂಗವಿಕಲರ ವಿಶಿಷ್ಟ ಗುರುತಿನ ಚೀಟಿ) ಅನ್ನು ವಿಜಯನಗರ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಯಿಂದ ಪಡೆದಿದ್ದರು. ಯುಡಿ ಐಡಿ ಪಡೆಯಲು ಇತ್ತೀಚೆಗೆ ಪಡೆದ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದರು. ಪ್ರಮಾಣಪತ್ರಗಳ ಪರಿಶೀಲನೆಯ ವೇಳೆ ಅಭ್ಯರ್ಥಿಗಳು ನಕಲಿ ಪ್ರಮಾಣಪತ್ರ ಸಲ್ಲಿಸಿದ್ದಾರೆ ಎಂಬುದು ಗೊತ್ತಾಗಿತ್ತು ಎಂದು ಮೂಲಗಳು ಹೇಳಿವೆ.

ಮನೆ ಭೋಗ್ಯದ ಹೆಸರಿನಲ್ಲಿ ವಂಚನೆ

ಬೆಂಗಳೂರು: ಮನೆಯನ್ನು ಭೋಗ್ಯಕ್ಕೆ ಕೊಡಿಸುವ ನೆಪದಲ್ಲಿ ₹25 ಕೋಟಿ ವಂಚಿಸಿದ ಆರೋಪದಡಿ ಕಂಪನಿಯೊಂದರ ಮೂವರು ಏಜೆಂಟ್‌ಗಳನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವೈಟ್‌ಫೀಲ್ಡ್ ನಿವಾಸಿಗಳಾದ ರಮಣ್, ನವೀನ್ ಹಾಗೂ ಸುಧೀರ್ ಬಂಧಿತರು. ಪ್ರಮುಖ ಆರೋಪಿ ವಿವೇಕ್ ಕೇಶವನ್ ದುಬೈನಲ್ಲಿ ತಲೆಮರೆಸಿಕೊಂಡಿದ್ದು, ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕೆಟಿನಾ ಹೋಮ್ಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಕಂಪನಿಯನ್ನು ವಿವೇಕ್ ಕೇಶವನ್ ಸ್ಥಾಪಿಸಿದ್ದ. ಈ ಕಂಪನಿಯ ಶಾಖೆಗಳು ಬಾಣಸವಾಡಿ, ಮಾರತ್ತಹಳ್ಳಿ, ವೈಟ್‌ಫೀಲ್ಡ್ ಹಾಗೂ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಇದ್ದವು. ಕಟ್ಟಡದ ಮಾಲೀಕರಿಂದ ಕಡಿಮೆ ಬೆಲೆಗೆ ಮನೆಗಳನ್ನು ಭೋಗ್ಯಕ್ಕೆ ಪಡೆದು ಬಳಿಕ ತಮ್ಮ ಕಂಪನಿಯ ಮೂಲಕ ಸಾರ್ವಜನಿಕರಿಗೆ ಆ ಮನೆಗಳನ್ನು ಬಾಡಿಗೆಗೆ ನೀಡಲಾಗುತ್ತಿತ್ತು.

'ಕಟ್ಟಡದ ಮಾಲೀಕರು ಹಾಗೂ ಬಾಡಿಗೆದಾರರ ನಡುವೆ ಮಧ್ಯವರ್ತಿಗಳಾಗಿ ಕಂಪನಿಯ ಪ್ರತಿನಿಧಿಗಳು ಕೆಲಸ ಮಾಡುತ್ತಿದ್ದರು. ನಗರದ ನೂರಾರು ಕಡೆ ಹಲವು ಮನೆಗಳನ್ನು ಈ ಕಂಪನಿ ಭೋಗ್ಯಕ್ಕೆ ಪಡೆದುಕೊಂಡಿತ್ತು. ಗ್ರಾಹಕರ ವಿಶ್ವಾಸವನ್ನೂ ಕಂಪನಿ ಪ್ರತಿನಿಧಿಗಳು ಗಳಿಸಿದ್ದರು.

ಕೋವಿಡ್ ಕಾಲದಲ್ಲಿ ಕಂಪನಿ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿತ್ತು. ತೆರಿಗೆ ವಂಚನೆ ಆರೋಪದ ಮೇರೆಗೆ ಕೆಟಿನಾ ಕಂಪನಿಯ ಮೇಲೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿದ್ದರು. ಕಂಪನಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದರು. ಹಣಕಾಸಿನ ವಹಿವಾಟಿಲ್ಲದೇ ಕಂಪನಿ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿತ್ತು. ಆ ಸಂದರ್ಭದಲ್ಲಿ ಮನೆಯ ಮಾಲೀಕರಿಗೆ ಭೋಗ್ಯದ ಹಣವನ್ನು ಪಾವತಿಸಲಾಗದೇ ಆರೋಪಿಗಳು ವಂಚಿಸಿದ್ದರು.

ಈ ಸಂಬಂಧ ಎಲೆಕ್ಟ್ರಾನಿಕ್ ಸಿಟಿ, ಸಂಪಿಗೆಹಳ್ಳಿ, ವೈಟ್‌ಫೀಲ್ಡ್, ಬಾಣಸವಾಡಿ ಠಾಣೆಗಳಲ್ಲಿ ಆರೋಪಿಗಳ ವಿರುದ್ಧ ವಂಚನೆಯ ಪ್ರಕರಣಗಳು ದಾಖಲಾಗಿದ್ದವು. ಎರಡು ದಿನಗಳ ಹಿಂದೆ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಇದುವರೆಗೂ ನಡೆದಿರುವ ತನಿಖೆಯಿಂದ ಅಂದಾಜು ₹25 ಕೋಟಿಯಷ್ಟು ವಂಚನೆ ನಡೆದಿದೆ ಎಂಬುದು ಗೊತ್ತಾಗಿದೆ. ಇದು ಬಹುಕೋಟಿ ವಂಚನೆ ಪ್ರಕರಣ ಆಗಿರುವ ಕಾರಣ ಮುಂದಿನ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಲಾಗುವುದು' ಎಂದು ಮೂಲಗಳು ಹೇಳಿವೆ.

'ಕಂಪನಿಯ ಮಾಲೀಕ ವಿವೇಕ್, ರಾಜಕಾರಣಿಗಳು ಹಾಗೂ ಸಿನಿಮಾ ನಟ– ನಟಿಯರ ಜತೆಗೆ ಫೋಟೊ ತೆಗೆಸಿಕೊಳ್ಳುತ್ತಿದ್ದ. ಗಣ್ಯರ ಜತೆಗೆ ಇರುವ ಫೋಟೊಗಳನ್ನು ಬಳಸಿಕೊಂಡು ತಾನು ಪ್ರಭಾವಿ ಎಂಬುದಾಗಿ ಬಿಂಬಿಸಿಕೊಳ್ಳುತ್ತಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

₹213 ಕೋಟಿಯ ಡ್ರಗ್ಸ್ ನಾಶ

ಬೆಂಗಳೂರು: ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ನಗರದ ವಿವಿಧ ಪೊಲೀಸ್ ಠಾಣೆಯ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಜಪ್ತಿ ಮಾಡಿದ್ದ ₹213 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ನಗರ ಪೊಲೀಸರು ಬುಧವಾರ ನಾಶಪಡಿಸಿದರು. ಹೈಡ್ರೊಗಾಂಜಾ, ಇ-ಸಿಗರೇಟ್‌ಗಳು ಹಾಗೂ ಎಂಡಿಎಂಎ ಕ್ರಿಸ್ಟಲ್ ನಾಶ ಪಡಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಹೈಕೋರ್ಟ್‌ಗೆ ಮತ್ತೆ ಬೆದರಿಕೆ ಇ–ಮೇಲ್

ಬೆಂಗಳೂರು: ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಅವರ ಇ–ಮೇಲ್‌ಗೆ ಮತ್ತೆ ಬಾಂಬ್ ಬೆದರಿಕೆಯ ಸಂದೇಶ ಬಂದಿದ್ದು, ಕೇಂದ್ರ ಸೈಬರ್ ಅಪರಾಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬೆದರಿಕೆ ಸಂದೇಶದಲ್ಲಿ 'ಮೂರು ಆರ್‌ಡಿಎಕ್ಸ್ ಬಾಂಬ್‌ಗಳನ್ನು ಹೈಕೋರ್ಟ್‌ನ ಆವರಣದಲ್ಲಿ ಇಡಲಾಗಿದೆ. ಕೂಡಲೇ ನ್ಯಾಯಮೂರ್ತಿಗಳನ್ನು ಹೊರಗಡೆ ಕಳುಹಿಸುವಂತೆ ಸಂದೇಶದಲ್ಲಿ ಉಲ್ಲೇಖಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಎಂ.ರಾಜೇಶ್ವರಿ ಅವರು ನೀಡಿದ ದೂರು ಆಧರಿಸಿ ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 66(ಸಿ) ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 351(4), 353(1)(ಬಿ) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಪೊಲೀಸರು ಹೇಳಿದರು. ಜೂನ್ 9, 24 ಹಾಗೂ ಜುಲೈ 25ರಂದು ಪ್ರತ್ಯೇಕ ಇ–ಮೇಲ್‌ಗಳಿಂದ ಬೆದರಿಕೆಗಳು ಬಂದಿದ್ದವು.

ಗೇಲ್ ಗ್ಯಾಸ್ ಲಿಮಿಟೆಡ್
(ಗೇಲ್ (ಇಂಡಿಯಾ) ಲಿಮಿಟೆಡ್‌ನ ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆ)

ಕರ್ನಾಟಕ ರಾಜ್ಯದ ಬೆಂಗಳೂರು ಗ್ರಾಮೀಣ ಹಾಗೂ ನಗರ ಜಿಲ್ಲೆಯ ಭೌಗೋಳಿಕ ಪ್ರದೇಶ (ಜಿಯೋಗ್ರಾಫಿಕಲ್ ಏರಿಯಾ) ದಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಭೌಗೋಳಿಕ ಪ್ರದೇಶದಲ್ಲಿ ಡೀಲರ್ ಓನ್ಡ್–ಡೀಲರ್ ಆಪರೇಟೆಡ್ (ಡಿಒಡಿಒ)ಮಾದರಿಯಲ್ಲಿ ಸಿಎನ್‌ಜಿ ಸ್ಟೇಷನ್‌ಗಳನ್ನು ಸ್ಥಾಪಿಸುವುದಕ್ಕಾಗಿ ಎಕ್ಸ್‌ಪ್ರೆಶನ್ ಆಫ್ ಇಂಟ್ರೆಸ್ಟ್ ಅನ್ನು (ಆಸಕ್ತಿಯ ಅಭಿವ್ಯಕ್ತಿಯನ್ನು)ಆಹ್ವಾನಿಸುವ ನೋಟೀಸು.

ಗೇಲ್ ಗ್ಯಾಸ್ ಲಿಮಿಟೆಡ್ ಪೆಟ್ರೋಲಿಯಂ ಆ್ಯಂಡ್ ನ್ಯಾಚ್ಯೂರಲ್ ಗ್ಯಾಸ್ ರೆಗ್ಯೂಲೇಟರಿ ಬೋರ್ಡ್ (ಪಿಎನ್‌ಜಿಆರ್‌ಬಿ) ನಿಂದ ಅಧಿಕೃತಗೊಂಡ ವಿವಿಧ ಜಿಯೋಗ್ರಾಫಿಕಲ್ ಏರಿಯಾಗಳಲ್ಲಿ (ಜಿಎಗಳಲ್ಲಿ) ಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಶನ್ (ಸಿಜಿಡಿ) ನೆಟ್‌ವರ್ಕ್‌ನ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿದೆ. ಕರ್ನಾಟಕ ರಾಜ್ಯದಲ್ಲಿ, ಗೇಲ್ ಗ್ಯಾಸ್ ಲಿಮಿಟೆಡ್ ಬೆಂಗಳೂರು ಗ್ರಾಮೀಣ ಹಾಗೂ ನಗರ ಜಿಲ್ಲೆಯ ಜಿಎ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಜಿಎಯಲ್ಲಿ ಸಿಜಿಡಿ ನೆಟ್‌ವರ್ಕ್‌ಗಳನ್ನು ಅಭಿವೃದ್ಧಿಪಡಿಸುತ್ತಿದೆ. ಸಾರಿಗೆ ವಲಯಕ್ಕೆ ಪರಿಸರ ಸ್ನೇಹಿ ಹಾಗೂ ಮಿತವ್ಯಯದ ಕಂಪ್ರೆಸ್ಡ್ ನ್ಯಾಚ್ಯೂರಲ್ ಗ್ಯಾಸ್ (ಸಿಎನ್‌ಜಿ) ಇಂಧನವನ್ನು ಉತ್ತೇಜಿಸಲು, ಗೇಲ್ ಗ್ಯಾಸ್ ಲಿಮಿಟೆಡ್ ಬೆಂಗಳೂರು ಗ್ರಾಮೀಣ ಹಾಗೂ ನಗರ ಜಿಲ್ಲೆಯ ಜಿಎ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಜಿಎಯಲ್ಲಿ ಸಿಎನ್‌ಜಿ ಸ್ಟೇಶನ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ನಮ್ಮ ವೆಬ್‌ಸೈಟ್‌ನಲ್ಲಿ ಉಲ್ಲೇಖಿಸಿರುವಂತೆ ಬೆಂಗಳೂರು ಗ್ರಾಮೀಣ ಹಾಗೂ ನಗರ ಜಿಲ್ಲೆಯ ಜಿಎ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಜಿಎ ವ್ಯಾಪ್ತಿಯಲ್ಲಿ ನಿರ್ದಿಷ್ಟಪಡಿಸಿದ ಚಾರ್ಜ್ ಏರಿಯಾಗಳಲ್ಲಿ ಡೀಲರ್ ಓನ್ಡ್–ಡೀಲರ್ ಆಪರೇಟೆಡ್ ಮಾಡೆಲ್‌ನ ಭೂಮಿಯಲ್ಲಿ ಸಿಎನ್‌ಜಿ ಸ್ಟೇಶನ್ ಅನ್ನು ಸ್ಥಾಪಿಸುವುದಕ್ಕಾಗಿ ಸ್ವಂತ ಭೂಮಿಯನ್ನು ಹೊಂದಿರುವ ಅಥವಾ ಭೂಮಿಯ ಮಾಲಿಕರಿಂದ 15 ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗಾಗಿ ಗುತ್ತಿಗೆಗಾಗಿ ಭೂಮಿಯನ್ನು ತೆಗೆದುಕೊಂಡಿರುವ ವೈಯಕ್ತಿಕ ಅರ್ಜಿದಾರರು, ಪ್ರೊಪ್ರೈಟರ್‌ಶಿಪ್, ಪಾರ್ಟ್ನರ್‌ಶಿಪ್ ಹಾಗೂ ವೈಯಕ್ತಿಕೇತರ (ನಾನ್–ಇಂಡಿವಿಜ್ಯುಅಲ್) ಅರ್ಜಿದಾರರಿಂದ ಎಕ್ಸ್‌ಪ್ರೆಶನ್ ಆಫ್ ಇಂಟ್ರೆಸ್ಟ್ (ಇಒಐ) ಅನ್ನು ಆಹ್ವಾನಿಸಲಾಗಿದೆ. ಜಿಯೋಗ್ರಾಫಿಕಲ್ ಏರಿಯಾ/ನಿರ್ದಿಷ್ಟಪಡಿಸಿದ ಚಾರ್ಜ್ ಏರಿಯಾ, ಅರ್ಜಿನಮೂನೆಯೊಂದಿಗಿನ ಮಾಹಿತಿಯ ಕೈಪಿಡಿಯ ಬಗ್ಗೆ ವಿವರವಾದ ಮಾಹಿತಿಗಾಗಿ, ದಯವಿಟ್ಟು ನಮ್ಮ ವೆಬ್‌ಸೈಟ್ https://www.gailgas.com.ನ ಇಒಐ ಸೆಕ್ಷನ್‌ಗೆ ಭೇಟಿನೀಡಿ. ಇಒಐ ವೇಳಾಪಟ್ಟಿಯು ಈ ಕೆಳಗಿನಂತಿರುತ್ತದೆ:

- ಅವಧಿ : 04.09.2025 ರಿಂದ 25.09.2025
- ಇಒಐನ ಸಲ್ಲಿಕೆಗಾಗಿ ಕೊನೆಯ ದಿನಾಂಕ : 25.09.2025 (1700 ಗಂಟೆಗಳಿಗಿಂತ ಮೊದಲು)

ಸರಿಯಾಗಿ ಭರ್ತಿಮಾಡಿದ ಅರ್ಜಿ ನಮೂನೆಯನ್ನು ಅಗತ್ಯ ಕಾಗದಪತ್ರಗಳು ಹಾಗೂ ಅಫಿಡವಿಟ್‌ಗಳೊಂದಿಗೆ (ಮಾಹಿತಿ ಕೈಪಿಡಿಯಲ್ಲಿ ವಿವರಿಸಿದಂತೆ) ನಿರ್ದಿಷ್ಟ ಸಮಯದೊಳಗಡೆ ಗೇಲ್ ಗ್ಯಾಸ್ ಲಿಮಿಟೆಡ್‌ಗೆ ಸಲ್ಲಿಸಬೇಕು. ಗೇಲ್ ಗ್ಯಾಸ್ ಲಿಮಿಟೆಡ್ ಯಾವುದೇ ಕಾರಣವನ್ನು ನೀಡದೇ ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಕಾರ್ಪೊರೇಟ್ ಐಡೆಂಟಿಫಿಕೇಷನ್ ನಂಬರ್: U40200DL2008GOI178614

ಕಾರಿನಲ್ಲಿ ಸಾಗಿಸುತ್ತಿದ್ದ 21 ಕೆ.ಜಿ. ಗಾಂಜಾ ಜಪ್ತಿ

ಬೆಂಗಳೂರು: ಕಾರಿನಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಗಾಂಜಾ ಸಾಗಾಟ ಮಾಡುತ್ತಿದ್ದ ಆರೋಪಿಯನ್ನು ಗಿರಿನಗರ ಠಾಣೆ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಎಲೆಕ್ಟ್ರಾನಿಕ್ ಸಿಟಿ ನಿವಾಸಿ ನಹೀಮ್ ಅಹ್ಮದ್(34) ಬಂಧಿತ ಆರೋಪಿ.

ಆರೋಪಿಯಿಂದ 21.93 ಕೆ.ಜಿ. ಗಾಂಜಾ, ₹2.90 ಲಕ್ಷ ನಗದು, 88 ಗ್ರಾಂ ಚಿನ್ನಾಭರಣ, ಐದು ಮೊಬೈಲ್ ಫೋನ್‌ಗಳು, ಕಾರು ಜಪ್ತಿ ಮಾಡಲಾಗಿದೆ. ತಲೆಮರೆಸಿಕೊಂಡಿರುವ ಇಮ್ರಾನ್ ಸೇರಿ ಇಬ್ಬರು ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಮಂಗಳವಾರ ಸಂಜೆ 5 ಗಂಟೆ ಸುಮಾರಿಗೆ ಬನಶಂಕರಿ ಸಂಚಾರ ಠಾಣೆ ಪೊಲೀಸರು ನಾಯಂಡಹಳ್ಳಿ–ಕನಕಪುರ ರಸ್ತೆಯಲ್ಲಿ ವಾಹನಗಳ ತಪಾಸಣೆ ಮಾಡುತ್ತಿದ್ದರು. ಆಗ ಆರೋಪಿ ತನ್ನ ಕಾರಿನಲ್ಲಿ ನಾಯಂಡಹಳ್ಳಿಯಿಂದ ಕನಕಪುರ ಕಡೆ ಹೋಗುತ್ತಿದ್ದ. ಕಾರಿನ ಕಿಟಕಿಗಳಿಗೆ ಟಿಂಟೆಡ್ ಗ್ಲಾಸ್ ಹಾಕಲಾಗಿತ್ತು. ಜತೆಗೆ, ಆರೋಪಿ ಮೊಬೈಲ್‌ನಲ್ಲಿ ಮಾತನಾಡಿಕೊಂಡು ಚಾಲನೆ ಮಾಡುತ್ತಿದ್ದ. ಅದನ್ನು ಗಮನಿಸಿದ್ದ ಸಂಚಾರ ಪೊಲೀಸರು ವಾಹನ ನಿಲುಗಡೆ ಮಾಡುವಂತೆ ಸೂಚಿಸಿದ್ದರು. ಆದರೆ, ಆತ ಪರಾರಿಯಾಗಲು ಯತ್ನಿಸಿದ್ದ. ಕೊನೆಗೆ ಕಾರನ್ನು ತಡೆಯುತ್ತಿದ್ದಂತೆಯೇ ಕಾರಿನಲ್ಲಿದ್ದ ಇಬ್ಬರು ಆರೋಪಿಗಳು ಚಾಲಕನನ್ನು ಬಿಟ್ಟು ಪರಾರಿಯಾಗಿದ್ದರು. ಬಳಿಕ ಕಾರಿನ ಒಳಗಡೆ ಚೀಲಗಳಲ್ಲಿ 21 ಕೆ.ಜಿ. ಗಾಂಜಾ, ನಗದು ಪತ್ತೆಯಾಗಿತ್ತು. ಕೂಡಲೇ ಗಿರಿನಗರ ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ನಹೀಮ್‌ನನ್ನು ವಶಕ್ಕೆ ಪಡೆದರು ಎಂದು ಮೂಲಗಳು ಹೇಳಿವೆ.

'ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಕಾರು ಬುಕ್ ಮಾಡಿ, ಕನಕಪುರ ಕಡೆ ಹೋಗಬೇಕೆಂದು ₹5 ಸಾವಿರ ಕೊಡುವುದಾಗಿ ಹೇಳಿದ್ದರು. ಹೀಗಾಗಿ ಬಾಡಿಗೆಗೆ ಹೋಗುತ್ತಿದ್ದೆ' ಎಂದು ಆರೋಪಿ ಹೇಳಿದ್ದಾಗಿ ಪೊಲೀಸರು ಹೇಳಿದರು.



ಕಸ: ಬಿಲ್ ಸಲ್ಲಿಸದವರಿಗೆ ನೋಟಿಸ್

ಐದು ತಿಂಗಳಿನಿಂದ ಬಿಲ್– ದಾಖಲೆ ಸಲ್ಲಿಸದ ತ್ಯಾಜ್ಯ ವಿಲೇವಾರಿ ಗುತ್ತಿಗೆದಾರರು

• ಆರ್.ಮಂಜುನಾಥ್

ಮುಖ್ಯಾಂಶಗಳು

- ಏಪ್ರಿಲ್‌ನಿಂದ ಬಿಲ್ ಸಲ್ಲಿಸದ ಗುತ್ತಿಗೆದಾರರು
- 28 ಗುತ್ತಿಗೆದಾರರಿಗೆ ನೋಟಿಸ್
- 40ಕ್ಕೂ ಅಧಿಕ ವಾರ್ಡ್‌ಗಳಲ್ಲಿ ತ್ಯಾಜ್ಯ ವಿಲೇವಾರಿ

ಬೆಂಗಳೂರು: ಎರಡು ವರ್ಷಗಳ ಹಿಂದೆ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಿಲ್ ಪಾವತಿ ಮಾಡಿ ಎಂದು ಗುತ್ತಿಗೆದಾರರು ಒಂದೆಡೆ ಒತ್ತಾಯಿಸುತ್ತಿದ್ದರೆ, ಮತ್ತೊಂದೆಡೆ ಐದು ತಿಂಗಳುಗಳಿಂದ ಬಿಲ್ ಸಲ್ಲಿಸದ ತ್ಯಾಜ್ಯ ಗುತ್ತಿಗೆದಾರರಿಗೆ ನೋಟಿಸ್ ಜಾರಿಯಾಗಿದೆ.

ತ್ಯಾಜ್ಯ ವಿಲೇವಾರಿ ಮಾಡಿರುವ ಬಿಲ್ ಸಲ್ಲಿಸುವಂತೆ ಗುತ್ತಿಗೆದಾರರಿಗೆ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ನೋಟಿಸ್ ಜಾರಿ ಮಾಡಿದೆ.

‘ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಣೆ ಸರಬರಾಜುದಾರರು, ಗುತ್ತಿಗೆದಾರರು, ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ಘನತ್ಯಾಜ್ಯ ಸಂಗ್ರಹ, ಸಾಗಣೆ ಬಿಲ್‌ಗಳನ್ನು ಪಾವತಿಸಿಲ್ಲ. ಬಿಲ್ ಜೊತೆಗೆ ಪೂರಕ ದಾಖಲೆಗಳನ್ನು ಕೂಡಲೇ ಸಲ್ಲಿಸಬೇಕು. ಬಿಲ್ ಸಲ್ಲಿಸಿದ ನಂತರ ನಿಯಮಾನುಸಾರ ಹಣ ಪಾವತಿಸಲು ಕ್ರಮ ವಹಿಸಲಾಗುವುದು’ ಎಂದು 28 ಗುತ್ತಿಗೆದಾರರಿಗೆ ಬಿಎಸ್‌ಡಬ್ಲ್ಯುಎಂಎಲ್‌ನ ಆಯಾ ವಿಭಾಗದ ಸಹಾಯಕ ಪ್ರಧಾನ ವ್ಯವಸ್ಥಾಪಕರು ಸೆ.11ರಂದು ನೋಟಿಸ್ ಜಾರಿ ಮಾಡಿದ್ದಾರೆ.

ಇನ್ನಷ್ಟು ಸಮಸ್ಯೆ: ‘ಐದು ತಿಂಗಳುಗಳಿಂದ ಎಲ್ಲ ಮಾಹಿತಿಗಳನ್ನು ಒಳಗೊಂಡ ಬಿಲ್‌ಗಳನ್ನು ಸಲ್ಲಿಸಲಾಗಿದೆ. ಆದರೂ ನೋಟಿಸ್ ಜಾರಿ ಮಾಡಿದ್ದಾರೆ. ಭವಿಷ್ಯ ನಿಧಿ (ಪಿಎಫ್) ಪಾವತಿಯಲ್ಲಿ ಸಮಸ್ಯೆ ಇದ್ದರೆ, ಅವರು ಹೇಳಿದ ಹಾಗೆ ನಾವು ಮಾಡುತ್ತೇವೆ. ಐದು ತಿಂಗಳುಗಳಿಂದ ಎಲ್ಲ ಕೆಲಸಗಾರರ ಪಿಎಫ್, ಇಪಿಎಫ್ ಪಾವತಿಸುತ್ತಿದ್ದೇವೆ. ಒಂದೆರಡು ತಿಂಗಳು ವೇತನವನ್ನೂ ನೀಡಿದ್ದೇವೆ. ಸಂಕಷ್ಟದಲ್ಲಿರುವ ನಮಗೆ ಬಿಎಸ್‌ಡಬ್ಲ್ಯುಎಂಎಲ್‌ನವರು ಇನ್ನಷ್ಟು ಸಮಸ್ಯೆ ನೀಡುತ್ತಿದ್ದಾರೆ’ ಎಂದು ತ್ಯಾಜ್ಯ ಗುತ್ತಿಗೆದಾರ ಸಿ.ವಿ. ರಜನಿಕಾಂತ್ ರೆಡ್ಡಿ ಹೇಳಿದರು.

ಶೀಘ್ರ ಸಲ್ಲಿಕೆ: ‘ಏಪ್ರಿಲ್‌ನಿಂದ ಕೆಲಸಗಾರರು ಹಾಗೂ ಆಟೊಗಳ ಹಾಜರಾತಿ ಮಾಹಿತಿಯನ್ನು ಬಿಎಸ್‌ಡಬ್ಲ್ಯುಎಂಎಲ್‌ನವರು ನೀಡಿಲ್ಲ. ಹೀಗಾಗಿ, ಬಿಲ್ ಸಲ್ಲಿಕೆ ವಿಳಂಬವಾಗಿದೆ. ನೋಟಿಸ್ ಬಂದಮೇಲೆ ಎಲ್ಲ ದಾಖಲೆಗಳನ್ನು ಪಡೆಯುತ್ತಿದ್ದು, ಶೀಘ್ರವೇ ಸಲ್ಲಿಸಲಾಗುವುದು’ ಎಂದು ಅನ್ನಪೂರ್ಣೇಶ್ವರಿ ಅಸೋಸಿಯೇಟ್ಸ್‌ನ ರೂಪೇಶ್ ಮಾಹಿತಿ ನೀಡಿದರು.

‘ಎರಡು ಮೂರು ವಾರ್ಡ್‌ಗಳಲ್ಲಿ ಒಂದೇ ಕೆಲಸಗಾರರ ಹಾಜರಾತಿಯನ್ನು ತೋರಿಸಿ ಬಿಲ್ ಸಲ್ಲಿಕೆಯಾಗಿರುವುದು ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಕೂಲಂಕಷ ಪರಿಶೀಲನೆಯಿಂದ ತಿಳಿದುಬಂದಿದೆ. ಅದಕ್ಕಾಗಿ, ನೌಕರರಿಗೆ ಪಾವತಿಸಿರುವ ಹಣದ ಮಾಹಿತಿ, ಖಾತಾ ವಿವರವನ್ನು ನೀಡುವಂತೆ ಹೇಳಲಾಗಿದೆ. ನಿಖರ ಮಾಹಿತಿ ಕೇಳಿರುವುದರಿಂದ ಬಿಲ್ ಸಲ್ಲಿಕೆಯಲ್ಲಿ ವಿಳಂಬವಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಎಲ್ಲ ದಾಖಲೆಗಳೂ ಲಭ್ಯ: ಕರೀಗೌಡ

‘ತ್ಯಾಜ್ಯ ಗುತ್ತಿಗೆದಾರರಿಗೆ ಅಗತ್ಯವಾಗಿರುವ ಹಾಜರಾತಿಯನ್ನು ವಾರ್ಡ್ ಮಟ್ಟದಲ್ಲೇ ತಿಂಗಳಾಂತ್ಯದಲ್ಲಿ ಒದಗಿಸಲಾಗಿದೆ. ವಾಹನಗಳ ಹಾಜರಾತಿಯ (ಆರ್‌ಎಫ್‌ಐಡಿ) ಮಾಹಿತಿಯನ್ನೂ ನೀಡಲಾಗಿದೆ. ಕಳೆದ 15 ದಿನಗಳಿಂದ ಹೊಸ ಎಸ್‌ಒಪಿ ಜಾರಿಯಾಗಿದೆ. ಅದಕ್ಕೂ ಏಪ್ರಿಲ್‌ನಿಂದ ಬಾಕಿ ಉಳಿದಿರುವ ಬಿಲ್ ಸಲ್ಲಿಕೆಗೂ ಸಂಬಂಧ ಇಲ್ಲ. ತ್ಯಾಜ್ಯ ಗುತ್ತಿಗೆದಾರರು ಅಗತ್ಯ ದಾಖಲೆಗಳೊಂದಿಗೆ ಬಿಲ್ ಸಲ್ಲಿಕೆ ಮಾಡಿದರೆ, ನಿಯಮಾನುಸಾರ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುತ್ತದೆ. ಗುತ್ತಿಗೆದಾರರು– ಸ್ವಚ್ಛತೆ ಕೆಲಸ ನಿರ್ವಹಿಸುವವರಿಗೂ ಇದರಿಂದ ಅನುಕೂಲ ಆಗಲಿದೆ’ ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ಮಾಹಿತಿ ನೀಡಿದರು.

‘ಎಸ್‌ಒಪಿಯಿಂದ ಗೊಂದಲ’

‘ಹೊಸ ಪ್ರಮಾಣಿತ ಕಾರ್ಯಾಚಾರಣಾ ವಿಧಾನದಿಂದ (ಎಸ್‌ಒಪಿ) ಗುತ್ತಿಗೆದಾರರಿಗೆ ಗೊಂದಲ ಉಂಟಾಗಿದೆ. ಹೀಗಾಗಿ ಬಿಲ್ ಸಲ್ಲಿಕೆ ವಿಳಂಬವಾಗಿದೆ. ಈ ಗೊಂದಲ ಪರಿಹರಿಸಲು ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಸಭೆ ಕರೆಯವಂತೆ ಬಿಎಸ್‌ಡಬ್ಲ್ಯುಎಂಎಲ್‌ನ ವ್ಯವಸ್ಥಾಪಕ ನಿರ್ದೇಶಕರಿಗೆ ಎರಡು ಬಾರಿ ಪತ್ರ ಬರೆಯಲಾಗಿದೆ. ಆದರೂ ಕ್ರಮ ಕೈಗೊಳ್ಳದೆ, ನೋಟಿಸ್ ಜಾರಿ ಮಾಡಿದ್ದಾರೆ’ ಎಂದು ಬೆಂಗಳೂರು ನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ತಿಳಿಸಿದರು.

‘ಏಪ್ರಿಲ್‌ನಿಂದ ಮಾಸಿಕ ಬಿಲ್ ಪಾವತಿಯಲ್ಲಿ ಆಗುತ್ತಿರುವ ವಿಳಂಬ, ಮಾಸಿಕ ಬಿಲ್ ಪಾವತಿಸಲು ಹೆಚ್ಚುವರಿಯಾಗಿರುವ ಟೇಬಲ್‌ಗಳು, ಇಎಸ್‌ಐ, ಇಪಿಎಫ್‌ಗೆ ಸಂಬಂಧಿಸಿ ವಿಧಿಸುತ್ತಿರುವ ದಂಡ ಮತ್ತು ಬಡ್ಡಿ, 2025ರ ಜನವರಿಗೂ ಹಿಂದಿನ ಬಿಲ್ ಪಾವತಿಯಲ್ಲಿ ಆಗುತ್ತಿರುವ ವಿಳಂಬ, ನೌಕರರು ಬೆಳಿಗ್ಗೆ 5.30ಕ್ಕೆ ಕೆಲಸಕ್ಕೆ ಹಾಜರಾಗಲು ಅವಶ್ಯವಿರುವ ಸಾರ್ವಜನಿಕರ ಸಾರಿಗೆ ವ್ಯವಸ್ಥೆ ಬಗ್ಗೆ ಚರ್ಚೆ ನಡೆಸಿ, ಪರಿಹಾರ ಕಲ್ಪಿಸಲು ಕೋರಲಾಗಿದೆ’ ಎಂದರು.

ಯಾವ ವಾರ್ಡ್‌ಗಳ ಗುತ್ತಿಗೆದಾರರಿಗೆ ನೋಟಿಸ್?

ಚೌಡೇಶ್ವರಿ, ಯಲಹಂಕ ನ್ಯೂಟೌನ್, ಕೆಂಪೇಗೌಡ, ಅಟ್ಟೂರು, ಬೆನ್ನಿಗಾನಹಳ್ಳಿ, ಸಿ.ವಿ. ರಾಮನ್‌ನಗರ, ಹೊಸ ತಿಪ್ಪಸಂದ್ರ, ಸರ್ವಜ್ಞನಗರ, ಹೊಯ್ಸಳ ನಗರ, ಜೀವನ್ ಬಿಮಾ ನಗರ, ಕೋನೇನ ಅಗ್ರಹಾರ, ಭಾರತಿ ನಗರ, ಶಿವಾಜಿನಗರ, ವಸಂತನಗರ, ರಾಮಸ್ವಾಮಿ ಪಾಳ್ಯ, ಜಯಮಹಲ್, ಸಂಪಂಗಿರಾಮನಗರ, ಬಸವನಗುಡಿ, ಹನುಮಂತನಗರ, ಎಚ್‌ಎಸ್‌ಆರ್ ಲೇಔಟ್, ಬೊಮ್ಮನಹಳ್ಳಿ, ಹೊಂಗಸಂದ್ರ, ಮಂಗಮ್ಮನಪಾಳ್ಯ, ಕೆ.ಆರ್. ಮಾರುಕಟ್ಟೆ, ಜೆಜೆಆರ್ ನಗರ, ಬೇಗೂರು, ಸಿಂಗಸಂದ್ರ, ಗೊಟ್ಟಿಗೆರೆ, ಕೋಣನಕುಂಟೆ.

ಸಾಂಸ್ಕೃತಿಕ ಮುನ್ನೋಟ

‘ನಮನ್’ ಕಥಕ್ ಪ್ರದರ್ಶನ ನಾಳೆ

ಬೆಂಗಳೂರು: ಕೃಷ್ಣಪ್ರದರ್ಶನ ಕಲಾ ಅಕಾಡೆಮಿ ವತಿಯಿಂದ ‘ನಮನ್’ ಕಥಕ್ ಪ್ರದರ್ಶನವನ್ನು ಸೆ.19ರಂದು ಸಂಜೆ 6ಕ್ಕೆ ಮಲ್ಲೇಶ್ವರದ 14ನೇ ಅಡ್ಡರಸ್ತೆಯಲ್ಲಿರುವ ಸೇವಾ ಸದನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಂಪದ ಪಿಳ್ಳೈ, ಶರತ್ ಆರ್. ಪ್ರಭಾತ್, ಸುರಶ್ರೀ ಭಟ್ಟಾಚಾರ್ಯ ಆಹ್ವಾನಿತ ಕಲಾವಿದರಾಗಿ ಪಾಲ್ಗೊಳ್ಳಲಿದ್ದಾರೆ. ಪ್ರತಿಮಾ ಆಚಾರ್ಯ ಅವರ ಗಾಯನ, ಬಿಸ್ವಜಿತ್ ಪೌಲ್ ಅವರ ತಬಲಾ, ಸುಬ್ರಹ್ಮಣ್ಯ ಹೆಗಡೆಯವರಿಂದ ಸಿತಾರ್ ವಾದನ ಇರಲಿದೆ.

ಐಸಿಸಿಆರ್ ವಲಯ ನಿರ್ದೇಶಕ ಪ್ರದೀಪ್ ಕುಮಾರ್, ಆರ್ಟಿಕ್ಯುಲೇಟ್ ಟ್ರಸ್ಟ್‌ನ ಸಂಸ್ಥಾಪಕ ಮೈಸೂರು ಬಿ. ನಾಗರಾಜ್ ಅತಿಥಿಗಳಾಗಿ ಭಾಗವಹಿಸುವರು.

ಸಂಪರ್ಕಕ್ಕೆ: 9880207237

6 ಟು 6 ಯಕ್ಷಗಾನ ಮಹೋತ್ಸವ 20ಕ್ಕೆ

ಬೆಂಗಳೂರು: ರೀಗಲ್ ಜ್ಯುವೆಲ್ಲರ್ ಪ್ರಸ್ತುತಿಯಲ್ಲಿ ನಾಗರಾಜ್ ಶೆಟ್ಟಿ ನೈಕಂಬ್ಳಿ ಸಂಯೋಜನೆಯ ಯಕ್ಷಸಂಕ್ರಾಂತಿ ‘6 ಟು 6 ಯಕ್ಷಗಾನ’ ವನ್ನು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಸೆ.20 ರಂದು ಸಂಜೆ 6ರಿಂದ ಮರುದಿನ ಬೆಳಿಗ್ಗೆ 6ರವರೆಗೆ ಹಮ್ಮಿಕೊಳ್ಳಲಾಗಿದೆ.

ತೆಂಕು–ಬಡಗಿನ ಕಲಾವಿದರ ಸಮಾಗಮದ ಈ ಮಹೋತ್ಸವದಲ್ಲಿ ರಾಮ ನಿರ್ಯಾಣ, ಗಿರಿಪೂಜೆ, ಕಾಲಯವನ ಹಾಗೂ ಚಿತ್ರಸೇನ ಎಂಬ ನಾಲ್ಕು ಪ್ರಸಂಗಗಳು ಪ್ರಸ್ತುತಿಗೊಳ್ಳಲಿವೆ.

ಸಂಪರ್ಕಕ್ಕೆ: 97414 74255

‘ದಿ ರೈಸಿಂಗ್ ಆಫ್ ಡೆತ್’ ನಾಳೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದಲ್ಲಿ ಆದಿಶಕ್ತಿ ರಂಗ ಕಲಾಸಂಸ್ಥೆ ವತಿಯಿಂದ ಸಾಧಕರಿಗೆ ಸನ್ಮಾನ ಹಾಗೂ ನಾಟಕ ಪ್ರದರ್ಶನವನ್ನು ಜೆ.ಸಿ. ರಸ್ತೆಯ ನಯನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಲಿಯಂ ಶೇಕ್ಸ್‌ಪಿಯರ್ ಅವರ ನಾಲ್ಕು ದುರಂತ ನಾಟಕಗಳ ಕಥಾ ಸಂಗಮ ‘ದಿ ರೈಸಿಂಗ್ ಆಫ್ ಡೆತ್’ ಪ್ರದರ್ಶನಗೊಳ್ಳಲಿದೆ.

‘ಚೌಕಟ್ಟಿನಾಚೆಯ ಚಿತ್ರ’ 20ಕ್ಕೆ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯ ತಿಂಗಳ ನಾಟಕ ಸಂಭ್ರಮದಲ್ಲಿ ಮುಂಬೈನ ಕನ್ನಡ ಕಲಾ ಕೇಂದ್ರದ ಕಲಾವಿದರಿಂದ ‘ಚೌಕಟ್ಟಿನಾಚೆಯ ಚಿತ್ರ’ ನಾಟಕ ಪ್ರದರ್ಶನ ಸೆ.20ರಂದು ಸಂಜೆ 6.30ಕ್ಕೆ ಮಲ್ಲತ್ತಹಳ್ಳಿ ಕಲಾಗ್ರಾಮದಲ್ಲಿ ನಡೆಯಲಿದೆ.

ಲಿಂಗತ್ವ ಅಲ್ಪಸಂಖ್ಯಾತರ ಕುರಿತ ವಿಭಿನ್ನ ರೀತಿಯ ನಾಟಕ ಇದಾಗಿದ್ದು, ವಿದ್ದು ಉಚ್ಚಿಲ್ ರಂಗ ವಿನ್ಯಾಸ ಮಾಡಿದ್ದಾರೆ. ದಿವಾಕರ ಕಟೀಲ್ ಸಂಗೀತ ನೀಡಿದ್ದಾರೆ. ರಂಗ ಸಂಘಟಕ ವಿ.ಎಂ. ನಾಗೇಶ್ ತಿಂಗಳ ಅತಿಥಿಯಾಗಿರುವರು. ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಅಧ್ಯಕ್ಷತೆ ವಹಿಸುವರು ಎಂದು ಕಾರ್ಯಕ್ರಮದ ಸಂಚಾಲಕರಾದ ಜೆಪಿಒ ಚಂದ್ರು ಮತ್ತು ಜಗದೀಶ್ ಜಾಲ ತಿಳಿಸಿದ್ದಾರೆ.

ಜಬ್ಬಾರ್ ಸಮೊ

‘ಕಚ ದೇವಯಾನಿ’ 21ಕ್ಕೆ

ಬೆಂಗಳೂರು: ನಿರ್ಮಾಣ್ ಯಕ್ಷ ಬಳಗದಿಂದ ತಿಂಗಳ ತಿರುಳು ಸರಣಿಯ 35ನೇ ತಾಳಮದ್ದಳೆ ‘ಕಚ ದೇವಯಾನಿ’ ಸೆ.21ರಂದು ಮಧ್ಯಾಹ್ನ 3ಕ್ಕೆ ಗಿರಿನಗರ ಶ್ರೀರಾಮಾಶ್ರಮದಲ್ಲಿ ನಡೆಯಲಿದೆ.

ಅರ್ಥಧಾರಿ ಜಬ್ಬಾರ್ ಸಮೊ ಅವರು ಬೆಂಗಳೂರಿನ ಹವ್ಯಾಸಿ ಕಲಾವಿದರೊಂದಿಗೆ ಭಾಗವಹಿಸಲಿದ್ದಾರೆ. ಶುಕ್ರಾಚಾರ್ಯನಾಗಿ ಅರ್ಥ ಹೇಳಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಉಚಿತವಾಗಿ ಶಿಲ್ಪಕಲಾ ಶಿಕ್ಷಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನರಾ ಬ್ಯಾಂಕ್ ವತಿಯಿಂದ ನಿರುದ್ಯೋಗಿ ಯುವಕರಿಗೆ ಉಚಿತವಾಗಿ ಶಿಲ್ಪಕಲಾ ಶಿಕ್ಷಣ ನೀಡಲಾಗುತ್ತದೆ.

ಮರ ಮತ್ತು ಕಲ್ಲು ಕೆತ್ತನೆ ಹಾಗೂ ಲೋಹ ಶಿಲ್ಪ ವಿಭಾಗಗಳಲ್ಲಿ ತರಬೇತಿ ಅವಧಿ 18 ತಿಂಗಳು ಹಾಗೂ ಕುಂಭಕಲೆ (ಟೆರಾಕೋಟ) ವಿಭಾಗದ ತರಬೇತಿ ಅವಧಿ 6 ತಿಂಗಳಾಗಿದೆ. ಅಭ್ಯರ್ಥಿಗಳು ಕನಿಷ್ಠ 7ನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ವಯೋಮಿತಿ 18ರಿಂದ 35 ವರ್ಷದೊಳಗಿರಬೇಕು.

ತರಬೇತಿ ಅವಧಿಯಲ್ಲಿ ಊಟ, ವಸತಿ, ಸಮವಸ್ತ್ರ ಇತ್ಯಾದಿಯನ್ನು ಉಚಿತವಾಗಿ ನೀಡಲಾಗುತ್ತದೆ. ತರಬೇತಿಗೆ ಸೇರಲಿಚ್ಛಿಸುವವರು ನೇರ ಸಂದರ್ಶನಕ್ಕೆ ಅಕ್ಟೋಬರ್ 3ರೊಳಗೆ ಬಿಡದಿ ಹೋಬಳಿಯ ಜೋಗರದೊಡ್ಡಿಯಲ್ಲಿರುವ ಕೆಪಿಜೆ ಪ್ರಭು ಕರಕುಶಲ ತರಬೇತಿ ಸಂಸ್ಥೆಯಲ್ಲಿ ಹಾಜರಾಗಬೇಕು.

ಹೆಚ್ಚಿನ ವಿವರಗಳಿಗೆ ಸಂಸ್ಥೆ ನಿರ್ದೇಶಕರನ್ನು (9164984414, 9731016210) ಸಂಪರ್ಕಿಸಬಹುದು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ತಾಕೀತು

ಪಿ.ಜಿ: ಆಸ್ತಿ ತೆರಿಗೆ ಪರಿಶೀಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೇಯಿಂಗ್ ಗೆಸ್ಟ್‌ನ (ಪಿ.ಜಿ) ಎಲ್ಲ ಕಟ್ಟಡಗಳನ್ನು ಪಟ್ಟಿ ಮಾಡಲಿ, ಬೆಸ್ಕಾಂ ಸಂಪರ್ಕದ ಮಾಹಿತಿ, ಅಳತೆಯನುಸಾರ ಆಸ್ತಿ ತೆರಿಗೆಯನ್ನು ಪರಿಶೀಲಿಸಬೇಕು ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ (ಬಿಎಸ್‌ಸಿಸಿ) ಆಯುಕ್ತ ಕೆ.ಎನ್. ರಮೇಶ್ ಸೂಚಿಸಿದರು.

ಎಸ್‌ಎಎಸ್ ಘೋಷಣೆಗಳನ್ನು ಪರಿಶೀಲಿಸಿ ತಪ್ಪಾಗಿರುವ ಪ್ರಕರಣಗಳಿಗೆ ಕಾಯ್ದೆ ಹಾಗೂ ನಿಯಮಗಳಂತೆ ಆಸ್ತಿತೆರಿಗೆ ಪರಿಷ್ಕರಿಸಲು ಹೇಳಿದರು.

ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ಪಡೆದಿರುವ ಕಟ್ಟಡಗಳ ಮಾಹಿತಿಯನ್ನು ನಗರ ಯೋಜನೆ ವಿಭಾಗದಿಂದ ಪಡೆದು, ಅವುಗಳನ್ನೆಲ್ಲ ಆಸ್ತಿ ತೆರಿಗೆ ಜಾಲಕ್ಕೆ ತರಬೇಕು. ಬಹುಮಹಡಿ ಕಟ್ಟಡಗಳ ಪಟ್ಟಿ ಮಾಡಿ, ‘ಟೋಟಲ್ ಸ್ಟೇಷನ್ ಸರ್ವೆ’ ಮೂಲಕ ವೈಜ್ಞಾನಿಕವಾಗಿ ಕಟ್ಟಡದ ಅಳತೆಯನ್ನು ಮಾಡಿ ವ್ಯತ್ಯಾಸ ಕಂಡುಬಂದ ಪ್ರಕರಣಗಳಲ್ಲಿ ಆಸ್ತಿ ತೆರಿಗೆ ಪರಿಷ್ಕರಿಸಲು ಸೂಚಿಸಿದರು.

ಗುಂಡಿಮುಕ್ತ ರಸ್ತೆ: ಪೂರ್ವ ನಗರ ಪಾಲಿಕೆ (ಬಿಇಸಿಸಿ) ವ್ಯಾಪ್ತಿಯ ರಸ್ತೆಗಳನ್ನು ಗುಂಡಿಮುಕ್ತವಾಗಿಸಲು ವಾರ್ಡ್ ಮಟ್ಟದ ಎಲ್ಲ ಎಂಜಿನಿಯರ್‌ಗಳು ಹೆಚ್ಚಿನ ಶ್ರಮ ವಹಿಸಬೇಕು ಎಂದು ಆಯುಕ್ತ ಡಿ.ಎಸ್. ರಮೇಶ್ ಹೇಳಿದರು.

ದೊಡ್ಡನೆಕ್ಕುಂದಿ ವ್ಯಾಪ್ತಿಯ ಎಇಸಿಎಸ್ ಬಡಾವಣೆಯಲ್ಲಿ ರಸ್ತೆ ಗುಂಡಿ ಮುಚ್ಚುವುದನ್ನು ಅವರು ಬುಧವಾರ ಪರಿಶೀಲಿಸಿದರು.

ಅಮಾನತು ಎಚ್ಚರಿಕೆ: ಸಿ.ವಿ. ರಾಮನ್‌ನಗರದಲ್ಲಿ ಹಾಳಾದ ಪಾದಚಾರಿ ರಸ್ತೆಗಳು, ರಸ್ತೆ ಗುಂಡಿಗಳ ದುರಸ್ತಿ ಮಾಡದಿರುವುದು, ಕಸ ಗುಡಿಸದಿರುವುದು, ತ್ಯಾಜ್ಯ ನಿರ್ವಹಣೆ ಸರಿಯಾಗಿ ಆಗದಿರುವುದನ್ನು ಗಮನಿಸಿದ ಬೆಂಗಳೂರು ಕೇಂದ್ರ ನಗರ ಪಾಲಿಕೆ (ಬಿಸಿಸಿಸಿ) ಆಯುಕ್ತ ರಾಜೇಂದ್ರ ಚೋಳನ್ ಅವರು, ಅಧಿಕಾರಿಗಳನ್ನು ಅಮಾನತು ಮಾಡುವುದಾಗಿ ಎಚ್ಚರಿಸಿದರು.

ಜೀವನ್ ಬಿಮಾ ನಗರ ಮುಖ್ಯರಸ್ತೆ ಬದಿ ಖಾಲಿ ನಿವೇಶನವಿದೆ. ಈ ಸ್ಥಳದಲ್ಲಿ ತ್ಯಾಜ್ಯ ತುಂಬಿದ್ದು, ಖಾಲಿ ನಿವೇಶನದಾರರಿಗೆ ನೋಟಿಸ್ ನೀಡಬೇಕು. ಪಾದಚಾರಿ ಮಾರ್ಗ ಹಾಗೂ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಶೆಡ್ ನಿರ್ಮಾಣ ಮಾಡಿದವರಿಗೆ ದಂಡ ವಿಧಿಸಬೇಕು ಎಂದರು.

ನಗರ ಪಾಲಿಕೆಗಳಿಗೆ ಕಟ್ಟಡ: ಸ್ಥಳ ಪರಿಶೀಲನೆ

ಬೆಂಗಳೂರು ಪಶ್ಚಿಮ ನಗರ ಪಾಲಿಕೆ (ಬಿಡಬ್ಲ್ಯುಸಿಸಿ) ವ್ಯಾಪ್ತಿಯಲ್ಲಿ ಮಾಗಡಿ ಮುಖ್ಯರಸ್ತೆ ಕೆಎಚ್‌ಬಿ, ವಿಜಯನಗರದ ಬಿಡಿಎ ಸ್ಥಳ, ಅತ್ತಿಗುಪ್ಪೆ ಹಾಗೂ ಚಂದ್ರಾ ಲೇಔಟ್ ಜಂಕ್ಷನ್‌ಗಳಲ್ಲಿ ಹೊಸ ಕಚೇರಿ ಕಟ್ಟಡಕ್ಕೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸ್ಥಳ ಪರಿಶೀಲನೆ ಮಾಡಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ (ಬಿಎಸ್‌ಸಿಸಿ) ವ್ಯಾಪ್ತಿಯಲ್ಲಿ ಬನಶಂಕರಿ ಹಾಗೂ ಬನ್ನೇರುಘಟ್ಟ ರಸ್ತೆಯ ಅಪೋಲೊ ಆಸ್ಪತ್ರೆ ಬಳಿಯ ಜಾಗವನ್ನು ಪರಿಶೀಲನೆ ನಡೆಸಿದರು.

ಬೊಮ್ಮನಹಳ್ಳಿಯ ನ್ಯಾನಪ್ಪನಹಳ್ಳಿ ಬಂಡೆ ಬಳಿ ಆಟದ ಮೈದಾನದಲ್ಲಿ ಕ್ರೀಡಾಂಗಣ ನಿರ್ಮಿಸಲು ಪ್ರಸ್ತಾವ ಸಲ್ಲಿಸಬೇಕು. ಅದೇ ಸ್ಥಳದಲ್ಲಿ ಹಾಟ್ ಮಿಕ್ಸ್ ಘಟಕ ನಿರ್ಮಾಣ ಮಾಡಲು ಸರ್ಕಾರಿ ಜಾಗದ ಹಸ್ತಾಂತರಕ್ಕೆ ಕ್ರಮಕೈಗೊಳ್ಳುವಂತೆ ಸೂಚನೆ ನೀಡಿದರು.

ಬೊಮ್ಮನಹಳ್ಳಿಯಲ್ಲಿರುವ ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತದಲ್ಲಿ (ಕೆಸಿಡಿಸಿ) ಪ್ರತಿನಿತ್ಯ 300 ಟನ್ ತ್ಯಾಜ್ಯ ಸಂಸ್ಕರಣೆ ಮಾಡಬಹುದಾಗಿದ್ದು, ಸದ್ಯ 200 ಟನ್ ತ್ಯಾಜ್ಯ ಸಂಸ್ಕರಣೆ ಮಾಡಲಾಗುತ್ತಿದೆ. ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವಂತಾಗಬೇಕು. ಘಟಕದಲ್ಲಿರುವ ಸುಮಾರು 60,000 ಟನ್ ಅನುಪಯುಕ್ತ ತ್ಯಾಜ್ಯವನ್ನು ಕೂಡಲೇ ವಿಲೇವಾರಿ ಮಾಡಬೇಕು ಎಂದು ಸೂಚಿಸಿದರು.

ನಗರದಲ್ಲಿ ಇಂದು

‘ನಾಗಮೋಹನದಾಸ್ ಅವರ ಒಳ ಮೀಸಲಾತಿ ವರದಿಯ ಒಳ ಸಂಚು ತಿಳಿಯುವುದು, ಸಾಮಾಜಿಕ, ಶೈಕ್ಷಣಿಕ ಗಣತಿಯಲ್ಲಿ ಬಲಗೈ ಜಾತಿಗಳ ಜವಾಬ್ದಾರಿ’ ವಿಚಾರಸಂಕಿರಣ: ಆಯೋಜನೆ: ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10.30

ನಟ ನರಸಿಂಹರಾಜು ನೆನಪಿನಲ್ಲಿ 42ನೇ ಅಂತರ ವಿಭಾಗ ನಾಟಕ ಸ್ಪರ್ಧೆಯ ಉದ್ಘಾಟನೆ: ಕೆ. ಸುಚೇಂದ್ರ ಪ್ರಸಾದ್, ಅತಿಥಿ: ಸುಧಾ ನರಸಿಂಹರಾಜು, ಎನ್. ಗಿರಿರಾಜ, ಅಧ್ಯಕ್ಷತೆ: ಕೆ. ಸುಂದರರಾಜ್, ‘ಇರು ದಾಸಯ್ಯ ಬರಲಿ’ ನಾಟಕ ಪ್ರದರ್ಶನ, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾ ಕ್ಷೇತ್ರ, ಜಾಲಹಳ್ಳಿ, ಸಂಜೆ 5.30

‘ಯೋಚಿಸಿದಂತೆ ಟಂಕಿಸು ಕ-ದಾನ ಕನ್ನಡ ಹಾರ್ಡ್‌ವೇರ್ ಕೀಲಿಮಣೆ’ ಉಪನ್ಯಾಸ: ಗುರುಪ್ರಸಾದ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡ ನಗರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

₹3 ಕೋಟಿವರೆಗೆ ಆಯುಕ್ತರಿಗೆ ಅಧಿಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಆಯುಕ್ತರು, ಸ್ಥಾಯಿ ಸಮಿತಿ, ಪಾಲಿಕೆ ಸಭೆಗೆ ಕಾಮಗಾರಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರು, ಟೆಂಡರ್ ಅನುಮೋದನೆಯ ಪ್ರಮಾಣ ನಿಗದಿಪಡಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ನಗರ ಪಾಲಿಕೆಯ ಆಯುಕ್ತರು ₹3 ಕೋಟಿವರೆಗಿನ ಕಾಮಗಾರಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ, ಕಾಮಗಾರಿಗಳ ಟೆಂಡರ್ ಅನುಮೋದನೆ ನೀಡಬಹುದು. ಸ್ಥಾಯಿ ಸಮಿತಿ ಅಥವಾ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ₹3 ಕೋಟಿಯಿಂದ ₹5 ಕೋಟಿ, ಪಾಲಿಕೆ ಸಭೆಗೆ ₹5 ಕೋಟಿಯಿಂದ ₹10 ಕೋಟಿವರೆಗಿನ ಕಾಮಗಾರಿಗಳಿಗೆ ಅನುಮೋದನೆ ನೀಡಲು ಅಧಿಕಾರ ನೀಡಲಾಗಿದೆ.

ಯಾವುದೇ ಕಾಮಗಾರಿಯ ಮೊತ್ತ ₹10 ಕೋಟಿ ಮೀರಿದರೆ ಅದರ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ, ಟೆಂಡರ್ ಅನುಮೋದನೆಯನ್ನು ಸರ್ಕಾರದಿಂದಲೇ ಪಡೆಯಬೇಕು ಎಂದು ಆದೇಶಿಸಲಾಗಿದೆ.

ಯೋಜನೆ ಅನುಷ್ಠಾನ ಘಟಕ: ಬಿಬಿಎಂಪಿಯಲ್ಲಿದ್ದ ಬೃಹತ್ ನೀರುಗಾಲುವೆ ವಿಭಾಗದ ಯೋಜನೆಗಳನ್ನು ಜಿಬಿಎಯಲ್ಲಿರುವ ಯೋಜನಾ ಅನುಷ್ಠಾನ ಘಟಕದ ಮುಖ್ಯ ಎಂಜಿನಿಯರ್ ಅವರಿಗೆ ವರ್ಗಾಯಿಸಿ ನಗರಾಭಿವೃದ್ಧಿ ಇಲಾಖೆ ಆದೇಶಿಸಿದೆ.

₹238.72 ಕೋಟಿ ಮೊತ್ತದ ನಗರ ಪ್ರವಾಹ ಅಪಾಯ ನಿರ್ವಹಣೆ (ಎನ್‌ಡಿಎಂಎಫ್) ಕಾರ್ಯಕ್ರಮ ಯೋಜನೆ, ವಿಶ್ವ ಬ್ಯಾಂಕ್ ನೆರವಿನ ಜಲಭದ್ರತೆ ಮತ್ತು ವಿಪತ್ತು ನಿರೋಧಕ ಕಾರ್ಯಕ್ರಮ ₹2,000 ಕೋಟಿ ಮೊತ್ತದ ಕಾಮಗಾರಿಗಳ ಕ್ರಿಯಾಯೋಜನೆ ವರ್ಗಾಯಿಸಲಾಗಿದೆ.

ಯೋಜನೆ ಅನುಷ್ಠಾನ ಘಟಕಕ್ಕೆ ಎಸ್.ವಿ. ರಾಜೇಶ್ ಅವರನ್ನು ಮುಖ್ಯ ಎಂಜಿನಿಯರ್ ಆಗಿ ಸ್ಥಳ ನಿಯುಕ್ತಿಗೊಳಿಸಿದ್ದು, ಎರಡೂ ಯೋಜನೆಗಳನ್ನು ಅವರಿಗೆ ವಹಿಸಲಾಗಿದೆ.

ಹೊರವರ್ತುಲ ರಸ್ತೆ: ಮಾರ್ಗ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ವಿಮಾನ ನಿಲ್ದಾಣ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹೊರವರ್ತುಲ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಣದ ಉದ್ದೇಶದಿಂದ ಸೆ.19ರಿಂದ 26ರ ವರೆಗೆ ವಾಹನಗಳ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

ನಿರ್ಬಂಧಿತ ರಸ್ತೆಗಳು: ಲೇ ಅರೇಬಿಯಾ, ಬಿರಿಯಾನಿ ಜೋನ್, ಕ್ರೋಮ ಜಂಕ್ಷನ್ ಬಳಿ ಹೊರವರ್ತುಲ ರಸ್ತೆಯಿಂದ ಮಾರತ್ತಹಳ್ಳಿ – ಕಾಡು ಬೀಸನಹಳ್ಳಿ ಸರ್ವಿಸ್ ರಸ್ತೆಗೆ ಸಂಚರಿಸುವ ಎಲ್ಲ ವಾಹನಗಳನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ಮಹದೇವಪುರ ಕಾರ್ತಿಕ್‌ನಗರ ಕಡೆಯಿಂದ ಲೇ ಅರೇಬಿಯಾ ಮತ್ತು ಬಿರಿಯಾನಿ ಪಾಯಿಂಟ್ ಮೂಲಕ ಮಾರತ್ತಹಳ್ಳಿ–ಕಾಡುಬೀಸನಹಳ್ಳಿ ಸರ್ವಿಸ್ ರಸ್ತೆಗೆ ಸಂಚರಿಸುವ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ವಾಹನ ಸವಾರರು ಕಡ್ಡಾಯವಾಗಿ ಕಲಾಮಂದಿರ ಬಳಿ ಸರ್ವಿಸ್ ರಸ್ತೆಗೆ ತೆರಳಿ ಮಾರತ್ತಹಳ್ಳಿಯ ಕಾಂತಿ ಸ್ವೀಟ್ಸ್ ಕೆಳಸೇತುವೆ ಬಳಿ ಯು–ಟರ್ನ್ ತೆಗೆದುಕೊಂಡು ಮಾರತ್ತಹಳ್ಳಿ ಸೇತುವೆ ಬಳಿ ಎಡಕ್ಕೆ ತಿರುಗಿ ಮುನ್ನೇನ ಕೊಳಲು, ಕಾಡುಬೀಸನಹಳ್ಳಿ ಜಂಕ್ಷನ್, ಪಣತ್ತೂರು ಮತ್ತು ಕರಿಯಮ್ಮನ ಅಗ್ರಹಾರ ಕಡೆಗೆ ಹೋಗಲು ಸರ್ವಿಸ್ ರಸ್ತೆಯಲ್ಲಿ ಸಂಚರಿಸಬಹುದು ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ಅವರು ತಿಳಿಸಿದ್ದಾರೆ.

₹3.04 ಕೋಟಿ ಲಾಭ: ಮಂಜಪ್ಪ

ಸೌಂದರ್ಯ ಸೌಹಾರ್ದ ಕೋ ಆಪರೇಟಿವ್‌ನ ಸಾಧನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಸದಸ್ಯರ ಸೇವೆಯೇ ನಮ್ಮ ಪ್ರಥಮ ಧ್ಯೇಯ. ಸದಸ್ಯಸ್ನೇಹಿಯಾಗಿ ಷೇರು, ಠೇವಣಿಗಳ ಸಂಗ್ರಹ, ಸಾಲ ವಿತರಣೆ ಮತ್ತು ವಸೂಲಾತಿಯಲ್ಲಿ ಉತ್ತಮ ಸಾಧನೆ ಮಾಡಿದ ಪ್ರತಿಫಲವಾಗಿ ₹3.04 ಕೋಟಿ ಲಾಭಗಳಿಸಿದೆ’ ಎಂದು ಸೌಂದರ್ಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್‌ನ ಅಧ್ಯಕ್ಷ ಸೌಂದರ್ಯ ಪಿ.ಮಂಜಪ್ಪ ತಿಳಿಸಿದರು.

ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, ‘ನಮ್ಮ ಸಹಕಾರಿ ಸಂಸ್ಥೆ ಸ್ಥಾಪನೆಯಾಗಿ ಹತ್ತು ವರ್ಷ ತುಂಬುವಷ್ಟರಲ್ಲಿ ಸ್ವಂತ ನಿವೇಶನ, ಕಟ್ಟಡ ಹೊಂದಿದ್ದೇವೆ. ಚಿಕ್ಕಬಾಣಾವರದಲ್ಲಿ 4ನೇ ಶಾಖೆಯನ್ನು ಪ್ರಾರಂಭಿಸಿದ್ದೇವೆ. ₹288 ಕೋಟಿ ವ್ಯವಹಾರ ನಡೆಸಿ ₹156 ಕೋಟಿ ದುಡಿಯುವ ಬಂಡವಾಳ ಹೊಂದಿದ್ದೇವೆ’ ಎಂದರು.

ವ್ಯವಸ್ಥಾಪಕ ನಿರ್ದೇಶಕ ಕೆ.ಕೃಷ್ಣ ಶೆಟ್ಟಿ ಮಾತನಾಡಿ, ‘ಬ್ಯಾಂಕುಗಳ ಎಲ್ಲಾ ಸೌಲಭ್ಯಗಳು ನಮ್ಮ ಸಹಕಾರಿಯಲ್ಲಿ ಇದ್ದು, ಎಲ್ಲ ತರಹದ ಸಾಲ ವಿತರಣೆ ಮಾಡುತ್ತಿದ್ದೇವೆ’ ಎಂದು ಹೇಳಿದರು.

ಸೌಂದರ್ಯ ಪಿ.ಮಂಜಪ್ಪ ಅವರು ಸದಸ್ಯರ ಪ್ರತಿಭಾನ್ವಿತ ಮಕ್ಕಳನ್ನು ಪುರಸ್ಕರಿಸಿದರು. ಪಿ.ಪಿ.ಚೆನ್ನಮ್ಮ, ಎಂ.ಸುನಿತಾ, ವೈ.ಕುಮಾರ್, ಎಂ.ಕೀರ್ತನ್ ಕುಮಾರ್, ಎಂ.ವರುಣ್ ಕುಮಾರ್, ಬಿ.ವಿ.ಹೇಮಂತ ಉಪಸ್ಥಿತರಿದ್ದರು

ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ.ಹೇಮಂತ ಆಡಳಿತ ವರದಿ ವಾಚಿಸಿ, ಶೇಕಡ 15ರಷ್ಟು ಡಿವಿಡೆಂಡ್ ಘೋಷಿಸಿದರು.

ಉಪಾಧ್ಯಕ್ಷೆ ಎಂ.ಸುನೀತಾ, ನಿರ್ದೇಶಕರಾದ ಎಂ.ಕೀರ್ತನ್ ಕುಮಾರ್, ಎಂ.ವರುಣ್ ಕುಮಾರ್ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿದರು. ರಾಜ್ಯ ಕೋ-ಆಪರೇಟಿವ್ ಸೊಸೈಟಿಗಳ ಅಧ್ಯಕ್ಷ ವೈ.ಕುಮಾರ್, ಸೌಹಾರ್ದ ಫೆಡರಲ್‌ನ ಅಭಿವೃದ್ಧಿ ಅಧಿಕಾರಿ ರವಿಪ್ರಸಾದ್, ನೆಲಮಂಗಲ ಶಾಖಾಧಿಕಾರಿ ಮಹಾಂತೇಶ್ ಎಂ.ನೆಗಳೂರ, ಪುತ್ತೂರಿನ ಶ್ಯಾಮಲಾ, ಚಿಕ್ಕಬಾಣಾವರದ ಗಂಗಾ ತಿಲಕ್, ಚಿನ್ನಮ್ಮ, ಭರತ್ ಉಪಸ್ಥಿತರಿದ್ದರು.

ಸಿವಿಲ್ ವ್ಯಾಜ್ಯ ಪ್ರಕರಣವೊಂದರಲ್ಲಿ ಹೈಕೋರ್ಟ್ ಸ್ಪಷ್ಟನೆ

ವಾಣಿಜ್ಯ ಕೋರ್ಟ್ ಕಾಲಮಿತಿ ಪಾಲನೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ದಾವೆದಾರರು ತಮ್ಮ ಅಗತ್ಯಕ್ಕೆ ತಕ್ಕಂತೆ ನಡೆಯುವುದು ಸಲ್ಲ
- ಶಾಸನದ ಆಶಯ ಹಾಳಾಗಬಾರದು

ಬೆಂಗಳೂರು: ‘ವಾಣಿಜ್ಯ ನ್ಯಾಯಾಲಯಗಳು ನೀಡುವ ಆದೇಶಗಳಲ್ಲಿ ಪ್ರಕರಣದ ವಿಚಾರಣೆಗೆ ಸಂಬಂಧಪಟ್ಟಂತೆ ನಿಗದಿಪಡಿಸಲಾದ ಕಾಲಮಿತಿಯನ್ನು ವಾಣಿಜ್ಯ ನ್ಯಾಯಾಲಯಗಳ ಕಾಯ್ದೆ ಅನುಸಾರ ಕಟ್ಟುನಿಟ್ಟಾಗಿ ಪಾಲಿಸಲೇಬೇಕಾಗುತ್ತದೆ’ ಎಂದು ಹೈಕೋರ್ಟ್, ಸಿವಿಲ್ ವ್ಯಾಜ್ಯವೊಂದರಲ್ಲಿ ಸ್ಪಷ್ಟಪಡಿಸಿದೆ.

ನವದೆಹಲಿಯ, ಇಫ್ಕೊ (ಐಎಫ್‌ಎಫ್‌ಸಿಒ) ‘ಟೋಕಿಯೊ ಜನರಲ್ ಇನ್ಶೂರೆನ್ಸ್ ಲಿಮಿಟೆಡ್ ಕಂಪನಿ’ಯ ಸ್ಥಳೀಯ ಪ್ರತಿನಿಧಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ತಿರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ‘ಇಂತಹ ಪ್ರಕರಣಗಳಲ್ಲಿ ಹೈಕೋರ್ಟ್ ಔದಾರ್ಯವನ್ನು ಪ್ರದರ್ಶಿಸುತ್ತಾ ಹೋದರೆ ಶಾಸನೀಯ ಅಸ್ತಿತ್ವದ ಮೂಲ ಉದ್ದೇಶವೇ ಸೋಲುತ್ತದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.



‘ದಾವೆದಾರನು ದಾವೆಯೊಂದಿಗೆ ದಾಖಲೆಗಳನ್ನು ಬಹಿರಂಗೊಳಿಸದೇ ಇರುವುದಕ್ಕೆ ಸಮಂಜಸ ಕಾರಣವನ್ನು ತೋರಿಸಿ, ಅದನ್ನು ಸಮರ್ಥಿಸಿಕೊಳ್ಳಬೇಕು. ಆದಾಗ್ಯೂ, ದಾವೆ ಸಲ್ಲಿಸುವ ಸಮಯದಲ್ಲಿ ಆ ದಾಖಲೆಗಳು ದಾವೆದಾರರ ಅಧಿಕಾರ, ಸ್ವಾಧೀನ, ನಿಯಂತ್ರಣ ಅಥವಾ ವಶದಲ್ಲಿ ಇರಲಿಲ್ಲ ಮತ್ತು ನಂತರದಲ್ಲಿ ಪತ್ತೆಯಾಗಿವೆ ಎಂದು ದಾವೆದಾರನು ಸ್ಪಷ್ಟಪಡಿಸಿದರೆ, ಅಂತಹ ಸಂದರ್ಭಗಳಲ್ಲಿ ಸಮಂಜಸ ಕಾರಣವನ್ನು ಸಾದರಪಡಿಸುವ ಅಗತ್ಯ ಇರುವುದಿಲ್ಲ’ ಎಂಬ ಸುಪ್ರೀಂ ಕೋರ್ಟ್ ಮತ್ತು ‘ಸಾಮಾನ್ಯ ದಾವೆಗಳಲ್ಲಿ ತೋರಬಹುದಾದ ಸಡಿಲಿಕೆಯನ್ನು ವಾಣಿಜ್ಯ ಪ್ರಕರಣಗಳಲ್ಲೂ ಅನ್ವಯಿಸಲು ಯಾವುದೇ ಕಾರಣಕ್ಕೂ ಸಾಧ್ಯವಿಲ್ಲ’ ಎಂಬ ವಿವಿಧ ಹೈಕೋರ್ಟ್‌ಗಳ ತೀರ್ಪುಗಳನ್ನು ನ್ಯಾಯಪೀಠ ಉಲ್ಲೇಖಿಸಿದೆ.

ದಾಖಲಾತಿಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಸಲ್ಲಿಸಲು ಅವಕಾಶ ನೀಡಿದರೆ, ವಾಣಿಜ್ಯ ಕಾಯ್ದೆಯ ಉದ್ದೇಶವನ್ನೇ ಹಾಳು ಮಾಡಿದಂತಾಗುತ್ತದೆ

ಎಂ.ನಾಗಪ್ರಸನ್ನ
ನ್ಯಾಯಮೂರ್ತಿ

ಏನಿದು ಪ್ರಕರಣ?

‘ಅಸಲು ದಾವೆಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ–1908ರ ನಿಯಮ 11 ನಿರ್ಣಯ 1ರ ಅಡಿಯಲ್ಲಿ ನಾವು ಕೆಲವು ದಾಖಲಾತಿಗಳನ್ನು ನೀಡಬೇಕಿದೆ. ಇದಕ್ಕೆ ಅನುಮತಿ ನೀಡಬೇಕು. ಈ ದಾಖಲೆಗಳು ದಾವೆದಾರರು ಮಂಡಿಸಿರುವ ಸಾಕ್ಷ್ಯಕ್ಕೆ ಪ್ರತಿಯಾಗಿ ಬಳಸುವಂತಹವುಗಳಾಗಿವೆ. ಆದ್ದರಿಂದ, ನಮ್ಮ ಈ ಮನವಿಯನ್ನು ಮಾನ್ಯ ಮಾಡಬೇಕು’ ಎಂದು ಅರ್ಜಿದಾರರು 11ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ವಾಣಿಜ್ಯ ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ ಸಲ್ಲಿಸಿದ್ದರು.

ಆದರೆ, ಪ್ರತಿವಾದಿಗಳು, ‘ಕಾನೂನು ಪ್ರಕಾರ ತಮ್ಮ ಲಿಖಿತ ಅಥವಾ ಅಂಗೀಕಾರ ಮತ್ತು ನಿರಾಕರಣೆಯ ಹೇಳಿಕೆಯನ್ನು (Statement of Admissions and Denial) ಸಲ್ಲಿಸುವ ಸಮಯದಲ್ಲಿಯೇ ಎಲ್ಲಾ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಮಂಡಿಸಬೇಕಾಗಿತ್ತು. ದಾಖಲೆಗಳನ್ನು ತುಂಡು-ತುಂಡಾಗಿ ನೀಡುವುದರಿಂದ ಕಾನೂನಿನ ನಿಯಮದ ಉದ್ದೇಶವನ್ನು ಕುಗ್ಗಿಸುವಂತಾಗುತ್ತದೆ’ ಎಂದು ಮಧ್ಯಂತರ ಅರ್ಜಿಯನ್ನು ವಿರೋಧಿಸಿದ್ದರು. ವಾಣಿಜ್ಯ ನ್ಯಾಯಾಲಯ ಈ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಂಕ್ಷಿಪ್ತ ಸುದ್ದಿ

ವಿಮೋಚನಾ ದಿನಾಚರಣೆ

ಬೆಂಗಳೂರು: ಸದಾಶಿವ ನಗರದ ವೀರೇಂದ್ರ ಪಾಟೀಲ ಪದವಿ ಕಾಲೇಜಿನಲ್ಲಿ, ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಕಾರ್ಯಕ್ರಮ ಬುಧವಾರ ನಡೆಯಿತು.

ಹೈದರಾಬಾದ್ ನಿಜಾಮನಿಂದ ಈ ಪ್ರದೇಶವನ್ನು ಸ್ವತಂತ್ರಗೊಳಿಸಿ ಭಾರತಕ್ಕೆ ಸೇರ್ಪಡೆ ಮಾಡಿದ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ನಾಯಕತ್ವದ ಬಗ್ಗೆ ಸಂಗಮೇಶ ಬಾದವಾಡಗಿ ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರ ಗಾಂಧಿಗುಡಿ ಧ್ವಜಾರೋಹಣ ನೆರವೇರಿಸಿದರು. ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಪದ್ಮಜ್ಯೋತಿ ಅಧ್ಯಕ್ಷತೆ ವಹಿಸಿದ್ದರು. ಕಲ್ಯಾಣ ಕರ್ನಾಟಕ ನಿವಾಸಿಗಳ ಸಂಘದ ಅಧ್ಯಕ್ಷ ಚಂದ್ರಕಾಂತ ಭಂಡಾರೆ ಉಪಸ್ಥಿತರಿದ್ದರು.

20ಕ್ಕೆ ವಾರ್ಷಿಕ ಮಹಾಸಭೆ

ಬೆಂಗಳೂರು: ಸಿಕ್ಯೂಎಎಲ್ ಕ್ಯಾಂಪಸ್ ನೌಕರರ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಸೆ.20ರಂದು ಬೆಳಿಗ್ಗೆ 10ಕ್ಕೆ ಜೆ.ಸಿ. ನಗರದ ಗುಣತಾ ವಿಹಾರದ ಡಿಜಿಕ್ಯೂಎ ವಸತಿ ಸಂಕೀರ್ಣದ ಸಿಬ್ಬಂದಿ ಭವನದಲ್ಲಿ ನಡೆಯಲಿದೆ.

ಸಂಘದ ಅಧ್ಯಕ್ಷರಾದ ಎಸ್. ಪ್ರಕಾಶಂ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ಸರ್ವ ಸದಸ್ಯರು ಸಭೆಯಲ್ಲಿ ಪಾಲ್ಗೊಳ್ಳಬೇಕು ಎಂದು ಸಂಘದ ಕಾರ್ಯದರ್ಶಿ ತಿಳಿಸಿದ್ದಾರೆ.

ವಂದೇ ಭಾರತ್: ದಿನ ಬದಲು

ಬೆಂಗಳೂರು: ಕಾಚಿಗುಡ–ಯಶವಂತಪುರ–ಕಾಚಿಗುಡ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಸಂಚಾರದ ದಿನಗಳನ್ನು ದಕ್ಷಿಣ ಮಧ್ಯ ರೈಲ್ವೆ ಪರಿಷ್ಕರಿಸಿದೆ.

ವಾರದಲ್ಲಿ ಆರು ದಿನ ಈ ರೈಲು ಸಂಚಾರವಿದ್ದು, ಇಲ್ಲಿಯವರೆಗೆ ಪ್ರತಿ ಬುಧವಾರ ಸಂಚಾರ ಇರಲಿಲ್ಲ. ಡಿಸೆಂಬರ್ 4ರಿಂದ ಜಾರಿಗೆ ಬರುವಂತೆ ಬುಧವಾರದ ಬದಲು ಶುಕ್ರವಾರ ಈ ವಂದೇ ಭಾರತ್ ರೈಲು ಸಂಚಾರ ಇರುವುದಿಲ್ಲ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಾಹಕ ಸಂವಾದ ಸಭೆ

ಬೆಂಗಳೂರು: ಬೆಸ್ಕಾಂನ ಎಲ್ಲಾ ಉಪವಿಭಾಗಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರ ಮಧ್ಯಾಹ್ನ 3 ಗಂಟೆಯಿಂದ ಸಂಜೆ 5.30ರವರೆಗೆ ಗ್ರಾಹಕ ಸಂವಾದ ಸಭೆ ನಡೆಯಲಿದೆ.

ಗ್ರಾಹಕರು ಇದರಲ್ಲಿ ಭಾಗವಹಿಸಿ ವಿದ್ಯುತ್‌ಗೆ ಸಂಬಂಧಿಸಿದ ಸಮಸ್ಯೆಗಳನ್ನು ಬೆಸ್ಕಾಂನ ಅಧಿಕಾರಿಗಳೊಂದಿಗೆ ಚರ್ಚಿಸಿ ಬಗೆಹರಿಸಿಕೊಳ್ಳಬಹುದು ಎಂದು ಬೆಸ್ಕಾಂನ ಪ್ರಧಾನ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಚಾರ ದಟ್ಟಣೆ ನಿವಾರಣೆಗೆ ಆಗ್ರಹ

ಮೂಲಸೌಕರ್ಯಗಳ ಕೊರತೆ: ಉದ್ಯಮಿಗಳ ಆಕ್ರೋಶ, ಈಗಲಾದರೂ ಎಚ್ಚೆತ್ತುಕೊಳ್ಳಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಗುಂಡಿ, ಸಂಚಾರ ದಟ್ಟಣೆ, ದೂಳಿನ ಸಮಸ್ಯೆಯಿಂದ ಲಾಜಿಸ್ಟಿಕ್ ಸಂಸ್ಥೆ ಬ್ಲ್ಯಾಕ್‌ಬಕ್ ಬೆಳ್ಳಂದೂರಿನಿಂದ ಹೊರಹೋಗುವ ನಿರ್ಧಾರ ಕೈಗೊಂಡಿರುವ ಬೆನ್ನಲ್ಲೇ, ಪ್ರಮುಖ ಉದ್ಯಮಿಗಳು ನಗರದಲ್ಲಿನ ಮೂಲಸೌಕರ್ಯಗಳ ಸಮಸ್ಯೆ ಬಗ್ಗೆ ಧ್ವನಿ ಎತ್ತಿದ್ದಾರೆ.

ಎರಡು ವರ್ಷಗಳ ಹಿಂದೆ ಅತಿ ಹೆಚ್ಚು ಮಳೆಯಾದ ಸಂದರ್ಭದಲ್ಲಿ, ಪೂರ್ವಭಾಗ ಮುಳುಗಿಹೋಗಿತ್ತು. ಈ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಉದ್ಯಮ ನಡೆಸಲು ಸಾಧ್ಯವಿಲ್ಲ, ಹೊರಹೋಗಬೇಕಾಗುತ್ತದೆ ಎಂಬ ಮಾತುಗಳು ವ್ಯಕ್ತವಾಗಿದ್ದವು. ಈಗ ರಸ್ತೆ ಗುಂಡಿ ಹಾಗೂ ದಟ್ಟಣೆ ಮುಂದಿಟ್ಟುಕೊಂಡು ನಗರದ ಆಡಳಿತ ವ್ಯವಸ್ಥೆ ಬಗ್ಗೆ ಉದ್ಯಮಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬ್ಲ್ಯಾಕ್‌ಬಕ್ ಸಂಸ್ಥೆ, 'ಇಲ್ಲಿ ಉಳಿಯುವುದು ತೀರಾ ಸಂಕಷ್ಟ' ಎಂದು ಹೇಳಿ ಹೊರಹೋಗುವ ನಿರ್ಧಾರ ತೆಗೆದುಕೊಂಡಿದೆ. ಇದನ್ನು ಉಲ್ಲೇಖಿಸಿಯೇ ಉದ್ಯಮಿ ಮೋಹನ್ ದಾಸ್ ಪೈ ಅವರು 'ಎಕ್ಸ್‌'ನಲ್ಲಿ ನಗರದ ಆಡಳಿತದಲ್ಲಿ ಭಾರಿ ವೈಫಲ್ಯವಾಗಿದೆ ಎಂದು ಹೇಳಿ, ಸಚಿವ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಕಚೇರಿ, ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಜಿಬಿಎ ಅಧಿಕಾರಿಗಳನ್ನು ಟ್ಯಾಗ್ ಮಾಡಿದ್ದಾರೆ.

ಪೈ ಅವರ ಹೇಳಿಕೆಯನ್ನು ಮರುದಾಖಲಿಸಿರುವ ಬಯೊಕಾನ್‌ನ ಮುಖ್ಯಸ್ಥೆ ಕಿರಣ್ ಮಜುಂದಾರ್, 'ಇದೊಂದು ಗಂಭೀರ ಸಮಸ್ಯೆ' ಎಂದಿದ್ದಾರೆ.

'ಸಂಚಾರ ದಟ್ಟಣೆ, ರಸ್ತೆ ಗುಂಡಿಗಳು, ಹೆಚ್ಚಿದ ಪ್ರಯಾಣದ ಅವಧಿ ಹೀಗೆ ಹೊರವರ್ತುಲ ರಸ್ತೆಯಲ್ಲಿ ಮೂಲಸೌಕರ್ಯದ ಬಗ್ಗೆ ಸ್ಥಳೀಯ ಆಡಳಿತ ಅಸಡ್ಡೆ ತೋರಿಸುತ್ತಿರುವ ಬಗ್ಗೆ ನಮಗೆ ತೀವ್ರ ಕಳವಳವಾಗುತ್ತಿದೆ. ಸಂಸ್ಥೆಗಳು ಸ್ಥಳಾಂತರಗೊಳ್ಳುವ ಬಗ್ಗೆ ಮಾತನಾಡುತ್ತಿರುವುದರಿಂದ ಸರ್ಕಾರ ತ್ವರಿತವಾಗಿ ಮಧ್ಯಪ್ರವೇಶ ಮಾಡಬೇಕು' ಎಂದು ಗ್ರೇಟರ್ ಬೆಂಗಳೂರು ಐಟಿ ಕಂಪನಿಗಳು ಮತ್ತು ಕೈಗಾರಿಕೆಗಳ ಸಂಘದ (ಜಿಬಿಐಟಿಸಿಐಎ) ಪ್ರಧಾನ ಕಾರ್ಯದರ್ಶಿ ಕೃಷ್ಣಕುಮಾರ್ ಗೌಡ ಹೇಳಿದರು.

ಸ್ಟಾರ್ಟ್‌ಅಪ್ ಹಾಗೂ ಕಾರ್ಪೊರೇಟ್ ಸಂಸ್ಥೆಗಳ ಉದ್ಯೋಗಿಗಳು ರಸ್ತೆ, ಗುಂಡಿ, ವಾಹನ ದಟ್ಟಣೆ ಸಮಸ್ಯೆಗಳನ್ನೇ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ.

'ಬೆಳಿಗ್ಗೆ 11.30ರ ಸಮಯದಲ್ಲಿ ದಟ್ಟಣೆ ಅಲ್ಲದ ಅವಧಿಯಲ್ಲಿ ಹೊರವರ್ತುಲ ರಸ್ತೆಯಲ್ಲಿ 40–45 ನಿಮಿಷ ಕಳೆಯುತ್ತೇನೆ. ಅದೇ ದೂರವನ್ನು ಬೆಳಿಗ್ಗೆ 6 ಗಂಟೆಗೆ 20 ನಿಮಿಷದಲ್ಲಿ ತಲುಪಬಹುದು' ಎಂದು ಬ್ರೂಕ್‌ಫೀಲ್ಡ್‌ನ ನಾರ್ತನ್ ಟ್ರಸ್ಟ್ ಕಂಪನಿಯ ಸುಹಾಸ್ ರೆಡ್ಡಿ ಹೇಳಿಕೊಂಡಿದ್ದಾರೆ.

'ಸಂಚಾರ ದಟ್ಟಣೆಯಿಂದಾಗಿ ನಾನು ಎರಡು ಗಂಟೆ ರಸ್ತೆಯಲ್ಲೇ ಕಳೆದ ದಿನಗಳಿವೆ. ಇದರಿಂದ ಭಾರಿ ಬಳಲಿಕೆ ಉಂಟಾಗುತ್ತದೆ. ಬೆಳಗಿನ ಅವಧಿಯಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ' ಎಂದು ಬೆಳ್ಳಂದೂರಿನ ಕಂಪನಿಯೊಂದರ ಉದ್ಯೋಗಿ ಸ್ನೇಹಾ ಹೇಳಿದ್ದಾರೆ.

'ಬೆಳ್ಳಂದೂರು ನರಕದಂತೆ ಅನುಭವವಾಗುತ್ತಿದೆ. ರಸ್ತೆಗಳು ಕಳಪೆಯಾಗಿವೆ. ಪಾದಚಾರಿ ಸೌಲಭ್ಯಗಳು ಅರೆಬರೆಯಾಗಿವೆ. ದೂಳು ಹೆಚ್ಚಾಗಿದ್ದು, ಹಸಿರು ಎನ್ನುವುದು ದೂರದ ಮಾತಾಗಿದೆ. ಪಾರ್ಕಿಂಗ್ ಮಾಡುವುದು ದುಃಸ್ವಪ್ನವಾಗಿದೆ' ಎಂದು ಶಂಕರ್ ಮೈಸೂರು ಬರೆದುಕೊಂಡಿದ್ದಾರೆ.

'ನವೆಂಬರ್ ವೇಳೆಗೆ ಮುಕ್ತಿ'

ಶಿವಕುಮಾರ್

'ಬೆಂಗಳೂರಿನ ರಸ್ತೆಗುಂಡಿಗಳ ಸಮಸ್ಯೆಯನ್ನು ನವೆಂಬರ್ ಒಳಗೆ ಬಗೆಹರಿಸಲಾಗುತ್ತದೆ. ಆ ಸಮಯದೊಳಗೆ ರಸ್ತೆಗುಂಡಿಗಳನ್ನು ಮುಚ್ಚುವಂತೆ ಗುತ್ತಿಗೆದಾರರಿಗೆ ಅಂತಿಮ ಗಡುವು ನೀಡಲಾಗಿದೆ. ಸ್ವಚ್ಛ ಬೆಂಗಳೂರು ಹಾಗೂ ಸುಗಮ ಸಂಚಾರವೇ ನಮ್ಮ ಗುರಿಯಾಗಿರುವುದರಿಂದ ಆದಷ್ಟು ಬೇಗ ರಸ್ತೆ ಗುಂಡಿಗಳಿಗೆ ಜಿಬಿಎ ಮುಕ್ತಿ ನೀಡಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಾಲತಾಣಗಳಲ್ಲಿ ಹೇಳಿದ್ದಾರೆ.

ಬೆಳ್ಳಂದೂರಿನ ಆದರ್ಶ ರಸ್ತೆಯಲ್ಲಿರುವ ಗುಂಡಿಗಳು (ಸಂಗ್ರಹ ಚಿತ್ರ)

'ಎಕ್ಸ್' ಪೋಸ್ಟ್‌ಗಳು

9 ವರ್ಷಗಳಿಂದ ಒಆರ್‌ಆರ್‌ನಲ್ಲಿ (ಬೆಳ್ಳಂದೂರು) ನಮ್ಮ ಕಚೇರಿ, ಮನೆ ಹೊಂದಿದ್ದೇವೆ. ಆದರೆ, ಇದೀಗ ಇಲ್ಲಿಂದ ಹೊರಹೋಗಲು ನಾವು ನಿರ್ಧರಿಸಿದ್ದೇವೆ. ನನ್ನ ಸಹೋದ್ಯೋಗಿಗಳು ಇಲ್ಲಿಗೆ ಬರಲು ಸರಾಸರಿ ಒಂದೂವರೆ ಗಂಟೆಗೂ ಹೆಚ್ಚು ಸಮಯ ಬೇಕಿದೆ. ರಸ್ತೆಗಳು ಸಂಪೂರ್ಣ ಗುಂಡಿಮಯವಾಗಿದ್ದು, ದೂಳಿನಿಂದ ಕೂಡಿವೆ. ಅದನ್ನು ಸರಿಪಡಿಸುವ ಉದ್ದೇಶವೇ ಕಾಣಿಸುತ್ತಿಲ್ಲ

ರಾಜೇಶ್ ಯಬಾಜಿ, ಬ್ಲ್ಯಾಕ್‌ಬಕ್ ಸಂಸ್ಥಾಪಕ ಹಾಗೂ ಸಿಇಒ

ಬೆಂಗಳೂರಿನ ಆಡಳಿತದಲ್ಲಿ ಅತಿ ದೊಡ್ಡ ವೈಫಲ್ಯವಾಗುತ್ತಿದೆ. ಸಚಿವ @ಡಿ.ಕೆ. ಶಿವಕುಮಾರ್ ಅವರೇ, ದಯವಿಟ್ಟು ಗಮನಿಸಿ, ಕಂಪನಿಗಳು ಹೊರವರ್ತುಲ ರಸ್ತೆಯಿಂದ ಹೊರಹೋಗುತ್ತಿವೆ. ಆಶಾದಾಯಕವಾದ ಪರಿಸ್ಥಿತಿ ಇಲ್ಲ. ದಯವಿಟ್ಟು ಮಧ್ಯಪ್ರವೇಶ ಮಾಡಿ

ಮೋಹನ್ ದಾಸ್ ಪೈ, ಉದ್ಯಮಿ

ಇದು ಗಂಭೀರ ಸಮಸ್ಯೆ. ಈ ಸಮಸ್ಯೆಗಳನ್ನು ಬಗೆಹರಿಸಲು ತುರ್ತು ಕ್ರಮಗಳ ಅಗತ್ಯವಿದೆ

ಕಿರಣ್ ಮಜುಂದಾರ್ ಷಾ, ಬಯೊಕಾನ್ ಮುಖ್ಯಸ್ಥೆ

'ಎಚ್ಚರಿಕೆ ಗಂಟೆ'

'ಒಆರ್‌ಆರ್‌ನಿಂದ ಹೊರಹೋಗಲು ಬ್ಲ್ಯಾಕ್‌ಬಕ್ ಕೈಗೊಂಡಿರುವ ನಿರ್ಧಾರ ಗಂಭೀರ ಸ್ವರೂಪದ ಎಚ್ಚರಿಕೆ ಗಂಟೆಯಾಗಿದೆ. ಭಾರತದ ಪ್ರತಿಷ್ಠಿತ ಟೆಕ್ ರಾಜಧಾನಿಯಾಗಿರುವ ಬೆಂಗಳೂರು ಮೂಲಸೌಕರ್ಯ ಮತ್ತು ಸುಗಮ ವ್ಯವಹಾರದ ಮೇಲೆ ಅವಲಂಬಿತವಾಗಿದೆ. ರಸ್ತೆಗಳನ್ನು ದುರಸ್ತಿಗೊಳಿಸಲು ಕೂಡಲೇ ಪಾರದರ್ಶಕವಾದ ತುರ್ತು ಕ್ರಮ ಕೈಗೊಳ್ಳಬೇಕು, ಸಾರ್ವಜನಿಕ ಸಾರಿಗೆಯನ್ನು ಉನ್ನತೀಕರಿಸಬೇಕು. ನಗರದ ಆಡಳಿತವನ್ನು ಉತ್ತಮಗೊಳಿಸಬೇಕು ಎಂದು ನಾವು ಆಗ್ರಹಿಸುತ್ತೇವೆ. ವಿಶ್ವದರ್ಜೆಯ ಪ್ರತಿಭೆಗಳು ಹಾಗೂ ಕಂಪನಿಗಳನ್ನು ಉಳಿಸಿಕೊಳ್ಳಲು, ವಿಶ್ವಾಸವನ್ನು ಮರುಸ್ಥಾಪಿಸಲು ನಮ್ಮ ಉದ್ಯಮವು ಸರ್ಕಾರದೊಂದಿಗೆ ಸಹಕರಿಸಲು ಸಿದ್ಧವಿದೆ' ಎಂದು ಗ್ರೇಟರ್ ಬೆಂಗಳೂರು ಐಟಿ ಕಂಪನಿಗಳು ಮತ್ತು ಕೈಗಾರಿಕೆಗಳ ಸಂಘದ (ಜಿಬಿಐಟಿಸಿಐಎ) ಪ್ರಧಾನ ಕಾರ್ಯದರ್ಶಿ ಕೃಷ್ಣಕುಮಾರ್ ಗೌಡ ಹೇಳಿದರು.

'ಬ್ಲ್ಯಾಕ್‌ಬಕ್'ಗೆ ಆಂಧ್ರ ಆಹ್ವಾನ

ಪ್ರಜಾವಾಣಿ ವಾರ್ತೆ

ನಾರಾ ಲೋಕೇಶ್

ಹೈದರಾಬಾದ್: ಆನ್‌ಲೈನ್ ಲಾಜಿಸ್ಟಿಕ್ ಪ್ಲಾಟ್‌ಫಾರ್ಮ್ 'ಬ್ಲ್ಯಾಕ್‌ಬಕ್' ಬೆಂಗಳೂರಿನಿಂದ ತನ್ನ ಕಂಪನಿಯನ್ನು ಸ್ಥಳಾಂತರಿಸುವುದಾದರೆ ವಿಶಾಖಪಟ್ಟಣಕ್ಕೆ ಬರುವಂತೆ ಆಂಧ್ರಪ್ರದೇಶದ ಮಾಹಿತಿ ತಂತ್ರಜ್ಞಾನ (ಐಟಿ) ಸಚಿವ ನಾರಾ ಲೋಕೇಶ್ ಬುಧವಾರ ಆಹ್ವಾನಿಸಿದ್ದಾರೆ.

ಬೆಂಗಳೂರಿನಲ್ಲಿ ಹದಗೆಡುತ್ತಿರುವ ಮೂಲಸೌಕರ್ಯ ಮತ್ತು ಪ್ರಯಾಣ ಸಮಸ್ಯೆಗಳ ಕುರಿತು ಬ್ಲ್ಯಾಕ್‌ಬಕ್ ಕಂಪನಿಯ ಸಹ ಸ್ಥಾಪಕ ಮತ್ತು ಸಿಇಒ ರಾಜೇಶ್ ಯಾಬಾಜಿ ಅವರು ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೇ ಸಚಿವ ಲೋಕೇಶ್ ಅವರು ಕಂಪನಿಯನ್ನು ತಮ್ಮ ರಾಜ್ಯಕ್ಕೆ ಆಹ್ವಾನಿಸಿದ್ದಾರೆ.

'ಬೆಳ್ಳಂದೂರಿನಲ್ಲಿ ನಮ್ಮ ಕಚೇರಿಯಿದೆ. ಗುಂಡಿ ಬಿದ್ದ ರಸ್ತೆಗಳು, ವಿಪರೀತ ದೂಳಿನಿಂದಾಗಿ ಕಚೇರಿಗೆ ಬರಲು ಸಹೋದ್ಯೋಗಿಗಳು ನಿತ್ಯ ಒಂದೂವರೆ ಗಂಟೆಗೂ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದಾರೆ. ಹೀಗಾಗಿ ಕಂಪನಿಯನ್ನು ಇಲ್ಲಿಂದ ಸ್ಥಳಾಂತರಿಸಲು ನಿರ್ಧರಿಸಿದ್ದೇವೆ' ಎಂದು ಯಾಬಾಜಿ 'ಎಕ್ಸ್'ನಲ್ಲಿ ತಿಳಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಲೋಕೇಶ್, 'ನೀವು ವಿಶಾಖಪಟ್ಟಣದಲ್ಲಿ ಕಂಪನಿಯನ್ನು ಸ್ಥಾಪಿಸಲು ಬಯಸುತ್ತೀರಾ? ಇದು ಅತ್ಯುತ್ತಮ ಮೂಲಸೌಕರ್ಯ ಹೊಂದಿದ್ದು, ಮಹಿಳೆಯರಿಗೆ ಅತ್ಯಂತ ಸುರಕ್ಷಿತ ನಗರವೂ ಆಗಿದೆ. ಈ ಸಂಬಂಧ ನೇರವಾಗಿ ನನಗೆ ಸಂದೇಶ ಕಳುಹಿಸಬಹುದು' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

ಮೈಸೂರು ರೇಸ್

ಐರಿಷ್ ಕಾಫಿ ಗೆಲ್ಲುವ ನಿರೀಕ್ಷೆ

ಬಿ.ಎ.ನಾಣಯ್ಯ ಮೆಮೋರಿಯಲ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಐರಿಷ್ ಕಾಫಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ನ್ಯಾಚುರಲ್ ಲುಕ್ 5, ಥಿಯಾ 6, ಆಲ್ವೇಸ್ ಫಾರ್ ಯು 1
2ನೇ ರೇಸ್: ಎಸ್ಟೆಫಾನಿಯಾ 10, ಫ್ಲೆಮಿಂಗೊ ಡ್ರೀಮ್ 2, ಜನ್ನತ್ 5
3ನೇ ರೇಸ್: ಪ್ಲೆಡ್ಜ್ 10, ಕಾರ್ಟರ್ 8, ಸಿರಾ 1
4ನೇ ರೇಸ್: ಆಶೀರ್ವಾದ್ 1, ಚೋಟಿಪಾರಿ 6, ಮ್ಯಾಜಿಕ್ ಸರ್ಕಲ್ 5
5ನೇ ರೇಸ್: ಐರಿಷ್ ಕಾಫಿ 2, ವಂಧಿಯಥೇವನ್ 3, ಸೆಕ್‌ಮೆಟ್ 8
6ನೇ ರೇಸ್: ಪರ್ಫೆಕ್ಟ್ ಆ್ಯಟಿಟ್ಯೂಡ್ 2, ಬೆಲ್ಲವಿಟ 7, ಡಬಲ್ ವಿಷನ್ 1
7ನೇ ರೇಸ್: ಕ್ಲೌಡಿ ಹಿಲ್ಸ್ 9, ವರ್ಲ್ಡ್ ವೈಸ್ 2, ಓ ಮಂಚಲಿ 10

ಉತ್ತಮ ಬೆಟ್: ಪ್ಲೆಡ್ಜ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಚಿಟಿಕೆ ಸುದ್ದಿ

ಕಲಿಕಾ ದೀಪ: 1,145 ಶಾಲೆಗಳಿಗೆ ವಿಸ್ತರಣೆ

ಬೆಂಗಳೂರು: ಮೊದಲ ಹಂತದಲ್ಲಿ 1,145 ಶಾಲೆಗಳ ಮಕ್ಕಳಲ್ಲಿ ಮೂಲ ಗಣಿತ ತತ್ವಗಳು ಹಾಗೂ ಕನ್ನಡ–ಇಂಗ್ಲಿಷ್ ಭಾಷಾ ಸಾಮರ್ಥ್ಯ ಬೆಳೆಸಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿದೆ.

ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಬೋಧನೆ ಒಳಗೊಂಡ ಈ ಯೋಜನೆ ಅನುಷ್ಠಾನಕ್ಕಾಗಿ ಇಲಾಖೆಯ ಅಧಿಕಾರಿಗಳು ಎಕ್‌ಸ್ಟೆಪ್ ಫೌಂಡೇಶನ್ ಜತೆ ಒಪ್ಪಂದ ಮಾಡಿಕೊಂಡಿದ್ದಾರೆ.

ಯೋಜನೆಯನ್ನು ಕೊಪ್ಪಳ ಹಾಗೂ ತುಮಕೂರು ಜಿಲ್ಲೆಗಳಲ್ಲಿ 2024-25ನೇ ಸಾಲಿನಲ್ಲೇ ಪ್ರಾಯೋಗಿಕವಾಗಿ ಜಾರಿ ಮಾಡಲಾಗಿತ್ತು. ಯೋಜನೆಯಿಂದ 1,44,062 ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದ್ದು, ₹1.38 ಕೋಟಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಇಂಟರ್‌ನೆಟ್ ಶುಲ್ಕ, ಹೆಡ್ ಫೋನ್‌ಗಳ ಖರೀದಿ ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಲು ಅನುದಾನ ಬಳಸಿಕೊಳ್ಳುವಂತೆ ಇಲಾಖೆ ಸೂಚಿಸಿದೆ.

'ಸಮೀಕ್ಷೆಗೆ ಡಿಜಿಟಲ್ ಆ್ಯಪ್ ಬಳಸಿ'

ಬೆಂಗಳೂರು: 'ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಡಿಜಿಟಲ್ ಆ್ಯಪ್ ಬಳಸಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಬೇಕು. ಆ್ಯಪ್ ಸಿದ್ಧವಾಗುವವರೆಗೂ ಸಮೀಕ್ಷೆ ಮುಂದೂಡಬೇಕು' ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಒತ್ತಾಯಿಸಿದೆ.

'ಇ– ಆಡಳಿತ ಇಲಾಖೆಯ ಸಹಯೋಗದೊಂದಿಗೆ ಡಿಜಿಟಲ್ ಆ್ಯಪ್ ರೂಪಿಸಿ ಸಮೀಕ್ಷೆ ನಡೆಸಲು ಸಚಿವ ಸಂಪುಟವು ತೀರ್ಮಾನಿಸಿ ಈಗಾಗಲೇ ಆದೇಶ ಹೊರಡಿಸಿದೆ. ಆದರೆ, ಆಯೋಗವು ಇ–ಆಡಳಿತ ಇಲಾಖೆಗೆ ಪತ್ರ ಬರೆಯುವುದಾಗಲಿ, ಆ್ಯಪ್ ಸಿದ್ಧಪಡಿಸುವ ಕುರಿತು ತೀರ್ಮಾನವನ್ನಾಗಲಿ ಕೈಗೊಂಡಂತೆ ಕಾಣುತ್ತಿಲ್ಲ ಎಂದು ಮಹಾಸಭಾವು ಆಯೋಗಕ್ಕೆ ಬರೆದಿರುವ ಪತ್ರದಲ್ಲಿ ತಿಳಿಸಿದೆ.

ಅಂಗಾಂಗ ಕಸಿ: ಸಮಿತಿ ರಚನೆ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆಯ ನೆಫ್ರೋಯುರಾಲಜಿ ಸಂಸ್ಥೆಯಲ್ಲಿ ಮಾನವ ಅಂಗಾಂಗಗಳ ಮತ್ತು ಅಂಗಾಂಗ ಕಸಿ ಜೋಡಣೆಗಾಗಿ ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಪುನರ್‌ರಚಿಸಿದೆ.

ನೆಫ್ರೋಯುರಾಲಜಿ ಸಂಸ್ಥೆಯ ನಿರ್ದೇಶಕರು ಅಧ್ಯಕ್ಷರಾಗಿರುತ್ತಾರೆ. ನಿವೃತ್ತ ಹಿರಿಯ ಶಸ್ತ್ರ ಚಿಕಿತ್ಸಕ ಡಾ.ಎಲ್. ಮೂರ್ತಿ, ಬಿಎಂಸಿಆರ್‌ಐ ಕಮ್ಯುನಿಟಿ ಮೆಡಿಸಿನ್ ವಿಭಾಗೀಯ ಮುಖ್ಯಸ್ಥ ಡಾ. ರಂಗನಾಥ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸಿ.ಆರ್. ಕುಮಾರಸ್ವಾಮಿ, ವಾಣಿವಿಲಾಸ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ. ಚಿತ್ರಾ ರಾಮಮೂರ್ತಿ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಅಥವಾ ಇವರನ್ನು ಪ್ರತಿನಿಧಿಸುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೇರಿದ ಉಪ ಕಾರ್ಯದರ್ಶಿ ವೃಂದದ ಹುದ್ದೆಗಿಂತ ಕಡಿಮೆ ದರ್ಜೆಯವರಲ್ಲದ ನಾಮ ನಿರ್ದೇಶಿತ ಅಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕರು ಅಥವಾ ಅವರನ್ನು ಪ್ರತಿನಿಧಿಸುವ ಸಹನಿರ್ದೇಶಕರು ಸದಸ್ಯರಾಗಿರುತ್ತಾರೆ.

ನೇಪಿಯರ್ ಹುಲ್ಲಿನ ಹೊಸ ತಳಿ ಅಭಿವೃದ್ಧಿಪಡಿಸುತ್ತಿದೆ ಬೆಂಗಳೂರು ಕೃಷಿ ವಿ.ವಿ

ಮೇವಿಗೂ ಸೈ, ಇಂಧನಕ್ಕೂ ಜೈ

• ಖಲೀಲಅಹ್ಮದ ಶೇಖ

ಮುಖ್ಯಾಂಶಗಳು
- ಹುಲ್ಲಿನಿಂದ ಜೈವಿಕ ಇಂಧನ ತಯಾರಿಕೆ
- ಇಂಧನಕ್ಕಾಗಿ ನೇಪಿಯರ್ ಹುಲ್ಲಿನ ಸುಧಾರಿತ ತಳಿಯ ಅಭಿವೃದ್ಧಿ

ಬೆಂಗಳೂರು: ಜೈವಿಕ ಇಂಧನ ಬಳಕೆಗೆ ಕಚ್ಚಾ ವಸ್ತುವನ್ನಾಗಿ ಬಳಕೆ ಮಾಡುವ ನೇಪಿಯರ್ ಹುಲ್ಲಿನ ಸುಧಾರಿತ ತಳಿಯನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಅಭಿವೃದ್ಧಿಪಡಿಸುತ್ತಿದೆ.

ದೇಶದಲ್ಲಿ ಜೈವಿಕ ಇಂಧನ ಮೂಲಗಳಿಗೆ ಹೆಚ್ಚಿನ ಬೇಡಿಕೆ ಇದೆ. ಜೈವಿಕ ಇಂಧನ ಉತ್ಪಾದಿಸಲು ನೇಪಿಯರ್ ಹುಲ್ಲನ್ನು ಕಚ್ಚಾವಸ್ತುವನ್ನಾಗಿ ಬಳಕೆ ಮಾಡಲಾಗುತ್ತದೆ. ಇದರಲ್ಲಿ ಜೈವಿಕ ಇಂಧನ ಉತ್ಪಾದನೆಗೆ ಸಹಾಯಕವಾಗುವ ಲಿಗ್ನಿನೋ ಸಿಲ್ಯುಲೋಸ್ ಎಂಬ ಅಂಶ ಹೆಚ್ಚಿನ ಪ್ರಮಾಣದಲ್ಲಿರುತ್ತದೆ.

'ಜಾಗತಿಕವಾಗಿ ಕಚ್ಚಾತೈಲದ ಬೆಲೆ ತುಟ್ಟಿಯಾಗುತ್ತಿದೆ. ನೇಪಿಯರ್ ಹುಲ್ಲು ಸಾಂದ್ರೀಕೃತ ನೈಸರ್ಗಿಕ ಅನಿಲಕ್ಕೆ (ಸಿಎನ್‌ಜಿ) ಪರ್ಯಾಯವಾಗಿದೆ. ಇದು ಜೈವಿಕ ಇಂಧನದ ಉತ್ಪಾದನೆಗೆ ಒಂದು ಉತ್ತಮ ಕಚ್ಚಾವಸ್ತುವಾಗಿದೆ. ಈ ಹುಲ್ಲಿನಿಂದ ಜೈವಿಕ ಅನಿಲವನ್ನು ಉತ್ಪಾದಿಸುವ ಮೂಲಕ ದೇಶದ ಇಂಧನದ ಭದ್ರತೆಯನ್ನು ಹೆಚ್ಚಿಸಿಕೊಳ್ಳಬಹುದು. ಇದರಿಂದ ಗ್ರಾಮೀಣ ಭಾಗದಲ್ಲಿ ಉದ್ಯೋಗಗಳು ಸೃಷ್ಟಿ ಆಗುತ್ತವೆ. ಜೊತೆಗೆ ಇಂಗಾಲದ ಹೊರಸೂಸುವಿಕೆ ಕಡಿಮೆಗೊಳಿಸಿ, ರೈತರ ಆದಾಯವನ್ನು ಹೆಚ್ಚಿಸುತ್ತದೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದರು.

'ಕೇಂದ್ರ ಸರ್ಕಾರವು 2025ರ ಡಿಸೆಂಬರ್‌ನೊಳಗೆ ನೇಪಿಯರ್ ಹುಲ್ಲಿನಿಂದ ಜೈವಿಕ ಇಂಧನ ಉತ್ಪಾದಿಸುವ 5 ಸಾವಿರಕ್ಕೂ ಹೆಚ್ಚು ಸಿಎನ್‌ಜಿ ಸಂಸ್ಕರಣ ಘಟಕಗಳನ್ನು ಸ್ಥಾಪಿಸುವ ಗುರಿ ಹೊಂದಿದೆ. ಇದನ್ನು ದ್ವಿಚಕ್ರ ವಾಹನಗಳು ಮತ್ತು ಕಾರುಗಳ ಲಘು ಎಂಜಿನ್ ವಾಹನಗಳಲ್ಲಿ ಹೆಚ್ಚು ಬಳಕೆ ಮಾಡಲಾಗುತ್ತದೆ. ಇದು ಸಾಂಪ್ರದಾಯಿಕ ಪೆಟ್ರೋಲ್, ಡೀಸೆಲ್‌ಗಿಂತ ಅಗ್ಗವಾಗಿದೆ' ಎಂದು ವಿವರಿಸಿದರು.

'ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು 2024ರಲ್ಲಿ ನೇಪಿಯರ್–ಪಿಬಿಎನ್–342 ತಳಿಯನ್ನು ಅಭಿವೃದ್ಧಿಪಡಿಸಿ, ಬಿಡುಗಡೆಗೊಳಿಸಿದೆ. ಇದು ಪ್ರತಿ ಹೆಕ್ಟೇರ್‌ಗೆ 150ರಿಂದ 180 ಟನ್‌ವರೆಗೆ ಇಳುವರಿ ನೀಡುತ್ತಿದೆ. ವಿಶ್ವವಿದ್ಯಾಲಯದ ಮೇವು ವಿಭಾಗದ ವಿಜ್ಞಾನಿಗಳು ಇಂಧನ ಉತ್ಪಾದಿಸುವ ಸಲುವಾಗಿ ಹೆಚ್ಚು ಇಳುವರಿ ನೀಡುವ ನೇಪಿಯರ್ ತಳಿಯ ಸಂಶೋಧನೆಯಲ್ಲಿ ನಿರತರಾಗಿದ್ದಾರೆ' ಎಂದು ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗದ ನಿರ್ದೇಶಕ ಎಚ್.ಎಸ್. ಶಿವರಾಮು ಹಾಗೂ ಮೇವು ವಿಭಾಗದ ವಿಜ್ಞಾನಿ ಮೋಹನ್ ಕುಮಾರ್ ಆರ್. ತಿಳಿಸಿದರು.

'ನೇಪಿಯರ್ ಹುಲ್ಲನ್ನು ಒಂದು ವರ್ಷದಲ್ಲಿ ನಾಲ್ಕು ಬಾರಿ ಕೊಯ್ಲು ಮಾಡಬಹುದು. ಇದು ಸ್ಥಳೀಯವಾಗಿ ಬೆಳೆಯಬಹುದಾದ ಮತ್ತು ಸುಸ್ಥಿರವಾಗಿ ಲಭ್ಯವಿರುವ ಸಂಪನ್ಮೂಲವಾಗಿದೆ. ಈ ಹುಲ್ಲನ್ನು ಕೃಷಿ ಭೂಮಿಯಲ್ಲಿ ಬೆಳೆಯುವುದರಿಂದ ಮಣ್ಣಿನ ಸವೆತವನ್ನು ತಡೆಯಬಹುದು ಮತ್ತು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಬಹುದು' ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ಜೈವಿಕ ಅನಿಲ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದರಿಂದ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತವೆ. ನೇಪಿಯರ್ ಬೆಳೆಯುವ ರೈತರಿಗೆ ಇದು ಹೆಚ್ಚುವರಿ ಆದಾಯವನ್ನು ತಂದುಕೊಡಲಿದೆ. ಈ ಬೆಳೆಯನ್ನು ವಾರ್ಷಿಕ 300ರಿಂದ 400 ಟನ್‌ವರೆಗೂ ಬೆಳೆಯಬಹುದು' ಎಂದು ಹೇಳಿದರು.

ಜಿಕೆವಿಕೆ ಆವರಣದಲ್ಲಿ ನೇಪಿಯರ್–ಪಿಬಿಎನ್–342 ತಳಿಯನ್ನು ಬೆಳೆಯಲಾಗಿದೆ

'1 ಟನ್ ಹುಲ್ಲಿನಿಂದ 63 ಕೆ.ಜಿ. ಸಿಎನ್‌ಜಿ'

ಎಸ್.ವಿ. ಸುರೇಶ

'ಸಿಎನ್‌ಜಿ ತಯಾರಿಸಲು ಸಸ್ಯ ಭಾಗಗಳನ್ನು ಆಮ್ಲಜನಕರಹಿತವಾದ ಹುದುಗುವಿಕೆಗೆ ಒಳಪಡಿಸಲಾಗುತ್ತದೆ. ನಂತರ ಇದರಲ್ಲಿ ಉತ್ಪಾದನೆಗೊಂಡ ಅನಿಲ ರೂಪದ ಇಂಧನವನ್ನು ಶುದ್ಧೀಕರಿಸಿ, ಶೇಖರಿಸಲಾಗುತ್ತದೆ. ನಿರ್ದಿಷ್ಟ ಪ್ರಮಾಣದ ಸಿಎನ್‌ಜಿ ತಯಾರಿಸಲು ಈ ಹಿಂದೆ ಬಳಕೆಯಾಗುತ್ತಿದ್ದ ಸಸ್ಯಜನ್ಯ ಉತ್ಪನ್ನಗಳಿಗಿಂತ ಕಡಿಮೆ ಪ್ರಮಾಣದ ನೇಪಿಯರ್ ಹುಲ್ಲು ಆಧಾರಿತ ಕಚ್ಚಾ ಉತ್ಪನ್ನ ಅಗತ್ಯವಿರುತ್ತದೆ. ಒಂದು ಟನ್ ನೇಪಿಯರ್ ಹುಲ್ಲಿನಿಂದ ಸುಮಾರು 150 ಘನ ಮೀಟರ್ (63 ಕೆ.ಜಿ.) ಸಿಎನ್‌ಜಿ ತಯಾರಿಸಬಹುದು' ಎಂದು ಎಸ್.ವಿ. ಸುರೇಶ 'ಪ್ರಜಾವಾಣಿ'ಗೆ ತಿಳಿಸಿದರು.

'ಆಸಕ್ತ ರೈತರು, ಉದ್ಯಮಿಗಳು ಹಾಗೂ ಸಂಘ–ಸಂಸ್ಥೆಗಳು ನೇಪಿಯರ್ ಹುಲ್ಲು ಬೆಳೆಯುವ ತಾಂತ್ರಿಕ ಮಾಹಿತಿಗೆ ಜಿಕೆವಿಕೆ ಆವರಣದಲ್ಲಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಮೇವು ಬೆಳೆ ವಿಭಾಗವನ್ನು ಸಂಪರ್ಕಿಸಬಹುದು' ಎಂದರು.

ಫುಟ್‌ಬಾಲ್: ಬೆಂಗಳೂರು ಯುನೈಟೆಡ್‌ಗೆ ಜಯ

ಬೆಂಗಳೂರು: ನಿಖಿಲ್‌ರಾಜ್ ಮುರುಗೇಶ್‌ಕುಮಾರ್ (49, 63, 80 ಮತ್ತು 88ನೇ ನಿಮಿಷ) ಅವರ ಮಿಂಚಿನ ಆಟದ ನೆರವಿನಿಂದ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 8–0 ಗೋಲುಗಳಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ತಂಡದ ಎದುರು ಭಾರಿ ಜಯ ದಾಖಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ನಿಖಿಲ್‌ರಾಜ್ ನಾಲ್ಕು ಗೋಲು ಗಳಿಸಿ ಪಾರಮ್ಯ ಮೆರೆದರು. ಅವರಿಗೆ ವಿದ್ಯಾನಂದ ಸಿಂಗ್ (45 + 5ನೇ ನಿ.), ಲಿಜೊ ಕೆ. (50ನೇ ನಿ.) ಹಾಗೂ ಮೊಹಮ್ಮದ್ ಅತ್ಲಾಬ್ ಹುಸೇನ್ (51ನೇ ನಿ.) ಬೆಂಬಲ ನೀಡಿದರು. ಎಂಎಫ್‌ಎಆರ್ ತಂಡದ ಲಾಂಖೊಲೆನ್ ಡೌಂಗೆಲ್ (60ನೇ ನಿ.) ಎದುರಾಳಿ ತಂಡಕ್ಕೆ ಉಡುಗೊರೆ ಗೋಲು ನೀಡಿದರು.

ಇನ್ನೊಂದು ಪಂದ್ಯದಲ್ಲಿ ಎಎಸ್‌ಸಿ ಸೆಂಟರ್ ತಂಡವು 3–2ರಿಂದ ಭಾರತ್ ಬೆಂಗಳೂರು ಎಫ್‌ಸಿ ತಂಡವನ್ನು ಸೋಲಿಸಿತು. ದಿನದ ಮತ್ತೊಂದು ಪಂದ್ಯದಲ್ಲಿ ಎಂಇಜಿ & ಸೆಂಟರ್ ಎಫ್‌ಸಿ ಹಾಗೂ ಎಫ್‌ಸಿ ರಿಯಲ್ ಬೆಂಗಳೂರು ತಂಡಗಳು 1–1ರಿಂದ ಸಮಬಲ ಸಾಧಿಸಿದವು.

ಬಾಣಂತಿ ಸಾವಿಗೆ ವೈದ್ಯರ ನಿರ್ಲಕ್ಷ್ಯ ಕಾರಣ: ಸಂಬಂಧಿಕರ ಆರೋಪ

ಆಸ್ಪತ್ರೆ ಮುಂದೆ ಶವ ಇಟ್ಟು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಗಂಡು ಮಗುವಿಗೆ ಜನ್ಮ ನೀಡಿದ್ದ ಭಾಗ್ಯಮ್ಮ
- ಹೆರಿಗೆ ಬಳಿಕ ತೀವ್ರ ರಕ್ತಸ್ರಾವ
- ರಕ್ತದ ಮಾದರಿ ಬಗ್ಗೆ ಗೊಂದಲ

ಗೌರಿಬಿದನೂರು: ಹೆರಿಗೆಗೆ ಬಂದಿದ್ದ ಭಾಗ್ಯಮ್ಮ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿದ ಮೃತ ಮಹಿಳೆ ಸಂಬಂಧಿಕರು ಬುಧವಾರ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮುಂಭಾಗದಲ್ಲಿ ಶವವಿಟ್ಟು ವೈದ್ಯರ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಅಲೀಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸೋಮವಾರ ಹೆರಿಗೆಗೆ ಎಂದು ಬಂದಿದ್ದ ಪುಲಗಾನಹಳ್ಳಿ ಭಾಗ್ಯಮ್ಮ (30) ಚಿಕಿತ್ಸೆ ಪಡೆದು ಅಲ್ಲಿಂದ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಗಂಡು ಮಗುವಿಗೆ ಜನ್ಮ ನೀಡಿದ್ದರು. ಆದರೆ, ರಕ್ತದ ಮಾದರಿ ಗೊಂದಲದಿಂದ ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಭಾಗ್ಯಮ್ಮ ಮೃತಪಟ್ಟಿದ್ದರು.

ಪ್ರತಿಭಟನೆ ಸ್ಥಳಕ್ಕೆ ಭೇಟಿ ನೀಡಿದ ಪ್ರಭಾರ ಜಿಲ್ಲಾ ಆಡಳಿತ ವೈದ್ಯಾಧಿಕಾರಿ ಡಾ.ಸಂತೋಷ್ ಬಾಬು ಮಾತನಾಡಿ, 'ಹೆರಿಗೆ ನೋವಿನಿಂದ ಬಂದ ಭಾಗ್ಯಮ್ಮ ಅವರನ್ನು ಇಲ್ಲಿನ ಆಸ್ಪತ್ರೆ ವೈದ್ಯರು ಚಿಕಿತ್ಸೆ ನೀಡಿ ಗಂಡು ಮಗುವಿಗೆ ಹೆರಿಗೆ ಮಾಡಿಸಿದ್ದಾರೆ. ರಕ್ತಸ್ರಾವ ಜಾಸ್ತಿಯಾದಾಗ ರಕ್ತ ನೀಡಲು ರಕ್ತದ ಮಾದರಿ ಪರೀಕ್ಷೆ ನಡೆಸಿದಾಗ 'ಬಿ-' ಎಂದು ಗೊತ್ತಾಗಿದೆ. ಆದರೆ, ಅಲೀಪುರ ಪ್ರಾಥಮಿಕ ಆರೋಗ್ಯ ಕೇಂದ್ರದವರು 'ಬಿ +' ಎಂದು ನೀಡಿದ್ದರು. ಆಗ ಬಿ-ರಕ್ತ ಲಭ್ಯವಿರದೆ ಇದ್ದುದರಿಂದ 'ಒ'-ರಕ್ತ ನೀಡಿದ್ದಾರೆ. ನಂತರ ಬೆಂಗಳೂರಿನ ಆಸ್ಪತ್ರೆಗೆ ರವಾನಿಸಿದ್ದಾರೆ. ಅವರು ಅಲ್ಲಿ ಮೃತಪಟ್ಟಿದ್ದಾರೆ' ಎಂದರು.

ಗೌರಿಬಿದನೂರು ಬಾಣಂತಿ ಸಾವಿಗೆ ತಾಯಿ ಮತ್ತು ಮಕ್ಕಳ ಆಸ್ಪತ್ರೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ಮೃತ ಭಾಗ್ಯಮ್ಮ ಸಂಬಂಧಿಕರು ಬುಧವಾರ ಆಸ್ಪತ್ರೆ ಮುಂದೆ ಶವ ಇಟ್ಟು ಪ್ರತಿಭಟನೆ ನಡೆಸಿದರು

'ಮೋದಿ ವ್ಯಕ್ತಿತ್ವ ಸ್ಫೂರ್ತಿದಾಯಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ವ್ಯಕ್ತಿತ್ವ, ನಾಯಕತ್ವ, ದೂರದೃಷ್ಟಿ ಕೇವಲ ಭಾರತೀಯರಿಗೆ ಮಾತ್ರವಲ್ಲ ವಿಶ್ವಕ್ಕೇ ಆದರ್ಶ ಮತ್ತು ಪ್ರೇರಣಾದಾಯಕವಾಗಿದೆ ಎಂದು ಬಿಜೆಪಿಯ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಮೋದಿ ಅವರ 75 ನೇ ಜನ್ಮದಿನದ ಅಂಗವಾಗಿ ಡಾಲರ್ಸ್ ಕಾಲೋನಿಯ ಧವಳಗಿರಿ ನಿವಾಸದಲ್ಲಿ 75 ಪೌರ ಕಾರ್ಮಿಕರಿಗೆ ಸನ್ಮಾನಿಸಿ ಮಾತನಾಡಿದ ಅವರು, ಮೋದಿ ಅವರ ಜನ್ಮದಿನವನ್ನು ಸೇವಾ ಕಾರ್ಯಕ್ರಮಗಳ ಮೂಲಕ ಆಚರಿಸಲಾಗುತ್ತಿದೆ. ಇದು ಮೋದಿ ವ್ಯಕ್ತಿತ್ವದ ಪ್ರತಿಬಿಂಬ ಎಂದು ಅವರು ಹೇಳಿದರು.

ತಮ್ಮನ್ನು ಪ್ರಧಾನ ಸೇವಕ ಎಂದು ಕರೆದುಕೊಳ್ಳುವ ಮೋದಿಯವರು ಅಧಿಕಾರ, ಸ್ಥಾನಮಾನ ಎಂದು ಪರಿಗಣಿಸದೇ, ಸೇವೆಯೇ ಸಾಧನ ಎಂದು ತೋರಿಸಿಕೊಟ್ಟಿದ್ದಾರೆ ಎಂದರು.

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಮಾತನಾಡಿ, 'ಮೋದಿಯವರ ನೇತೃತ್ವದಲ್ಲಿ ಭಾರತ ಕೇವಲ 10–12 ವರ್ಷಗಳಲ್ಲಿ ಜಗತ್ತಿನ ಅಗ್ರಮಾನ್ಯ ರಾಷ್ಟ್ರವಾಗಿ ಪರಿವರ್ತನೆಗೊಂಡಿದೆ. ಜಗತ್ತಿನಲ್ಲಿ ಪ್ರತಿಯೊಂದಕ್ಕೂ ಭಾರತವನ್ನು ನೋಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮೋದಿಯವರ ಸಂದೇಶಗಳನ್ನು ನಾವೆಲ್ಲರೂ ಮನೆ ಮನೆಗೆ ತಲುಪಿಸಬೇಕು. ದೇಶ ನಿರ್ಮಾಣದಲ್ಲಿ ನಾವೆಲ್ಲರೂ ಒಟ್ಟಿಗೆ ಇರಬೇಕು' ಎಂದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್ ಮತ್ತು ಇತರರು ಇದ್ದರು.

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ 75 ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ಬಿ.ಎಸ್.ಯಡಿಯೂರಪ್ಪ, ಡಿ.ವಿ. ಸದಾನಂದಗೌಡ ಪೌರಕಾರ್ಮಿಕರಿಗೆ ಉಡುಗೊರೆ ವಿತರಿಸಿದರು.

ನಗರದ ಹಲವೆಡೆ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬುಧವಾರ ಸಂಜೆಯಿಂದ ತಡರಾತ್ರಿವರೆಗೂ ಹಲವು ಪ್ರದೇಶಗಳಲ್ಲಿ ಭಾರಿ ಮಳೆ ಸುರಿಯಿತು.

ನಗರದಲ್ಲಿ ಕೆಲವು ದಿನಗಳಿಂದ ಮಳೆ ಬಿಡುವು ನೀಡಿದ್ದರಿಂದ ಉಷ್ಣಾಂಶ ಹೆಚ್ಚಾಗಿತ್ತು. ಬುಧವಾರ ಬೆಳಿಗ್ಗೆಯಿಂದ ಮೋಡದ ವಾತಾವರಣವಿತ್ತು. ಸಂಜೆ ನಂತರ ಗುಡುಗು, ಬಿರುಗಾಳಿ ಸಹಿತ ಮಳೆಯಾಯಿತು.

ಹುಣಸಮಾರನಹಳ್ಳಿಯಲ್ಲಿ ಮಳೆ ನೀರು ನಿಂತಿದ್ದರಿಂದ ವಿಮಾನ ನಿಲ್ದಾಣ ರಸ್ತೆ ಕಡೆಗೆ ನಿಧಾನಗತಿಯ ಸಂಚಾರವಿತ್ತು. ಮೈಸೂರು ರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ವಿಠ್ಠಲ ಮಲ್ಯ ರಸ್ತೆ, ಜೆಸಿ ರಸ್ತೆ, ಬಳ್ಳಾರಿ ರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರು ಪರದಾಡಿದರು.

ಹೆಚ್ಚು ಮಳೆ: ನಾಗಪುರ, ಬಸವೇಶ್ವರ ನಗರದಲ್ಲಿ ತಲಾ 3.5 ಸೆಂ.ಮೀ, ವಿದ್ಯಾಪೀಠದಲ್ಲಿ ತಲಾ 3 ಸೆಂ.ಮೀ, ರಾಜಾಜಿನಗರ, ಪಟ್ಟಾಭಿರಾಮನಗರ, ಹಂಪಿನಗರ, ಜಕ್ಕೂರು, ರಾಜಮಹಲ್ ಗುಟ್ಟಹಳ್ಳಿಯಲ್ಲಿ ತಲಾ 2.5 ಸೆಂ.ಮೀ, ಕೋರಮಂಗಲ, ರಾಜರಾಜೇಶ್ವರಿ ನಗರ, ದಯಾನಂದ ನಗರ, ಪೀಣ್ಯ ಕೈಗಾರಿಕೆ ಪ್ರದೇಶ, ಚೌಡೇಶ್ವರಿ, ಯಲಹಂಕ, ನಂದಿನಿ ಲೇಔಟ್, ಹೆಮ್ಮಿಗೆಪುರದಲ್ಲಿ ತಲಾ 2 ಸೆಂ.ಮೀ. ಮಳೆಯಾಯಿತು.

208 ವಾಹನಕ್ಕೆ ದಂಡ

ಬೆಂಗಳೂರು: ಯಲಹಂಕ ಮತ್ತು ದೇವನಹಳ್ಳಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿ ವ್ಯಾಪ್ತಿಯಲ್ಲಿ ಸಾರಿಗೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಖಾಸಗಿ ವಾಹನಗಳನ್ನು ವಾಣಿಜ್ಯ ಬಳಕೆ ಮಾಡುತ್ತಿದ್ದ, ರಸ್ತೆ ಸಾರಿಗೆ ನಿಯಮ ಉಲ್ಲಂಘಿಸಿದ್ದ 208 ವಾಹನಗಳನ್ನು ಪತ್ತೆಹಚ್ಚಿದ್ದಾರೆ. 21 ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಉಳಿದ ವಾಹನಗಳಿಗೆ ದಂಡ ವಿಧಿಸಿದ್ದಾರೆ.

ಜಂಟಿ ಸರಿಗೆ ಆಯುಕ್ತರ ನೇತೃತ್ವದಲ್ಲಿ 11 ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಈ ತಂಡವು 650ಕ್ಕೂ ಅಧಿಕ ವಾಹನಗಳನ್ನು ತಪಾಸಣೆ ನಡೆಸಿತ್ತು.

ಎಂಜಿನಿಯರ್‌ಗಳ ದಿನ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್.ಎಂ ವಿಶ್ವೇಶ್ವರಯ್ಯ ಅವರ ಜನ್ಮದಿನವಾದ ಸೋಮವಾರ 2025-26ನೇ ಸಾಲಿನ ಶೈಕ್ಷಣಿಕ ತರಗತಿಗಳನ್ನು ಉದ್ಘಾಟಿಸುವ ಮೂಲಕ ನಗರದ ಸಿಎಂಆರ್ ವಿಶ್ವವಿದ್ಯಾಲಯವು ಎಂಜಿನಿಯರ್‌ಗಳ ದಿನ ಆಚರಿಸಿತು.

ಬಾಗಲೂರಿನ ಕ್ಯಾಂಪಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ಕೂಲ್ ಆಫ್ ಇಂಜಿನಿಯರಿಂಗ್ ಮತ್ತು ಸ್ಕೂಲ್ ಆಫ್ ಆರ್ಕಿಟೆಕ್ಚರ್ ವಿಭಾಗಗಳಿಗೆ ಪ್ರವೇಶಾತಿ ಪಡೆದ 750ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಶೈಕ್ಷಣಿಕ ವರ್ಷಕ್ಕೆ ಬರಮಾಡಿಕೊಳ್ಳಲಾಯಿತು.

ಸಿಎಂಆರ್ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಗುಣಾತ್ಮಕ ಮತ್ತು ಸೃಜನಾತ್ಮಕ ಕಲಿಕೆಗೆ ಪೂರಕವಾದ ಪರಿಸರವನ್ನು ಹೊಂದಿದೆ. ಅತ್ಯಾಧುನಿಕ ಕಲಿಕಾ ಸೌಲಭ್ಯ, ಅನುಭವಿ ಅಧ್ಯಾಪಕರು, ಸ್ಪರ್ಧಾತ್ಮಕ ಮನೋಭಾವದ ವಿದ್ಯಾರ್ಥಿಗಳ ಸಮುದಾಯವನ್ನು ಹೊಂದಿದ್ದು ದೇಶಕ್ಕೆ ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ನೀಡಲು ಬದ್ಧವಾಗಿದೆ ಎಂದು ಸಿಎಂಆರ್ ವಿ.ವಿ ಕುಲಪತಿ ಡಾ.ಎಚ್. ಬಿ.ರಾಘವೇಂದ್ರ ತಿಳಿಸಿದರು.

ಧನ್ವಂತರಿ ಡ್ರೋನ್ ಪೈಲಟ್ ಅಕಾಡೆಮಿ ಸ್ಥಾಪಕ ನಿರ್ದೇಶಕ ಡಾ.ಎ.ಟಿ. ಕಿಶೋರ್ ಮಾತನಾಡಿ, ಅತ್ಯಾಧುನಿಕ ಕೃಷಿಯಲ್ಲಿ ಬಳಕೆಯಾಗುತ್ತಿರುವ ಡ್ರೋನ್‌ಗಳು ಮತ್ತು ರೊಬೊಟಿಕ್ಸ್‌ಗಳಿಗೆ ಹೆಚ್ಚುತ್ತಿರುವ ಬೇಡಿಕೆ ಮತ್ತು ಅದರ ಕಾರ್ಯನಿರ್ವಹಣೆಯ ಮಹತ್ವದ ಬಗ್ಗೆ ತಿಳಿಸಿಕೊಟ್ಟರು.

ಸೆಮಿಕಾನ್ ಡಿಸೈನ್ ಸಂಸ್ಥಾಪಕ ಮತ್ತು ಸಿಇಒ ಜಾರ್ಜ್ ಜಾಕೋಬ್, ಡೀಪ್ ಟೆಕ್ ಮತ್ತು ಎಂಜಿನಿಯರಿಂಗ್ ಎಕ್ಸಲೆನ್ಸ್; ಡ್ರೈವಿಂಗ್ ಇಂಡಿಯಾಸ್ ಟೆಕ್ ಏಡ್ ಎಂಬ ವಿಷಯ ಕುರಿತು ಮಾತನಾಡಿದರು.

ಸಹ ಕುಲಪತಿ ಡಾ.ಆರ್.ಪ್ರವೀಣ್, ಕುಲಸಚಿವ ಡಾ.ಎಂ.ಧನಂಜಯ ಹಾಜರಿದ್ದರು.

ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ನಡೆದ ಎಂಜಿನಿಯರ್‌ಗಳ ದಿನದಲ್ಲಿ ಧನ್ವಂತರಿ ಡ್ರೋನ್ ಪೈಲಟ್ ಅಕಾಡೆಮಿ ಸ್ಥಾಪಕ ನಿರ್ದೇಶಕ ಡಾ.ಎ.ಟಿ.ಕಿಶೋರ್, ಸೆಮಿಕಾನ್ ಡಿಸೈನ್ ಸಂಸ್ಥಾಪಕ ಜಾರ್ಜ್ ಜಾಕೋಬ್ ಅವರನ್ನು ಸನ್ಮಾನಿಸಲಾಯಿತು.

'ಖ್ಯಾತಿ ಮೇಲೆ ನಿಲ್ಲದಿರಿ ಎಂದಿದ್ದ ಸರ್‌ಎಂವಿ'

ಬೆಂಗಳೂರು: 'ಮನುಷ್ಯರು ತಮ್ಮ ಕಾಲ ಮೇಲೆ ನಿಲ್ಲಬೇಕೇ ಹೊರತು ಖ್ಯಾತಿಯ ಮೇಲಲ್ಲ ಎಂದು ಸರ್ ಎಂ. ವಿಶ್ವೇಶ್ವರಯ್ಯ ಎಚ್ಚರಿಸಿದ್ದರು' ಎಂದು ಬರಹಗಾರ ಟಿ.ವಿ. ವೆಂಕಟಚಲಾಶಾಸ್ತ್ರೀ ತಿಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತು ಬುಧವಾರ ಹಮ್ಮಿಕೊಂಡಿದ್ದ ಸರ್. ಎಂ. ವಿಶ್ವೇಶ್ವರಯ್ಯ ಜನ್ಮದಿನಾಚರಣೆ ಮತ್ತು ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ವಿಶ್ವೇಶ್ವರಯ್ಯ ಅವರು ದೂರದೃಷ್ಟಿ ಇಟ್ಟುಕೊಂಡು ರೂಪಿಸಿದ ಯೋಜನೆಗಳ ಫಲವನ್ನು ನಾವು ಉಣ್ಣುತ್ತಿದ್ದೇವೆ' ಎಂದು ಅವರು ಬಣ್ಣಿಸಿದರು.

ವಿದ್ವಾಂಸ ಬಿ.ಎಸ್. ಪ್ರಣತಾರ್ತಿಹರನ್ ಅವರಿಗೆ ಟಿ.ವಿ. ವೆಂಕಟಾಚಲ ಶಾಸ್ತ್ರೀ ವಿದ್ವತ್ ದತ್ತಿ ಪ್ರಶಸ್ತಿ, ಎಲ್.ಗಿರಿಜಾ ರಾವ್ ಅವರಿಗೆ ಮನೋಹರಿ ಪಾರ್ಥಸಾರಥಿ 'ಮನುಶ್ರೀ' ದತ್ತಿ ಪುರಸ್ಕಾರ, ಸಂಪಟೂರು ವಿಶ್ವನಾಥ್ ಮತ್ತು ಶ್ರೀವತ್ಸ ಎಸ್. ವಟಿ ಅವರಿಗೆ ದಿ.ಟಿ. ಶ್ರೀನಿವಾಸ ಸ್ಮರಣಾರ್ಥ ಪಿ.ಕೆ. ನಾರಾಯಣ ಸಾಹಿತ್ಯ ದತ್ತಿ ಪುರಸ್ಕಾರ, ವೇದಾ ಸಿ.ಬಿರಾದಾರ್ ಅವರಿಗೆ ರಾಜಸಭಾ ಭೂಷಣ ಕರ್ಪೂರ ಶ್ರೀನಿವಾಸರಾವ್ ದತ್ತಿ ಪುರಸ್ಕಾರ, ನೇತ್ರಾವತಿ ಜಿ. ಅವರಿಗೆ ಕರ್ಪೂರ ರಾಮರಾವ್ ಜನ್ಮ ಶತಾಬ್ದಿ ದತ್ತಿ ಪುರಸ್ಕಾರ ನೀಡಿ ಗೌರವಿಸಲಾಯಿತು.

ಆಯುಕ್ತರ ಕಛೇರಿ ಮಹಾನಗರ ಪಾಲಿಕೆ, ಬಳ್ಳಾರಿ

ದೂರವಾಣಿ ಸಂಖ್ಯೆ: 08392-273479 /278168
ಫ್ಯಾಕ್ಸ್: 08392-273477
ವೆಬ್ಸೈಟ್: www.ballaricity.mrc.gov.in
ಇ-ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ -583101

ಸಂ: ಮನಪಾಬ/ಆಶಾ/ಟೆಂಡರ್ ಪ್ರಕಟಣೆ/15ನೇಹಣಕಾಸು/2025-26 ದಿನಾಂಕ: 16.09.2025

ಟೆಂಡರ್ ಪ್ರಕಟಣೆ

ಬಳ್ಳಾರಿ ಮಹಾನಗರಪಾಲಿಕೆಯ 15ನೇ ಹಣಕಾಸು ಅನುದಾನದಡಿಯಲ್ಲಿ ಕಾಮಗಾರಿಯಾದ Purchase of Mini Excavator to Ballari City Corporation (ಟೆಂಡರ್ ಇಂಡೆಂಟ್ ಸಂಖ್ಯೆ: DMA/2025-26/IND5382) ಸದರಿ ಟೆಂಡರ್ ಗಳನ್ನು ಸಲ್ಲಿಸಲು ಅಂತಿಮ ದಿನಾಂಕ: 03.10.2025 ರ ಸಂಜೆ 05:00PM ಗಂಟೆರೊಳಗಾಗಿ ಸಲ್ಲಿಸಬಹುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.10.2025 ರ ಸಂಜೆ 05:30PM ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 06.10.2025ರ ಸಂಜೆ 05:30PM ಇರುತ್ತದೆ. ಹೆಚ್ಚಿನ ವಿವರಗಳಿಗಾಗಿ ವೆಬ್ ಸೈಟ್: http://kppp.karnataka.gov.in ಅನ್ನು ಗಮನಿಸಲು ಹಾಗೂ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ: 08392-273479 ಗೆ ಕರೆಮಾಡಿ ಅಥವಾ ಇ-ಮೇಲ್ ವಿಳಾಸ ka.ballari.cc@gmail.com ಮೂಲಕ ಪಡೆಯಬಹುದು.

ಸಹಿ/-
ಕಾರ್ಯಪಾಲಕ ಅಭಿಯಂತರರು
ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ದೂರವಾಣಿ ಸಂ: 08352-259855, ಇ-ಮೇಲ್: ka.vijayapura.dudc@gmail.com
ವೆಬ್‌ಸೈಟ್: www.vijayapuradudc.mrc.gov.in

ಕ್ರ.ಸಂ:ಜಿನಕೊ-5/ಅ.ನ.ಹಂ-4/ಟೆಂಡರ್/ಸಿಆರ್-01/2025-26 ದಿನಾಂಕ:12.09.2025

ಟೆಂಡರ್ ಅಧಿಸೂಚನೆ

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಹಂತ-4 ಯೋಜನೆಯಡಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯಾದ ಅನುದಾನದಲ್ಲಿ ಮಂಜೂರಾದ ಕಾಮಗಾರಿಗಳಿಗೆ KW-1 ರಿಂದ 4 ಡಾಕ್ಯುಮೆಂಟ್ ಉಪಯೋಗಿಸಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದೆ. ವಿವರ

1) ಸಿಂದಗಿ ಪುರಸಭೆ ಇಂಡೆಂಟ್ ಸಂಖ್ಯೆ: DMA/2025-26/BD/WORK_INDENT49147

ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು ಇ-ಪ್ರೋಕರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬಸೈಟ್ www.kppp.karnataka.gov.in ಮೂಲಕ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಕೆಲಸದ ಕುರಿತು ಯಾವುದೇ ವಿವರಗಳನ್ನು ಕಛೇರಿಯ ವೇಳೆಯಲ್ಲಿ ಕಾ.ಅ/ಸ.ಕಾ.ಅ ಇವರನ್ನು ಸಂಪರ್ಕಿಸಬಹುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25-09-2025 ರಂದು 17.00 ಘಂಟೆಯವರೆಗೆ.
2) ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್) ದಿನಾಂಕ: 26-09-2025 ರಂದು 17.15 ಘಂಟೆಗೆ.
3) ಟೆಂಡರ್ ತೆರೆಯುವ ದಿನಾಂಕ (ಆರ್ಥಿಕ ಬಿಡ್) ದಿನಾಂಕ: 29-09-2025 ರಂದು 11.00 ಘಂಟೆ ನಂತರ

ಅವಧಿ ವಿಸ್ತರಣೆ ಮತ್ತು ತಿದ್ದುಪಡಿ ಇದ್ದಲ್ಲಿ ಇ-ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ- ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ವಾಸಾಸಂಇ/ವಿಜಯಪುರ/337/ಕೆಎಸ್ಎಂಸಿಎ/2025-26

ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ,
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್-4/3240/2025-26 ದಿನಾಂಕ : 11-09-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಅರ್ಹ ಗುತ್ತಿಗ್ತೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿಪಿ)ರ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಇದಕ್ಕಾಗಿ ಗುತ್ತಿಗೆದಾರರು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಅಥವಾ ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹೀರಾತು ಹೊರಡಿಸಲಾಗುವುದಿಲ್ಲ.

ಕ್ರ ಸಂ	ಕಾಮಗಾರಿಯ ವಿವರ	ಕಾಮಗಾರಿ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
	5054-(ಯೋಜನೆ)-ರಾಜ್ಯ ಹೆದ್ದಾರಿಗಳಲ್ಲಿ ಸೇತುವೆಗಳ ಸುಧಾರಣೆ :	
1)	PWD/2025-26/BR/WORK_INDENT21564	300.00

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)	ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ	22-09-2025 ರಂದು 12.00 ಗಂಟೆಯ ವರೆಗೆ.
ಆ)	ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	25-09-2025 ರಂದು 16.00 ಗಂಟೆಯ ವರೆಗೆ.
ಇ)	ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.	26-09-2025 ರಂದು ಸಮಯ: 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು.

ಸಹಿ/-
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿ ಸಮುದಾಯದ ನಿರ್ಮಾಣದತ್ತ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು - 560009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/2025-26 ದಿನಾಂಕ: 12-09-2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಈ ಕೆಳಕಂಡ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಹಂಚಿಕೆ ನಂತರ ಖಾಲಿ ಉಳಿದಿರುವ ಹಾಗೂ ಬಿಡಿ (Stray) ನಿವೇಶನಗಳನ್ನು ವಿಲೇವಾರಿ ಮಾಡಲು ಆನ್‌ಲೈನ್ ಮುಖಾಂತರ ಸಾರ್ವಜನಿಕರಿಂದ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯೊಂದಿಗೆ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ನೋಂದಣಿ ಶುಲ್ಕ ಹಾಗೂ ಅರಂಭಿಕ ಠೇವಣಿ ಹಣವನ್ನು ಪಾವತಿ ಮಾಡಿ ದಿನಾಂಕ: 19.09.2025 ರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27.10.2025 ಆಗಿರುತ್ತದೆ.

ನಿವೇಶನಗಳಿಗೆ ಪಾವತಿಸಬೇಕಾಗಿರುವ ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಮೊತ್ತ
ರೂ. EWS-5,300/-, LIG-10,500/-, MIG-41,000/-, HIG-I - 51,500/- & HIG-II - 66,500/-

ಕ್ರ. ಸಂ	ಬಡಾವಣೆ	ವರ್ಗವಾರು ಲಭ್ಯವಿರುವ ಅಂದಾಜು ಸ್ವತ್ತುಗಳು						ಮಂಡಳಿಯ ದರ (ಪ್ರತಿ ಚದರ ಅಡಿಗೆ ರೂ.ಗಳಲ್ಲಿ)
		EWS	LIG	MIG	HIG-I	HIG-II	ಒಟ್ಟು	
1	ಮುದ್ದೇಬಿಹಾಳ 2ನೇ ಹಂತ, ವಿಜಯಪುರ ಜಿಲ್ಲೆ	01	42	70	37	-	152	600/- (EWS Rs.300/-)
2	ಮಹಲ್‌ಬಗಾಯತ್, ವಿಜಯಪುರ ಜಿಲ್ಲೆ	-	35	15	11	07	68	900/-
3	ಕಸಬಾ 2ನೇ ಹಂತ, ವಿಜಯಪುರ ಜಿಲ್ಲೆ	03	84	75	06	08	176	800/- (EWS Rs.400/-)
4	ಬಬಲೇಶ್ವರ, ವಿಜಯಪುರ ಜಿಲ್ಲೆ	04	20	14	10	-	48	475/- (EWS Rs.250/-)
5	ಹನೂರು, ಚಾಮರಾಜನಗರ ಜಿಲ್ಲೆ	64	251	256	78	-	649	780/- (EWS Rs.390/-)
6	ಗದಗ ಕಳಸಾಪುರ 1ನೇ ಹಂತ, ಗದಗ ಜಿಲ್ಲೆ	23	-	07	-	-	30	380/- (EWS Rs.190)
7	ಗದಗ ಕಳಸಾಪುರ 2ನೇ ಹಂತ, ಗದಗ ಜಿಲ್ಲೆ	02	150	48	06	-	206	380/- (EWS Rs.190)
8	ಚಿಕ್ಕಬಾದವಾಡಗಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.	15	26	46	32	02	121	600/- (EWS Rs.300/-)

ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಕ್ರ.ಸಂ	ಜಿಲ್ಲಾ ಯೋಜನಾ ಕಛೇರಿ	ಹೆಸರು & ಹುದ್ದೆ	ಮೊಬೈಲ್ ನಂ.
1	ವಿಜಯಪುರ	ಶ್ರೀ ಮೊಹಮದ್ ಸಾದಿಕ್ ಜೆ. ಗಟ್ವಾಲೆ, ಸ.ಕಾ.ಅ.	8050147939
2	ಚಾಮರಾಜನಗರ	ಶ್ರೀ ಮಹೇಶ್. ಎಂ.ಎಸ್. ಸ.ಕಾ.ಅ.	9448425643
3	ಗದಗ	ಶ್ರೀ ಸುರೇಶ್ ಪಟ್ಟಣ್, ಸ.ಕಂ.ಅ.	9480552203
4	ಬಾಗಲಕೋಟೆ	ಶ್ರೀ ಮಂಜುನಾಥ ಹರಿಪಲ್ಲೆದ್, ಸ.ಕಾ.ಅ.	9980256660
5	ಕೇಂದ್ರ ಕಛೇರಿ	ಶ್ರೀ ಜೀವಣ್ಣ ಎಂ.ಎನ್. ಕಂದಾಯ ಅಧಿಕಾರಿ	9481688845

ಸಹಿ/-
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/2859/Zen/2024-25

‘ಸುತ್ತಿದ್ದು ನಾನು, ಹೆಸರು ಇನ್ಯಾರಿಗೋ’

ಕಾಗಿನೆಲೆ ಗುರುಪೀಠ ಸ್ಥಾಪನೆ ವಿಚಾರ ಮುಖ್ಯಮಂತ್ರಿ ಅಸಮಾಧಾನ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಕಾಗಿನೆಲೆ ಗುರುಪೀಠ ಮಾಡಿದ್ದು ನಾವು. ಇಡೀ ರಾಜ್ಯ ಸುತ್ತಿದವನು ನಾನು. ಇನ್ಯಾರೋ ಹೆಸರು ತೆಗೆದುಕೊಳ್ಳಲು ಹೊರಟಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ಪ್ರದೇಶ ಕುರುಬಗೊಂಡ ಸಂಘದ ಜಿಲ್ಲಾ ಘಟಕ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಸಂಘದಿಂದ ಬುಧವಾರ ಆಯೋಜಿಸಿದ್ದ ಬೃಹತ್ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್‌ಗಳ ಮೂಲಕ ಹಿಂದುಳಿದವರಿಗೆ ಶಿಕ್ಷಣ ಕೊಡಿಸಲು 1992ರಲ್ಲಿ ಮಠ ಸ್ಥಾಪಿಸಲಾಯಿತು. ಈಗ ಬೇರೆಯವರು ಅದರ ಶ್ರೇಯ ಪಡೆಯಲು ಹೊರಟಿದ್ದಾರೆ. ಅದರ ಬಗ್ಗೆ ನಾನು ಹೆಚ್ಚು ಮಾತನಾಡಲ್ಲ. ನಿಮಗೇ ಬಿಟ್ಟಿರುತ್ತೇನೆ. ನೀವೇ ತೀರ್ಮಾನಿಸಿ’ ಎಂದು ನೆರೆದಿದ್ದ ಹಾಲುಮತದ ಸಾವಿರಾರು ಜನರನ್ನು ಉದ್ದೇಶಿಸಿ ಹೇಳಿದರು.

‘ಸಮಾಜದಲ್ಲಿರುವ ಇಂಥ ಪಟ್ಟಭದ್ರರು, ಢೋಂಗಿ ಜನರಿಗೆ ನೀವೆಲ್ಲ ತಕ್ಕ ಪಾಠ ಕಲಿಸುವ ಕೆಲಸ ಮಾಡಲೇಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥರ ಹೆಸರು ಪ್ರಸ್ತಾಪಿಸದೇ ಸಿಎಂ ಒತ್ತಾಯಿಸಿದರು.

> ಜನರ ಪರವಾಗಿ ಕೆಲಸ ಮಾಡುವ ಸಿದ್ದರಾಮಯ್ಯ ಸಾಹೇಬ್ರ ಮೇಲೆ ನಿಮ್ಮೆಲ್ಲರ ಪ್ರೀತಿ, ಬೆಂಬಲ ಇರೋ ತನಕ ಅವರನ್ನು ಯಾವುದೇ ಕಾರಣಕ್ಕೂ ಅಲ್ಲಾಡಿಸಲು ಆಗಲ್ಲ
> **ಬೈರತಿ ಸುರೇಶ**, ಸಚಿವ

‘ಅಂತಿಮ ನಿರ್ಧಾರ ಕೇಂದ್ರದ್ದು’

ಕುರುಬ ಸಮುದಾಯವನ್ನು ಎಸ್ಟಿ ಪಟ್ಟಿಗೆ ಸೇರಿಸಲು ವಾಲ್ಮೀಕಿ ಸಮುದಾಯದ ಸ್ವಾಮೀಜಿಗಳು ವಿರೋಧ ವ್ಯಕ್ತಪಡಿಸುತ್ತಿರುವ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಯಾವುದೇ ಸಮುದಾಯವನ್ನು ಎಸ್ಟಿಗೆ ಸೇರಿಸುವ ಅಂತಿಮ ತೀರ್ಮಾನವನ್ನು ಕೇಂದ್ರ ಸರ್ಕಾರ ಕೈಗೊಳ್ಳುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರ ಕೇವಲ ಶಿಫಾರಸು ಮಾಡಬಹುದಾಗಿರುತ್ತದೆ. ಈ ಬಗ್ಗೆ ಯಾರೂ ವಿರೋಧ ವ್ಯಕ್ತಪಡಿಸುವ ಅಗತ್ಯವಿಲ್ಲ’ ಎಂದರು.

‘ನಾನು ರಾಜಕೀಯ ಮಾಡುತ್ತಿರುವುದೇ ಸಾಮಾಜಿಕ ನ್ಯಾಯಕ್ಕಾಗಿ. ನಾನು ಮುಖ್ಯಮಂತ್ರಿ ಆಗಿರಲಿ, ಅಧಿಕಾರದಲ್ಲಿರಲಿ, ಇಲ್ಲದಿರಲಿ ಯಾವಾಗಲೂ ಸಾಮಾಜಿಕ ನ್ಯಾಯದಿಂದ ವಂಚಿತರಾದ ಜನರೊಂದಿಗೆ ಇರುತ್ತೇನೆ. ಅವರಿಗೆ ನ್ಯಾಯ ಕೊಡಿಸಲು ಪ್ರಯತ್ನಿಸುತ್ತೇನೆ’ ಎಂದು ಹೇಳಿದರು.

ಇದಕ್ಕೂ ಮುನ್ನ 13 ಅಡಿ ಎತ್ತರದ ಸಂಗೊಳ್ಳಿ ರಾಯಣ್ಣನ ಮೂರ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಿದರು.

ಕರ್ನಾಟಕ ಪ್ರದೇಶ ಕುರುಬಗೊಂಡ ಸಂಘದ ಜಿಲ್ಲಾ ಘಟಕ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಸಂಘದಿಂದ ಕಲಬುರಗಿಯಲ್ಲಿ ಬುಧವಾರ ಆಯೋಜಿಸಿದ್ದ ಬೃಹತ್ ಅಭಿನಂದನಾ ಸಮಾರಂಭದಲ್ಲಿ ಸೇರಿದ ಜನ ಪ್ರಜಾವಾಣಿ ಚಿತ್ರ

‘ಸಮೀಕ್ಷೆಯಲ್ಲಿ ಕುರುಬ ಅಂತಲೇ ಬರೆಸಿ’

‘ಸೆ.22ರಿಂದ ನಡೆಯಲಿರುವ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ ಬರೀ ಕುರುಬರು, ಎಸ್‌ಸಿ-ಎಸ್‌ಟಿಗಳಿಗೆ ಅಲ್ಲ. ಅದನ್ನು ರಾಜ್ಯದ ಎಲ್ಲ ಏಳು ಕೋಟಿ ಜನರ ಸ್ಥಿತಿಗತಿ ಅರಿಯಲು ನಡೆಸಲಾಗುತ್ತಿದೆ. ನೀವೆಲ್ಲರೂ ಸಮೀಕ್ಷೆಯಲ್ಲಿ ಜಾತಿ ಕಾಲಂನಲ್ಲಿ ಕುರುಬ ಎಂದೇ ಬರೆಸಬೇಕು. ಹಾಗೆ ಬರೆಸದಿದ್ದರೆ ನಿಮ್ಮ ಸಂಖ್ಯೆ ಕಡಿಮೆಯಾಗಿ, ಸಿಗಬೇಕಾದ ಸವಲತ್ತು ಸಿಗುವುದು ಕಷ್ಟವಾಗುತ್ತದೆ ಎಂಬುದನ್ನು ಅರ್ಥ-ಮಾಡಿಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಹೇಳಿದರು.

ಎಸ್‌ಟಿ ಸೇರ್ಪಡೆಗೆ ಮತ್ತೆ ಶಿಫಾರಸು: ‘ಬೀದರ್, ಕಲಬುರಗಿ, ಯಾದಗಿರಿ ಜಿಲ್ಲೆಯಲ್ಲಿರುವ ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಹಿಂದೆಯೇ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಆದರೆ, ಕೇಂದ್ರ ಸರ್ಕಾರ ವಿವರಣೆ ಕೇಳಿ ಶಿಫಾರಸು ವಾಪಸ್ ಕಳುಹಿಸಿತ್ತು. ಕೇಂದ್ರ ಕೇಳಿರುವ ಪ್ರಶ್ನೆಗೆ ಸ್ಪಷ್ಟನೆಗಳೊಂದಿಗೆ ಈ ಭಾಗದ ಕುರುಬರನ್ನು ಎಸ್‌ಟಿಗೆ ಸೇರಿಸಲು ಮತ್ತೆ ಶಿಫಾರಸು ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ಮಾಜಿ ಸಿ.ಎಂ ಸದಾನಂದಗೌಡಗೆ ₹3 ಲಕ್ಷ ವಂಚನೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಅವರ ಮೂರು ಬ್ಯಾಂಕ್ ಖಾತೆಗಳಿಂದ ಸೈಬರ್ ವಂಚಕರು ₹3 ಲಕ್ಷ ದೋಚಿದ್ದಾರೆ.

ಸೈಬರ್ ವಂಚಕರು ಹಣ ದೋಚಿರುವ ಸಂಗತಿಯನ್ನು ಸದಾನಂದಗೌಡ ಅವರೂ ದೃಢಪಡಿಸಿದ್ದು, ಸೈಬರ್ ಅಪರಾಧ ಪೊಲೀಸ್ ಠಾಣೆಗೆ ದೂರು ನೀಡುವುದಾಗಿ ತಿಳಿಸಿದ್ದಾರೆ.

ನಟ,ನಿರ್ದೇಶಕ ಉಪೇಂದ್ರ ಹಾಗೂ ಅವರ ಪತ್ನಿ ಪ್ರಿಯಾಂಕಾ ಉಪೇಂದ್ರ ಅವರ ಮೊಬೈಲ್ ಅನ್ನು ಇತ್ತೀಚೆಗೆ ವಂಚಕರು ಹ್ಯಾಕ್ ಮಾಡಿ ₹ 1.50 ಲಕ್ಷವನ್ನು ವಂಚಿಸಿದ್ದರು. ಉಪೇಂದ್ರ ಅವರು ಕೇಂದ್ರ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಬಿಎಸ್‌ವೈ: ಪೋಕ್ಸೊ ವಿಚಾರಣೆಗೆ ಅರ್ಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಲಕಿಯೊಬ್ಬಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣ ಮೇಲ್ನೋಟಕ್ಕೆ ವಿಚಾರಣೆಗೆ ಅರ್ಹವಾಗಿದೆ’ ಎಂದು ಹೈಕೋರ್ಟ್ ಮೌಖಿಕ ಅಭಿಪ್ರಾಯ ವ್ಯಕ್ತ-ಪಡಿಸಿದೆ.

‘ನನ್ನ ವಿರುದ್ಧ ವಿಚಾರಣಾ ನ್ಯಾಯಾಲಯ ಪ್ರಕರಣವನ್ನು ಪರಿಗ-ಣಿಸಿರುವುದನ್ನು ರದ್ದುಗೊಳಿಸಬೇಕು’ ಎಂದು ಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ಐ.ಅರುಣ್ ಬುಧವಾರ ವಿಚಾರಣೆ ನಡೆಸಿದರು. ಯಡಿಯೂರಪ್ಪ ಪರ ಹೈಕೋರ್ಟ್ ವಕೀಲ ಸಂದೀಪ್ ಪಾಟೀಲ್ ಅವರ ವಾದ ಆಲಿಸಿದ ನ್ಯಾಯಪೀಠ, ‘ಪ್ರಾಯೋಗಿಕವಾಗಿ ಮಾತನಾಡುವುದರಾದರೆ ನಿಮ್ಮ ಆತಂಕಗಳೇನು, ನಿಮಗೆ ಕಿರುಕುಳ ಎಲ್ಲಿ ನೀಡಬಹುದು ಎಂಬುದನ್ನು ಮಾತ್ರವೇ ಗಮನಿಸಿ ಒಂದು ತೀರ್ಮಾನಕ್ಕೆ ಬರಬಹುದು. ಆದರೆ, ನೀವು ಹೀಗೆಯೇ ವಾದ ಮಂಡನೆ ಮಾಡುತ್ತಿದ್ದರೆ ಹೇಗೆ’ ಎಂದು ಪ್ರಶ್ನಿಸಿತು.

‘ಯಡಿಯೂರಪ್ಪಗೆ ಇಷ್ಟು ವಯಸ್ಸಾಗಿದೆ. ಅನಗತ್ಯವಾಗಿ ಸಮನ್ಸ್ ಮಾಡಬಾರದು ಎಂದು ಕೇಳಿದರೆ ಏನಾದರೂ ಮಾಡಬಹುದು. ಆದರೆ, ಇದು ಮೇಲ್ನೋಟಕ್ಕೆ ವಿಚಾರಣೆಗೆ ಅರ್ಹವಾದ ಪ್ರಕರಣ. ನಿಮ್ಮ ವಾದ ಆಲಿಸಲಾಗದು. ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012) ಪ್ರಕರಣದಲ್ಲಿ ಸಂತ್ರಸ್ತೆಯ ಹೇಳಿಕೆಯೊಂದೇ ಆರೋಪಿಗೆ ಶಿಕ್ಷೆ ವಿಧಿಸಲು ಕೆಲವೊಮ್ಮೆ ಸಾಕಾಗುತ್ತದೆ. ಸಂತ್ರಸ್ತೆಯ ಹೇಳಿಕೆಯನ್ನು ಪರಿಶೀಲನೆಗೆ ಒಳಪಡಿಸಬೇಕಿದೆ’ ಎಂದು ಮೌಖಿಕವಾಗಿ ನುಡಿಯಿತು.

‘ಬಾಲಕಿಯ ತಾಯಿಗೆ (ಈಗ ಬದುಕಿಲ್ಲ) ದೂರು ನೀಡುವುದೇ ಹವ್ಯಾಸವಾಗಿತ್ತು, ಸಂತ್ರಸ್ತೆಯೇ ಎರಡು ಪೋಕ್ಸೊ ಪ್ರಕರಣ ದಾಖಲಿಸಿದ್ದಾರೆ. ಆಕೆ ಯಾರೆಲ್ಲರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ, ಆಕೆಯ ಮೇಲೆ ಎಷ್ಟೆಲ್ಲಾ ಕ್ರಿಮಿನಲ್ ಪ್ರಕರಣಗಳಿವೆ, ಅಂದು ತಾಯಿ-ಮಗಳು ಯಡಿಯೂರಪ್ಪ ಮನೆಗೆ ಏತಕ್ಕೆ ಬಂದಿದ್ದರು, ಯಡಿಯೂರಪ್ಪ ಸಂತ್ರಸ್ತೆಗೆ ಏಕೆ ಹಣ ನೀಡಲು ಮುಂದಾಗಿದ್ದರು, ಆ ದುಡ್ಡು ಎಲ್ಲಿಂದ ಬಂದಿದೆ? ಅಥವಾ ಇದನ್ನು ನೀವು ಹನಿ ಟ್ರ್ಯಾಪ್ ಎಂದೂ ಹೇಳಬಹುದು... ಆದರೆ, ಇವೆಲ್ಲವೂ ವಿಚಾರಣೆಗೆ ಅರ್ಹವಾದ ಪ್ರಕರಣವನ್ನಾಗಿ ಮಾಡಿವೆ’ ಎಂದು ನ್ಯಾಯಪೀಠ ಹೇಳಿತು.

ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಆದ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್ ಮತ್ತು ಅಶೋಕ್ ಎನ್.ನಾಯಕ್ ಅವರು, ‘ಈಗಾಗಲೇ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಗಳು ಸಂತ್ರಸ್ತೆ ಮತ್ತು ಆಕೆಯ ತಾಯಿಯ ಧ್ವನಿಯನ್ನು ದೃಢಪಡಿಸಿವೆ. ಅರ್ಜಿದಾರರು ತಮ್ಮ ಪರವಾದ ಸಾಕ್ಷಿಗಳನ್ನೇ ಉದಾಹರಿಸಿ ಪರಿಹಾರ ಕೇಳುವುದು ಸಲ್ಲ’ ಎಂದರು. ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?

‘ನನ್ನ ಮಗಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸಹಾಯ ಮಾಡಬೇಕು’ ಎಂದು ಬೇಡಿ ಬಂದಿದ್ದ ಸಂತ್ರಸ್ತ ಬಾಲಕಿಯ ತಾಯಿ (ಈಗ ಬದುಕಿಲ್ಲ) ನೀಡಿದ್ದ ದೂರಿನ ಅನುಸಾರ ಸದಾಶಿವನಗರದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಆರ್‌ಎಂವಿ ಎರಡನೇ ಹಂತದಲ್ಲಿನ ಡಾಲರ್ಸ್ ಕಾಲೋನಿಯಲ್ಲಿರುವ ಯಡಿಯೂರಪ್ಪ ಅವರ ‘ಧವಳಗಿರಿ’ ನಿವಾಸದಲ್ಲಿ 2024ರ ಫೆಬ್ರುವರಿ 2ರಂದು ಬೆಳಗ್ಗೆ 11ರಿಂದ 11.30ರ ನಡುವೆ ‘ಬಾಲಕಿಗೆ ಲೈಂಗಿಕ ಕಿರುಕುಳ ನೀಡಲಾಗಿದೆ’ ಎಂಬುದು ಆರೋಪ.

538 ಪ್ರಕರಣ ಒಟ್ಟಿಗೆ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧ ಅಭಿವೃದ್ಧಿ ಯೋಜನೆಗಳಿಗೆ 1894ರ ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿರುವ ಪ್ರಕರಣಗಳಿಗೆ 2013ರ ಭೂಸ್ವಾಧೀನ ಕಾಯ್ದೆಯ ಪ್ರಮುಖ ಸೆಕ್ಷನ್‌ಗಳು ಅನ್ವಯವಾಗುವುದಿಲ್ಲ ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಭೂಪರಿಹಾರ ನಿಗದಿ ಸಂಬಂಧ ಸಲ್ಲಿಕೆಯಾಗಿರುವ 538 ವಿಶೇಷ ಮೇಲ್ಮನವಿ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಎಂ. ಎಂ. ಸುಂದರೇಶ್ ಹಾಗೂ ಸತೀಶ್ ಚಂದ್ರ ಶರ್ಮಾ ಪೀಠ ಬುಧವಾರ ನಡೆಸಿತು. ಬಹುತೇಕ ಅರ್ಜಿಗಳು ಕರ್ನಾಟಕ-ದಿಂದಲೇ ಸಲ್ಲಿಕೆಯಾಗಿವೆ. ಕರ್ನಾಟಕ ಸರ್ಕಾರದ ಪರ ಹಿರಿಯ ವಕೀಲ ಶ್ಯಾಮ್ ದಿವಾನ್ ವಾದ ಮಂಡಿಸಿದರು.

2013ರ ಕಾಯ್ದೆಯ ಸೆಕ್ಷನ್ 25-30 ಮಾತ್ರ ಪರಿವರ್ತನೆಯಲ್ಲಿನ ಸ್ವಾಧೀನಗಳಿಗೆ ಅನ್ವಯವಾಗುತ್ತದೆ. 2013ರ ಕಾಯ್ದೆಯ ಉಳಿದ ಸೆಕ್ಷನ್‌ಗಳ ಅಡಿಯಲ್ಲಿ ಹೆಚ್ಚುವರಿ ಪರಿಹಾರಗ-ಳನ್ನು ಒದಗಿಸಲಾಗದು. ಹೀಗಾಗಿ, ಯಾವುದೇ ಮೇಲ್ಮನವಿಯನ್ನು 1894ರ ಕಾಯ್ದೆ ಅನುಸಾರ ಪರಿಗಣಿಸಬೇಕು ಎಂದು ರಾಜ್ಯ ಸರ್ಕಾರ ವಾದಿಸಿದೆ.

ಮೂಲ ಪ್ರಕರಣವೇನು?: ಬೆಂಗಳೂರಿನ ಬಿನ್ನಿ ಮಿಲ್ ರಸ್ತೆ ವಿಸ್ತರಣೆಗಾಗಿ ಎಸ್. ವಿ.ಗ್ಲೋಬಲ್ ಮಿಲ್ ಲಿಮಿಟೆಡ್‌ನ 3.16 ಎಕರೆ ಸ್ವಾಧೀನಪಡಿಸಿಕೊಳ್ಳಲು ಬಿಬಿಎಂಪಿ 2010ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. 2013ರ ನವೆಂಬರ್‌ನಲ್ಲಿ ಅಂತಿಮ ಅಧಿಸೂಚನೆ ಪ್ರಕಟವಾಗಿತ್ತು. 2014ರ ಜನವರಿ 14ರಂದು ಜಾಗ ಸ್ವಾಧೀನಪಡಿ-ಸಿಕೊಳ್ಳಲಾಗಿತ್ತು. ಆದರೆ, ಹೊಸ ಕಾಯ್ದೆ 2014ರ ಜನವರಿ 1ರಂದು ಜಾರಿಗೆ ಬಂದಿತ್ತು. ಚದರ ಅಡಿಗೆ ₹4,620 ನಿಗದಿಪಡಿಸಲಾಗಿತ್ತು.

2013ರ ಕಾಯ್ದೆಯ ಸೆಕ್ಷನ್ 64ರ ಅಡಿಯಲ್ಲೇ ಭೂಪರಿಹಾರ ನಿಗದಿಪಡಿಸಬೇಕು ಎಂದು ಒತ್ತಾಯಿಸಿ ಕಂಪನಿಯು ನ್ಯಾಯಾಲಯದ ಮೊರೆ ಹೋಗಿತ್ತು. ನ್ಯಾಯಾಲಯವು ಚದರ ಅಡಿಗೆ ₹8,624 ನಿಗದಿಪಡಿಸಿ 2018ರಲ್ಲಿ ಆದೇಶ ಹೊರಡಿಸಿತ್ತು. ಈ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಹೈಕೋರ್ಟ್ ಮೊರೆ ಹೋಗಿತ್ತು. ರಾಜ್ಯ ಸರ್ಕಾರವು ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಿಲ್ಲ ಎಂಬ ಕಾರಣ ನೀಡಿ ಹೈಕೋರ್ಟ್ ಈ ಅರ್ಜಿಯನ್ನು ವಜಾಗೊಳಿಸಿತ್ತು. ಆ ಬಳಿಕ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಜಲಸಂಪನ್ಮೂಲ ಇಲಾಖೆಯ ಭೂ ಪರಿಹಾರಕ್ಕೆ ಸಂಬಂಧಿಸಿದ ಅನೇಕ ಅರ್ಜಿಗಳು ಸಹ ಸಲ್ಲಿಕೆ-ಯಾಗಿದ್ದವು. ಈ ಎಲ್ಲ ಅರ್ಜಿಗಳನ್ನು ಒಟ್ಟಾಗಿ ವಿಚಾರಣೆ ನಡೆಸಲಾಗು-ತ್ತಿದೆ. ಗುರುವಾರವೂ ವಿಚಾರಣೆ ಮುಂದುವರಿಯಲಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.50	7,863	7,974
ಹಾರಂಗಿ	2,859	2,858.39	1,197	1,600
ಕಬಿನಿ	2,284.00	2,282.16	4,000	2,650
ಹೇಮಾವತಿ	2,922	2,920.58	3,939	6,460
ಲಿಂಗನಮಕ್ಕಿ	1,819	1,816.90	4,226	7,815
ಸೂಪಾ (ಮೀ)	564	559.90	2,163.85	4,026.06
ಮಾಣಿ	595	594.03	451	641
ತುಂಗಭದ್ರಾ	1,633	1,626.06	10,515	10,208
ಮಲಪ್ರಭಾ	2,079.5	2,079.50	1,494	1,494
ಘಟಪ್ರಭಾ	2175	2,174.50	2,200	2,684
ಭದ್ರಾ *	186	185.5	6,024	4,821
ಆಲಮಟ್ಟಿ (ಮೀ)	519.6	519.56	18,650	20,675
ನಾರಾಯಣಪುರ (ಮೀ)	492.25	492.23	16,000	10,980

* ನೆಲಮಟ್ಟದಿಂದ

ಇಬ್ಬರು ಬಾಲಗರ್ಭಿಣಿಯರ ರಕ್ಷಣೆ

ಹುಣಸೂರು (ಮೈಸೂರು ಜಿಲ್ಲೆ): ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಎರಡು ಪೋಕ್ಸೊ ಪ್ರಕರಣಗಳು ದಾಖಲಾಗಿದ್ದು, ಇಬ್ಬರು ಬಾಲಗರ್ಭಿಣಿಯರನ್ನು ಮೈಸೂರಿನ ಬಾಲಮಂದಿರಕ್ಕೆ ದಾಖಲಿಸಲಾಗಿದೆ. ಸಾರ್ವಜನಿಕರು ನೀಡಿದ ಮಾಹಿತಿ ಆಧರಿಸಿ ಬಾಲಕಿಯನ್ನು ರಕ್ಷಿಸಲಾಗಿದೆ’ ಎಂದು ಶಿಶು ಮತ್ತು ಮಕ್ಕಳ ಇಲಾಖೆ ಅಧಿಕಾರಿ ಹರೀಶ್ ತಿಳಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ, ಎಚ್.ಡಿ.ಕೋಟೆ ತಾಲ್ಲೂಕಿನ ಹಾಡಿಯೊಂದರ ಬಾಲಕಿಯು ಗರ್ಭಿಣಿ ಆಗಿರುವುದು ಗೊತ್ತಾಗಿ ವೈದ್ಯರು ಮಾಹಿತಿ ನೀಡಿದ್ದರು. ‘ಪ್ರಕರಣಗಳಿಗೆ ಸಂಬಂಧಿಸಿ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದರು.

‘ಬಿ. ಸರೋಜಾದೇವಿ ಹೆಸರಿನಲ್ಲಿ ‘ಅಭಿನಯ ಸರಸ್ವತಿ’ ಪ್ರಶಸ್ತಿ’

ಸರೋಜಾದೇವಿ

ಬೆಂಗಳೂರು: ಪಂಚ ಭಾಷಾ ನಟಿ ದಿವಂಗತ ಬಿ. ಸರೋಜಾದೇವಿ ಅವರು ಭಾರತೀಯ ಚಿತ್ರರಂಗಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ, ಅವರ ಹೆಸರಿನಲ್ಲಿ ರಾಜ್ಯ ಸರ್ಕಾರವು ಈ ಸಾಲಿನಿಂದ ಜಾರಿಗೆ ಬರುವಂತೆ ‘ಅಭಿನಯ ಸರಸ್ವತಿ ಬಿ. ಸರೋಜಾ ದೇವಿ’ ಪ್ರಶಸ್ತಿ ಸ್ಥಾಪಿಸಿದೆ.

ಈ ಪ್ರಶಸ್ತಿಯು ₹1 ಲಕ್ಷ ಮತ್ತು 100 ಗ್ರಾಂ ಬೆಳ್ಳಿ ಪದಕ ಒಳಗೊಂ-ಡಿರುತ್ತದೆ. ಪ್ರಸ್ತುತ ಜಾರಿಯಲ್ಲಿರುವ ಕನ್ನಡ ಚಲನಚಿತ್ರ ನೀತಿ- 2011ರಲ್ಲಿನ ವಾರ್ಷಿಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳ ಪಟ್ಟಿಯ ನಿಯಮದಂತೆ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಆದೇಶದಲ್ಲಿ ತಿಳಿಸಿದೆ.

ಕನ್ನಡ ಚಿತ್ರರಂಗಕ್ಕೆ ಕನಿಷ್ಠ 25 ವರ್ಷಗಳ ಅವಿಸ್ಮರಣೀಯ ಸೇವೆ ಸಲ್ಲಿಸಿರುವ ಮಹಿಳಾ ಸಾಧಕಿಯರನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುವುದು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಬಿ. ಸರೋಜಾದೇವಿ ಅವರ ಸಾಧನೆ ಪರಿಗಣಿಸಿ ರಾಜ್ಯ ಸರ್ಕಾರವು ಇತ್ತೀಚೆಗೆ ಅವರಿಗೆ ಮರಣೋತ್ತರವಾಗಿ ‘ಕರ್ನಾಟಕ ರತ್ನ’ ಪ್ರಶಸ್ತಿ ಘೋಷಿಸಿದೆ.

ಹಣಕಾಸಿನ ಮಾಹಿತಿ ಒದಗಿಸಲು ವಿ.ವಿಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ಸಂಕಷ್ಟ ಅನು-ಭವಿಸುತ್ತಿರುವ ವಿಶ್ವವಿದ್ಯಾಲಯಗಳಿಗೆ ನೆರವು ನೀಡಲು ಮುಂದಾಗಿರುವ ರಾಜ್ಯ ಸರ್ಕಾರ, ವಿಶ್ವವಿದ್ಯಾಲಯಗಳ ಪ್ರಸ್ತುತ ಆರ್ಥಿಕ ಸ್ಥಿತಿಗತಿ, ಬ್ಯಾಂಕ್ ಖಾತೆಯಲ್ಲಿನ ಮಾಹಿತಿ, ಠೇವಣಿ ವಿವರಗಳನ್ನು ಸಲ್ಲಿಸುವಂತೆ ಸೂಚಿಸಿದೆ.

ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ನಡೆಸಿದ ಅಧ್ಯಯನ ವರದಿ ಪ್ರಕಾರ ಕನಿಷ್ಠ 13 ವಿವಿಗಳ ಸಿಬ್ಬಂದಿಯ ನಿವೃತ್ತಿ ಪಿಂಚಣಿ ಬಾಕಿಯೇ ₹562 ಕೋಟಿ ಇದೆ. ಬೆಂಗಳೂರು, ಧಾರವಾಡ ಸೇರಿದಂತೆ ಹಲವು ವಿಶ್ವವಿದ್ಯಾಲಯ-ಗಳು ಆರ್ಥಿಕ ನೆರವು ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿವೆ.

ನವೆಂಬರ್ 8 ಮತ್ತು 9ರಂದು ಬೆಂಗಳೂರಿನಲ್ಲಿ ಆಯೋಜನೆ

ಸಮಾಜಮುಖಿ ಸಾಹಿತ್ಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜಮುಖಿ ಪತ್ರಿಕೆ ವತಿಯಿಂದ ನವೆಂಬರ್ 8 ಮತ್ತು 9ರಂದು ಬೆಂಗಳೂರಿನ ಅರಮನೆ ರಸ್ತೆಯಲ್ಲಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಆವರಣದಲ್ಲಿ ‘ಸಮಾಜಮುಖಿ ಸಾಹಿತ್ಯ ಸಮ್ಮೇಳನ’ ಆಯೋಜಿಸಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಾಹಿತಿ ಹಂ.ಪ. ನಾಗರಾಜಯ್ಯ, ‘ಕನ್ನಡ ಸಾಹಿತ್ಯದ ಗಂಭೀರ ಚರ್ಚೆ, ವಿಮರ್ಶೆ ಮತ್ತು ಸಂವಾದಕ್ಕೆ ಹೊಸ ವೇದಿಕೆ ಕಲ್ಪಿಸುವ ಉದ್ದೇಶದಿಂದ ಈ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಇಲ್ಲಿ ರಾಜಕೀಯ ಹಸ್ತಕ್ಷೇಪ ಮತ್ತು ವಾಣಿಜ್ಯೀಕರಣ-ದಿಂದ ಭಿನ್ನವಾದ, ಕೇವಲ ಸಾಹಿತ್ಯಿಕ ಮೌಲ್ಯಕ್ಕೆ ಆದ್ಯತೆ ನೀಡಲಾಗುತ್ತದೆ’ ಎಂದು ಹೇಳಿದರು. ‘ಸೃಜನಶೀಲ ಮತ್ತು ವೈಚಾರಿಕ ಬರಹಗಾರರಿಗೆ ಸ್ಫೂರ್ತಿ ನೀಡುವುದರ ಜೊತೆಗೆ ಕನ್ನಡದ ಪ್ರಸ್ತುತ ಬಿಕ್ಕಟ್ಟುಗಳ ಬಗ್ಗೆ ಚರ್ಚೆ ಮಾಡಲಾಗುತ್ತದೆ’ ಎಂದರು.

‘ಮುಖ್ಯ ಗೋಷ್ಠಿಯ ಜತೆಗೆ ನಾಲ್ಕು ಸಮಾನಾಂತರ ವೇದಿಕೆಗಳಲ್ಲಿ ವಿವಿಧ ವಿಷಯಗಳ ಕುರಿತು ಚರ್ಚೆ, ಕಾರ್ಯಾಗಾರ, ವಿಷಯ ಮಂಡನೆ ಮತ್ತು ಯುವ ಬರಹಗಾರರಿಗೆ ತರಬೇತಿ ಆಯೋಜಿಸಲಾಗಿದೆ. ಈ ವೇದಿಕೆಗಳಲ್ಲಿ ಸೃಜನಶೀಲ, ವೈಚಾರಿಕ, ಶಾಸ್ತ್ರೀಯ, ಕನ್ನಡೇತರ ಮತ್ತು ಅಂತರ್‌ಶಿಸ್ತೀಯ ವಿಷಯದ ಬಗ್ಗೆ ಗಂಭೀರ ಚರ್ಚೆಗಳು ನಡೆಯಲಿವೆ. ಒಂದು ವೇದಿಕೆಯನ್ನು ಸಂಪೂರ್ಣವಾಗಿ ಇಂಗ್ಲಿಷ್ ಭಾಷೆಯ ಚರ್ಚೆಗಾಗಿ ಮೀಸಲಿಡಲಾಗಿದೆ’ ಎಂದು ತಿಳಿಸಿದರು.

‘ಸಮ್ಮೇಳನಕ್ಕೆ ಅಂದಾಜು ₹25 ಲಕ್ಷ ವೆಚ್ಚವಾಗಲಿದ್ದು, ಸರ್ಕಾರದ ಅನುದಾನವಿಲ್ಲದೆ, ಸಂಪೂರ್ಣವಾಗಿ ಸಾಹಿತ್ಯ ಪ್ರೇಮಿಗಳು ಮತ್ತು ದಾನಿಗಳ ದೇಣಿಗೆಯಿಂದ ಆಯೋಜಿಸಲಾಗುತ್ತಿದೆ’ ಎಂದು ಹೇಳಿದರು.

ನೋಂದಣಿ ಶುಲ್ಕ ₹300

‘ಸಮ್ಮೇಳನದಲ್ಲಿ ಸಾಹಿತಿಗಳು, ವಿಮರ್ಶಕರು, ವಿದ್ಯಾರ್ಥಿಗಳು, ಸಾಹಿತ್ಯಾಸಕ್ತರು ಸೇರಿದಂತೆ ಯಾರು ಬೇಕಾದರೂ ಭಾಗವಹಿಸಬಹುದು. ಎಲ್ಲ ಪ್ರತಿನಿಧಿಗಳಿಗೆ ಎರಡು ದಿನಗಳ ಊಟ, ಉಪಾಹಾರದ ವೆಚ್ಚಕ್ಕಾಗಿ ₹ 300 ನೋಂದಣಿ ಶುಲ್ಕ ನಿಗದಿಪಡಿಸಲಾಗಿದೆ’ ಎಂದು ಹಂ.ಪ. ನಾಗರಾಜಯ್ಯ ಹೇಳಿದರು.

‘ಉಗ್ರರು ಅಳುವುದನ್ನು ಜಗತ್ತೇ ನೋಡಿತು’

ಭಾರತೀಯ ಸೇನೆಯು ಪಾಕಿಸ್ತಾನ ಮಂಡಿಯೂರುವಂತೆ ಮಾಡಿತು
• ಆಪರೇಷನ್ ಸಿಂಧೂರ ಕುರಿತು ಪ್ರಧಾನಿ ಮೋದಿ ಬಣ್ಣನೆ

ಧಾರ್ (ಮಧ್ಯಪ್ರದೇಶ) (ಪಿಟಿಐ): ‘ಆಪರೇಷನ್ ಸಿಂಧೂರ’ ವೇಳೆ ಭಾರಿ ದಾಳಿ ನಡೆಸಿದ ನಮ್ಮ ಯೋಧರು ಕಣ್ಣು ಮಿಟುಕಿಸುವುದರೊಳಗೆ ಪಾಕಿಸ್ತಾನ ಭಾರತದ ಮುಂದೆ ಮಂಡಿಯೂರುವಂತೆ ಮಾಡಿದ್ದರು. ಇನ್ನೊಂದೆಡೆ, ತಮ್ಮವರ ದುಃಸ್ಥಿತಿ ಕಂಡು ಉಗ್ರರು ಕಣ್ಣೀರಿಡುತ್ತಿದ್ದುದನ್ನು ಈಗ ಜಗತ್ತೇ ನೋಡಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು.

ಧಾರ್ ಜಿಲ್ಲೆಯಲ್ಲಿ ‘ಪಿ.ಎಂ ಮಿತ್ರ ಪಾರ್ಕ್’ಗೆ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

‘ಮಂಗಳವಾರಷ್ಟೇ, ತಮಗಾದ ದುರ್ಗತಿ ನೆನೆದು ಪಾಕಿಸ್ತಾನದ ಭಯೋತ್ಪಾದಕರು ಅಳುತ್ತಿದ್ದುದನ್ನು ಭಾರತ ಹಾಗೂ ಜಗತ್ತೇ ನೋಡಿದೆ’ ಎಂದು ಜೈಷ್-ಎ-ಮೊಹ್ಮದ್ (ಜೆಇಎಂ) ಕಮಾಂಡರ್ ಹೇಳಿಕೆ ಇರುವ ವಿಡಿಯೊ ಕುರಿತು ಪರೋಕ್ಷವಾಗಿ ಮೋದಿ ಹೇಳಿದರು.

‘ತಮ್ಮ ಅಡಗುತಾಣಗಳ ಮೇಲೆ ಭಾರತೀಯ ಪಡೆಗಳು ದಾಳಿ ನಡೆಸಿದವು. ತಮ್ಮ ನಾಯಕ ಮಸೂದ್ ಅಜರ್ ಕುಟುಂಬ ಈ ದಾಳಿಯಲ್ಲಿ ನಾಶವಾಯಿತು’ ಎಂಬುದಾಗಿ ಜೆಇಎಂ ಕಮಾಂಡರ್ ಹೇಳುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

‘ಇದು ಹೊಸ ಭಾರತ; ಯಾವುದೇ ಅಣ್ವಸ್ತ್ರದ ಬೆದರಿಕೆ ಹೆದರುವುದಿಲ್ಲ. ಶತ್ರುವಿನ ಮನೆಗೆ ನುಗ್ಗಿ ನಮ್ಮ ಪಡೆಗಳು ಹೊಡೆದಿವೆ’ ಎಂದರು.

‘ಪಾಕಿಸ್ತಾನದಿಂದ ಬಂದಿದ್ದ ಉಗ್ರರು ನಮ್ಮ ಸಹೋದರಿಯರು ಹಾಗೂ ತಾಯಂದಿರ ಕುಂಕುಮ ಅಳಿಸಿದ್ದರು. ಇದಕ್ಕೆ ತಕ್ಕ ಉತ್ತರ ನೀಡುಲು ನಾವು ಆಪರೇಷನ್ ಸಿಂಧೂರ ನಡೆಸಿ, ಉಗ್ರರ ನೆಲೆಗಳನ್ನು ಧ್ವಂಸ ಮಾಡಿದೆವು’ ಎಂದು ಹೇಳಿದರು.

ಮುಂಬರುವ ಹಬ್ಬಗಳ ಸಂದರ್ಭದಲ್ಲಿ ಸ್ವದೇಶಿ ಉತ್ಪನ್ನಗಳನ್ನೇ ಬಳಸುವಂತೆ ಮನವಿ ಮಾಡಿದ ಅವರು, ‘ನೀವು ಖರೀದಿಸುವ ಉತ್ಪನ್ನ ಭಾರತದಲ್ಲಿ ತಯಾರಾಗಿದೆಯೇ ಎಂಬುದನ್ನು ಪರಿಶೀಲಿಸುವುದು ಮುಖ್ಯ’ ಎಂದರು.

‘ಸ್ವದೇಶಿ ವಸ್ತು ಖರೀದಿಸಿ’

- ಜಿಎಸ್‌ಟಿ ದರ ಕಡಿತ ಸೆ.22ರಿಂದ ಜಾರಿಗೆ ಬರಲಿದೆ. ಎಲ್ಲರೂ ಸ್ವದೇಶಿ ವಸ್ತುಗಳನ್ನು ಖರೀದಿಸಬೇಕು ಹಾಗೂ ಪರಿಷ್ಕೃತ ದರಗಳ ಲಾಭ ಪಡೆಯಬೇಕು
- ಭಾರತದಲ್ಲಿ ತಯಾರಾದ ಸರಕುಗಳನ್ನು ಮಾರಾಟ ಮಾಡುವ ಅಂಗಡಿಗಳು ‘ಗರ್ವ್ ಸೆ ಕಹೊ ಯೇ ಸ್ವದೇಶಿ ಹೈ’ (ಈ ವಸ್ತುಗಳು ಸ್ವದೇಶಿ ಎಂಬುದನ್ನು ಹೆಮ್ಮೆಯಿಂದ ಹೇಳಿ) ಎಂಬ ಫಲಕಗಳನ್ನು ಅಳವಡಿಸಬೇಕು
- ಸ್ವದೇಶಿ ವಸ್ತುಗಳ ಖರೀದಿಯಿಂದ ಸರ್ಕಾರದ ಬೊಕ್ಕಸ ಸೇರುವ ಹಣವು ರಸ್ತೆಗಳು, ಹಳ್ಳಿಗಳಲ್ಲಿ ಶಾಲೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ ಸೇರಿ ಹಲವು ಕಲ್ಯಾಣ ಕಾರ್ಯಕ್ರಮಗಳಿಗೆ ನೆರವಾಗಲಿದೆ

‘ಪಟೇಲರಿಂದ ಹೈದರಾಬಾದ್ ವಿಮೋಚನೆ’

ಹೈದರಾಬಾದ್ ವಿಮೋಚನಾ ದಿನಾಚರಣೆ ಪ್ರಸ್ತಾಪಿಸಿದ ಮೋದಿ ಅವರು, ‘1948ರ ಸೆಪ್ಟೆಂಬರ್ 17ರಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಸೇನಾ ಕಾರ್ಯಾಚರಣೆ ನಡೆಸಿದರು. ಹೈದರಾಬಾದ್ ಪ್ರಾಂತ್ಯವನ್ನು ಶೋಷಣೆಯಿಂದ ಮುಕ್ತ ಮಾಡಿ, ಅದನ್ನು ಭಾರತದ ಒಕ್ಕೂಟಕ್ಕೆ ಸೇರ್ಪಡೆ ಮಾಡಿದರು’ ಎಂದರು.

> **ಸ್ವದೇಶಿ ವಸ್ತುಗಳ ಖರೀದಿಯಿಂದ ದೇಶದೊಳಗೇ ಹಣದ ಚಲಾವಣೆ ಆಗಲಿದ್ದು, ಅಭಿವೃದ್ಧಿಗೆ ನೇರವಾಗಿ ಕೊಡುಗೆ ನೀಡಿದಂತಾಗಲಿದೆ**
> **ನರೇಂದ್ರ ಮೋದಿ,** ಪ್ರಧಾನಿ



ಮಧ್ಯಪ್ರದೇಶದ ಧಾರ್ ಜಿಲ್ಲೆಯ ಭೈನ್‌ಸೋಲಾ ಗ್ರಾಮದಲ್ಲಿ ‘ಪಿ.ಎಂ ಮಿತ್ರ ಪಾರ್ಕ್’ ನಿರ್ಮಾಣಕ್ಕೆ ಬುಧವಾರ ನಡೆದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದ ಪ್ರಧಾನಿ ಮೋದಿ ಅವರು ಜನರತ್ತ ಕೈಬೀಸಿದರು ಪಿಟಿಐ ಚಿತ್ರ

‘ಪಿ.ಎಂ ಮಿತ್ರ ಪಾರ್ಕ್’ಗೆ ಶಿಲಾನ್ಯಾಸ

ಜವಳಿ ಮತ್ತು ಸಿದ್ಧ ಉಡುಪುಗಳ ವಲಯಕ್ಕೆ ಉತ್ತೇಜನ ನೀಡುವ ಉದ್ದೇಶದ, ದೇಶದ ಮೊದಲ ‘ಪಿ.ಎಂ ಮಿತ್ರ ಪಾರ್ಕ್’ಗೆ (ಪ್ರಧಾನ ಮಂತ್ರಿ ಮೆಗಾ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ರೀಜನ್ ಅಂಡ್ ಅಪಾರೆಲ್ ಪಾರ್ಕ್) ಧಾರ್ ಜಿಲ್ಲೆಯ ಭೈನ್‌ಸೋಲಾ ಗ್ರಾಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಶಿಲಾನ್ಯಾಸ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ಅವರು, ‘ಸ್ವಸ್ಥ ನಾರಿ–ಸಶಕ್ತ ಪರಿವಾರ’ ಹಾಗೂ ‘ರಾಷ್ಟ್ರೀಯ ಪೋಷಣ್ ಮಾಹ’ ಅಭಿಯಾನಕ್ಕೂ ಚಾಲನೆ ನೀಡಿದರು.

ನಂತರ, ನಡೆದ ರ‍್ಯಾಲಿಯಲ್ಲಿ ಅವರು ಪಾಲ್ಗೊಂಡರು. 75ನೇ ಜನ್ಮದಿನ ಆಚರಿಸಿಕೊಂಡ ಸಂದರ್ಭದಲ್ಲಿ, ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ಜನರು ಮೋದಿ ಅವರಿಗೆ ಶುಭಾಶಯಗಳನ್ನು ಕೋರಿದರು. ಕರ್ನಾಟಕ, ಮಧ್ಯಪ್ರದೇಶ, ತೆಲಂಗಾಣ, ಗುಜರಾತ, ಉತ್ತರ ಪ್ರದೇಶ , ಮಹಾರಾಷ್ಟ್ರದ ಏಳು ಸ್ಥಳಗಳಲ್ಲಿ ಬೃಹತ್ ಜವಳಿ ಪಾರ್ಕ್ ನಿರ್ಮಿಸುವ ಉದ್ದೇಶದಿಂದ ಕೇಂದ್ರ ಈ ಯೋಜನೆಗೆ ಚಾಲನೆ ನೀಡಿದೆ.

ವೈಶಿಷ್ಟ್ಯಗಳು

- 2,158 ಎಕರೆಯಲ್ಲಿ ‘ಪಿ.ಎಂ ಮಿತ್ರ ಪಾರ್ಕ್’ ಅಭಿವೃದ್ಧಿ. ವಿಶ್ವದರ್ಜೆಯ ಮೂಲಸೌಕರ್ಯಗಳಿರುವ ಈ ಪಾರ್ಕ್ ಹತ್ತಿ ಬೆಳೆಗಾರರಿಗೆ ವರದಾನ
- ಜವಳಿ ಕ್ಷೇತ್ರದ ಉದ್ದಿಮೆಗಳಿಂದ ಒಟ್ಟು ₹23,146 ಕೋಟಿ ಬಂಡವಾಳ ಹೂಡಿಕೆ
- ಪ್ರತಿದಿನ 20 ಮೆಗಾ ಲೀಟರ್ ಸಾಮರ್ಥ್ಯದ ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ
- 10 ಎಂವಿಎ ವಿದ್ಯುತ್ ಉತ್ಪಾದಿಸುವ ಸೌರಶಕ್ತಿ ವಿದ್ಯುತ್ ಉತ್ಪಾದನಾ ಘಟಕ
- ಉದ್ದಿಮೆಗಳ ನೌಕರರು ಹಾಗೂ ಮಹಿಳೆಯರಿಗೆ ವಸತಿ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳು ಇರಲಿದ್ದು, ಮಾದರಿ ಔದ್ಯಮಿಕ ನಗರವಾಗಿ ಅಭಿವೃದ್ಧಿ

ಪ್ರಧಾನಿ ತಾಯಿಯ ಎಐ ವಿಡಿಯೊ ತೆಗೆದು ಹಾಕಿ: ಪಟ್ನಾ ಹೈಕೋರ್ಟ್

ಪ್ರಜಾವಾಣಿ ವಾರ್ತೆ/ಪಿಟಿಐ

ಪಟ್ನಾ: ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನಲ್ಲಿ ಅವರ ತಾಯಿ ಹೀರಾಬೇನ್ ಮೋದಿ ಅವರು ಬರುವ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿ ರೂಪಿಸಿದ ವಿಡಿಯೊವನ್ನು ತನ್ನೆಲ್ಲಾ ಸಾಮಾಜಿಕ ಮಾಧ್ಯಮ ಖಾತೆಗಳಿಂದ ತಕ್ಷಣವೇ ತೆಗೆದು ಹಾಕಬೇಕು ಎಂದು ಬಿಹಾರ ಕಾಂಗ್ರೆಸ್‌ಗೆ ಪಟ್ನಾ ಹೈಕೋರ್ಟ್ ಬುಧವಾರ ಸೂಚಿಸಿದೆ.

‘ಬಿಹಾರ ಕಾಂಗ್ರೆಸ್ ಹಂಚಿಕೊಂಡಿದ್ದ ವಿಡಿಯೊವು ಮಾನಹಾನಿಕರವಾಗಿದೆ ಮತ್ತು ಇದು ಜನ ಪ್ರಾತಿನಿಧ್ಯ ಕಾಯ್ದೆಗೆ ವಿರುದ್ಧವಾಗಿದೆ’ ಎಂದು ವಕೀಲ ವಿವೇಕಾನಂದ ಸಿಂಗ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಪಿ.ಬಿ. ಭಜಂತ್ರಿ ಈ ನಿರ್ದೇಶನ ನೀಡಿದರು.

ಬಿಹಾರ ರಾಜಕಾರಣಕ್ಕೆ ಸಂಬಂಧಿಸಿ ‘ರಾಜಕೀಯಕ್ಕಾಗಿ ನನ್ನನ್ನು ಬಳಸಿಕೊಳ್ಳುತ್ತಿದ್ದೀಯಾ’ ಎಂದು ಮೋದಿ ಅವರ ತಾಯಿ ಹೇಳುವ ವಿಡಿಯೊವನ್ನು ಕಾಂಗ್ರೆಸ್ ಕಳೆದ ವಾರ ಹಂಚಿಕೊಂಡಿತ್ತು.

‘ಕಾಂಗ್ರೆಸ್ ಪಕ್ಷವು ಸಂವಿಧಾನದ 21ನೇ ವಿಧಿಯನ್ನು (ಖಾಸಗಿತನದ ಮತ್ತು ಮನುಷ್ಯ ಘನತೆಯ ಹಕ್ಕು) ಉಲ್ಲಂಘಿಸಿದೆ’ ಎಂದು ಕೋರ್ಟ್ ಹೇಳಿದೆ.

ಅರ್ಜಿಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗವನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು. ಈ ಎಲ್ಲರಿಗೂ ಸೇರಿ ಗೂಗಲ್, ಎಕ್ಸ್ ಮತ್ತು ಫೇಸ್‌ಬುಕ್‌ಗೂ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ. ಈ ಸಾಮಾಜಿಕ ಮಾಧ್ಯಮಗಳು ಈ ವಿಡಿಯೊವನ್ನು ತಮ್ಮ ವೇದಿಕೆಗಳಲ್ಲಿ ತೆಗೆದು ಹಾಕುವಂತೆಯೂ ಕೋರ್ಟ್ ಹೇಳಿದೆ.

ಈ ವಿಡಿಯೊವನ್ನು ಹಂಚಿಕೊಳ್ಳಲು ಕಾರಣರಾದವರನ್ನು ಇದಕ್ಕಾಗಿ ಜವಾಬ್ದಾರರನ್ನಾಗಿ ಮಾಡಬೇಕು ಮತ್ತು ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿತ್ತು. ಬಿಹಾರದಲ್ಲಿ ನ್ಯಾಯ ಸಮ್ಮತ ಮತ್ತು ಸ್ವತಂತ್ರ ಚುನಾವಣೆ ನಡೆಯದಂತೆ ಕಾಂಗ್ರೆಸ್ ದುರುದ್ದೇಶಪೂರಿತ ಪ್ರಚಾರ ನಡೆಸುತ್ತಿದೆ ಎಂದೂ ಹೇಳಲಾಗಿತ್ತು.

ಇವಿಎಂನಲ್ಲಿ ಅಭ್ಯರ್ಥಿಗಳ ಭಾವಚಿತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಬಿಹಾರ ವಿಧಾನಸಭೆ ಚುನಾವಣೆ ವೇಳೆ, ವಿದ್ಯುನ್ಮಾನ ಮತಯಂತ್ರಗಳಲ್ಲಿ (ಇವಿಎಂ) ಅಭ್ಯರ್ಥಿಗಳ ಬಣ್ಣದ ಭಾವಚಿತ್ರಗಳು ಇರಲಿವೆ. ಇದೇ ಮೊದಲ ಬಾರಿಗೆ ಇಂತಹ ಕ್ರಮಕ್ಕೆ ಚುನಾವಣಾ ಆಯೋಗ ಮುಂದಾಗಿದೆ.

ಲೋಕಸಭೆ ಮತ್ತು ವಿಧಾನ ಸಭೆಗಳಿಗೆ ನಡೆಯುವ ಸಾರ್ವತ್ರಿಕ ಹಾಗೂ ಉಪಚುನಾವಣೆಗಳಲ್ಲಿ ಬಳಸಲಾಗುವ ಅಭ್ಯರ್ಥಿಗಳ ಭಾವಚಿತ್ರವುಳ್ಳ ಇವಿಎಂ ಮತಪತ್ರದ ಮುದ್ರಣ ಹಾಗೂ ವಿನ್ಯಾಸಕ್ಕೆ ಸಂಬಂಧಿಸಿ ಎಲ್ಲ ಮುಖ್ಯ ಚುನಾವಣಾ ಅಧಿಕಾರಿಗಳಿಗೆ (ಸಿಇಒ) ಚುನಾವಣಾ ಆಯೋಗ ಮಾರ್ಗಸೂಚಿಗಳನ್ನು ಬುಧವಾರ ಒದಗಿಸಿದೆ.

ಪ್ರಸ್ತುತ ಜಾರಿಯಲ್ಲಿರುವ ಮಾರ್ಗಸೂಚಿಗಳನ್ನು, ಚುನಾವಣೆ ನಿರ್ವಹಣೆ ನಿಯಮಗಳು–1961ರ ನಿಯಮ 49ಬಿ ಅಡಿ ಚುನಾವಣಾ ಆಯೋಗವು ಪರಿಷ್ಕರಿಸಿದೆ.

ಮಾರ್ಗಸೂಚಿಗಳು

- ಇವಿಎಂ ಮತಪತ್ರದಲ್ಲಿ ಅಭ್ಯರ್ಥಿಗಳ ಬಣ್ಣದ ಭಾವಚಿತ್ರಗಳನ್ನು ಪ್ರಕಟಿಸಲಾಗುವುದು. ಒಂದು ವೇಳೆ ಅಭ್ಯರ್ಥಿಯು ಕಪ್ಪು–ಬಿಳುಪಿನ ಭಾವಚಿತ್ರ ನೀಡಿದ್ದಲ್ಲಿ ಅದನ್ನೇ ಮುದ್ರಿಸಲಾಗುವುದು
- ಭಾವಚಿತ್ರದ ಅಳತೆ 2 ಸೆಂ.ಮೀ X2.5 ಸೆಂ.ಮೀ ಇರಲಿದೆ
- ಮತಪತ್ರದ ಒಂದು ಹಾಳೆಯಲ್ಲಿ 15ಕ್ಕಿಂತ ಹೆಚ್ಚು ಅಭ್ಯರ್ಥಿಗಳ ಹೆಸರುಗಳು ಇರುವಂತಿಲ್ಲ. ನೋಟಾ ಆಯ್ಕೆಯು ಕೊನೆಗೆ ಇರಲಿದೆ
- ನೋಟಾ ಹಾಗೂ ಅಭ್ಯರ್ಥಿಗಳ ಸಂಖ್ಯೆ 16ಕ್ಕಿಂತ ಕಡಿಮೆ ಇದ್ದಲ್ಲಿ, ಪ್ಯಾನೆಲ್‌ನಲ್ಲಿನ ಕೊನೆಯ ಸ್ಥಳವನ್ನು ಖಾಲಿ ಬಿಡಲಾಗುವುದು
- ಅಭ್ಯರ್ಥಿಗಳ ಚಿತ್ರ ಉತ್ತಮವಾಗಿ ಗೋಚರವಾಗಬೇಕು ಎಂಬ ದೃಷ್ಟಿಯಿಂದ, ಭಾವಚಿತ್ರಕ್ಕೆ ಮೀಸಲಾದ ಜಾಗದ ನಾಲ್ಕನೇ ಮೂರರಷ್ಟು ಸ್ಥಳದಲ್ಲಿ ಅಭ್ಯರ್ಥಿಯ ಮುಖ ಸ್ಪಷ್ಟವಾಗಿ ಕಾಣುವಂತೆ ಮುದ್ರಿಸಲಾಗುವುದು
- ಅಭ್ಯರ್ಥಿಗಳ ಅನುಕ್ರಮ ಸಂಖ್ಯೆ/ನೋಟಾವನ್ನು ಭಾರತೀಯ ಅಂಕಿಗಳಲ್ಲಿಯೇ ಮುದ್ರಿಸಲಾಗುವುದು. ಅಕ್ಷರಗಳ ಫಾಂಟ್ ಗಾತ್ರ 30ರಷ್ಟು ಇರಲಿದ್ದು, ದಪ್ಪ ಅಕ್ಷರಗಳನ್ನು ಬಳಸಲಾಗುವುದು
- ಅಭ್ಯರ್ಥಿಗಳ ಹೆಸರುಗಳ ಅಕ್ಷರಗಳ ಫಾಂಟ್ ಗಾತ್ರ ಕೂಡ 30 ಇರಲಿದೆ

75ನೇ ಜನ್ಮದಿನ; ಶುಭಾಶಯಗಳ ಮಹಾಪೂರ; ಬಿಜೆಪಿಯಿಂದ ಕಾರ್ಯಕ್ರಮ

ಪ್ರಧಾನಿ ಮೋದಿ ನಾಯಕತ್ವಕ್ಕೆ ಶ್ಲಾಘನೆ

ಮಾಸ್ಕೊ/ಲಂಡನ್ (ಪಿಟಿಐ): ತಮ್ಮ 75ನೇ ಜನ್ಮದಿನ ಆಚರಿಸಿಕೊಂಡ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿಶ್ವ ನಾಯಕರು, ಸೆಲೆಬ್ರಿಟಿಗಳು, ಚಿತ್ರನಟರು, ಉದ್ಯಮಿಗಳಿಂದ ಶುಭಾಶಯಗಳ ಮಹಾಪೂರ ಹರಿದುಬಂದಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ, ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್, ಭೂತಾನ್ ಪ್ರಧಾನಿ ಶೆರಿಂಗ್ ತೊಬ್ಗೆ, ಮ್ಯಾನ್ಮಾರ್ ಅಧ್ಯಕ್ಷ, ಥಾಯ್ಲೆಂಡ್ ಪ್ರಧಾನಿ, ಗಯಾನದ ಅಧ್ಯಕ್ಷ ಸೇರಿ ಹಲವು ಮುಖಂಡರು ಪ್ರಧಾನಿ ಮೋದಿ ಅವರಿಗೆ ಜನ್ಮದಿನದ ಶುಭಾಶಯ ಕೋರಿ, ಅವರ ನಾಯಕತ್ವವನ್ನು ಶ್ಲಾಘಿಸಿದ್ದಾರೆ.

‘ದೊಡ್ಡ ಮಟ್ಟದ ವೈಯಕ್ತಿಕ ಕೊಡುಗೆ ಮೂಲಕ ದ್ವಿಪಕ್ಷೀಯ ಸಂಬಂಧವನ್ನು ನೀವು ಬಲಪಡಿಸಿದ್ದೀರಿ. ಆ ಮೂಲಕ ವಿಶ್ವ ವೇದಿಕೆಯಲ್ಲಿ ಅಗಾಧ ಗೌರವ, ಅಧಿಕಾರವನ್ನು ನೀವು ಗಳಿಸಿದ್ದೀರಿ’ ಎಂಬ ರಷ್ಯಾ ಅಧ್ಯಕ್ಷರ ಶುಭಾಶಯ ನುಡಿಯನ್ನು ಅಲ್ಲಿನ ಆಡಳಿತ ಕಚೇರಿ ಕ್ರೆಮ್ಲಿನ್ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಟ್ರಂಪ್ ಶುಭಾಶಯ ಕೋರಿರುವ ಬೆನ್ನಲ್ಲೇ, ಅಮೆರಿಕದ ಶೇ 50ರಷ್ಟು ಸುಂಕದಿಂದ ಉಭಯ ದೇಶಗಳ ನಡುವೆ ಹಳಸಿದ್ದ ದ್ವಿಪಕ್ಷೀಯ ಸಂಬಂಧಗಳಲ್ಲಿ ಮತ್ತೆ ಸುಧಾರಣೆ ಕಾಣುವ ಭರವಸೆ ಮೂಡಿದೆ.

‘ಸೇವಾ ಪಾಕ್ಷಿಕ’ ಆಚರಣೆ

ಮೋದಿ ಅವರ 75ನೇ ಜನ್ಮದಿನದ ಹಿನ್ನೆಲೆಯಲ್ಲಿ ಬಿಜೆಪಿಯು ದೇಶದಾದ್ಯಂತ ‘ಸೇವಾ ಪಾಕ್ಷಿಕ’ ಆಚರಿಸಲಿದೆ. ಸ್ವಚ್ಛತಾ ಅಭಿಯಾನ, ಆರೋಗ್ಯ ಶಿಬಿರಗಳ ಆಯೋಜನೆ, ಸ್ವದೇಶಿ ಉತ್ಪನ್ನಗಳ ಬಳಕೆಗೆ ಪ್ರೋತ್ಸಾಹ ಸೇರಿ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ಒಳಗೊಂಡಿರುವ ‘ಸೇವಾ ಪಾಕ್ಷಿಕ’ವು ಅಕ್ಟೋಬರ್ 2ರಂದು ಸಮಾರೋಪಗೊಳ್ಳಲಿದೆ.

ಮೋದಿ ಅವರ ಜನ್ಮದಿನದ ಅಂಗವಾಗಿ ಅಹಮದಾಬಾದ್‌ನಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ, ಸಿ.ಎಂ ಭೂಪೇಂದ್ರ ಪಟೇಲ್ ರಕ್ತದಾನಿಗಳ ಕುಶಲೋಪರಿ ವಿಚಾರಿಸಿದರು ಪಿಟಿಐ ಚಿತ್ರ

ಜನ್ಮದಿನದಂದು ನಡೆದ ಕಾರ್ಯಕ್ರಮಗಳು

- ನಗರ ಹಸಿರೀಕರಣಕ್ಕೆ ಸಸಿ ನೆಡುವ ’ನಮೋ ವ್ಯಾನ್‘ ಉದ್ಘಾಟನೆ
- ದೆಹಲಿಯಲ್ಲಿ 101 ಆಯುಷ್ಮಾನ್ ಆರೋಗ್ಯ ಮಂದಿರ ಕ್ಲಿನಿಕ್ ಉದ್ಘಾಟನೆ
- ಅಟಲ್ ಆಶಾ ನರ್ಸಿಂಗ್ ಹೋಂ ಮತ್ತು ವಸತಿ ನಿಲಯ ಉದ್ಘಾಟನೆ
- ನಮೊ ಆ್ಯಪ್ ಮೂಲಕ ಡಿಜಿಟಲ್ ಸ್ವಯಂ ಸೇವಾ ಅಭಿಯಾನ ‘ಸೇವಾ ಪರ್ವ’ಕ್ಕೆ ಚಾಲನೆ
- ಉತ್ತರಾಖಂಡದ ಧಾರ್ಮಿಕ ಕೇಂದ್ರಗಳಲ್ಲಿ ಸ್ವಚ್ಛತೋತ್ಸವ–2025 ವಿಶೇಷ ಅಭಿಯಾನ
- ದೇಶದ ವಿವಿಧೆಡೆ ರಕ್ತದಾನ, ಆರೋಗ್ಯ ಶಿಬಿರ ಆಯೋಜನೆ

ಶುಭ ಹಾರೈಕೆ

ಮೋದಿ ನಮಗೆ ‘ಒಳ್ಳೆಯ ಸ್ನೇಹಿತ’. ನೀವು ನಿಮ್ಮ ಜೀವನದ ಮೂಲಕ ಭಾರತಕ್ಕಾಗಿ ಸಾಕಷ್ಟು ಸಾಧಿಸಿದ್ದೀರಿ. ಭಾರತ–ಇಸ್ರೇಲ್ ಪಾಲುದಾರಿಕೆ ಮತ್ತಷ್ಟು ಎತ್ತರಕ್ಕೇರಲಿ
ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಪ್ರಧಾನಿ

‘ನಿಮ್ಮ ಬದ್ಧತೆ, ಸಮರ್ಪಣಾ ಮನೋಭಾವ, ಸಾಮರ್ಥ್ಯವು ಲಕ್ಷಾಂತರ ಜನರನ್ನು ಸ್ಫೂರ್ತಿಯಿಂದ ಮುನ್ನಡೆಸುತ್ತಿದೆ
ಜಾರ್ಜಿಯಾ ಮೆಲೊನಿ, ಇಟಲಿ ಪ್ರಧಾನಿ

‘ಪ್ರಧಾನಿ ಮೋದಿ ಅವರಿಗೆ ಜನ್ಮದಿನದ ಶುಭಾಶಯ ಕೋರುವುದು ಅತೀವ ಸಂತೋಷದ ವಿಷಯ. ಈಗಿನ ಅಸ್ಥಿರತೆಯ ಸಮಯದಲ್ಲಿ ಮೋದಿ ಅವರಂಥ ಉತ್ತಮ ಸ್ನೇಹಿತರು ಎಲ್ಲರಿಗೂ ಬೇಕು
ರಿಷಿ ಸುನಕ್, ಬ್ರಿಟನ್ ಮಾಜಿ ಪ್ರಧಾನಿ

ಭಾರತ– ಆಸ್ಟ್ರೇಲಿಯಾ ನಡುವಿನ ಗಾಢವಾದ ಸಂಬಂಧವನ್ನೂ, ಆಸ್ಟ್ರೇಲಿಯಾದಲ್ಲಿರುವ ಭಾರತೀಯ ಸಮುದಾಯದ ಕೊಡುಗೆಯನ್ನು ನಾವು ಮೋದಿ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಸ್ಮರಿಸುತ್ತೇವೆ
ಆಂಥೊನಿ ಅಲ್ಬನೀಸ್, ಆಸ್ಟ್ರೇಲಿಯಾ ಪ್ರಧಾನಿ

ವಿಕಸಿತ ಭಾರತ ಮತ್ತು ವಿಶ್ವದ ಪ್ರಗತಿಗೆ ಮೋದಿ ಅವರ ಕೊಡುಗೆ ಮಹತ್ವದ್ದು. ಭಾರತದೊಂದಿಗಿನ ನಮ್ಮ ಪಾಲುದಾರಿಕೆಯನ್ನು ನಾವು ಗೌರವಿಸುತ್ತೇವೆ
ಬಿಲ್ ಗೇಟ್ಸ್, ಮೈಕ್ರೊಸಾಫ್ಟ್‌ನ ಸಹ ಸ್ಥಾಪಕ

ಕರ್ನಾಟಕ: ಎಸ್‌ಐಆರ್‌ಗೆ ಮುನ್ನುಡಿ

ಒಂದನೇ ಪುಟದಿಂದ...

'ಕೇಂದ್ರ ಚುನಾವಣೆ ಆಯೋಗ ಈ ಬಗ್ಗೆ ಅಧಿಸೂಚನೆ ಹೊರಡಿಸಿದ ತಕ್ಷಣವೇ ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ಪ್ರಾರಂಭವಾಗಲಿದೆ’ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ತಿಳಿಸಿದರು.

‘2002ರಲ್ಲಿ ರಾಜ್ಯದಲ್ಲಿ ಎಸ್‌ಐಆರ್ ನಡೆದಿತ್ತು. 23 ವರ್ಷಗಳ ನಂತರ ಮತ್ತೆ ಎಸ್‌ಐಆರ್ ಮಾಡಲು ನಿರ್ಧರಿಸಲಾಗಿದೆ. ಈಗಾಗಲೇ 2002ರ ಮತದಾರರ ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಈ ಪಟ್ಟಿಯಲ್ಲಿ ಇರುವ ಮತದಾರರು ಪ್ರಸ್ತುತ ಮತದಾರರ ಪಟ್ಟಿಯಲ್ಲಿದ್ದಾರೊ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ’ ಎಂದು ಅವರು ವಿವರಿಸಿದರು.

‘ಜಿಲ್ಲಾಧಿಕಾರಿಗಳಿಗೆ ಹಾಗೂ ಮತಗಟ್ಟೆ ಅಧಿಕಾರಿಗಳಿಗೆ (ಬಿಎಲ್‌ಒ) 2002ರ ಮತದಾರರ ಪಟ್ಟಿ ನೀಡಲಾಗಿದೆ. ಬಿಎಲ್‌ಒಗಳು ಮನೆ–ಮನೆಗೆ ಭೇಟಿ ಪರಿಶೀಲಿಸುತ್ತಾರೆ. ಎರಡೂ ಪಟ್ಟಿಯಲ್ಲಿ ಹೆಸರು ಇರುವವರಿಗೆ ಕ್ಯೂಆರ್ ಕೋಡ್ ಆಧಾರಿತ ಗಣತಿ ನಮೂನೆ (ಎನ್ಯುಮರೇಷನ್ ಫಾರ್ಮ್) ನೀಡಲಾಗುತ್ತದೆ. ಇದರಿಂದ ಅನರ್ಹ ಹಾಗೂ ನಕಲಿ ಮತದಾರರನ್ನು ಪಟ್ಟಿಯಿಂದ ತೆಗೆದು ಹಾಕಲು ಸಹಾಯವಾಗಲಿದೆ’ ಎಂದು ಮಾಹಿತಿ ನೀಡಿದರು.

‘ಪ್ರತಿ ಮತದಾರನಿಗೆ ಸಂಬಂಧಿಸಿದ ಗಣತಿ ನಮೂನೆಯ ಎರಡು ಪ್ರತಿಗಳು ಬಿಎಲ್‌ಒಗಳು ಬಳಿ ಇರುತ್ತವೆ. ಎರಡು ಪ್ರತಿಗಳನ್ನು ಭರ್ತಿ ಮಾಡಿದ ನಂತರ ಒಂದಕ್ಕೆ ಬಿಎಲ್‌ಒ ಸಹಿ ಮಾಡಿ ಮತದಾರನಿಗೆ ನೀಡುತ್ತಾರೆ. ಮತ್ತೊಂದನ್ನು ಆಯೋಗಕ್ಕೆ ಸಲ್ಲಿಸುತ್ತಾರೆ. ಮನೆಯಲ್ಲಿ ಯಾರು ಇಲ್ಲದಿದ್ದರೆ, ಮೂರು ಬಾರಿ ಮನೆಗೆ ಭೇಟಿ ನೀಡಬೇಕು. ಜೊತೆಗೆ ಸ್ನೇಹಿತರ ಮೂಲಕ ಅವರನ್ನು ಸಂಪರ್ಕಿಸಿ, ಎಸ್‌ಐಆರ್ ಪ್ರಕ್ರಿಯೆ ನಡೆಸಬೇಕು. ಪತ್ರಿಕೆಗಳ ಮೂಲಕ ಸಹ ಈ ಬಗ್ಗೆ ಪ್ರಚಾರ ಮಾಡಲಿದೆ’ ಎಂದರು.

‘ಎನ್ಯುಮರೇಷನ್ ಫಾರ್ಮ್‌ನಲ್ಲಿ ಮತದಾರರ ಗುರುತಿನ ಚೀಟಿಯ ಸಂಖ್ಯೆ, ವಿಳಾಸ, ಹೆಸರು ತಿದ್ದುಪಡಿ, ವಿಳಾಸ ಬದಲಾವಣೆ, ಆಧಾರ್ ಸಂಖ್ಯೆಯನ್ನು ಸೇರಿಸಲು ಅವಕಾಶವಿದೆ. ಆಯೋಗ ಸೂಚಿಸಿದ ಯಾವುದಾದರೂ ಒಂದು ದಾಖಲೆ ಸಲ್ಲಿಕೆ ಕಡ್ಡಾಯ ’ ಎಂದರು

‘ಅರ್ಧಕ್ಕಿಂತ ಹೆಚ್ಚು ಮತದಾರರು ದಾಖಲೆ ಸಲ್ಲಿಸಬೇಕಾಗಲಿಕ್ಕಿಲ್ಲ’

ಒಂದನೇ ಪುಟದಿಂದ...

ಈ ಹಿಂದೆ, ವಿವಿಧ ರಾಜ್ಯಗಳಲ್ಲಿ ನಡೆದ ಎಸ್‌ಐಆರ್ ಬಳಿಕ ಸಿದ್ಧಪಡಿಸಲಾಗಿರುವ ಮತದಾರರ ಪಟ್ಟಿಯಲ್ಲಿರುವ ವಿವರಗಳನ್ನು ಪರಿಗಣಿಸುತ್ತಿರುವುದೇ ಇದಕ್ಕೆ ಕಾರಣ ಎಂದು ಆಯೋಗ ಹೇಳಿದೆ.

ಬಹುತೇಕ ರಾಜ್ಯಗಳಲ್ಲಿ 2002 ಮತ್ತು 2004ರ ನಡುವೆ ಎಸ್‌ಐಆರ್ ನಡೆಸಲಾಗಿದೆ. ಮುಂದಿನ ಎಸ್‌ಐಆರ್ ವೇಳೆ, 2002 ಹಾಗೂ 2004ರ ನಡುವಿನ ಸಂಬಂಧಿಸಿದ ವರ್ಷವನ್ನೇ ಆಧಾರವನ್ನಾಗಿ ಪರಿಗಣಿಸಲಾಗುವುದು ಎಂದೂ ಆಯೋಗ ಸ್ಪಷ್ಟಪಡಿಸಿದೆ.

ಈ ಹಿಂದಿನ ಎಸ್‌ಐಆರ್ ಬಳಿಕ ಪ್ರಕಟಿಸಲಾಗಿರುವ ಮತದಾರರ ಪಟ್ಟಿಯನ್ನು ಸಿದ್ಧವಾಗಿಟ್ಟುಕೊಳ್ಳುವಂತೆ ಎಲ್ಲ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ (ಸಿಇಒ) ಈಗಾಗಲೇ ಸೂಚನೆ ನೀಡಲಾಗಿದೆ. ಕೆಲ ರಾಜ್ಯಗಳ ಸಿಇಒಗಳು ಇಂತಹ ಮತದಾರರ ಪಟ್ಟಿಯನ್ನು ಈಗಾಗಲೇ ಕಚೇರಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದಾರೆ.

ಬದಲಾಗಲಿದೆ ಮತಗಟ್ಟೆ, ವಿಭಾಗ

ಎಸ್‌ಐಆರ್ ಪ್ರಕ್ರಿಯೆಯ ಭಾಗವಾಗಿ ಮತಗಟ್ಟೆ, ವಿಭಾಗಗಳು ಬದಲಾಗಲಿವೆ. ಒಂದು ಕಟ್ಟಡ, ಒಂದು ಬೀದಿ, ಒಂದು ಮತಗಟ್ಟೆ ವಿಭಾಗದಲ್ಲಿ ವಾಸಿಸುತ್ತಿರುವ ಎಲ್ಲ ಮತದಾರರು ಒಂದೇ ಮತಗಟ್ಟೆ ಮತ್ತು ವಿಭಾಗಕ್ಕೆ ಒಳಪಡುವಂತೆ ಮತದಾರರ ಪಟ್ಟಿಯನ್ನು ಪರಿಷ್ಕರಿಸಲಾಗುತ್ತದೆ.

ಒಂದು ಮತಗಟ್ಟೆಯಲ್ಲಿ 1,200ಕ್ಕಿಂತಲೂ ಹೆಚ್ಚು ಮತದಾರರು ಇರಬಾರದು. ಪ್ರತಿ ಮತಗಟ್ಟೆಗೆ 1,200 ಮತದಾರರನ್ನು ಮಿತಿಗೊಳಿಸಿ, ಹೊಸ–ಮತಗಟ್ಟೆಗಳನ್ನು ರಚಿಸಲಾಗುತ್ತದೆ.

ತಿರಸ್ಕಾರಕ್ಕೂ ಅವಕಾಶ

ಆಯೋಗವು ಸೂಚಿಸಿರುವ ಎಲ್ಲ ದಾಖಲೆಗಳನ್ನು ಸಲ್ಲಿಸಿದ್ದರೂ ಅವರ ಗಣತಿ ನಮೂನೆ (ಎನ್ಯುಮರೇಷನ್ ಫಾರ್ಮ್) ತಿರಸ್ಕರಿಸಿ ಶಿಫಾರಸು ಮಾಡಲು ಮತಗಟ್ಟೆ ಅಧಿಕಾರಿಗಳಿಗೆ (ಬಿಎಲ್‌ಒ) ಅವಕಾಶವಿದೆ. ಗಣತಿ ನಮೂನೆ, ಘೋಷಣಾ ಪತ್ರದಲ್ಲಿ ಅವುಗಳನ್ನು ಶಿಫಾರಸು ಮಾಡಲಾಗಿದೆ ಅಥವಾ ಶಿಫಾರಸು ಮಾಡಲಾಗಿಲ್ಲ ಎಂದು ಬಿಎಲ್‌ಒ ಆಯ್ಕೆ ಮಾಡಬಹುದಾಗಿದೆ.

ಆದರೆ ಬಿಎಲ್‌ಒಗಳು ಶಿಫಾರಸಿಗೆ ಅಗತ್ಯ ಕಾರಣಗಳನ್ನು ಒದಗಿಸಬೇಕು ಮತ್ತು ಇತರ ಕೆಲ ಮತದಾರರ ಸಹಿ ಪಡೆದು ಮಹಜರು ನಡೆಸಿರಬೇಕು. ಬಿಎಲ್‌ಒಯಿಂದ ಶಿಫಾರಸು ಆಗಿ ಬಂದ ಗಣತಿ ನಮೂನೆ ಮತ್ತು ಘೋಷಣಾ ಪತ್ರವನ್ನು ಅಂಗೀಕರಿಸಲಾಗಿದೆ ಅಥವಾ ತಿರಸ್ಕರಿಸಲಾಗಿದೆ ಎಂದು ಆಯ್ಕೆ ಮಾಡುವ ಅಧಿಕಾರ ಮತದಾರರ ನೋಂದಣಾಧಿಕಾರಿಗೆ ನೀಡಲಾಗಿದೆ.

‘ಮತ ಪತ್ರ: ಕಾನೂನಿನಂತೆ ಚುನಾವಣೆ’

ಬೆಂಗಳೂರು: ‘ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತ ಪತ್ರ ಕಡ್ಡಾಯಗೊಳಿಸಿ ಸರ್ಕಾರ ಕಾನೂನು ತಂದರೆ ನಾವು ಅದೇ ರೀತಿ ಚುನಾವಣೆ ಮಾಡಬೇಕಾಗುತ್ತದೆ’ ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಮತಪತ್ರ ಅಥವಾ ವಿದ್ಯುನ್ಮಾನ ಮತ ಯಂತ್ರದ (ಇವಿಎಂ) ಮೂಲಕ ಚುನಾವಣೆ ನಡೆಸಬಹುದು ಎಂಬುದು ಕಾಯ್ದೆಯಲ್ಲೇ ಇದೆ’ ಎಂದರು.

ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬ ಆಗುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯಬೇಕಿದೆ. ವಿಳಂಬಕ್ಕೆ ನಾವು ಕಾರಣ ಅಲ್ಲ. ಸರ್ಕಾರದಿಂದ ಮೀಸಲಾತಿ ಪಟ್ಟಿ ಬರಬೇಕಿದೆ’ ಎಂದರು.

‘188 ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಯ ಅವಧಿ ಅಕ್ಟೋಬರ್‌ನಲ್ಲಿ ಮುಗಿಯಲಿದೆ. ಅವುಗಳಿಗೂ ಚುನಾವಣೆ ನಡೆಸಬೇಕಿದೆ. ಮೀಸಲಾತಿ ಪಟ್ಟಿಯನ್ನು ಸರ್ಕಾರ ಯಾಕೆ ಕೊಟ್ಟಿಲ್ಲ ಎಂಬುದು ಅರ್ಥ ಆಗಿಲ್ಲ’ ಎಂದೂ ಹೇಳಿದರು.

‘ಎರಡು ವಾರಗಳ ಹಿಂದೆ ಹೈಕೋರ್ಟ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಷಯ ವಿಚಾರಣೆಗೆ ಬಂದಿತ್ತು. ಕ್ಷೇತ್ರ ಪುನರ್ ವಿಂಗಡಣೆ ಮಾಡಬೇಕಿದೆ ಎಂದು ಕೋರ್ಟ್‌ಗೆ ಸರ್ಕಾರ ಹೇಳಿದೆ. ನಂತರ ಚುನಾವಣೆ ನಡೆಯಲಿದೆ’ ಎಂದರು.

ರಸ್ತೆಗಿಳಿದ ಐಷಾರಾಮಿ ಮಹೀಂದ್ರಾ, BE6

ಭಾರತದ ಎಲೆಕ್ಟ್ರಿಕ್ ಕಾರುಗಳ ಪಿತಾಮಹ ಹಾಗೂ ಇವಿ ಮಾರುಕಟ್ಟೆಯ ನಾಯಕ ಎಂದೇ ಖ್ಯಾತಿಯುಳ್ಳ ಮಹೀಂದ್ರಾ ಕಂಪನಿಯ ನೂತನ Electric ಎಸ್‌ಯುವಿಗಳು ಮಾರುಕಟ್ಟೆಗೆ ದಾಂಗುಡಿವಿಡುತ್ತಿವೆ. ಐಷಾರಾಮಿ ಕಾರುಪ್ರಿಯರ ನಂಬಿಕೆ ಮತ್ತು ಉತ್ಸಾಹಕ್ಕೆ ಪಾತ್ರವಾಗುವಂತ ಶ್ರೇಣಿಯಲ್ಲಿ ಮಹೀಂದ್ರಾ, BE 6, XEV 9E ಸರಣಿಯ eSUVಗಳು ರಸ್ತೆಗಿಳಿದಿವೆ.

ಕಾರು ಖರೀದಿಸುವ ಬಗ್ಗೆ ಯೋಚಿಸುತ್ತಿಲ್ಲವೇ? ಖಂಡಿತಾ ಈಗ ನೀವು ಯೋಚಿಸುತ್ತೀರಿ. ಯೋಚಿಸಲೇ ಬೇಕು... ಆ ರೀತಿ ಇದೆ ಮಹೀಂದ್ರ BE 6.

ಒಂದು ಒಳ್ಳೆಯ ಎಲ್ಲ ಸವಲತ್ತುಗಳುಗಳ್ಳ ಕಾರು ಇರಬೇಕು ಎಂದು ಬಯಸುವವರ ಅದರಲ್ಲೂ ಐಷಾರಾಮಿ ಕಾರುಗಳ ಬಗ್ಗೆ ಯೋಚಿಸುವವರು ಮಹೀಂದ್ರಾ BE 6 ಪ್ಯಾಕ್ ಟು ಅನ್ನು ನಿರ್ಲಕ್ಷಿಸುವುದು ಅಸಾಧ್ಯದ ಮಾತು. ಕೇವಲ ₹21.90 ಲಕ್ಷ ಬೆಲೆಯಲ್ಲಿ ಕಾರು ನಿಮ್ಮದಾಗಲಿದೆ. ಅಷ್ಟೂ ಹಣವನ್ನು ಒಂದೇ ಬಾರಿ ಕೊಡಬೇಕಲ್ಲ ಎಂಬ ಚಿಂತೆಯೂ ಬೇಡ. ₹ 39,545 ಸುಲಭ ಕಂತುಗಳ EMI ಯೋಜನೆಯಡಿ ನೀವು ಪ್ರೀಮಿಯಂ SUV ಕ್ಷೇತ್ರದ ಮಾಲೀಕರಾಗಬಹುದಾಗಿದೆ.

ಟಾಪ್ ಎಂಡ್ ವೈಶಿಷ್ಟ್ಯಗಳು: ರೇಸ್ ರೆಡಿ ಕಾಕ್‌ಪಿಟ್, ಪ್ರೀಮಿಯಂ ಲೆದರೆಟ್ ಇಂಟೀರಿಯರ್ಸ್, ಎಲ್‌ಇಡಿ ಲ್ಯಾಂಪ್‌ಗಳು, ಆರ್ 19 ವೀಲ್ಸ್, ಫಿಕ್ಸೆಡ್ ಗ್ಲಾಸ್ ಇನ್ಫಿನಿಟಿ ರೂಫ್, 5 ಸ್ಟಾರ್ ಭಾರತ್ ಎನ್‌ಸಿಎಪಿ ಸುರಕ್ಷತಾ ರೇಟಿಂಗ್, 59 ಕಿ.ವ್ಯಾ ಬ್ಯಾಟರಿ 400 ಕಿ.ಮೀ ವ್ಯಾಪ್ತಿಯನ್ನು ನೀಡುತ್ತದೆ. ಡಾಲ್ಬಿ ಅಟ್ಮಾಸ್‌ನೊಂದಿಗೆ 16 ಸ್ಪೀಕರ್ ಹರ್ಮನ್-ಕಾರ್ಡನ್ ಮತ್ತು ಲೆವೆಲ್ 2 ಎಡಿಎಎಸ್ ಸೇರಿರುವ ಅತ್ಯಾಧುನಿಕ ಅಂಶಗಳನ್ನು BE 6 ಹೊಂದಿದೆ.

ನೋಡಲು ಒಂದು ದಿಟ್ಟ ನಿಲುವು, ಗಂಭೀರತೆ ಹೊಂದಿರುವ ಸಿಲೂಯೆಟ್ ಬಿಇ6 ಕಾರಿನ 79kWh ಬ್ಯಾಟರಿಯು ಒಂದೇ ಚಾರ್ಜ್‌ನಲ್ಲಿ ಸುಮಾರು 500 ಕಿ.ಮೀ ವ್ಯಾಪ್ತಿ (ದೂರ)ಯನ್ನು ಕ್ರಮಿಸುತ್ತದೆ ಎಂಬುದು ಕಂಪನಿ ಮಾತು. ಅಂದರೆ ನೀವು (ಮಾಲೀಕರು) ಬ್ಯಾಟರಿಯನ್ನು ವಾರಕ್ಕೊಮ್ಮೆ ಮಾತ್ರ ಚಾರ್ಜ್ ಮಾಡಿದರೆ ಸಾಕು. ವಾರಾಂತ್ಯ ಕಳೆಯಲು ಇದಕ್ಕಿಂತ ಉತ್ತಮ ಕಾರಿಲ್ಲ. ಈಗಲೇ ಈ ಹೊಸ ಕಾರಿನೊಂದಿಗೆ ಯೋಜನೆ ರೂಪಿಸಬಹುದಾಗಿದೆ.

ಇಷ್ಟೇ ಅಲ್ಲದೆ, ಮತ್ತೊಂದು ವಿಶೇಷ ಅಂಶವೆಂದರೆ ಈ ಕಾರಿನ ಮಾಲೀಕರು ಬ್ಯಾಟರಿ ಬಗ್ಗೆ ಚಿಂತಿಸುವ ಅಗತ್ಯವೂ ಬರುವುದಿಲ್ಲ. ಕಾರಣ ನಿಮಗೆ ಜೀವಿತಾವಧಿಯ ಬ್ಯಾಟರಿ ಖಾತರಿಯೊಂದಿಗೆ ಕಾರು ನಿಮ್ಮ ಕೈಸೇರಲಿದೆ.

ಮಹೀಂದ್ರಾ XEV 9E

ಮಹೀಂದ್ರಾ XEV 9E ನಂತರ ಇತರ ಕಾರುಗಳು ನಿಮ್ಮ ಎರಡನೇ ಅತ್ಯುತ್ತಮ ಕಾರುಗಳಾಗಿ ಕಾಣುತ್ತಿದ್ದರೆ. ಅದು ಖಂಡಿತಾ ನಿಜ. ಕಾರಣ, ಒಮ್ಮೆ ನೀವು ಮಹೀಂದ್ರಾ ನೂತನ ಎಕ್ಸ್‌ಇವಿ 9ಇ ನೋಡಿದ ನಂತರ ಹಾಗೆ ಅನಿಸುವುದು ಸಹಜ. ಎಕ್ಸ್‌ಇವಿ 9ಇ ಯ ಆಧುನಿಕ ತಂತ್ರಜ್ಞಾನ ಹಾಗೂ ವಿನ್ಯಾಸ ಕೂಡ ಹಾಗೇ ಇದೆ. ಆದರೂ ಮಹೀಂದ್ರಾ XEV 9e ಪ್ಯಾಕ್ ತನ್ನತನವನ್ನು ಉಳಿಸಿಕೊಂಡು ಹೊರಬಂದಿದೆ. ನೋಡಲು ಸರಳವಾಗಿ ಕಂಡುಬರುತ್ತದೆ. ಆದರೆ, ಅದರ ಒಳಾಂಗಣ ವ್ಯವಸ್ಥೆಯಂತೂ ಅತ್ಯದ್ಭುತ. ಇಂತಹ ಅಮೋಘ ಕಾರು ಕೇವಲ ₹ 24.90 ಲಕ್ಷಕ್ಕೆ ಲಭ್ಯವಿದೆ. ಮಾಸಿಕ ₹45,716 ಕಂತು ಕಟ್ಟುವ ಮೂಲಕವೂ ಇದನ್ನು ತನ್ನದಾಗಿಸಿಕೊಳ್ಳಬಹುದಾಗಿದೆ. ಇದರ ಕಾರ್ಯಕ್ಷಮತೆ ಅಗಾಧ. ಹೊಳಪು ಕಣ್ಣಿಗೆ ರಾಚದೆ ಕ್ಲಾಸಿಕ್ ನೋಟವನ್ನು ನೀಡುತ್ತದೆ.

ಟಾಪ್ ಎಂಡ್ ವೈಶಿಷ್ಟ್ಯಗಳು: ಕೋಸ್ಟ್ ಟು ಕೋಸ್ಟ್ ಸ್ಕ್ರೀನ್, 16 ಸ್ಪೀಕರ್ ಹರ್ಮನ್-ಕಾರ್ಡನ್ ಆಡಿಯೋ ವಿತ್ ಡಾಲ್ಬಿ ಅಟ್ಮಾಸ್, ಪ್ರೀಮಿಯಂ ಲೆದರೆಟ್ ಇಂಟೀರಿಯರ್ಸ್, LED ಲ್ಯಾಂಪ್‌ಗಳು, R19 ವೀಲ್ಸ್, ಫಿಕ್ಸೆಡ್ ಗ್ಲಾಸ್ ಇನ್ಫಿನಿಟಿ ರೂಫ್, 5 ಸ್ಟಾರ್ ಭಾರತ್ NCAP ಸುರಕ್ಷತಾ ರೇಟಿಂಗ್, 59kWh ಬ್ಯಾಟರಿ 400 ಕಿಮೀ ವ್ಯಾಪ್ತಿಯನ್ನು ನೀಡುತ್ತದೆ.

ಸುಂದರ ಕೆತ್ತನೆಯ ಫ್ರೇಮ್ ಅಡಿಯಲ್ಲಿ 79 kWh ಬ್ಯಾಟರಿಯನ್ನು ಸುರಕ್ಷಿತವಾಗಿರಿಸಿದ್ದು, ಒಂದೇ ಚಾರ್ಜ್‌ನಲ್ಲಿ 500 ಕಿಮೀವರೆಗೆ ಚಲಿಸುವ ಶಕ್ತಿ ಹೊಂದಿದೆ. ಅಂದರೆ ಬ್ಯಾಟರಿ ವಾರಕ್ಕೊಮ್ಮೆ ಮಾತ್ರ ಚಾರ್ಜ್ ಮಾಡಿದರೆ ಸಾಕಾಗುತ್ತದೆ.

ಪ್ರವಾಸ ಪ್ರಿಯರಿಗೆ ನೆಮ್ಮದಿ ಮತ್ತು ತೃಪ್ತಿ ತರುವಲ್ಲಿ ಎಕ್ಸ್‌ಇವಿ 9ಇ ಮುಂಚೂಣಿಗೆ ಬರಲಿದೆ. ನಿಮ್ಮ ಅದ್ಭುತ ರಸ್ತೆ ಪ್ರವಾಸ ಆನಂದ ತರುವುದಂತೂ ಖಂಡಿತ. ಬ್ಯಾಟರಿ ಬಗ್ಗೆ ಚಿಂತಿಸುವ ಅಗತ್ಯವಿರುವುದಿಲ್ಲ. ಜೀವಿತಾವಧಿಯ ಬ್ಯಾಟರಿ ಖಾತರಿಯೊಂದಿಗೆ ಕಾರು ನಿಮ್ಮದಾಗಲಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಪೂಜೆಗಳಲ್ಲಿ ಹಲವು ಬಗೆಗಳುಂಟು. ಅವುಗಳಲ್ಲಿ 'ಪುಸ್ತಕ ಪೂಜೆ'ಯೂ ಒಂದು.

–ಹಾ.ಮಾ. ನಾಯಕ

ಸಂಪಾದಕೀಯ

ಕ್ರಿಕೆಟ್: ಹಸ್ತಲಾಘವ ನಿರಾಕರಣೆ ಕಳೆದುಹೋದ ಒಂದು ಸಂದೇಶ

ಸಂಪ್ರದಾಯಗಳು ನಿಯಮಗಳಿಗಿಂತ ಹೆಚ್ಚಾಗಿ ಆಚರಣೆಗಳಾಗಿರುತ್ತವೆ. ಅವುಗಳಿಗೆ ಕಾನೂನಿನ ಚೌಕಟ್ಟು ಇರುವುದಿಲ್ಲ. ನೈತಿಕತೆಯ ದೃಷ್ಟಿಯಿಂದ ನೋಡಿದರೆ, ಜಾರಿಯಲ್ಲಿರುವ ಕಾನೂನುಗಳಿಗಿಂತ ಹೆಚ್ಚಿನ ಮೌಲ್ಯವನ್ನು ಸಂಪ್ರದಾಯಗಳು ಹೊಂದಿರುತ್ತವೆ. ಈ ನೈತಿಕ ಮೌಲ್ಯದ ಹಿನ್ನೆಲೆಯಲ್ಲಿ ನೋಡಿದಾಗ, ಸೆಪ್ಟೆಂಬರ್ 14ರಂದು ನಡೆದ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನ ತಂಡದ ಆಟಗಾರರ ಹಸ್ತಲಾಘವಕ್ಕೆ ಭಾರತ ತಂಡದ ಆಟಗಾರರು ನಿರಾಕರಿಸಿದ್ದು ಸರಿಯಾದ ನಡವಳಿಕೆಯಲ್ಲ ಎಂದೇ ಹೇಳಬೇಕಾಗುತ್ತದೆ. ಟಾಸ್ ವೇಳೆ ಹಾಗೂ ಪಂದ್ಯ ಮುಗಿದ ನಂತರ ಉಭಯ ತಂಡಗಳ ಆಟಗಾರರು ಕೈಕುಲುಕುವುದು ದೀರ್ಘಕಾಲದಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ. ಆದರೆ, ತೆರೆಮರೆಯ ಶಕ್ತಿಗಳು ನಿರ್ದೇಶಿಸಿರುವ 'ಆಟ'ದಲ್ಲಿ ಆಟಗಾರರು ಬರೀ ಪಾತ್ರಧಾರಿಗಳಷ್ಟೇ. ದುರದೃಷ್ಟವಶಾತ್ ಅವರಿಗೇ ಮೊದಲು ಇದರ ಬಿಸಿತಟ್ಟಿದೆ. ಪಹಲ್ಗಾಮ್ ಹತ್ಯಾಕಾಂಡ ಮತ್ತು ನಂತರ ಉಭಯ ದೇಶಗಳ ನಡುವೆ ಗಡಿಯಲ್ಲಿನ ಸಶಸ್ತ್ರ ಸಂಘರ್ಷದ ಹಿನ್ನೆಲೆಯಲ್ಲಿ, ಪಾಕಿಸ್ತಾನ ವಿರುದ್ಧ ಪಂದ್ಯವಾಡಲು ತಯಾರಿ ನಡೆಸುವಾಗಲೇ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ನಿರ್ಧಾರಕ್ಕೆ ವ್ಯಾಪಕ ಟೀಕೆಗಳು ವ್ಯಕ್ತವಾಗಿದ್ದವು. 2012ರಿಂದಲೇ ಭಾರತ– ಪಾಕಿಸ್ತಾನ ತಂಡಗಳ ನಡುವಿನ ದ್ವಿಪಕ್ಷೀಯ ಸರಣಿಗಳನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿದೆ. ಹಣದ ಹೊಳೆ ಹರಿಸುವ 'ಐಪಿಎಲ್'ನಲ್ಲಿ ಪಾಕಿಸ್ತಾನದ ಆಟಗಾರರು ಪಾಲ್ಗೊಳ್ಳುವುದನ್ನು ನಿರ್ಬಂಧಿಸಲಾಗಿದೆ. 'ಐಸಿಸಿ' ಮತ್ತು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ನಡೆಸುವ ಟೂರ್ನಿಗಳಲ್ಲಿ ಪಾಕಿಸ್ತಾನದಲ್ಲಿ ಆಡುವುದಕ್ಕೆ ಅನುಮತಿ ನಿರಾಕರಿಸಿದೆ. ಆದರೆ, ತಟಸ್ಥ ತಾಣದಲ್ಲಿ ಆಡಲು ಅವಕಾಶ ಕೊಟ್ಟಿದ್ದು, ಅದು ಉಭಯ ದೇಶಗಳ ನಡುವಣ ಬಿಕ್ಕಟ್ಟಿನ ಸಂದರ್ಭದಲ್ಲಿ ವಿವೇಚನೆಯ ನಿರ್ಧಾರವಾಗಿದೆ.

ಪಾಕಿಸ್ತಾನದ ಕ್ರಿಕೆಟ್ ಆಟಗಾರರ ಹಸ್ತಲಾಘವಕ್ಕೆ ಭಾರತೀಯ ಆಟಗಾರರು ನಿರಾಕರಿಸಿದ ಘಟನೆ ಪ್ರಹಸನದಂತಿದೆಯೇ ಹೊರತು, ರಾಜಕೀಯ ಸ್ಪಷ್ಟತೆ ಒಳಗೊಂಡಿಲ್ಲ.

ಕ್ರೀಡೆ ಲಕ್ಷಾಂತರ ಜನರನ್ನು ಸೆಳೆಯುವ ಮನರಂಜನೆಯ ಮಾಧ್ಯಮ; ಆಟದ ಮೂಲಕ ದುಮ್ಮಾನಗಳನ್ನು ಹೊರಹಾಕಲು ಹಾಗೂ ಅನ್ಯಾಯಗಳನ್ನು ಪ್ರತಿಭಟಿಸಲು ಒದಗಿಬರುವ ಸಮರ್ಥ ವೇದಿಕೆ ಕೂಡ. ಜನಾಂಗೀಯ ಭೇದ, ಲಿಂಗತಾರತಮ್ಯ, ಯುದ್ಧ ಹೇರಿಕೆಯ ವಿರುದ್ಧ ಪ್ರತಿಭಟನೆ, ಮೊದಲಾದ ರಾಜಕೀಯ ನಿಲುವುಗಳನ್ನು ವ್ಯಕ್ತಪಡಿಸಲು ಕ್ರೀಡಾಕೂಟಗಳು ಬಳಕೆಯಾಗಿವೆ. ಆದರೆ, ಕ್ರಿಕೆಟ್ ಪಂದ್ಯದ ಸಂದರ್ಭದಲ್ಲಿ ಹಸ್ತಲಾಘವಕ್ಕೆ ನಿರಾಕರಿಸಿರುವ ಭಾರತ ಕ್ರಿಕೆಟ್ ತಂಡದ ನಿರ್ಧಾರ ಇಂಥ ಯಾವುದೇ ಉದ್ದೇಶಗಳನ್ನು ಈಡೇರಿಸಿದೆಯೇ ಎನ್ನುವುದು ಅನುಮಾನ. ಪಾಕಿಸ್ತಾನ ವಿರುದ್ಧದ ಪಂದ್ಯವನ್ನೇ ಬಹಿಷ್ಕರಿಸುವ ಮೂಲಕ ಇದಕ್ಕೂ ದೊಡ್ಡ ರೀತಿಯಲ್ಲಿ ಸಂದೇಶ ರವಾನಿಸುವ ಅವಕಾಶ ಭಾರತದ ಕ್ರಿಕೆಟ್ ತಂಡಕ್ಕಿತ್ತು. ಮೂರು ಗಂಟೆಗಳ ಕಾಲ ತಂಡವೊಂದರ ಜೊತೆ ಕ್ರೀಡಾಂಗಣದಲ್ಲಿ ಅರ್ಥಪೂರ್ಣವಾಗಿ ಕಳೆದ ನಂತರ ಕೈಕುಲುಕಲು ನಿರಾಕರಿಸಿದ ಘಟನೆ, ತವರಿನಲ್ಲಿ ಜನರ ಭಾವನೆಗಳನ್ನು ಕೆರಳಿಸುವ ಪ್ರಚೋದನಾತ್ಮಕ ಶಕ್ತಿಗಳನ್ನು ತೃಪ್ತಿಗೊಳಿಸಲು ನಡೆಸಿದ ಪ್ರಹಸನದಂತಿತ್ತು. ಈ ಪ್ರಹಸನದಲ್ಲಿ, ಭಾರತ ತಂಡ ಗಳಿಸಿದ ಏಳು ವಿಕೆಟ್‌ಗಳ ಅಧಿಕಾರಯುತ ಗೆಲುವು ಹೆಚ್ಚು ಚರ್ಚೆಯಾಗಲಿಲ್ಲ. ಪಂದ್ಯಾನಂತರದ ಬೆಳವಣಿಗೆಗಳೇ ಸುದ್ದಿಯ ಕೇಂದ್ರವಾದವು. ಅನಗತ್ಯ ಘಟನೆಗಳಿಗೆ ಆಸ್ಪದ ಕಲ್ಪಿಸದೆಯೇ ಪರಿಸ್ಥಿತಿಯನ್ನು ನಿಭಾಯಿಸುವ ಅವಕಾಶವನ್ನು ಭಾರತ ತಂಡ ಬಿಟ್ಟುಕೊಟ್ಟಿದ್ದರಿಂದಾಗಿ, ಮುಂದಿನ ದಿನಗಳಲ್ಲಿ ನಡೆಯಬಹುದಾದ ಉಭಯ ದೇಶಗಳ ಪಂದ್ಯಗಳನ್ನು ಕ್ರಿಕೆಟೇತರ ಕಾರಣಗಳಿಗಾಗಿಯೂ ಗಮನವಿಟ್ಟು ನೋಡುವ ಪರಿಸ್ಥಿತಿ ಎದುರಾಗಬಹುದು.

ಮ್ಯಾಚ್ ರೆಫ್ರಿ ಆ್ಯಂಡಿ ಪೈಕ್ರಾಫ್ಟ್ ಅವರನ್ನು ವಜಾಗೊಳಿಸಬೇಕು ಎನ್ನುವ ಪಾಕಿಸ್ತಾನ ತಂಡದ ಆಗ್ರಹ ಮತ್ತು ಏಷ್ಯಾ ಕಪ್ ಟೂರ್ನಿಯಿಂದಲೇ ಹಿಂದೆ ಸರಿಯುವುದಾಗಿ ಹಾಕಿರುವ ಬೆದರಿಕೆಯು ಒಣಪ್ರತಿಷ್ಠೆಯಲ್ಲದೇ ಬೇರೇನೂ ಅಲ್ಲ. ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಅಧ್ಯಕ್ಷರಾದ ಮೊಹ್ಸಿನ್ ನಕ್ವಿ ಅವರು ಏಷ್ಯಾ ಕ್ರಿಕೆಟ್ ಕೌನ್ಸಿಲ್‌ಗೂ ಮುಖ್ಯಸ್ಥರು. ಅವರು ತಮ್ಮ ನೇತೃತ್ವದಲ್ಲಿ ನಡೆಯುತ್ತಿರುವ ಉಪಖಂಡದ ಮಹತ್ವದ ಟೂರ್ನಿಯ ಮಹತ್ವವನ್ನು ಕುಗ್ಗಿಸುತ್ತಾರೆಂದು ನಿರೀಕ್ಷಿಸಲಾಗದು. ಅದಕ್ಕಿಂತಲೂ ಮುಖ್ಯವಾದ ಸಂಗತಿಯೆಂದರೆ, ಭಾರತದ ಆಟಗಾರರು ಪ್ರಶಸ್ತಿಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರೆ, ಆಗ ನಕ್ವಿ ಅವರಿಂದಲೇ ಟ್ರೋಫಿ ಸ್ವೀಕರಿಸಬೇಕಾಗುತ್ತದೆ. ಅಂಥ ಸಂದರ್ಭ ಎದುರಾದಲ್ಲಿ ನಕ್ವಿ ಅವರ ಕೈಯಿಂದ ಟ್ರೋಫಿ ಸ್ವೀಕರಿಸಲು ಭಾರತ ತಂಡ ನಿರಾಕರಿಸುತ್ತದೆಯೆ? ಅಥವಾ ನಕ್ವಿ ಅವರೇ ಫೈನಲ್ ಪಂದ್ಯದ ನಂತರ ನಡೆಯುವ ಸಮಾರಂಭದಿಂದ ದೂರ ಉಳಿಯುತ್ತಾರೆಯೇ? ಅಂತಿಮವಾಗಿ ಅರ್ಥ ಮಾಡಿಕೊಳ್ಳಬೇಕಾದುದು, ಹಸ್ತಲಾಘವದ ಪ್ರಕ್ರಿಯೆ ಕ್ರೀಡಾಸ್ಫೂರ್ತಿಯ ಸಂಕೇತವಾದ ಒಂದು ಸಂಪ್ರದಾಯವಷ್ಟೇ ಆಗಿತ್ತು ಎನ್ನುವುದನ್ನು.

ರಾಜ–ದೈವ: ಎಲ್ಲಿದೆ ಮಾದರಿ?

ವಿಶ್ಲೇಷಣೆ

ಬಸವರಾಜ ಸಾದರ

> ರಾಜಕಾರಣಿಗಳು, ದೇವರುಗಳು ಹೇಗಿರಬೇಕು ಎನ್ನುವುದಕ್ಕೆ ಉತ್ತಮ ನಿದರ್ಶನಗಳು ಸಾಹಿತ್ಯ ಕೃತಿಗಳಲ್ಲಿ ಹಾಗೂ ಜಾನಪದದಲ್ಲಿ ದೊರಕುತ್ತವೆ. ಕಟ್ಟ ಕಡೆಯವನ ಹಿತವನ್ನೂ ಬಯಸುವ ಆ ಮಾದರಿಗಳನ್ನು ನಾವು ಹುಡುಕಿಕೊಳ್ಳಬೇಕು ಹಾಗೂ ಅವುಗಳನ್ನು ವರ್ತಮಾನದ ರಾಜಕಾರಣಿಗಳು ಮತ್ತು ಜನಪ್ರಿಯ ದೇವರುಗಳ ಜೊತೆ ಹೋಲಿಸಿ ಚರ್ಚಿಸಬೇಕು.

ವರ್ತಮಾನದ ಪರಿಸ್ಥಿತಿಯಲ್ಲಿ ನಂಬಲು ಸಾಧ್ಯವೇ ಇರದ, 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಪುರಾಣ ಪರಂಪರೆಯ ಮಾತೊಂದು ನಮ್ಮಲ್ಲಿದೆ. ದೇವರಾಗುವ ಮಾತಿರಲಿ, ರಾಕ್ಷಸರೇ ಆಗಿ ಜನರ ಶೋಷಣೆ ಮಾಡುತ್ತ, ದೇಶವನ್ನೇ ಹರಾಜು ಹಾಕುವ ಸ್ಥಿತಿಗೆ ತಳ್ಳುವ ರಾಜಕಾರಣಿಗಳೇ ಹೆಚ್ಚಾಗುತ್ತಿದ್ದಾರೆ. ವಿಶ್ವದ ಅನೇಕ ರಾಷ್ಟ್ರಗಳು ಬೆಂಕಿಯಲ್ಲಿ ಬೇಯುತ್ತಿರುವುದು ಹಾಗೂ ದಿವಾಳಿಯಂಚು ತಲಪುತ್ತಿರುವುದು ಇಂಥ ರಾಕ್ಷಸಿ ಪ್ರವೃತ್ತಿಯ ರಾಜಕಾರಣಿಗಳಿಂದಲೇ. ಇಂಥವರನ್ನು 'ಪ್ರತ್ಯಕ್ಷ ದೇವರುಗಳು' ಎಂದರೆ ಹಾಸ್ಯಾಸ್ಪದ ಆಗಲಿಕ್ಕಿಲ್ಲವೆ?

ಆಳುವವನ ಕೃಪೆ ತಮಗಿರಲಿ ಎಂದೋ, ತಮ್ಮ ಮೇಲೆ ಸಿಟ್ಟಾಗದಿರಲೆಂದೋ ರಾಜನನ್ನು 'ಪ್ರತ್ಯಕ್ಷ ದೇವತೆ' ಎಂದು ಜನ ಸಂಬೋಧಿಸುತ್ತಿದ್ದರೆಂದು ತೋರುತ್ತದೆ. ಅಂಥ ರಾಜರುಗಳನ್ನು 'ಬಹುಪರಾಕ್' ಎಂದು ಹಾಡಿ–ಹೊಗಳಿ ಅಟ್ಟಕ್ಕೇರಿಸಿ, ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿತ್ತು ಒಂದು ವರ್ಗ. ವಾಸ್ತವವೇನೆಂದರೆ, ಬಹುತೇಕ ರಾಜರು ಪ್ರಜಾವಾತ್ಸಲ್ಯಕ್ಕಿಂತ, ತಮ್ಮ ಕುಟುಂಬವತ್ಸಲರೂ, ಯುದ್ಧ ಮಾಡಿ ರಾಜ್ಯ ವಿಸ್ತಾರವನ್ನು ಹೆಚ್ಚಿಸಿಕೊಳ್ಳುವವರೂ, ವಂಶಪಾರಂಪರ್ಯ ಆಡಳಿತದಲ್ಲೇ ಹೆಚ್ಚು ಮುತುವರ್ಜಿ ವಹಿಸುತ್ತಿದ್ದವರೂ, ಹೆಚ್ಚು ರಾಣಿಯರನ್ನು ಹೊಂದುವಲ್ಲಿ ಆಸಕ್ತರಾದವರೂ ಹಾಗೂ ಜನತೆಯಿಂದ ಸುಂಕ ವಸೂಲಿ ಮಾಡುತ್ತ ಬೊಕ್ಕಸವನ್ನು ತುಂಬಿಕೊಳ್ಳುವವರೂ ಆಗಿರುತ್ತಿದ್ದುದು ಇತಿಹಾಸದ ಪುಟಗಳಿಂದ ತಿಳಿಯುತ್ತದೆ. ಪುರಾತನ ರಾಜರುಗಳ ಇಂಥ ನಡತೆಗಳೇ ಇಂದಿನ ರಾಜಕಾರಣಿಗಳಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅತ್ಯಾಚಾರ, ದರ್ಪ, ಧಾರ್ಷ್ಟ್ಯ– ಹೀಗೆ ವಿವಿಧ ಮುಖಗಳನ್ನು ತೊಟ್ಟು ಪ್ರಜೆಗಳಿಗೆ ಹಾಗೂ ಪ್ರಜಾಪ್ರಭುತ್ವಕ್ಕೆ ಮಾರಕವಾಗುತ್ತಿವೆ. ಒಟ್ಟಾರೆ, ಪ್ರಜೆಗಳ ಹಿತಾಸಕ್ತಿಯನ್ನು ಕಾಯಬೇಕಾದ ಪ್ರಜಾಪ್ರಭುತ್ವವು ಈ ಬಗೆಯ ರಾಜಕಾರಣಿಗಳಿಂದಾಗಿ ತನ್ನ ನಿಜಾರ್ಥ ಕಳೆದುಕೊಂಡು, ಹಳೆಯ 'ರಾಜಪ್ರಭುತ್ವ'ವೇ ಆಗಿ ಇಡೀ ವ್ಯವಸ್ಥೆಯನ್ನೇ ಹಾಳುಗೆಡವುತ್ತಿದೆ.

ಇಂಥ ಹೊತ್ತಲ್ಲಿ, ಯಾವ ಕಾಲದ ರಾಜಕಾರಣಿಗಳೂ ಅನುಸರಿಸಬೇಕಾದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಆಡಳಿತ ವ್ಯವಸ್ಥೆಯಲ್ಲಿ ಕ್ರಿಯಾತ್ಮಕವಾಗಿ ಜಾರಿಗೆ ತಂದು ತೋರಿಸಿದ 'ಕೆಲವರಾದರೂ' ರಾಜರುಗಳು ಆಗಿ ಹೋಗಿರುವುದು ಮುಖ್ಯವಾಗುತ್ತದೆ. ಅಂಥವರು, ಶೋಷಿತರು, ನೊಂದವರು, ಬಡವರು ಮತ್ತು ದಲಿತರ ಬಗ್ಗೆ ಅಪಾರ ಕಾಳಜಿ ತೋರಿಸಿ, ಅವರಿಗೆ ಸಲ್ಲಬೇಕಾದ ಮಾನವಹಕ್ಕುಗಳನ್ನು ದೊರಕಿಸಿಕೊಟ್ಟು, ಅವರೂ ಎಲ್ಲರಂತೆ ಸಮಾನರು ಎಂಬ ಸಂದೇಶವನ್ನು ಸಾರಿದ್ದಾರೆ. ರಾಜರುಗಳಷ್ಟೇ ಅಲ್ಲ, ನಮ್ಮ ಅನೇಕ ಜನಪದ ದೇವರುಗಳೂ ಇಂಥದ್ದೇ ಕೆಲಸ ಮಾಡಿ ತೋರಿಸಿ, ಪರಂಪರಾಗತ ಸ್ಥಾಪಿತ ದೇವರುಗಳ ಮುಖದ ಮೇಲೆ ಹೊಡೆಯುವಂಥ ಮಾನವೀಯತೆ ಮೆರೆದಿದ್ದುಂಟು.

ಚಂದ್ರಾಪೀಡ ಎಂಬ ರಾಜನೊಬ್ಬನ ಅನನ್ಯ ಉದಾಹರಣೆ ಗಮನಿಸಬಹುದು. ಕಾಶ್ಮೀರದ ಶ್ರೇಷ್ಠ ಕವಿ ಕಲ್ಹಣನು ತನ್ನ ಮಹತ್ವದ ಗ್ರಂಥ 'ರಾಜತರಂಗಿಣಿ'ಯಲ್ಲಿ ಈತನ ಬಗ್ಗೆ ಪ್ರಸ್ತಾಪಿಸುತ್ತಾನೆ. ಹನ್ನೆರಡನೆಯ ಶತಮಾನದಲ್ಲಿದ್ದ ಚಂದ್ರಾಪೀಡನು, ಒಬ್ಬ ಬಡ ಹಾಗೂ ದಲಿತ ಚರ್ಮಕಾರನ ಹಕ್ಕುಗಳನ್ನು ಯಾವ ಬಗೆಯಲ್ಲಿ ರಕ್ಷಿಸಿಕೊಟ್ಟ ಎಂಬುದು ಹೃದಯಸ್ಪರ್ಶಿಯಾಗಿ ದಾಖಲಾಗಿದೆ.

ಚಂದ್ರಾಪೀಡನ ಅಧಿಕಾರಿಗಳು ರಾಜನ ಆರಾಧ್ಯ ದೈವವಾದ ತ್ರಿಭುವನ ಸ್ವಾಮಿಯ ದೇವಾಲಯವನ್ನು ಕಟ್ಟಿಸಲು ಆರಂಭಿಸುತ್ತಾರೆ. ದೇವಾಲಯಕ್ಕಾಗಿ ಅವರು ಗುರುತಿಸಿದ ಜಾಗದಲ್ಲಿದ್ದ ಚರ್ಮಕಾರನ ಗುಡಿಸಲಿರುತ್ತದೆ. ಆ ಜಾಗವನ್ನು ಖಾಲಿ ಮಾಡಲು ಆದೇಶಿಸಿದಾಗ, ಆತ ಒಪ್ಪುವುದಿಲ್ಲ. ಕೋಪಗೊಂಡ ಅಧಿಕಾರಿಗಳು ಗುಡಿಸಲನ್ನೇ ಕೆಡವಿ ಹಾಕಲು ಹೊರಟಾಗ, ಚರ್ಮಕಾರ ದೊರೆಯ ಹತ್ತಿರ ಹೋಗಿ, 'ರಾಜನಿಗೆ ಅರಮನೆ ಪ್ರಿಯವಾದಂತೆ, ನನಗೆ ಈ ಗುಡಿಸಲೇ ಪ್ರಿಯವಾದದ್ದು. ಅದಕ್ಕಾಗಿ ಇದನ್ನು ಕೆಡವಬಾರದು' ಎಂದು ಮನವಿ ಸಲ್ಲಿಸುತ್ತಾನೆ. ಆಗ ರಾಜ ನೀಡಿದ ಆದೇಶ ಅನನ್ಯವಾದುದಾಗಿದೆ:

'ಅಧಿಕಾರಿಗಳೆ, ತಕ್ಷಣ ದೇವಾಲಯ ಕಟ್ಟುವುದನ್ನು ನಿಲ್ಲಿಸಿರಿ. ಕಟ್ಟುವುದೇ ಆದರೆ ಅದನ್ನು ಬೇರೆ ಕಡೆ ಮಾಡಿರಿ. ಬೇರೆಯವರ ಭೂಮಿಯನ್ನು ಕಸಿದುಕೊಂಡು ಅದರಲ್ಲಿ ದೇವಾಲಯ ಕಟ್ಟಿಸಿ ಯಾರು ತಮ್ಮ ಪುಣ್ಯವನ್ನು ಕಳೆದುಕೊಳ್ಳುತ್ತಾರೆ? ಸರಿ ಮತ್ತು ತಪ್ಪುಗಳನ್ನು ನಿರ್ಧರಿಸಬೇಕಾದ ನಾವೇ ಮನುಷ್ಯವಿರೋಧಿ ಹಾಗೂ ಧರ್ಮವಿರೋಧಿ ಕೆಲಸಗಳನ್ನು ಮಾಡಿದರೆ, ಬೇರೆಯವರು ಧರ್ಮ ಮಾರ್ಗದಲ್ಲಿ ನಡೆಯಲು ಸಾಧ್ಯವೆ?'

ರಾಜನ ಆದೇಶದ ಪರಿಣಾಮವಾಗಿ ಅಧಿಕಾರಿಗಳು ಅಲ್ಲಿ ದೇವಾಲಯ ಕಟ್ಟುವುದನ್ನು ನಿಲ್ಲಿಸಿ, ಚರ್ಮಕಾರನ ಗುಡಿಸಲನ್ನು ಉಳಿಸುತ್ತಾರೆ. ಇಷ್ಟಕ್ಕೇ ಮುಗಿಯುವುದಿಲ್ಲ ಘಟನೆ. ರಾಜನ ಉದಾರತೆ ಮೆಚ್ಚಿಕೊಳ್ಳುವ ಚರ್ಮಕಾರನು, ಅತ್ಯಂತ ಕೃತಜ್ಞತೆಯಿಂದ, 'ರಾಜಧರ್ಮವನ್ನು ಅನುಸರಿಸಿ, ಬೇರೆಯವರಿಗೆ ಯಾವುದೇ ಹಾನಿಯಿಲ್ಲದೇ ಅನುಕೂಲ ಮಾಡಿಕೊಡುವುದೇ ನಿಜವಾದ ರಾಜರಿಗೆ ಭೂಷಣವಾದದ್ದು. ಇಂಥ ನಿನ್ನ ನಡೆ ನಿನಗೆ ಮಂಗಲವನ್ನುಂಟು ಮಾಡಲಿ. ನಿನ್ನ ರಾಜಧರ್ಮದ ನೀತಿಯು ಈ ನೆಲದಲ್ಲಿ ಬಹಳ ಕಾಲ ಉಳಿಯಲಿ. ಯಾಕೆಂದರೆ, ಧರ್ಮಮಾರ್ಗದಲ್ಲಿ ನಡೆಯಬೇಕೆಂಬ ರಾಜರುಗಳಿಗೆ ನಿನ್ನ ಈ ನಡೆ ನಂಬಿಕೆಯನ್ನು ಉಂಟು ಮಾಡುವಂಥದ್ದು' ಎಂದೂ ಹರಸುತ್ತಾನೆ.

ಇದೇ ಮಾದರಿಯಲ್ಲಿ, ನಮ್ಮ ಜನಪದ ದೇವರುಗಳೂ ಜನಸಾಮಾನ್ಯರ ನೋವು–ನಲಿವುಗಳಿಗೆ ಸ್ಪಂದಿಸಿದ್ದು ಕುತೂಹಲಕಾರಿಯಾಗಿದೆ. ಕವಿ ಸಿದ್ಧಲಿಂಗಯ್ಯ ಅವರು, ಲೇಖಕ ದೇವನೂರ ಮಹಾದೇವ ಅವರಿಗೆ ಹೇಳಿದ ಜನಪದ ಕಥೆಯೊಂದು ಗಮನ ಸೆಳೆಯುವಂತಿದೆ. ಆ ಐತಿಹ್ಯಾತ್ಮಕ ಘಟನೆ ಸ್ವಾರಸ್ಯಕರವಾಗಿಯಷ್ಟೇ ಅಲ್ಲ, ನಮ್ಮ ದೇಶಿ ಹಾಗೂ ಜನಪದ ದೇವರುಗಳು ಹೇಗೆ ಜನರ ಸಂಕಷ್ಟಗಳಿಗೆ ಮಿಡಿಯುತ್ತವೆ ಎಂಬ ಕುತೂಹಲಕಾರಿ ವಾಸ್ತವವನ್ನೂ ಕಟ್ಟಿಕೊಡುತ್ತದೆ. ಕಥೆ ಹೀಗಿದೆ:

ಒಂದು ಊರಲ್ಲಿ, ಆ ಊರಿನ ಜನರೆಲ್ಲಾ ಸೇರಿ, ಗ್ರಾಮದೇವತೆ ಮಂಚಮ್ಮನಿಗೆ ಗುಡಿ ಕಟ್ಟಲು ಯೋಚಿಸುತ್ತಾರೆ. ಕಟ್ಟುವ ಕೆಲಸ ಒಂದು ಹಂತಕ್ಕೆ ಬಂದಾಗ, ಒಮ್ಮೆಲೇ ಮಂಚಮ್ಮ ಒಬ್ಬ ವ್ಯಕ್ತಿಯ ಮೈಯಲ್ಲಿ ಆವಾಹನೆಗೊಂಡು, 'ನಿಲ್ಲಿಸಿ ನನ್ನ ಮಕ್ಳಾ' ಎಂದು ಉಗ್ಗಡಿಸುತ್ತಾಳೆ. ದೇವಿಯ ದನಿ ಕೇಳಿದ ಗ್ರಾಮಸ್ಥರು ಅಚ್ಚರಿಪಡುತ್ತಾರೆ; ತಮ್ಮಿಂದ ಏನೋ ದೋಷ ಆಗಿರಬೇಕೆಂಬ ಭಯ ಅವರಿಗೆ. ತಮಗೆ ಹಾಗೂ ಊರಿಗೆ ಏನು ಕೇಡಾಗುತ್ತದೆಯೋ ಎಂದು ಭಯಭೀತರಾಗಿ ನಿಂತಿದ್ದಾಗಲೇ ಮಂಚಮ್ಮ ಅವರಿಗೆ, 'ಮಕ್ಕಳಾ ಇದೇನು? ನೀವೆಲ್ಲಾ ಸೇರಿ ಏನು ಮಾಡುತ್ತಿದ್ದೀರಿ?' ಎಂದು ಪ್ರಶ್ನಿಸುತ್ತಾಳೆ. 'ತಾಯಿ ನಿನಗೆ ಗುಡಿ ಇಲ್ಲವಲ್ಲ; ಅದಕ್ಕಾಗಿ ಗುಡಿ ಕಟ್ಟಿಸ್ತಾ ಇದ್ದೇವೆ' ಎಂದು ಉತ್ತರಿಸುತ್ತಾರೆ. 'ಓಹೋ ಹಾಗಾ? ಅಂದ್ರೆ ನೀವು ನನಗೆ ಗುಡಿ ಕಟ್ಟಿಸ್ತಿದ್ದೀರಿ ಅಂತಾಯ್ತು'. 'ಹೌದು ತಾಯಿ' ಎನ್ನುತ್ತಾರೆ ಅವರೆಲ್ಲ. ಆಗ ಮಂಚಮ್ಮ, 'ಹಾಗಿದ್ರೆ, ಇಲ್ಲಿರುವ ನಿಮಗೆಲ್ಲಾ ಮನೆಗಳು ಇವೆಯಾ?' ಎಂದು ಪ್ರಶ್ನೆ ಕೇಳುತ್ತಾಳೆ. ಕೂಡಲೇ ಜನರಲ್ಲೊಬ್ಬ, 'ಇಲ್ಲ ತಾಯಿ, ನನಗೆ ಮನೆಯಿಲ್ಲ' ಎನ್ನುತ್ತಾನೆ. ತಕ್ಷಣ ದೇವಿ, 'ಹಾಗಿದ್ದರೆ, ಈ ಊರಲ್ಲಿ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಗುಡಿ ಬೇಡ' ಎಂದು ಹೇಳಿದವಳೇ ಆವಾಹನೆಗೊಂಡ ವ್ಯಕ್ತಿಯಿಂದ ಹೋಗಿಬಿಡುತ್ತಾಳೆ.

ದೇವಿಯ ಮಾತನ್ನು ಮೀರಲು ಸಾಧ್ಯವೆ? ದೇವಿಗೆ ಗುಡಿ ಕಟ್ಟುವುದೇ ಬೇಡ ಎಂದು ಊರವರು ನಿರ್ಧರಿಸಿ, ಮಂಚಮ್ಮನನ್ನು ಬಟಾಬಯಲಿನಲ್ಲಿಯೇ ಪೂಜಿಸತೊಡಗುತ್ತಾರೆ. ಅಂದಿನಿಂದ ಆ ದೇವಿಯ ಹೆಸರು, 'ಮನೆ ಮಂಚಮ್ಮ'.

ನಮ್ಮ ಜನಪದ ದೇವರುಗಳು ಹೇಗೆ ಮನುಷ್ಯಪರ ಮತ್ತು ಜೀವಪರ ಕರುಣೆ ಮತ್ತು ಕಾಳಜಿ ಹೊಂದಿದ್ದವೆಂಬುದಕ್ಕೆ ಮಂಚಮ್ಮನ ಕಥೆ ಸಾಕ್ಷಿ. ಈ ಕಥೆಯಲ್ಲಿ ಬರೀ ಕರುಣೆಯೊಂದೇ ಇಲ್ಲ; ಸರ್ವರನ್ನೂ ಸಮಾನವಾಗಿ ಕಾಣುವ ಹಾಗೂ ಸರ್ವರಿಗೂ ಅವರ ಎಲ್ಲ ಆವಶ್ಯಕತೆಗಳು ಸಮಾನವಾಗಿಯೇ ದೊರೆಯಬೇಕೆಂಬ ಆಶಯ ಗಾಢವಾಗಿದೆ.

ನಮ್ಮ ಹೊಲಗಳ ಬದುವುಗಳಲ್ಲಿ, ಊರುಗಳ ಹೊರಗೆ, ಊರ ಗಡಿಗಳಲ್ಲಿ, ಗಿಡಗಳ ಬುಡದಲ್ಲಿ, ಮಂಚಮ್ಮನಂಥ ಅನೇಕ ದೇಸಿ ದೇವರುಗಳು ಈಗಲೂ ಬಯಲಲ್ಲೇ ಪೂಜೆಗೊಳ್ಳುತ್ತವೆ. ಕರೆವ್ವ, ಮರೆವ್ವ, ಕೆಂಚವ್ವ, ಬಂದವ್ವ, ಕಾಳವ್ವ, ಗಾಳೆವ್ವ, ಹೀಗೆ ನೆಲದ ದನಿಬನಿಯ ಹೆಸರುಗಳು ಅವುಗಳಿಗಿದ್ದು, ಅವೆಲ್ಲವೂ ಜನರ ಹೃದಯದೊಳಗಿಂದಲೇ ಉದಿಸಿದ ದೇವರುಗಳು. ಹಾಗಾಗಿಯೇ ಅವು ಜನರ ಉದ್ಧಾರವನ್ನೇ ತಮ್ಮ ಆಶಯ ಮತ್ತು ಗುರಿಯನ್ನಾಗಿ ಹೊಂದಿರುತ್ತವೆ. ಇದಕ್ಕೆ ವಿರುದ್ಧವೆಂಬಂತೆ ನಮ್ಮ ಅನೇಕ ದೊಡ್ಡ ದೊಡ್ಡ ದೇವರುಗಳು ಬೃಹತ್ ದೇವಾಲಯಗಳಲ್ಲಿ ಪ್ರತಿಷ್ಠಾಪನೆಗೊಂಡು, ಬಂಗಾರ, ವಜ್ರ–ವೈಢೂರ್ಯಗಳಲ್ಲೇ ಮರೆಯಾಗಿ, ಹಾಲು–ತುಪ್ಪ–ಜೇನಿನಿಂದ ಅಭಿಷೇಕಗೊಳ್ಳುತ್ತ, ಶ್ರೀಮಂತರ 'ದೇವಾಲಯೋದ್ಯಮ'ಕ್ಕೆ ಸಾಕಷ್ಟು ನೆರವಾಗುತ್ತಿವೆ. ಇದೇ ಬಹುದೊಡ್ಡ ದೇವದುರಂತ!

ನಮ್ಮ ಇಂದಿನ ಧರ್ಮಕ್ಷೇತ್ರ ಮತ್ತು ರಾಜಕೀಯ ವಲಯಗಳು ಚಂದ್ರಾಪೀಡನಂಥ ರಾಜಕಾರಣಿಗಳ ಹಾಗೂ ಮನೆ ಮಂಚಮ್ಮನಂಥ ದೇವರುಗಳ, ಮನುಷ್ಯಪರ ಮತ್ತು ಜೀವಪರ ಕಾಳಜಿಗಳಿಂದ ಪಾಠ ಕಲಿಯುವ ಅಗತ್ಯವಿದೆ. ಜೀವಜಗತ್ತಿನ ನೋವಿಗೆ ಮಿಡಿಯುವ ಸಂವೇದನೆಗಳೇ ಇಲ್ಲದ ದೇವರಿಂದ ಅಥವಾ ರಾಜಕಾರಣಿಗಳಿಂದ ಜಗತ್ತಿಗೆ ಅದೆಂಥ ಒಳಿತಾಗಲು ಸಾಧ್ಯ?

ಈಗ ನಮಗೆ ಬೇಕಿರುವುದು ಚಂದ್ರಾಪೀಡನಂಥ ರಾಜಕಾರಣಿಗಳು ಹಾಗೂ ಮನೆ ಮಂಚಮ್ಮನಂಥ ದೇವರುಗಳು.



ವಾಚಕರ ವಾಣಿ

ಬೇವು ಬಿತ್ತಿ ಮಾವು ಬಯಸಿದರೆ...

'ಭಾರತೀಯ ಭಾಷೆಗಳನ್ನು ಪ್ರತಿಯೊಬ್ಬರು ಗೌರವಿಸಬೇಕು' ಎಂದು ಕೇಂದ್ರ ಗೃಹ ಸಚಿವರು ಹೇಳಿದ್ದಾರೆ. ಆದರೆ, ಇಂದಿಗೂ ಒಕ್ಕೂಟ ಭಾರತದ ಆಡಳಿತ ಹಿಂದಿ, ಇಂಗ್ಲಿಷ್‌ನಲ್ಲಿ ನಡೆಯುತ್ತಿದೆ. ಆಯಾ ರಾಜ್ಯದೊಂದಿಗೆ ಆಯಾ ರಾಜ್ಯದ ಭಾಷೆಯಲ್ಲೇ ಆಡಳಿತ ವ್ಯವಹಾರ ನಡೆಸಲು ಕೇಂದ್ರಕ್ಕೆ ಏನು ತೊಂದರೆ? ಒಕ್ಕೂಟ ಭಾರತ ನಡೆಸುವ ಉದ್ಯೋಗ ನೇಮಕಾತಿ ಪರೀಕ್ಷೆಗಳು ಬಹುತೇಕ ಹಿಂದಿ, ಇಂಗ್ಲಿಷ್‌ನಲ್ಲಿ ನಡೆಯುತ್ತವೆ. ಹಿಂದಿ ಮತ್ತು ಇಂಗ್ಲಿಷ್ ಭಾಷೆ ಮೂಲಕ ಪ್ರಾದೇಶಿಕ ಭಾಷೆಗಳ ಕತ್ತನ್ನು ಹಿಚುಕುತ್ತಿದ್ದರೆ ಕನ್ನಡ ಸೇರಿದಂತೆ ಭಾರತೀಯ ರಾಜ್ಯ ಭಾಷೆಗಳು ಹೇಗೆ ಬೆಳೆಯಲು ಸಾಧ್ಯ?

ಗಿರೀಶ್ ಮತ್ತೇರ, ಚನ್ನಗಿರಿ

ಬೆಂಗಳೂರಿಗರಿಗಷ್ಟೇ ಮನೆ ಸಾಕೇ?

ಸುಪ್ರೀಂ ಕೋರ್ಟ್, ಕಟ್ಟಡದ ಸ್ವಾಧೀನಾನುಭವ ಪತ್ರ (ಒಸಿ) ಹಾಗೂ ನಿರ್ಮಾಣ ಮುಕ್ತಾಯ ಪತ್ರ ಪಡೆದಿರುವ ಕಟ್ಟಡಗಳಿಗಷ್ಟೇ ವಿದ್ಯುತ್ ಹಾಗೂ ನೀರಿನ ಸಂಪರ್ಕ ಕೊಡಬೇಕೆಂದು ಕಳೆದ ವರ್ಷ ಆದೇಶಿಸಿತ್ತು. ಅದರಂತೆ ರಾಜ್ಯದಲ್ಲಿ ಅರ್ಹತೆ ಇಲ್ಲದ ಕಟ್ಟಡಗಳಿಗೆ ಈ ಸವಲತ್ತು ನಿಲ್ಲಿಸಲಾಗಿತ್ತು. ಆದರೆ, ರಾಜ್ಯ ಸರ್ಕಾರವು 1,200 ಚದರ ಅಡಿವರೆಗಿನ ವಸತಿ ಕಟ್ಟಡಗಳಿಗೆ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ 'ಒಸಿ'ಯಿಂದ ವಿನಾಯಿತಿ ನೀಡಲು ಸಂಪುಟ ಸಭೆಯಲ್ಲಿ ತೀರ್ಮಾನಿಸಿ ಆದೇಶಿಸಿದೆ. ಇದರಿಂದ ಬೆಂಗಳೂರಿನಲ್ಲಿ ಅಂದಾಜು 33 ಸಾವಿರ ಮನೆಗಳು ಅಥವಾ ನಿವೇಶನಗಳಿಗೆ ವಿದ್ಯುತ್ ಹಾಗೂ ನೀರಿನ ಸಂಪರ್ಕ ಸಿಗುತ್ತದೆ.

ರಾಜಧಾನಿ ಹೊರತುಪಡಿಸಿ ರಾಜ್ಯದ ಪುರಸಭೆ, ನಗರಸಭೆ ವ್ಯಾಪ್ತಿಯಲ್ಲಿ ಲಕ್ಷಾಂತರ ಮನೆಗಳ ನಿರ್ಮಾಣ ಕಾರ್ಯವು 'ಒಸಿ' ಇಲ್ಲದ ಕಾರಣಕ್ಕೆ ನಿಂತು ಹೋಗಿದೆ. ಬದುಕಿನಲ್ಲಿ ಒಂದು ಮನೆ ನಿರ್ಮಿಸಿಕೊಳ್ಳಬೇಕು ಎಂಬ ಲಕ್ಷಾಂತರ ಜನರ ಕನಸು ಅರ್ಧಕ್ಕೆ ನಿಂತಿದೆ. ಸರ್ಕಾರಕ್ಕೆ ಬೆಂಗಳೂರಿನ ಮೇಲಿರುವ ಕಾಳಜಿ, ಪ್ರೀತಿಯು ರಾಜ್ಯದ ಇತರ ನಗರಗಳ ಮೇಲೆ ಏಕಿಲ್ಲ ಎನ್ನುವುದು ಅರ್ಥವಾಗುತ್ತಿಲ್ಲ.

ರವಿ ಬಿ.ಎನ್., ಹರಿಹರ

ವೇಗದೂತ ಬಸ್ ನಿಲುಗಡೆ ಮಾಡಿ

ನೈಸ್ ರಸ್ತೆ ಮೂಲಕ ಎಲೆಕ್ಟ್ರಾನಿಕ್ ಸಿಟಿಗೆ ತೆರಳುವ ಬಿಎಂಟಿಸಿ ಬಸ್‌ಗಳ ನಿಲ್ದಾಣ, ಬೆಂಗಳೂರಿನ ಮಾದಾವರ ಮೆಟ್ರೊ ನಿಲ್ದಾಣದ ಬಳಿ ಇದೆ. ಈ ನಿಲ್ದಾಣದಲ್ಲಿ ಚಿತ್ರದುರ್ಗ, ತುಮಕೂರು ಕಡೆಯಿಂದ ಬರುವ ಕೆಎಸ್‌ಆರ್‌ಟಿಸಿಯ ವೇಗದೂತ ಬಸ್‌ಗಳನ್ನು ನಿಲುಗಡೆ ಮಾಡುತ್ತಿಲ್ಲ. ಇದರಿಂದ ನೈಸ್ ರಸ್ತೆ ಮೂಲಕ ಪ್ರಾರಂಭಿಸಿರುವ ಬಿಎಂಟಿಸಿ ಬಸ್ ಸೇವೆ ಪಡೆಯಲು ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ಬಸ್‌ಗಳ ನಿಲುಗಡೆಗೆ ಕೆಎಸ್‌ಆರ್‌ಟಿಸಿ ವಿಭಾಗವು ಕ್ರಮವಹಿಸಬೇಕಿದೆ.

ಚಂದ್ರಮೌಳಿ ಸ್ವಾಮಿ, ಕೂಡ್ಲಿಗಿ

ಗೌರವಧನ ಬಿಡುಗಡೆಗೆ ವಿಳಂಬ ಸರಿಯಲ್ಲ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ತರಬೇತಿ ಕೈಪಿಡಿಯಲ್ಲಿ ಸಮೀಕ್ಷೆದಾರರಿಗೆ ಸೂಕ್ತ ಗೌರವಧನ ನಿಗದಿಪಡಿಸಲಾಗುವುದು ಎಂದು ಹೇಳಲಾಗಿದೆ. ಸೂಕ್ತ ಗೌರವಧನ ಎಂದರೆ ಎಷ್ಟು? ಅದನ್ನು ಮೊದಲೇ ನಿಗದಿಪಡಿಸಲಿ.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ನಡೆದ ಪರಿಶಿಷ್ಟ ಜಾತಿಯ ಒಳಮೀಸಲಾತಿ ಗಣತಿ ಮಾಡಿದವರಿಗೆ ₹3 ಸಾವಿರ ನೀಡುವುದಾಗಿ ಸರ್ಕಾರ ಹೇಳಿತ್ತು. ಸರ್ಕಾರವು ವರದಿ ಅಂಗೀಕರಿಸಿದರೂ ಇನ್ನೂ ಗಣತಿದಾರರ ಖಾತೆಗೆ ಹಣ ಜಮೆ ಆಗಿಲ್ಲ. ಸಮೀಕ್ಷೆ ವೇಳೆ ಶಿಕ್ಷಕರು ತಮ್ಮ ಹೆಂಡತಿ, ಮಕ್ಕಳು, ತಂದೆ–ತಾಯಿಯಿಂದ ದೂರವೇ ಇರುತ್ತಾರೆ. ಕುಟುಂಬಕ್ಕೆ ಸಮಯ ಕೊಡದೇ ದುಡಿಯುತ್ತಾರೆ. ಅವರಿಗೆ ಗೌರವಧನ ನೀಡುವಲ್ಲಿ ವಿಳಂಬ ಮಾಡುವುದು ಸರಿಯಲ್ಲ.

ಮಹಾಂತೇಶ್ ಬಯ್ಯಾಪುರ, ಸವದತ್ತಿ

> **ಶಿಕ್ಷೆ–ಭಿಕ್ಷೆ**
> ಉತ್ತರ ಪ್ರದೇಶದಲ್ಲಿ
> ಬೀದಿನಾಯಿ ಎರಡು ಸಲ
> ಕಚ್ಚಿದರೆ ಜೀವಾವಧಿ ಶಿಕ್ಷೆ.
> ನಮ್ಮಲ್ಲಿ ಎಷ್ಟು ಸಲ
> ಕಚ್ಚಿದರೂ ಅವಕ್ಕೆ
> ಬಿರಿಯಾನಿ ಭಿಕ್ಷೆ!
> **ಆರ್. ನಾಗರಾಜ್,** ಗೊರೂರು

ಉತ್ಸವ ಸಾಲದು; ಅಭಿವೃದ್ಧಿ ಆಗಲಿ

ರಾಜ್ಯ ಸರ್ಕಾರದಿಂದ 'ಕಲ್ಯಾಣ ಕರ್ನಾಟಕ ಉತ್ಸವ' ಆಚರಿಸಿರುವುದು ಸರಿಯಷ್ಟೆ. ಕಲ್ಯಾಣ ಕರ್ನಾಟಕವೆಂದು ಘೋಷಿಸಿದರೂ ಈ ವ್ಯಾಪ್ತಿಯ ಜಿಲ್ಲೆಗಳು ಅಭಿವೃದ್ಧಿ ಯಾಗಿಲ್ಲ. ಇದರ ಹಿಂದೆ, ಈ ಭಾಗದ ರಾಜಕೀಯ ನಾಯಕರ ದುರ್ಬಲ ಇಚ್ಛಾಶಕ್ತಿ ಎದ್ದು ಕಾಣುತ್ತಿದೆ. ಕಳೆದ ವರ್ಷ ಕಲಬುರಗಿಯಲ್ಲಿ ವಿಶೇಷ ಸಚಿವ ಸಂಪುಟ ಸಭೆ ಜರುಗಿತ್ತು. ಸಭೆಯ ಪ್ರಮುಖ ನಿರ್ಣಯಗಳು ಇನ್ನೂ ಜಾರಿಯಾಗಿಲ್ಲ.

ಈ ಭಾಗದ ಜನರು ಬೆಂಗಳೂರು, ಮುಂಬೈ, ಪುಣೆಗೆ ಉದ್ಯೋಗ ಅರಸಿ ಗುಳೆ ಹೋಗುವುದು ತಪ್ಪುತ್ತಿಲ್ಲ. ಕಲ್ಯಾಣದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಮುಂದಾಗಬೇಕಿದೆ.

ದುರಗಪ್ಪ ಬಂಡೇಬಾವಿ, ಲಿಂಗಸುಗೂರ

ಕುವೆಂಪು 'ಭಾರತ ರತ್ನ'ಕ್ಕೆ ಅರ್ಹರು

ಕುವೆಂಪು ಕನ್ನಡ ನಾಡಿನ ಸಾಕ್ಷಿಪ್ರಜ್ಞೆ. ಕನ್ನಡ ಭಾಷೆ, ಸಾಹಿತ್ಯ, ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿದವರಲ್ಲಿ ಅಗ್ರಗಣ್ಯರು. ಜಗದಗಲಕ್ಕೂ ಮನುಜ ಮತ ವಿಶ್ವಪಥ ಎಂಬ ಸಂದೇಶ ಸಾರಿದ ಮೇರು ವ್ಯಕ್ತಿತ್ವ. ರಸಋಷಿಗೆ ಮರಣೋತ್ತರವಾಗಿ 'ಭಾರತ ರತ್ನ' ನೀಡಬೇಕೆಂದು ರಾಜ್ಯ ಸಚಿವ ಸಂಪುಟವು ನಿರ್ಣಯ ಕೈಗೊಂಡು ಕೇಂದ್ರಕ್ಕೆ ಶಿಫಾರಸು ಮಾಡಿರುವುದು ಶ್ಲಾಘನೀಯ. ಕೇಂದ್ರವು ಕುವೆಂಪು ಅವರಿಗೆ 'ಭಾರತ ರತ್ನ' ಘೋಷಿಸಿದರೆ ಪ್ರಶಸ್ತಿಯ ಮೌಲ್ಯ ಮತ್ತಷ್ಟು ಹೆಚ್ಚಲಿದೆ.

ಅನಿಲ್ ಕುಮಾರ್, ನಂಜನಗೂಡು

ಕನ್ನಡಕ್ಕಾಗಿ ಏನೆಲ್ಲ...

ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಸಾಹಿತ್ಯ ಅಕಾಡೆಮಿ, ಕುವೆಂಪು ಭಾಷಾ ಭಾರತಿ... ಮುಂತಾದವುಗಳ ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತು, ಇವುಗಳ ತಲೆಯ ಮೇಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರಾಥಮಿಕ ಶಿಕ್ಷಣ ಇಲಾಖೆ... ಇವೆಲ್ಲವುಗಳ ಮೇಲೆ ಕರ್ನಾಟಕ ಸರ್ಕಾರ. ಇಷ್ಟು ಇದ್ದರೂ ಪ್ರತಿವರ್ಷ ನೂರಾರು ಕನ್ನಡ ಶಾಲೆಗಳು ಬಾಗಿಲು ಮುಚ್ಚುತ್ತಿವೆ. ಸಾವಿರಾರು ಕೋಟಿ ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದೆ. ಈ ಬಗ್ಗೆ ಎಲ್ಲೂ ಚರ್ಚೆ ಆಗುತ್ತಿಲ್ಲ ಎಂಬುದು ಆಶ್ಚರ್ಯಕರ.

ಎಂ.ಜಿ. ಚಂದ್ರಶೇಖರಯ್ಯ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಬಡ ಹಾಗೂ ತುಳಿತಕ್ಕೆ ಒಳಗಾದ ನಿಜವಾದ ಹಿಂದೂಗಳ ಬಗ್ಗೆ ಬಿಜೆಪಿಗೆ ಕಾಳಜಿ ಇಲ್ಲ. ಬರೀ ಮತಕ್ಕಾಗಿ ಮಾತ್ರವೇ ಹಿಂದೂ ಎನ್ನುವುದು ಅವರಿಗೆ ಬೇಕಿದೆ.

ಸಂತೋಷ್ ಲಾಡ್, ಕಾರ್ಮಿಕ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 18-9-2000

• ವಿವಿ ಕನ್ನಡ ಪರ ಕ್ರಮಕ್ಕೆ ಅಡ್ಡಗಾಲು

ಬೆಂಗಳೂರು, ಸೆಪ್ಟೆಂಬರ್ 17– ಪದವಿ ತರಗತಿಗಳಿಗೆ ಏಕರೂಪದ ಕನ್ನಡ ಪಠ್ಯಕ್ರಮ ಅಳವಡಿಸುವಂತೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೂಚಿಸಿರುವ ಸರ್ಕಾರದ ಕ್ರಮ ಹೊಸ ವಿವಾದವೊಂದಕ್ಕೆ ದಾರಿ ಮಾಡಿಕೊಟ್ಟಿದೆ.

ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿಗಳು (ವಿಶ್ವವಿದ್ಯಾಲಯ ಆಡಳಿತ) ಬರೆದ ಈ ಸರ್ಕಾರಿ ಪತ್ರ ಬೆಂಗಳೂರು ವಿವಿಯ ಕನ್ನಡ ಪರ ತೀರ್ಮಾನಕ್ಕೆ ಅಡ್ಡಗಾಲು ಹಾಕಲು ಹೊರಟಿದೆ ಎಂದು ಅಧ್ಯಾಪಕ ವಲಯ ಆಕ್ರೋಶ ವ್ಯಕ್ತಪಡಿಸಿದೆ.

• ಅಹಮದಾಬಾದ್‌ನಲ್ಲಿ ಗೋಲಿಬಾರ್: ಏಳು ಸಾವು

ಅಹಮದಾಬಾದ್, ಸೆಪ್ಟೆಂಬರ್ 17 (ಪಿಟಿಐ)– ವ್ಯಾಪಕ ಹಿಂಸಾಚಾರಕ್ಕೆ ಎಡೆಮಾಡಿಕೊಟ್ಟ ಮುನಿಸಿಪಲ್ ಚುನಾವಣೆಯ ಮತದಾನ ಒಟ್ಟು ಏಳು ಬಲಿಗಳನ್ನು ತೆಗೆದುಕೊಂಡಿತು. 43 ಜನ ಗಾಯಗೊಂಡರು. ಹತ್ತು ವಾಹನಗಳಿಗೆ ಬೆಂಕಿ ಹಚ್ಚಲಾಯಿತು. ಪೊಲೀಸರ ಗೋಲಿಬಾರ್‌ನಲ್ಲಿ ಆರು ಜನ ಪ್ರಾಣ ಕಳೆದುಕೊಂಡರು.

75 ವರ್ಷಗಳ ಹಿಂದೆ

ಸೋಮವಾರ, 18-9-1950

• ಇಸ್ರೇಲ್‌ಗೆ ಸ್ವತಂತ್ರ ರಾಷ್ಟ್ರದ ಮಾನ್ಯತೆ: ಕೇಂದ್ರದ ಒಪ್ಪಿಗೆ

ನವದೆಹಲಿ, ಸೆಪ್ಟೆಂಬರ್ 17– ಇಸ್ರೇಲ್‌ಗೆ ರಾಷ್ಟ್ರದ ಸ್ಥಾನಮಾನ ನೀಡಲು ಒಪ್ಪಿಗೆ ನೀಡುವುದಾಗಿ ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಇಸ್ರೇಲ್‌ಗೆ ರಾಷ್ಟ್ರದ ಮಾನ್ಯತೆ ನೀಡಲು ಸರ್ಕಾರ ನಿರ್ಧರಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಇಂದು ತಿಳಿಸಿದೆ.

ಮುಸ್ಲಿಂ ದೇಶಗಳಾದ ಟರ್ಕಿ ಮತ್ತು ಇರಾನ್ ಸೇರಿದಂತೆ 40 ದೇಶಗಳು, ಇಸ್ರೇಲ್‌ಗೆ ರಾಷ್ಟ್ರದ ಸ್ಥಾನಮಾನ ನೀಡಿವೆ.

ಕಳೆದ ಎರಡು ವರ್ಷದ ಹಿಂದೆ ಇಸ್ರೇಲ್ ಸ್ವತಂತ್ರ ರಾಷ್ಟ್ರವಾಗಿ ಘೋಷಿಸಿಕೊಂಡಿತ್ತು. ಇದಾದ ಬಳಿಕ ಸದಸ್ಯತ್ವ ನೀಡುವಂತೆ ಕೋರಿ ವಿಶ್ವಸಂಸ್ಥೆಗೆ ಆ ದೇಶವು ಮನವಿ ಮಾಡಿತ್ತು.

ಚುರುಮುರಿ

ಮಂತ್ರಿ ಸಂದರ್ಶನ

• ಗುರು ಪಿ.ಎಸ್.

ಹನ್ನೊಂದು ವರ್ಷಗಳ ನಂತರ ಮಂತ್ರಿಯೊಬ್ಬರು, 'ಆಯ್ದ' ಪತ್ರಕರ್ತರಿಗೆ ಸಂದರ್ಶನ ನೀಡುವ ಮನಸು ಮಾಡಿದರು.

ನ್ಯೂಸ್ ಚಾನೆಲ್ ಒಂದರ ಎಡಿಟರ್ ಕಮ್ ಆ್ಯಂಕರ್‌ಗೆ ಮೊದಲ ಅವಕಾಶ ಕೊಟ್ಟರು. ವಿನಯವೇ ಮೈವೆತ್ತಂತಿದ್ದ ಆ್ಯಂಕರ್ ಪ್ರಶ್ನೆ ಕೇಳಲಾರಂಭಿಸಿದರು.

'ಸಾರ್, ನೇಪಾಳದಲ್ಲಾದ ಯುವಕ್ರಾಂತಿ ಬಗ್ಗೆ ಏನ್ ಹೇಳ್ತೀರಾ?'

'ಏನ್ ಹೇಳೋದು, ಅದೊಂದು ಘಟನೆ ಅಷ್ಟೇ'.

'ಅಲ್ಲ, ಕ್ಷಿಪ್ರಕ್ರಾಂತಿಗೆ ಕಾರಣ ಏನಿರಬಹುದು ಅಂತ?'

'ದೇಶದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಸ್ವಜನಪಕ್ಷಪಾತ ಮೇರೆ ಮೀರಿತ್ತು. ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಲೇ ಇತ್ತು. ಜನ ಬಡವರಾಗ್ತಾ ಇದ್ರು, ರಾಜಕಾರಣಿಗಳು ಶ್ರೀಮಂತರಾಗ್ತಾ ಇದ್ರು' ವಿವರಿಸತೊಡಗಿದರು ಸಾಹೇಬ್ರು.

'ಸಾರ್, ಇದನ್ನೆಲ್ಲ ನೀವು ಯಾವ ದೇಶದ ಬಗ್ಗೆ ಹೇಳಿದ್ದು?' ಆ್ಯಂಕರ್‌ನ ಮುಗ್ಧ ಪ್ರಶ್ನೆ!

ಕೆಳಗಿನಿಂದ ಮೇಲಿನವರೆಗೆ ನೋಡಿದ ಮಂತ್ರಿವರ್ಯರು, 'ನೇಪಾಳದ ಬಗ್ಗೆ ರೀ, ಅಷ್ಟೂ ಗೊತ್ತಾಗಲ್ವ' ಎಂದು ಗದರಿದರು.

'ಅಯ್ಯೋ, ಇವರ ಮನಸ್ಸಿಗೆ ನೋವು ಮಾಡಿಬಿಟ್ಟೆನೇ' ಎಂದು ಕೈಕೈ ಹಿಸುಕಿಕೊಂಡು, 'ಸಾರ್, ನೇಪಾಳದಲ್ಲಿ ಸೋಷಿಯಲ್ ಮೀಡಿಯಾದವರು, ಯೂಟ್ಯೂಬರ್‌ಗಳು ಜನರ ತಲೆ ಕೆಡಿಸಿದ್ದರಿಂದ ಅಷ್ಟೆಲ್ಲ ರಾದ್ಧಾಂತ ಆಗಿದೆ. ನಮ್ ದೇಶದಲ್ಲಿ ಇದೆಲ್ಲ ಆಗೋ ಮೊದಲೇ ಸೋಷಿಯಲ್ ಮೀಡಿಯಾ ಬ್ಯಾನ್ ಮಾಡಿಬಿಡಿ ಸಾರ್' ಎಂದು ಆ್ಯಂಕರ್ ಮೆಚ್ಚುಗೆಯ ನಿರೀಕ್ಷೆಯಲ್ಲಿ ಸಾಹೇಬರತ್ತ ನೋಡಿದರು.

'ಏನ್ ಮಾತಾಡ್ತಿದೀರಿ... ಸೋಷಿಯಲ್ ಮೀಡಿಯಾ ಇದ್ದರೆ ಅದರಲ್ಲಿಯೇ ಪರ–ವಿರೋಧ ಚರ್ಚೆ ಮಾಡ್ತಾ, ಜಗಳ ಮಾಡ್ತಾ, ಒಬ್ಬರಿಗೊಬ್ಬರು ಬೈದಾಡಿಕೊಂಡು ಇರ್ತಾರೆ. ನೇಪಾಳದಲ್ಲಿ ಸೋಷಿಯಲ್ ಮೀಡಿಯಾ ಬ್ಯಾನ್ ಮಾಡಿದ್ದಕ್ಕೇ ಇಷ್ಟೆಲ್ಲ ಆಗಿರೋದು, ನಾನೂ ಅದೇ ತಪ್ಪು ಮಾಡಬೇಕು ಅಂತಿರೇನ್ರೀ...'

ಪಕ್ಕದಲ್ಲೇ ಇದ್ದ ಪಿ.ಎ ಮಧ್ಯದಲ್ಲಿ ಬಾಯಿ ಹಾಕಿ, 'ಅಲ್ಲಿ, ಆಳುವವರ ಪರ ತುತ್ತೂರಿ ಊದುತ್ತಿದ್ದ, ಜನರನ್ನ ಜಾತಿ–ಧರ್ಮದ ಆಧಾರದಲ್ಲಿ ಎತ್ತಿಕಟ್ಟುತ್ತಿದ್ದ ಪತ್ರಕರ್ತರಿಗೂ ಗೂಸಾ ಬಿದ್ದಿವೆಯಂತೆ ಸಾರ್' ಎಂದು ನಕ್ಕ.

ಮಂತ್ರಿ ಮತ್ತು ಆ್ಯಂಕರ್ ಮುಖ–ಮುಖ ನೋಡಿಕೊಂಡರು!

ಸಂಗತ

ಅಡ್ಡದಾರಿಯೇ 'ಜನಪ್ರಿಯ' ಹೆದ್ದಾರಿಯಾದರೆ...

ಜನಪ್ರಿಯತೆಯ ಅಡ್ಡದಾರಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ತೆರೆದುಕೊಳ್ಳುತ್ತಿವೆ. ಅದು 'ಅಡ್ಡದಾರಿ' ಎಂದು ಗುರ್ತಿಸುವ ಮನಃಸ್ಥಿತಿಯೂ ವಿರಳವಾಗುತ್ತಿದೆ.

• ಪ್ರಸಾದ ಶೆಣೈ ಆರ್.ಕೆ.

ಕನ್ನಡ ಸಿನಿಮಾದ ಹಾಡುಗಳನ್ನು ಗೀತೆಯ ಸಾಹಿತ್ಯ, ಆ ಸಾಹಿತ್ಯದಲ್ಲಿನ ಅಲ್ಪಪ್ರಾಣ, ಮಹಾಪ್ರಾಣಗಳ ಬಳಕೆಯನ್ನು ಲೆಕ್ಕಿಸದೆ ಹಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯತೆ ಗಳಿಸುವ ಟ್ರೆಂಡ್ ಪ್ರಸ್ತುತ ಯುವಕ, ಯುವತಿಯರಲ್ಲಿ ಚಾಲ್ತಿಯಲ್ಲಿದೆ. ಹೀಗೆ ಜನಪ್ರಿಯಗೊಳ್ಳುವ ಹಾಡುಗಳನ್ನು ಅನುಸರಿಸುವ ಮತ್ತೊಂದಷ್ಟು ಜನ ಇನ್ನೂ ತಮಾಷೆಯಾಗಿ ಹಾಡಿ ಜನರನ್ನು ನಗಿಸಲು ಪ್ರಯತ್ನಿಸುತ್ತಾರೆ. ಈ ಪ್ರಯತ್ನಗಳಲ್ಲಿ, ಮೂಲ ಸಿನಿಮಾದಲ್ಲಿ ಅರ್ಥಪೂರ್ಣ ಸಾಹಿತ್ಯ ಹಾಗೂ ಸ್ವರ ಸಂಯೋಜನೆಯಿದ್ದ ಗೀತೆ, ಡಿಜಿಟಲ್ ಹರಟೆಕಟ್ಟೆಯಲ್ಲಿ ಅರ್ಥ–ಭಾವನೆ ಕಳೆದುಕೊಳ್ಳುತ್ತದೆ ಹಾಗೂ ಮೂಲ ಗೀತೆಯನ್ನೇ ಹಿಂದಿಕ್ಕಿ ಮುನ್ನೆಲೆಗೆ ಬರುತ್ತದೆ.

ಜನಪ್ರಿಯತೆಗಾಗಿ ಯುವಜನತೆ ಪ್ರಯತ್ನಿಸುವುದು ತಪ್ಪೇನಲ್ಲ. ಆದರೆ, ಹೀಗೆ ಸೃಜನಶೀಲ ಗೀತೆಯೊಂದನ್ನು ಹೇಗೆಹೇಗೋ ಹಾಡುವ ಮೂಲಕ, ಗೀತರಚನೆಕಾರ, ಸ್ವರ ಸಂಯೋಜಕ ಹಾಗೂ ಮೂಲ ಗಾಯಕನ ಪರಿಶ್ರಮವನ್ನು ಅಣಕ ಮಾಡಲಾಗುತ್ತದೆ ಎನ್ನುವುದನ್ನು ಡಿಜಿಟಲ್ ಲೋಕದ ಜಾಣ ಜಾಣೆಯರು ಮರೆಯಬಾರದು.

ವೈರಲ್ ಆಗುವ ಗೀತೆಗಳಿಂದ ಕೆಲವರಿಗೆ ಜನಪ್ರಿಯತೆ ಹಾಗೂ ಹಲವರಿಗೆ ಮನರಂಜನೆ ದೊರೆಯುತ್ತದೆ. ಆದರೆ, ಅದರ ಪರಿಣಾಮಗಳು ಬೇರೆ ಬೇರೆ ರೂಪಗಳಲ್ಲಿರುತ್ತವೆ. ಅರ್ಥಪೂರ್ಣ ಸಾಹಿತ್ಯವಿರುವ ಮೂಲ ಹಾಡನ್ನು ಆಸ್ವಾದಿಸದೆ, ವೈರಲ್ ಆಗುವ ಹಾಡುಗಳನ್ನೇ ಕೇಳುತ್ತ, ತಪ್ಪು ತಪ್ಪಾದ ಭಾಷೆಯನ್ನು ಕೇಳಿಯೂ ಮುಸಿ ಮುಸಿ ನಗುತ್ತ, ಈ ಹಾಡುಗಳೇ ಅದ್ಭುತ ಎಂದು ಹಂಚಿಕೊಳ್ಳುವ ಒಂದು ಸಮುದಾಯ ರೂಪುಗೊಳ್ಳುತ್ತಿದೆ. ಬರೀ ಹಾಡು ಮಾತ್ರವಲ್ಲ, ಎಲ್ಲಾ ಕಲಾಪ್ರಕಾರದ್ದೂ ಇದೇ ವ್ಯಥೆ.

ಯಕ್ಷಗಾನವನ್ನೇ ಕಲಿಯದವರು ಸೋಷಿಯಲ್ ಮೀಡಿಯಾದಲ್ಲಿ ಯಕ್ಷಗಾನದ ಹಾಡು ಹಾಕಿ ಕುಣಿದಾಗ, ಅದೇ ನಿಜವಾದ ಯಕ್ಷಗಾನವೆಂದು ಹೊಗಳಿ ಅಂಥವರನ್ನು ಫೇಮಸ್ ಮಾಡುವವರಿದ್ದಾರೆ. ಅಡ್ಡದಾರಿಯಲ್ಲಿ ಸೋಷಿಯಲ್ ಮೀಡಿಯಾ ಸ್ಟಾರ್ ಆಗಬೇಕೆಂದು ಬಯಸುವವರ ಹುಚ್ಚಾಟಕ್ಕೆ ಕಲಾಪ್ರಕಾರಗಳು ಗಾಸಿಗೊಳಗಾಗುತ್ತವೆ. ಕಲಾಪ್ರಕಾರಗಳ ಪರಿಚಯ ಇರದವರು 'ಈ ಕಲೆ ಹೀಗೆಯೇ ಇರುತ್ತದೆ' ಎಂದು ನಿರ್ಣಯಕ್ಕೆ ಬರುವ ಸಾಧ್ಯತೆಯಿದೆ.

ವರ್ಷಗಟ್ಟಲೆ ಶಾಸ್ತ್ರೀಯ ಸಂಗೀತವನ್ನು ಕಲಿತರೂ ಎಲೆಮರೆಯ ಕಾಯಿಯಂತೆ ಇರುವವರೇ ಬಹಳಷ್ಟು. ಆದರೆ, ಸಂಗೀತ–ಸಾಹಿತ್ಯದ ಗಂಧಗಾಳಿಯಿಲ್ಲದೆ ಹೋದರೂ ವಿಚಿತ್ರ ಸ್ವರದಲ್ಲಿ ಗುನುಗಿ ಒಮ್ಮೆಗೇ ಜನಪ್ರಿಯ ಆಗುವವರನ್ನು ನೋಡಿದರೆ ಸಾಧನೆ ಹಾಗೂ ಜನಪ್ರಿಯತೆಯ ವ್ಯಾಖ್ಯಾನವೇ ಬದಲಾಗಿದೆಯೇನೋ ಎನ್ನಿಸುತ್ತದೆ. ಸಾಹಿತ್ಯದ ಸ್ಥಿತಿಯೂ ಭಿನ್ನವೇನಲ್ಲ. ಕಾವ್ಯ ಪ್ರಕಾರದಲ್ಲಿ ಗಂಭೀರವಾಗಿ ತೊಡಗಿಕೊಂಡವರು ಕವಿ ಎಂದು ಕರೆಸಿಕೊಳ್ಳುವುದು ಕಷ್ಟವಾಗಿರುವಾಗ, ಪ್ರಾಸಕ್ಕೆ ಪ್ರಾಸ ಜೋಡಿಸಿ ತೋಚಿದ್ದೆಲ್ಲಾ ಗೀಚಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವವರು 'ಕವಿ'ಗಳಾಗಿ ಚಾಲ್ತಿಯಲ್ಲಿರುತ್ತಾರೆ.

ಸಾಹಿತ್ಯ ಸೇರಿದಂತೆ ಯಾವುದೇ ಕಲಾಪ್ರಕಾರಕ್ಕೆ ಸಂಬಂಧಿಸಿದಂತೆ ಅಗತ್ಯವಾದ ಪೂರ್ವಸಿದ್ಧತೆ, ಸಾಮಾನ್ಯ ಜ್ಞಾನ, ಪರಿಶ್ರಮ ಇಲ್ಲದೆಯೂ ಆ ಕಲೆಯ ಹೆಸರಿನಲ್ಲಿ ಗುರ್ತಿಸಿಕೊಳ್ಳುವುದು ಹಾಗೂ ಜನಪ್ರಿಯತೆ ಗಳಿಸುವುದು ಅಪಾಯಕಾರಿ ಬೆಳವಣಿಗೆ.

ಕವಿಗಳು, ಕಲಾವಿದರು ನಿರಂತರ ಶ್ರಮದಿಂದ ಒಂದು ಭಾಷೆಯನ್ನು, ಕಲಾಪ್ರಕಾರವನ್ನು ರೂಪಿಸಿರುತ್ತಾರೆ. ಅವರ ಪರಿಶ್ರಮ ಹಾಗೂ ಪರಿಣತಿ ಸಾಮಾಜಿಕ ಜಾಲತಾಣಗಳಲ್ಲಿ ಅಪ್ರಸ್ತುತವಾಗುವ ಹಂತಕ್ಕೆ ತಲುಪಿದೆ. ಕಲೆಯಲ್ಲಿ ಸಾಧನೆಗೈಯಲು ತಾಳ್ಮೆ, ಶ್ರಮ, ಯಾವುದೂ ಬೇಡ; ಒಂದೇ ರೀಲ್ಸ್, ವಿಡಿಯೊ ಮಾಡಿ ಜನಪ್ರಿಯರಾಗಬಹುದು ಎನ್ನುವ ವಿಶ್ವಾಸ ಯುವ ಮನಸ್ಸಿನಲ್ಲಿ ಬಲಗೊಳ್ಳುತ್ತಾ ಹೋದಂತೆ ಹಾಗೂ ಅದನ್ನು ಸಮಾಜ ಪುರಸ್ಕರಿಸುತ್ತಾ ಹೋದಂತೆ, ನೈಜ ಕಲೆ ಹಿನ್ನೆಲೆಗೆ ಸರಿಯತೊಡಗುತ್ತದೆ ಹಾಗೂ ಸಾಧಕರು ಅಪ್ರಸ್ತುತರಾಗುತ್ತಾರೆ. ಸಾಮಾಜಿಕ ಜಾಲತಾಣದಲ್ಲಿ ಕೆಲವರು ತಪ್ಪಾದ ಕನ್ನಡದಲ್ಲಿ ಬರೆದಾಗ, ತಪ್ಪು ತಪ್ಪಾಗಿ ಹಾಡಿದಾಗ, 'ಅದು ಸರಿಯಾದ ರೂಪವಲ್ಲ' ಎನ್ನುವುದನ್ನು ಗುರುತಿಸಲು ಸಾಧ್ಯವಾಗದಷ್ಟು ಮಟ್ಟಿಗೆ ಸಾರ್ವಜನಿಕ ಸಂವೇದನೆ ಜಡಗೊಳ್ಳುತ್ತಿದೆ. ಶಿವರಾಮ ಕಾರಂತರು ಸಂದರ್ಶನವೊಂದರಲ್ಲಿ, 'ಕುಣಿಯುವವನು ತಪ್ಪು ಹೆಜ್ಜೆಯಲ್ಲಿ ಕುಣಿಯುತ್ತಿದ್ದಾನೆ, ತಪ್ಪು ಸಾಹಿತ್ಯ ಬಳಸುತ್ತಿದ್ದಾನೆ ಎನ್ನುವುದು ಪ್ರೇಕ್ಷಕರಿಗೆ ಗೊತ್ತಾಗಬೇಕೆಂದರೆ ಅವರ ತಲೆಯಲ್ಲಿ ಕಲೆ–ಸಾಹಿತ್ಯದ ಕುರಿತು ಸ್ವಲ್ಪವಾದರೂ ಜ್ಞಾನವಿದ್ದರೆ ಮಾತ್ರ ಸಾಧ್ಯ. ಅದೇ ಇಲ್ಲದಿದ್ದರೆ ಅವನು ಕುಣಿದದ್ದೇ ನೃತ್ಯ, ಒದರಿದ್ದೇ ಸಾಹಿತ್ಯ' ಎಂದು ಹೇಳಿದ ಮಾತು ಇಂದು ಹೆಚ್ಚು ಪ್ರಸ್ತುತ.

ಕೆಲವರು ಸಾಮಾಜಿಕ ಜಾಲತಾಣವನ್ನು ಒಳ್ಳೆಯ ಉದ್ದೇಶಕ್ಕೆ, ಸಾಮಾಜಿಕ ಬದಲಾವಣೆಯ ದಾರಿಯಾಗಿ, ಮನಸ್ಸನ್ನು ಅರಳಿಸುವ ವೇದಿಕೆಯಾಗಿ ಬಳಸುತ್ತಿರುವುದು ಸ್ವಾಗತಾರ್ಹ. ಆದರೆ, ಮನೋವಿಕಾಸಕ್ಕಿಂತಲೂ ಮನಸ್ಸನ್ನು ಕೆರಳಿಸುವ ಸಾಧ್ಯತೆಗಳಿಗೇ ಅಂತರ್ಜಾಲ ವೇದಿಕೆಗಳು ಹೆಚ್ಚು ಬಳಕೆಯಾಗುತ್ತಿವೆ. ಶಾಲಾ–ಕಾಲೇಜು ಹಂತದಲ್ಲಿ ಸಾಹಿತ್ಯ, ಓದು, ಭಾಷೆ, ಅಭಿರುಚಿ ಯಾವುದೂ ಬೇಕಾಗಿಲ್ಲ ಎನ್ನುವ ಪರಿಸ್ಥಿತಿಯನ್ನು ಶೈಕ್ಷಣಿಕ ವ್ಯವಸ್ಥೆಯೇ ಹುಟ್ಟಿಸುತ್ತಿರುವಾಗ, ಅನಿಯಂತ್ರಿತವಾಗಿರುವ ಸಾಮಾಜಿಕ ಮಾಧ್ಯಮದಲ್ಲಿ ಗುಣಮಟ್ಟದ ಭಾಷೆ ಹಾಗೂ ಸಾಹಿತ್ಯದ ಬಳಕೆಯನ್ನು ನಿರೀಕ್ಷಿಸುವುದು ತಪ್ಪೇನೊ?

ಸಾಮಾಜಿಕ ಜಾಲತಾಣಗಳ ಆಗುಹೋಗುಗಳನ್ನು ನಿಯಂತ್ರಿಸುವುದು ಅಸಾಧ್ಯ. ಆದರೆ, ಆ ಮಾಧ್ಯಮದಲ್ಲಿನ ಬೆಳವಣಿಗೆಗಳಲ್ಲಿ ಯಾವುದು ಸರಿ, ಯಾವುದು ಸರಿಯಲ್ಲ ಎಂದು ನಿರ್ಣಯಿಸಲು ಅಗತ್ಯವಾದ ಸಾರ್ವಜನಿಕ ಸಂವೇದನೆ ನಷ್ಟವಾಗುವುದು ನಾಡು–ನುಡಿಯ ಆರೋಗ್ಯಕ್ಕೆ ಪೂರಕವಾದ ಬೆಳವಣಿಗೆಯಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಅಂತಿಮ ಹಂತದ ಸಿದ್ಧತೆ

ಎಸ್‌ಐಆರ್ ಒಳ ಹೊರಗು

• ಜಯಸಿಂಹ ಆರ್.
• ಖಲೀಲ ಅಹ್ಮದ ಶೇಖ

ಬಿಹಾರದಲ್ಲಿ ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ'ಯ (ಎಸ್‌ಐಆರ್) ನಂತರ ಕರ್ನಾಟಕದಲ್ಲೂ ಎಸ್‌ಐಆರ್ ನಡೆಸಲು ರಾಜ್ಯ ಚುನಾವಣಾ ಆಯೋಗ ಅಂತಿಮ ಹಂತದ ಸಿದ್ಧತೆ ನಡೆಸಿದೆ.

ಮತದಾರರ ಪಟ್ಟಿಯಲ್ಲಿ ಇರುವ ಮತದಾರರು ಆಯಾ ವಿಳಾಸದಲ್ಲಿ ಇದ್ದಾರೆಯೇ, ಮೃತಪಟ್ಟಿದ್ದಾರೆಯೇ, ಅವರ ವೈವಾಹಿಕ ಮತ್ತು ಕೌಟುಂಬಿಕ ವಿವರಗಳು ಬದಲಾಗಿವೆಯೇ ಎಂಬುದನ್ನು ಪರಿಶೀಲಿಸುವ ಹಾಗೂ ಸರಿಪಡಿಸುವ ಬೃಹತ್ ಕಾರ್ಯಾಚರಣೆ ಇದು.

ಮತದಾರರ ಪಟ್ಟಿಯ ಪರಿಷ್ಕರಣೆ ಹೇಗೆ ನಡೆಯಲಿದೆ, ಪರಿಷ್ಕರಣೆಯ ಹಂತಗಳು ಯಾವುವು, ಮತದಾರರು ತಮ್ಮ ಪೌರತ್ವ ಸಾಬೀತುಪಡಿಸಲು ಯಾವೆಲ್ಲಾ ದಾಖಲೆಗಳನ್ನು ಒದಗಿಸಬೇಕು, ಪೌರತ್ವ ಮತ್ತು ಗುರುತು ಸಾಬೀತುಪಡಿಸುವಲ್ಲಿ ಸಲ್ಲಿಸಬೇಕಾದ ದಾಖಲೆಗಳಲ್ಲಿ ಇರುವ ವಿನಾಯಿತಿಗಳ ವಿವರಗಳ ಕೈಪಿಡಿಯನ್ನು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ಒದಗಿಸಿದೆ.

ರಾಜ್ಯದ ಪ್ರತಿ ಮತದಾರನೂ ಎಸ್‌ಐಆರ್ ಪ್ರಕ್ರಿಯೆಗೆ ಒಳಪಡಲಿದ್ದಾರೆ. ಇದರ ಆಧಾರದಲ್ಲಿ ಮತಗಟ್ಟೆಗಳು ಬದಲಾಗಲಿವೆ. ಹೊಸ ಮತದಾರರ ಚೀಟಿಯೂ ಅಸ್ತಿತ್ವಕ್ಕೆ ಬರಲಿದೆ. ಎಸ್‌ಐಆರ್‌ನಲ್ಲಿ ಭಾಗಿಯಾಗುವ ಸರ್ಕಾರದ ಅಧಿಕಾರಿ ಮತ್ತು ಸಿಬ್ಬಂದಿಗೆ ಹಲವು ಹಂತದ ತರಬೇತಿಯನ್ನು ಈಗಾಗಲೇ ನೀಡಲಾಗಿದೆ. ಎಸ್‌ಐಆರ್ ಕೈಪಿಡಿ ಮತ್ತು ತರಬೇತಿ ಸಾಮಗ್ರಿಗಳಲ್ಲಿ ಇರುವ ಮಾಹಿತಿಗಳ ಆಧಾರದಲ್ಲಿ, ಎಸ್‌ಐಆರ್ ಹೇಗೆ ನಡೆಯಲಿದೆ ಎಂಬುದರ ವಿವರವನ್ನು ಇಲ್ಲಿ ಕಟ್ಟಿಕೊಡಲಾಗಿದೆ.

ಹೀಗೆ ನಡೆಯಲಿದೆ ಪರಿಷ್ಕರಣೆ...

2002ರ ವಿಶೇಷ ಸಮಗ್ರ ಪರಿಷ್ಕರಣೆಯ ನಂತರ ಸೃಜಿಸಲಾದ ಮತದಾರರ ಪಟ್ಟಿಯನ್ನು ಮತಗಟ್ಟೆ ಅಧಿಕಾರಿಗಳಿಗೆ (ಬಿಎಲ್‌ಒ) ನೀಡಲಾಗುತ್ತದೆ.

ಆ ಪಟ್ಟಿಯಲ್ಲಿ ಇರುವವರು, ಈಗಲೂ ಅದೇ ವಿಳಾಸದಲ್ಲಿ ಇದ್ದಾರೆ ಅಥವಾ ಇಲ್ಲವೇ ಎಂಬುದನ್ನು ಬಿಎಲ್‌ಒಗಳು ಪರಿಶೀಲಿಸುತ್ತಾರೆ. ಬದಲಾವಣೆಗಳು ಇಲ್ಲದೇ ಇದ್ದರೆ, ಅಂತಹವರ ಮತದಾರರ ಚೀಟಿ ಉಳಿಯುತ್ತದೆ. ಅವರು ಗಣತಿ ನಮೂನೆ (ಎನ್ಯುಮರೇಷನ್ ಫಾರ್ಮ್) ಸಲ್ಲಿಸಬೇಕೇ ಅಥವಾ ಬೇಡವೇ ಎಂಬುದನ್ನು ಇನ್ನೂ ನಿರ್ಧರಿಸಿಲ್ಲ.

ಮತದಾರರ ವಿಳಾಸ, ವಿವರಗಳಲ್ಲಿ ಬದಲಾವಣೆಯಾಗಿದ್ದರೆ, ಗಣತಿ ನಮೂನೆಯನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು. ನಮೂನೆಯ ಒಂದು ಪ್ರತಿಯನ್ನು ಮತದಾರರಿಗೆ ನೀಡಲಾಗುತ್ತದೆ. ಮತ್ತೊಂದು ಪ್ರತಿಯನ್ನು ಬಿಎಲ್‌ಒ ತನ್ನ ಬಳಿ ಇರಿಸಿಕೊಳ್ಳುತ್ತಾರೆ. ಸಂಬಂಧಿತ ಆ್ಯಪ್‌ನಲ್ಲಿಯೂ ಈ ನಮೂನೆಯಲ್ಲಿರುವ ವಿವರಗಳು ಅಪ್‌ಲೋಡ್ ಆಗುತ್ತವೆ.

ಒಂದು ಮತಗಟ್ಟೆಯಲ್ಲಿ ಇರುವ ಪ್ರತಿ ಮತದಾರನ ವಿವರ ಪರಿಶೀಲನೆ ಮತ್ತು ಬದಲಾವಣೆಯ ವಿವರಗಳನ್ನು ರಾಜಕೀಯ ಪಕ್ಷಗಳ ಏಜೆಂಟರ ಜತೆಗೆ ಹಂಚಿಕೊಳ್ಳಲಾಗುತ್ತದೆ. ಆನಂತರ ಪರಿಷ್ಕೃತ ಮತದಾರರ ಪಟ್ಟಿಯ ಕರಡನ್ನು ಪ್ರಕಟಿಸಲಾಗುತ್ತದೆ. ಅದನ್ನು ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ ಮತ್ತು ರಾಜಕೀಯ ಪಕ್ಷಗಳ ಏಜೆಂಟರಿಗೂ ನೀಡಲಾಗುತ್ತದೆ. ಅದರ ಪರಿಶೀಲನೆಯ ನಂತರ ರಾಜಕೀಯ ಪಕ್ಷಗಳು, ಮತದಾರರು ಆಕ್ಷೇಪ ದಾಖಲಿಸಬಹುದು.

ಆಕ್ಷೇಪಗಳ ಪರಿಶೀಲನೆಯ ನಂತರ ಚುನಾವಣಾ ಆಯೋಗವು, ಕರಡು ಪರಿಷ್ಕೃತ ಮತದಾರರ ಪಟ್ಟಿಯಲ್ಲಿ ತಿದ್ದುಪಡಿಗಳನ್ನು ಮಾಡುತ್ತದೆ. ತಿದ್ದುಪಡಿಯ ನಂತರ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಇದರಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿಲ್ಲ. ಮತದಾರರಿಗೆ ತಕರಾರುಗಳಿದ್ದರೆ, ಅವರು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಮನವಿ ಸಲ್ಲಿಸಬೇಕಾಗುತ್ತದೆ.

ಯಾರು ಯಾವೆಲ್ಲಾ ದಾಖಲೆ ಒದಗಿಸಬೇಕು...

ಗಣತಿ ನಮೂನೆಯ ಜತೆಗೆ, ಇಂತಿಷ್ಟು ವಯಸ್ಸಿನ ಮತದಾರರು ಭಿನ್ನ ಸ್ವರೂಪದ ಘೋಷಣಾ ಪತ್ರವನ್ನು ನೀಡಬೇಕಾಗುತ್ತದೆ. ಘೋಷಣಾ ಪತ್ರದ ಜತೆಗೆ ಸೂಚಿತ ಗುರುತಿನ/ಪೌರತ್ವ ಸಾಬೀತುಪಡಿಸುವ ದಾಖಲೆ ಪತ್ರಗಳನ್ನು ನೀಡಬೇಕಾಗುತ್ತದೆ. ಜನ್ಮ ವರ್ಷದ ಆಧಾರದಲ್ಲಿ ಮೂರು ವರ್ಗಗಳನ್ನು ಮಾಡಲಾಗಿದ್ದು, ಆಯಾ ವರ್ಗದವರಿಗೆ ಅನ್ವಯವಾಗುವ ಷರತ್ತುಗಳು ಈ ಮುಂದಿನಂತಿವೆ

1. 1987ರ ಜುಲೈ 1ಕ್ಕೂ ಮೊದಲು ಜನಿಸಿದವರು

- ಆಯಾ ಮತದಾರನ ಗುರುತು ಮತ್ತು ಪೌರತ್ವ ಸಾಬೀತುಪಡಿಸುವ ದಾಖಲೆಯಾಗಿರಬೇಕು. ಜನ್ಮ ದಿನಾಂಕ/ ಜನ್ಮಸ್ಥಳವನ್ನು ಸಾಬೀತುಪಡಿಸುವಂತಹ ದಾಖಲೆ ಪತ್ರವಾಗಿರಬೇಕು

2. 1987ರ ಜುಲೈ 1ರ ಬಳಿಕ 2004ರ ಡಿಸೆಂಬರ್ 2ರ ಮಧ್ಯೆ ಜನಿಸಿದವರು

- ಆಯಾ ಮತದಾರನ ಗುರುತು ಮತ್ತು ಪೌರತ್ವ ಸಾಬೀತುಪಡಿಸುವ ದಾಖಲೆಯಾಗಿರಬೇಕು. ಜನ್ಮ ದಿನಾಂಕ/ ಜನ್ಮಸ್ಥಳವನ್ನು ಸಾಬೀತುಪಡಿಸುವಂತಹ ದಾಖಲೆ ಪತ್ರವಾಗಿರಬೇಕು
- ತಂದೆ ಅಥವಾ ತಾಯಿಯ ಜನ್ಮ ದಿನಾಂಕ ಅಥವಾ ಜನ್ಮ ಸ್ಥಳ ಸಾಬೀತುಪಡಿಸುವಂತಹ ದಾಖಲೆ ಪತ್ರಗಳನ್ನೂ ಸಲ್ಲಿಸಬೇಕು

3. 2004ರ ಡಿಸೆಂಬರ್ 2ರ ನಂತರ ಜನಿಸಿದವರು

- ಆಯಾ ಮತದಾರನ ಗುರುತು ಮತ್ತು ಪೌರತ್ವ ಸಾಬೀತುಪಡಿಸುವ ದಾಖಲೆಯಾಗಿರಬೇಕು. ಜನ್ಮ ದಿನಾಂಕ/ ಜನ್ಮಸ್ಥಳವನ್ನು ಸಾಬೀತುಪಡಿಸುವಂತಹ ದಾಖಲೆ ಪತ್ರವಾಗಿರಬೇಕು
- ತಂದೆಯ ಜನ್ಮ ದಿನಾಂಕ ಅಥವಾ ಜನ್ಮ ಸ್ಥಳ ಸಾಬೀತುಪಡಿಸುವಂತಹ ದಾಖಲೆ ಪತ್ರಗಳನ್ನೂ ಸಲ್ಲಿಸಬೇಕು
- ತಾಯಿಯ ಜನ್ಮ ದಿನಾಂಕ ಅಥವಾ ಜನ್ಮ ಸ್ಥಳ ಸಾಬೀತುಪಡಿಸುವಂತಹ ದಾಖಲೆ ಪತ್ರಗಳನ್ನೂ ಸಲ್ಲಿಸಬೇಕು
- ತಂದೆ ಅಥವಾ ತಾಯಿ ಭಾರತೀಯರು ಆಗಿರದೇ ಇದ್ದರೆ, ಮತದಾರನ ಜನ್ಮದ ಸಂದರ್ಭದಲ್ಲಿ ಪೋಷಕರು ಭಾರತದಲ್ಲಿ ಇದ್ದರು ಎಂಬುದನ್ನು ಸಾಬೀತುಪಡಿಸುವ ಪಾಸ್‌ಪೋರ್ಟ್ ಅಥವಾ ವೀಸಾ ಪ್ರತಿ ಸಲ್ಲಿಸಬೇಕು

ಯಾವೆಲ್ಲಾ ದಾಖಲೆಗಳು ಮಾನ್ಯ

1. ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ/ಸರ್ಕಾರಿ ಉದ್ಯಮದ ಕಾಯಂ ಉದ್ಯೋಗಿ/ಪಿಂಚಣಿದಾರರಿಗೆ ನೀಡಿರುವ ಯಾವುದೇ ಗುರುತಿನ ಚೀಟಿ ಅಥವಾ ಪಿಂಚಣಿ ಸಂದಾಯ ಆದೇಶ
2. ಭಾರತದಲ್ಲಿ 1987ಕ್ಕೂ ಮೊದಲು ಸರ್ಕಾರ/ಸ್ಥಳೀಯ ಪ್ರಾಧಿಕಾರಗಳು/ ಬ್ಯಾಂಕುಗಳು/ಅಂಚೆ ಕಚೇರಿ/ಜೀವ ವಿಮಾ ನಿಗಮ/ಸರ್ಕಾರಿ ಉದ್ಯಮಗಳು ನೀಡಿರುವ ಯಾವುದೇ ಗುರುತಿನ ಚೀಟಿ/ ಪ್ರಮಾಣ ಪತ್ರ/ ದಸ್ತಾವೇಜು
3. ಜನನ ಪ್ರಮಾಣಪತ್ರ
4. ಪಾಸ್‌ಪೋರ್ಟ್
5. ಮಾನ್ಯತೆ ಪಡೆದ ಮಂಡಳಿಗಳು/ ವಿಶ್ವವಿದ್ಯಾಲಯಗಳು ನೀಡಿರುವ ಮೆಟ್ರಿಕ್ಯುಲೇಷನ್/ಶೈಕ್ಷಣಿಕ ಪ್ರಮಾಣಪತ್ರ (ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಪ್ರಮಾಣಪತ್ರಗಳು)

6. ರಾಜ್ಯ ಸರ್ಕಾರದ ಪ್ರಾಧಿಕಾರಗಳು ನೀಡಿರುವ ಕಾಯಂ ನಿವಾಸಿ ಪ್ರಮಾಣ ಪತ್ರ
7. ಅರಣ್ಯ ಹಕ್ಕು ಪ್ರಮಾಣಪತ್ರ
8. ಇತರೆ ಹಿಂದುಳಿದ ವರ್ಗಗಳು (ಒಬಿಸಿ)/ಪರಿಶಿಷ್ಟ ಜಾತಿ (ಎಸ್‌ಸಿ)/ಪರಿಶಿಷ್ಟ ಪಂಗಡ (ಎಸ್‌ಟಿ) ಅಥವಾ ಯಾವುದೇ ಜಾತಿ ಪ್ರಮಾಣಪತ್ರಗಳು
9. ರಾಷ್ಟ್ರೀಯ ಪೌರತ್ವ ನೋಂದಣಿ ಚೀಟಿ (ಯಾವುದೇ ರಾಜ್ಯದಲ್ಲಿ ಇದ್ದರೂ ಮಾನ್ಯ)
10. ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆ/ಪ್ರಾಧಿಕಾರಗಳು ಸಿದ್ಧಪಡಿಸಿದ ಕುಟುಂಬ ರಿಜಿಸ್ಟರ್
11. ಜಮೀನು/ ಮನೆ ಹಂಚಿಕೆಗೆ ಸಂಬಂಧಿಸಿದಂತೆ ಸರ್ಕಾರವು ನೀಡಿರುವ ಪ್ರಮಾಣಪತ್ರ/ ಹಂಚಿಕೆ ಪತ್ರ
12. **ಆಧಾರ್:** ಸುಪ್ರೀಂ ಕೋರ್ಟ್‌ನ ನಿರ್ದೇಶನ ಮತ್ತು ಆದೇಶದ ಅನ್ವಯ ಗುರುತನ್ನು ಸಾಬೀತುಪಡಿಸುವ ದಾಖಲೆಯಾಗಿ ಮಾತ್ರವೇ ಪರಿಗಣಿಸಲಾಗುತ್ತದೆ. ಆಧಾರ್ ಅನ್ನು ಪೌರತ್ವ ಅಥವಾ ನಾಗರಿಕ ಪ್ರಮಾಣಪತ್ರವಾಗಿ ಪರಿಗಣಿಸುವುದಿಲ್ಲ

- **ಭಾರತದ ಹೊರಗೆ ಜನಿಸಿದವರು, ವಿದೇಶದಲ್ಲಿನ ಭಾರತೀಯ ರಾಯಭಾರ ಕಚೇರಿ ನೀಡಿರುವ ಜನನ ನೋಂದಣಿ ಪ್ರಮಾಣ ಪತ್ರ ಸಲ್ಲಿಸಬೇಕು**
- **ಪೌರತ್ವ ನೋಂದಣಿ ಮೂಲಕ ಭಾರತದ ಪೌರತ್ವ ಪಡೆದಿರುವವರು, ಪೌರತ್ವ ನೋಂದಣಿ ಪ್ರಮಾಣ ಪತ್ರ ನೀಡಬೇಕು. ಭಾರತದ ಹೊರಗೆ ಜನಿಸಿದವರು, ವಿದೇಶದಲ್ಲಿನ ಭಾರತೀಯ ರಾಯಭಾರ ಕಚೇರಿ ನೀಡಿರುವ ಜನನ ನೋಂದಣಿ ಪ್ರಮಾಣ ಪತ್ರ ಸಲ್ಲಿಸಬೇಕು**

ಕಾನೂನು ಹೇಳುವುದೇನು?

- ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ಗೆ ಇತ್ತೀಚೆಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಚುನಾವಣಾ ಆಯೋಗವು, 'ಮತದಾರರ ಪಟ್ಟಿಯ ಸಂಕ್ಷಿಪ್ತ ಪರಿಷ್ಕರಣೆ ಅಥವಾ ಸಮಗ್ರ ಪರಿಷ್ಕರಣೆ ನಡೆಸುವ ಬಗ್ಗೆ ಆಯೋಗ ಮಾತ್ರ ನಿರ್ಧಾರ ಕೈಗೊಳ್ಳಬಹುದು. ಅಂತಹ ಸಾಂವಿಧಾನಿಕ ಮತ್ತು ಶಾಸನಬದ್ಧ ಅಧಿಕಾರ ಆಯೋಗಕ್ಕೆ ಇದೆ' ಎಂದು ಹೇಳಿತ್ತು. ಅಲ್ಲದೇ, 'ಎಸ್‌ಐಆರ್ ಅನ್ನು ಯಾವಾಗ ಮತ್ತು ಹೇಗೆ ನಡೆಸಬೇಕು ಎಂಬ ನಿರ್ಧಾರ ಕೈಗೊಳ್ಳುವ ಸಂಬಂಧ ಆಯೋಗಕ್ಕಿರುವ 'ವಿಶೇಷ ಅಧಿಕಾರ ವ್ಯಾಪ್ತಿ'ಯಲ್ಲಿ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಬಾರದು' ಎಂದೂ ಹೇಳಿತ್ತು
- ಸಂವಿಧಾನದ 324ನೇ ವಿಧಿ, 1950ರ ಜನ ಪ್ರಾತಿನಿಧ್ಯ ಕಾಯ್ದೆಯ 21ನೇ ಸೆಕ್ಷನ್ ಮತ್ತು 1960ರ ಮತದಾರರ ನೋಂದಣಿ ನಿಯಮಾವಳಿಗಳು ವಿಶೇಷ ಸಮಗ್ರ ಪರಿಷ್ಕರಣೆ ನಡೆಸುವ ಅಧಿಕಾರವನ್ನು ಆಯೋಗಕ್ಕೆ ನೀಡಿವೆ ಎಂಬುದು ಅದರ ವಾದ
- ಜನ ಪ್ರಾತಿನಿಧ್ಯ ಕಾಯ್ದೆಯ 21ನೇ ಸೆಕ್ಷನ್ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಪರಿಷ್ಕರಣೆ ನಡೆಸುವ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ನೀಡಿದೆ. ಈ ಸೆಕ್ಷನ್‌ನ 3ನೇ ಉಪ ಸೆಕ್ಷನ್ ವಿಶೇಷ ಪರಿಷ್ಕರಣೆಯ ಬಗ್ಗೆ ಪ್ರಸ್ತಾಪಿಸುತ್ತದೆ. ಆಯೋಗವು ಯಾವಾಗ ಬೇಕಾದರೂ ನಿರ್ದಿಷ್ಟ ಕಾರಣಗಳಿಗಾಗಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಸಬಹುದು ಎಂದು ಅದು ಹೇಳುತ್ತದೆ
- ಆದರೆ, ಮತದಾರರ ನೋಂದಣಿ ಹಾಗೂ ಇತರ ವಿಚಾರಗಳಲ್ಲಿ ಆಯೋಗವು ನಿಯಮ ಪಾಲನೆ ಮಾಡದೇ ಇದ್ದಾಗ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿದ ಉದಾಹರಣೆಗಳಿವೆ

– 1978ರ ಮೋಹಿಂದರ್ ಸಿಂಗ್ ಗಿಲ್ ಮತ್ತು ಮುಖ್ಯ ಚುನಾವಣಾ ಆಯುಕ್ತರ ನಡುವಿನ ಪ್ರಕರಣದಲ್ಲಿ ಸಂವಿಧಾನದ 324ರ ವಿಧಿಯ ಅಡಿಯಲ್ಲಿ ಆಯೋಗಕ್ಕೆ ಇರುವ ಅಧಿಕಾರವನ್ನು ನ್ಯಾಯಸಮ್ಮತವಾಗಿ ಮತ್ತು ತರ್ಕಬದ್ಧವಾಗಿ ಬಳಸಬೇಕೇ ವಿನಾ, ಮನಸೋಇಚ್ಛೆ ಅಥವಾ ದುರುದ್ದೇಶಪೂರಿತವಾಗಿ ಬಳಸಬಾರದು ಎಂದು ಹೇಳಿತ್ತು. ಅಲ್ಲದೇ, ಚುನಾವಣಾ ಆಯೋಗಕ್ಕೆ ಸಂವಿಧಾನಬದ್ಧ ಅಧಿಕಾರ ಇದ್ದಾಗ್ಯೂ ಅವುಗಳು ಪರಮಾಧಿಕಾರವಲ್ಲ ಮತ್ತು ಅವು ನ್ಯಾಯಾಂಗದ ಪರಿಶೀಲನೆಗೆ ಒಳಪಡುತ್ತವೆ ಎಂದು ಪ್ರತಿಪಾದಿಸಿತ್ತು

–1985ರ ಲಕ್ಷ್ಮೀಚರಣ್ ಸೇನ್ ಮತ್ತು ಎ.ಕೆ.ಎಂ. ಹಸನ್ ಉಝ್ಝಮನ್ ಪ್ರಕರಣದಲ್ಲಿ, ಮತದಾರರ ಪಟ್ಟಿಯಲ್ಲಿ ಯಾವುದೇ ಬದಲಾವಣೆ ನಡೆಸಬೇಕಾದರೆ ಸಮರ್ಪಕವಾದ ಪ್ರಕ್ರಿಯೆಯನ್ನು ಅನುಸರಿಸುವ ಅಗತ್ಯದ ಬಗ್ಗೆ ಸುಪ್ರೀಂ ಕೋರ್ಟ್ ಒತ್ತಿ ಹೇಳಿತ್ತು. ನಿರ್ದಿಷ್ಟ ಕಾರ್ಯವಿಧಾನಗಳನ್ನು ಅನುಸರಿಸದೇ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಸಾಮೂಹಿಕವಾಗಿ ತೆಗೆದುಹಾಕುವುದು ಸಹಜ ನ್ಯಾಯದ ಉಲ್ಲಂಘನೆಯಾಗುತ್ತದೆ ಎಂದು ಅಭಿಪ್ರಾಯಪಟ್ಟಿತ್ತು

ಪ್ರಮುಖ ಆಕ್ಷೇಪಗಳು

ವಿದೇಶಗಳಿಂದ ಅಕ್ರಮವಾಗಿ ನುಸುಳುಕೋರರು ದೇಶದೊಳಗೆ ಪ್ರವೇಶಿಸಿರುವುದು ಸೇರಿದಂತೆ ಹಲವು ಕಾರಣಗಳಿಂದ ಎಸ್‌ಐಆರ್ ಅಗತ್ಯ ಎನ್ನುವುದು ಚುನಾವಣಾ ಆಯೋಗದ ಸಮರ್ಥನೆ. ಆದರೆ, ಅದಕ್ಕೆ ಹಲವು ವಲಯಗಳಿಂದ ವಿರೋಧ ವ್ಯಕ್ತವಾಗಿದೆ. ಅವರ ಮುಖ್ಯ ಪ್ರತಿಪಾದನೆಗಳು ಇಂತಿವೆ:

- ಕೇಂದ್ರ ಸರ್ಕಾರವು ಎಸ್‌ಐಆರ್ ಮುಸುಕಿನಲ್ಲಿ ತನ್ನ ಕಾರ್ಯಸೂಚಿಯನ್ನು ಜಾರಿಗೆ ತರಲು ಹೊರಟಿದೆ; ನಿರ್ದಿಷ್ಟ ಧರ್ಮ/ಸಮುದಾಯಗಳನ್ನು ಗುರಿಯಾಗಿಸಿಕೊಂಡು ಮತದಾರರ ಪಟ್ಟಿ ಪರಿಷ್ಕರಿಸಲಾಗುತ್ತಿದೆ
- ಪಶ್ಚಿಮ ಬಂಗಾಳ, ಅಸ್ಸಾಂನಂಥ ಕೆಲವು ರಾಜ್ಯಗಳನ್ನು ಗುರಿಯಾಗಿಸಿಕೊಂಡು ರಾಷ್ಟ್ರೀಯ ಪೌರತ್ವ ನೋಂದಣಿಯನ್ನು (ಎನ್‌ಆರ್‌ಸಿ) ಜಾರಿ ಮಾಡುವ ಪರೋಕ್ಷ ಪ್ರಯತ್ನ ಇದಾಗಿದೆ
- ಅಲ್ಪಸಂಖ್ಯಾತರು, ಅಲಕ್ಷಿತ ಸಮುದಾಯಗಳು, ಗ್ರಾಮೀಣ ಭಾಗದ ಬಡವರು, ಅನಕ್ಷರಸ್ಥರು, ವಲಸೆ ಕಾರ್ಮಿಕರ ಮತದಾನದ ಹಕ್ಕನ್ನು ಕಸಿಯುತ್ತದೆ
- ಸಂಕೀರ್ಣ ಪ್ರಕ್ರಿಯೆ ಮತ್ತು ಹಲವು ದಾಖಲೆಗಳ ಅಗತ್ಯ ಸೃಷ್ಟಿಯ ಮೂಲಕ ಹೆಚ್ಚು ಜನರನ್ನು ಮತದಾನ ಪ್ರಕ್ರಿಯೆಯಿಂದ ಹೊರಗಿಡುವ ಪ್ರಯತ್ನ
- ಎಸ್‌ಐಆರ್ ಪ್ರಕ್ರಿಯೆಯ ಭಾಗವಾಗಿ ಮತದಾರರು ಮತ್ತು ಅವರ ಪೋಷಕರ ದೃಢೀಕರಣದ ದಾಖಲೆಗಳನ್ನು ಕೇಳುವುದು ಸಂವಿಧಾನದ 326ನೇ ವಿಧಿಯ ಉಲ್ಲಂಘನೆಯಾಗಿದೆ
- ಚುನಾವಣಾ ಆಯೋಗವು ಹಲವು ರಾಜ್ಯಗಳಲ್ಲಿ ಹಲವು ಬಾರಿ ಮತದಾರರ ಪಟ್ಟಿಯ 'ಸಮಗ್ರ ಪರಿಷ್ಕರಣೆ' (ಇಂಟೆನ್ಸೀವ್ ರಿವಿಷನ್) ಮಾಡಿದ್ದರೂ ಈಗ 'ವಿಶೇಷ ಸಮಗ್ರ ಪರಿಷ್ಕರಣೆ' ಮಾಡುತ್ತಿದೆ. 'ವಿಶೇಷ' ಎಂದರೆ ಏನು ಮತ್ತು ದೇಶದಾದ್ಯಂತ ಅದು ಏಕೆ ಅಗತ್ಯ ಎನ್ನುವುದನ್ನು ಸೂಕ್ತ ಪುರಾವೆಗಳೊಂದಿಗೆ ಸಾಬೀತುಪಡಿಸುವಲ್ಲಿ ಚುನಾವಣಾ ಆಯೋಗವು ವಿಫಲವಾಗಿದೆ
- ಎಸ್‌ಐಆರ್ ಜನರ ಮತದಾನದ ಹಕ್ಕಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂಥದ್ದಾಗಿದ್ದು, ಮುಕ್ತ ಚುನಾವಣೆ ನಡೆಸುವ ಆಶಯಕ್ಕೆ ವಿರುದ್ಧವಾಗಿದೆ

ಆಧಾರ: ರಿಸರ್ಚ್‌ಗೇಟ್.ನೆಟ್, ಸುಪ್ರೀಂ ಕೋರ್ಟ್ ಅಬ್ಸರ್ವರ್, ಮಾಧ್ಯಮ ವರದಿಗಳು

ಬಿಹಾರದಲ್ಲಿ ನಡೆದಿದ್ದೇನು?

ಬಿಹಾರದಲ್ಲಿ ಚುನಾವಣಾ ಆಯೋಗವು 22 ವರ್ಷಗಳ ಬಳಿಕ ಮತದಾರರ 'ವಿಶೇಷ ಸಮಗ್ರ ಪರಿಷ್ಕರಣೆ' ಕೈಗೊಂಡಿದೆ. ಇದಕ್ಕೆ ಆಕ್ಷೇಪ ವ್ಯಕ್ತವಾಗಿದೆ. ಈ ಹಿಂದೆ, ಅಲ್ಲಿ 2003ರಲ್ಲಿ ಎಸ್‌ಐಆರ್ ನಡೆದಿತ್ತು. ಜುಲೈನಲ್ಲಿ ನಡೆದಿರುವ ಈ ಪರಿಷ್ಕರಣೆಯಲ್ಲಿ ಎಲ್ಲ ಮತದಾರರಿಗೂ ಗಣತಿ ಅರ್ಜಿಯನ್ನು ನೀಡಲಾಗಿತ್ತು. ಮತದಾರರು ಅದರಲ್ಲಿ ತಮ್ಮ ವಿವರಗಳನ್ನು ಭರ್ತಿ ಮಾಡಬೇಕಿತ್ತು.

2003ರ ಮತದಾರರ ಪಟ್ಟಿಯಲ್ಲಿದ್ದವರು ತಾವು ರಾಜ್ಯದ ಮತದಾರರು ಎಂಬುದಕ್ಕೆ ಯಾವುದೇ ಆಧಾರ ಅಥವಾ ದಾಖಲೆಯನ್ನು ನೀಡಬೇಕಾಗಿರಲಿಲ್ಲ. 2003ರ ನಂತರ 2024ರವರೆಗೆ ನಡೆದಿದ್ದ ಪರಿಷ್ಕರಣೆಯಲ್ಲಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಿದವರು ಪೂರಕ ದಾಖಲೆಯನ್ನು ಸಲ್ಲಿಸಬೇಕಾಗಿತ್ತು. ಸಲ್ಲಿಸಬೇಕಾದ 11 ದಾಖಲೆಗಳ ಪಟ್ಟಿಯನ್ನು ಚುನಾವಣಾ ಆಯೋಗ ನೀಡಿತ್ತು. ಇದರಲ್ಲಿ ಆಧಾರ್ ಅನ್ನು ಕೈಬಿಡಲಾಗಿತ್ತು. ಇದು ಹಲವರ ಆಕ್ಷೇಪಕ್ಕೆ ಕಾರಣವಾಗಿತ್ತು. ಕೊನೆಗೆ ಸುಪ್ರೀಂ ಕೋರ್ಟ್ ಆಧಾರ್ ಅನ್ನು ಕೂಡ ಪರಿಗಣಿಸಬೇಕು ಎಂದು ಸೂಚಿಸಿತ್ತು.

ದಾಖಲೆಗಳನ್ನು ಹೊಂದಿಸಲು ಜನರು ವಿಶೇಷವಾಗಿ ಮಹಿಳೆಯರು ಪಡಿಪಾಟಲು ಪಟ್ಟಿರುವ ಬಗ್ಗೆ ವರದಿಯಾಗಿತ್ತು.

ಆಯೋಗವು 65 ಲಕ್ಷ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟದ್ದಕ್ಕೂ ವಿರೋಧ ವ್ಯಕ್ತವಾಗಿತ್ತು. 65 ಲಕ್ಷ ಜನರ ವಿವರಗಳನ್ನು ನೀಡುವಂತೆ ಸುಪ್ರೀಂ ಕೋರ್ಟ್ ಆಯೋಗಕ್ಕೆ ಸೂಚಿಸಿತ್ತು.

ವಿಳಾಸ ಬದಲಾಗಿದ್ದರೆ...

ಮತದಾರರ ವಿಳಾಸ ಬದಲಾಗಿದ್ದರೆ, ಬಿಎಲ್‌ಒಗಳು ಅದನ್ನು ಪರಿಶೀಲಿಸುತ್ತಾರೆ. ಮತದಾರರು ಸಂಪರ್ಕಕ್ಕೆ ಸಿಕ್ಕರೆ, ಅವರ ಈಗಿನ ವಿಳಾಸದ ವಿವರ ಪಡೆದುಕೊಳ್ಳುತ್ತಾರೆ. ಮತದಾರರು ಬೇರೆ ಮನೆಗೆ (ಮನೆ ನಂಬರ್ ಬದಲಾಗುತ್ತದೆ), ಬೇರೆ ಬೀದಿಗೆ, ಬೇರೆ ವಿಭಾಗಕ್ಕೆ, ಬೇರೆ ಮತಗಟ್ಟೆ ವ್ಯಾಪ್ತಿಗೆ ಅಥವಾ ಬೇರೆ ವಿಧಾನಸಭಾ ಕ್ಷೇತ್ರಕ್ಕೆ ಸ್ಥಳಾಂತರವಾಗಿದ್ದರೆ, ಗಣತಿ ನಮೂನೆ ಜತೆಗೆ ಸ್ಥಳಾಂತರ ನಮೂನೆ (ನಮೂನೆ 8/ ನಮೂನೆ 8ಎಂ) ಸಲ್ಲಿಸಬೇಕಾಗುತ್ತದೆ. ಈ ಮೂಲಕ ನೂತನ ವಿಳಾಸದಲ್ಲೇ ಮತದಾರರ ಚೀಟಿ ಸೃಷ್ಟಿ ಆಗುತ್ತದೆ.

ಒಂದೊಮ್ಮೆ ಮತದಾರರರು ಆ ವಿಳಾಸದಲ್ಲಿ ಇಲ್ಲದೇ ಇದ್ದರೆ, ಅವರು ಸಂಪರ್ಕಕ್ಕೆ ಸಿಗದೇ ಹೋದರೆ ಅವರ ಚೀಟಿ ರದ್ದಾಗುತ್ತದೆ. ಆದರೆ ಆ ಮತದಾರರು ಬೇರೊಂದು ಸ್ಥಳದಲ್ಲಿದ್ದು, ಅಲ್ಲಿಗೆ ಭೇಟಿ ನೀಡುವ ಬಿಎಲ್‌ಒಗಳಿಗೆ ತಮ್ಮ ಮತದಾರರ ಚೀಟಿಯನ್ನು ಒಪ್ಪಿಸಬೇಕು. ಅಗ ಬಿಎಲ್‌ಒಗಳು ಅದನ್ನು ರದ್ದುಪಡಿಸಲು ಶಿಫಾರಸು ಮಾಡಿ, ಹೊಸದಾಗಿ ಮತದಾರರ ನೋಂದಣಿ ಅರ್ಜಿಯನ್ನು (ನಮೂನೆ 6) ಭರ್ತಿ ಮಾಡುತ್ತಾರೆ. ಆ ಮೂಲಕ ಮತದಾರರು ತಾವು ಈಗ ಇರುವ ವಿಳಾಸದಲ್ಲೇ ಹೊಸ ಮತದಾರರ ಚೀಟಿಯನ್ನು ಪಡೆಯಬಹುದಾಗಿದೆ.

- 'ನಮೂನೆ 6' ಅನ್ನು ಹೊಸ ಮತದಾರರ ನೋಂದಣಿಗೆ ಮಾತ್ರವೇ ನೀಡಲಾಗುತ್ತದೆ. ಆದರೆ ಹಿಂದಿನ ವಿಳಾಸದಲ್ಲಿರುವ ಎಪಿಕ್ ರದ್ದುಪಡಿಸಿ, ಹೊಸದಾಗಿ ನೋಂದಣಿ ಮಾಡಿಸುವವರು ಈ ನಮೂನೆಯನ್ನು ಸಲ್ಲಿಸಬಹುದಾಗಿದೆ.

ಅಧ್ಯಾತ್ಮ

ನುಡಿ ಬೆಳಗು



ಪಿ.ಚಂದ್ರಿಕಾ

ಸಂತ ಕಬೀರನಿಗೆ ಕಮಾಲ್ ಎನ್ನುವ ಮಗನಿದ್ದ. ಕಬೀರ ವಿರಾಗಿ. ಅವನಿಗೆ ಭಗವಂತನಲ್ಲಿ ಶ್ರದ್ಧೆ ವಿನಾ ಮತ್ಯಾವುದೂ ಮುಖ್ಯವಲ್ಲ. ಕಬೀರರನ್ನು ನೋಡಲು ಬಂದವರು ಪ್ರೀತಿಯಿಂದ ಹಣ್ಣು, ತರಕಾರಿ, ಧಾನ್ಯ, ಕೆಲವೊಮ್ಮೆ ಹಣ ತರುತ್ತಿದ್ದರು. ಕಬೀರರು ಯಾವುದನ್ನೂ ಸ್ವೀಕರಿಸುತ್ತಿರಲಿಲ್ಲ. ಆದರೆ, ಕಮಾಲ್ ಎಲ್ಲವನ್ನೂ ತೆಗೆದಿಟ್ಟುಕೊಳ್ಳುತ್ತಿದ್ದ. ಇದು ಕಬೀರರ ಗಮನಕ್ಕೂ ಬಂದಿತು. ಆತ ಮಗನನ್ನು ಕರೆದು ಹೇಳಿದರು: 'ಯಾರಿಂದಲೂ ನಾವು ಏನನ್ನೂ ಸ್ವೀಕರಿಸಬಾರದು'. ಅದಕ್ಕವನು, 'ನಾವೇನು ಬೇಡಲು ಹೋಗಿಲ್ಲವಲ್ಲ, ಕೊಟ್ಟಿದ್ದನ್ನು ತೆಗೆದು ಇಡುತ್ತಿದ್ದೇನೆ, ಮುಚ್ಚಿಡುತ್ತಿಲ್ಲ; ಯಾರು ಬೇಕಾದರೂ ತೆಗೆದುಕೊಂಡು ಹೋಗಲಿ' ಎನ್ನುತ್ತಿದ್ದ. ಕಬೀರರಿಗೆ ಇದು ಸರಿಕಾಣಿಸದೆ, 'ನೀನು ನನ್ನೊಂದಿಗೆ ಇರಬೇಡ' ಎಂದುಬಿಟ್ಟರು. ಆತ ಬೇರೆ ಗುಡಿಸಲನ್ನು ಕಟ್ಟಿಕೊಂಡು ಇರತೊಡಗಿದ. ಯಾರಾದರೂ ಇದರ ಬಗ್ಗೆ ಕೇಳಿದರೆ ಕಬೀರರು, 'ಅವನಿಗೆ ಹಣದ ಮೋಹ ಇದೆ, ಯಾರು ಏನನ್ನು ಕೊಟ್ಟರೂ ತೆಗೆದುಕೊಳ್ಳುತ್ತಾನೆ' ಎನ್ನುತ್ತಿದ್ದರು.

ಇವೆಲ್ಲವನ್ನೂ ತಿಳಿದ ಕಾಶಿಯ ರಾಜ, ಅಂಥಾ ವಿರಾಗಿಗೆ ಇಂಥಾ ಮಗನೇ, ಪರೀಕ್ಷೆ ಮಾಡಿಯೇ ಬಿಡೋಣ ಎಂದು ಹೊರಡುತ್ತಾನೆ. ಕಮಾಲನ ಬಳಿಗೆ ಬಂದ ರಾಜ ತನ್ನ ಬಳಿಯಿಂದ ಒಂದು ಅತ್ಯಮೂಲ್ಯವಾದ ವಜ್ರವನ್ನು ಅವನಿಗಿತ್ತು, 'ಜಗತ್ತಿನ ಅತ್ಯಂತ ದುಬಾರಿ ವಜ್ರವಿದು, ಸ್ವೀಕರಿಸಿ' ಎನ್ನುತ್ತಾನೆ. ಕೈಲಿ ಹಿಡಿದು ನೋಡುತ್ತಾ ಕಮಾಲ್, 'ತರೋನು ತಂದೆ, ಈ ಕಲ್ಲನ್ನೇಕೆ ತಂದೆ. ಇದನ್ನು ತಿನ್ನಲಿಕ್ಕಾಗುವುದಿಲ್ಲವಲ್ಲಾ' ಎನ್ನುತ್ತಾನೆ. ರಾಜನಿಗೆ ಅಚ್ಚರಿಯಾಗಿ, 'ಇದು ವಜ್ರ, ಬಹು ಬೆಲೆಬಾಳುವಂಥದ್ದು, ಇದನ್ನು ತೆಗೆದು ಎಲ್ಲಿಡಲಿ' ಎನ್ನುತ್ತಾನೆ. ಕಮಾಲ್ ನಗುತ್ತಾ, 'ಆ ಕಲ್ಲನ್ನು ಎತ್ತಿಡುವ ಕಷ್ಟ ತೆಗೆದುಕೊಳ್ಳಬೇಡ. ಅದನ್ನಲ್ಲೇ ಬಿಡು' ಎನ್ನುತ್ತಾನೆ. ಆದರೂ ಬಿಡದೆ ಅವನಿಗೆ ಕಾಣುವ ಹಾಗೆ ಗುಡಿಸಿಲಿನ ಒಂದು ಮೂಲೆಯಲ್ಲಿ ಸಿಕ್ಕಿಸಿ, 'ನಾನು ಹೊರಟ ತಕ್ಷಣ ಇದನ್ನು ಇವನು ಎತ್ತಿಟ್ಟುಕೊಳ್ಳುತ್ತಾನೆ' ಎಂದುಕೊಂಡು ಹೊರಡುತ್ತಾನೆ ರಾಜ.

ಆರು ತಿಂಗಳು ಬಿಟ್ಟು ಮತ್ತೆ ಕಮಾಲನನ್ನು ಪರೀಕ್ಷಿಸುವ ಸಲುವಾಗಿ ರಾಜ ಬರುತ್ತಾನೆ. 'ನಾನು ನಿಮಗೆ ಕೊಟ್ಟಿದ್ದ ದಾನದ ಆ ಕಲ್ಲು ಎಲ್ಲಿ' ಎನ್ನುತ್ತಾನೆ. ಕಮಾಲ್ ನಗುತ್ತಾ, 'ಯಾವ ದಾನದ ಕಲ್ಲು' ಎನ್ನುತ್ತಾನೆ. ಮೋಹಿಯಾದ ಈ ಮನುಷ್ಯ ಅದನ್ನು ತೆಗೆದಿಟ್ಟುಕೊಂಡು ನಾಟಕ ಆಡುತ್ತಿದ್ದಾನೆ ಎಂದುಕೊಂಡ ರಾಜ, 'ಅದು ಅತ್ಯಂತ ಬೆಲೆಯುಳ್ಳ ವಜ್ರ, ನೀವು ತೆಗೆದುಕೊಂಡಿದ್ದೀರಿ' ಎನ್ನುತ್ತಾನೆ. ಕಮಾಲ್ ನಗುತ್ತಾ, 'ನೀನು ಎಲ್ಲಿಟ್ಟಿದ್ದೀಯೋ ಅಲ್ಲೇ ಇರಬೇಕು ನೋಡು' ಎನ್ನುತ್ತಾನೆ. ತಾನಿಟ್ಟ ಕಡೆ ರಾಜ ಹೋಗಿ ನೋಡುತ್ತಾನೆ; ಅದಲ್ಲೇ ಇದೆ. ಕಮಾಲ್ ನಗುತ್ತಾ ಹೇಳುತ್ತಾನೆ, 'ನನ್ನ ಬಳಿ ಬರುವವರು ಒಂದು ಹೊತ್ತಿನ ಊಟಕ್ಕೆ ಇಲ್ಲದವರು, ಅವರಿಗೆ ಇದರಿಂದ ಪ್ರಯೋಜನವಿಲ್ಲ. ಹಾಗಾಗಿ ಇದನ್ನು ನಾನು ಯಾರಿಗೂ ಕೊಡಲಿಲ್ಲ' ಎಂದನು. ಆಗ ರಾಜ 'ಹಾಗಾದರೆ ನಿಮ್ಮ ತಂದೆ ನಿಮ್ಮನ್ನು ಮೋಹಿ ಎಂದೆಲ್ಲಾ ಹೇಳುತ್ತಾರಲ್ಲಾ' ಎನ್ನುತ್ತಾನೆ. ಆಗ ಕಮಾಲ್, 'ನನ್ನ ತಂದೆಗೆ ಜನಕ್ಕೆ ದೈವದ ಬಗ್ಗೆ ಹೇಳುವುದು ಮಾತ್ರ ಗೊತ್ತು. ಆದರೆ ನನಗೆ ಅವರ ಹಸಿವೆಯೂ ಗೊತ್ತು. ಅಪ್ಪನಿಗೆ ಯಾವತ್ತೂ ಸಂಸಾರದ ಕಡೆಗೆ ಗಮನವೇ ಇರುತ್ತಿರಲಿಲ್ಲ. ಅಮ್ಮ ನಮಗಾಗಿ ಎಷ್ಟೆಲ್ಲಾ ಕಷ್ಟಪಡುತ್ತಿದ್ದಳು. ಅವಳು ನನಗೆ ಹೇಳಿದ್ದಳು, ಮಗೂ ಮೊದಲು ಜೀವ ಉಳಿಯಬೇಕು, ಅದಕ್ಕೆ ಅನ್ನ ಬೇಕು ಎಂದು. ಹಾಗಾಗಿ ಕೊಟ್ಟವರಿಂದ ದವಸ ಧಾನ್ಯ ಹಣ್ಣು ತರಕಾರಿಗಳನ್ನು ಸ್ವೀಕಾರ ಮಾಡುವೆ. ಅದನ್ನು ಸಮಾಜಕ್ಕೆ ಹಂಚುವೆ. ಇಂಥಾ ಬೆಲೆಬಾಳುವ ಕಲ್ಲುಗಳಿಂದ ಏನೂ ಪ್ರಯೋಜನ ಇಲ್ಲ' ಎನ್ನುತ್ತಾನೆ.

ತತ್ವಶುದ್ಧಿಯ ಕಬೀರರಿಗಿಂತ ಕಮಾಲ್ ದೊಡ್ಡವನು. ಕಬೀರ ಅಧ್ಯಾತ್ಮದ ಹಸಿವನ್ನು ಕಂಡವರು; ಕಮಾಲ್ ಲೋಕದ ಹೊಟ್ಟೆಯ ಹಸಿವು ತಿಳಿದವನು. ಹೊಟ್ಟೆ ತುಂಬಿದ ಮೇಲೆ ಉಳಿದೆಲ್ಲವೂ ಅದೇ ದೊಡ್ಡ ಅಧ್ಯಾತ್ಮ.

ತಿದ್ದುಪಡಿ: ಬುಧವಾರದ ಸಂಚಿಕೆಯ 'ನುಡಿ ಬೆಳಗು' ಅಂಕಣದಲ್ಲಿ 'ಗೌರವಿಸು ಜೀವನವ, ಗೌರವಿಸು ಚೇತನವ' ಎಂಬ ಸಾಲು ಇದ್ದು, ಅದು ಕುವೆಂಪು ಅವರದ್ದು ಎಂದು ತಪ್ಪಾಗಿ ಉಲ್ಲೇಖಿಸಲಾಗಿದೆ. ಆದರೆ, ಅದು ಡಿವಿಜಿ ಅವರ 'ಮಂಕುತಿಮ್ಮನ ಕಗ್ಗ'ದಲ್ಲಿ ಬರುವ ಒಂದು ಸಾಲು.

ಪದಬಂಧ 6168

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಮನದಲ್ಲಿಯೇ ಕಡೆಯುವುದು (3)
2. ವಸ್ತುಗಳನ್ನು ಸಂಗ್ರಹಿಸುವ ಸ್ಥಳ (3)
5. ಹರಿಯುವಂಥಹ ವಸ್ತು (2)
6. ತಡವೆಂದಾಗಲೇ ಈ ತಬ್ಬಿಬ್ಬು! (4)
7. ಲಡಾಯಿಯಲ್ಲಿರುವ ದಾರದ ಉಂಡೆ (2)
9. ಸಂಘದಲ್ಲಿ ಆರಂಭವಾದ ತಿಕ್ಕಾಟ (3)
10. ಮುನಿದವನನ್ನು ನೋಡಿದಾಗಲೇ ಈ ಸಂತಸ! (2)
12. ಬರದಲ್ಲಿ ಹೊರದೂಡುವಿಕೆ! (4)
13. ಉದಾರಿತೋರಿದ ಹಾದಿ ಉಲ್ಟಾ ಆಗಿದೆ (2)
14. ಮುಖವಿಲ್ಲಿ ಉಲ್ಟಾಪಲ್ಟಾ ಕಾಣುತ್ತಿದೆಯಲ್ಲಾ! (3)
15. ದುಃಖದೊಡನೆ ಬರುವ ಜೋಡು ನುಡಿ (3)

ಮೇಲಿಂದ ಕೆಳಕ್ಕೆ
1. ಮನದೊಳಗಿರುವ ವಂಶ! (4)
2. ವಿಜ್ಞಾನದಲ್ಲಿ ಒಂದು ಪದಾರ್ಥವು ಮತ್ತೊಂದನ್ನು ಸೆಳೆಯುವ ಶಕ್ತಿ (8)
3. ಮುದ್ರಿಸುವ ಸ್ಥಳ (5)
4. ಬಸವಣ್ಣನವರ ವಚನಾಂಕಿತ (8)
8. ವಿದ್ಯಾರ್ಹತೆಯ ಪ್ರಶಸ್ತಿಯನ್ನು ನೀಡುವುದು (5)
11. ವನದಲ್ಲಿ ದೊರೆತ ಆದಾಯ (4)



6167ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ವಿಕಟಕವಿ 4. ಪಾಷಾಂಡಿ
5. ಧಾವಂತ 6. ಕಪಟ
8. ವನಧಿ 9. ಸಜಾತಿ
11. ಒನಕೆ 15. ಲಫಂಗ
16. ಮಟ್ಟಸ 17. ಮರುಕಳಿಸು

ಮೇಲಿಂದ ಕೆಳಕ್ಕೆ:
1. ವಿದುಷಿ 2. ಟಕ್ಕುತನ
3. ವಿಧಾತ 4. ಪಾತಕ
7. ಪದಚ್ಯುತಿ 8. ವರ್ಧಮಾನ
10. ಜಾಗತಿಕ 12. ಕೆಲಸ
13. ನಿಗಮ 14. ಮುನಿಸು

ಸುಡೊಕು 6552

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9	4				1		2	6
8		7		3				9
		5			9		8	
	6			4		3		8
	7	4	1	8	3			
3						5		1
	8		3		4			5
		1		9		8		4
4			5			2		

6551 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

18 ಸೆಪ್ಟೆಂಬರ್ 2025 ಗುರುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣದ್ವಾದಶಿ ಗಂ. 23-25 **ನಕ್ಷತ್ರ:** ಪುಷ್ಯ ಗಂ. 6-33 **ಯೋಗ:** ಶಿವ ಗಂ. 21-37 **ಕರಣ:** ಕೌಲವ ಗಂ. 11-29 ಕನ್ಯಾ ಮಾಸದ 01 ನೇ ದಿನ. **ಮಳೆ ನಕ್ಷತ್ರ :** ಉತ್ತರ 2 ನೇ ಪಾದ. **ರಾಹುಕಾಲ :** ಮಧ್ಯಾಹ್ನ 01-30 03-00 **ಸೂರ್ಯೋದಯ :** 06-23 **ಸೂರ್ಯಾಸ್ತ :** 06-26 **ಮುಸ್ಲಿಂ ದಿನಾಂಕ :** 25 ರಬಿಉಲ್ಲಾವಲ್ ದಿನ ವಿಶೇಷ : ಯತಿಮಹಾಲಯ, ಅಮೃತಸಿದ್ಧಿಯೋಗ **ಅದೃಷ್ಟ ಸಂಖ್ಯೆ :** 2, 8

ಮೇಷ: ನಿಮ್ಮ ಅಚ್ಚುಕಟ್ಟಾದ, ಲೆಕ್ಕಾಚಾರದ ಜೀವನ ಗಂಡನ ಹಣಕಾಸಿನ ಪರಿಸ್ಥಿತಿಯಲ್ಲಿ ಸಹಾಯಕವಾಗಲಿದೆ. ಆಫೀಸಿನ ಕೆಲಸದ ಮೇರೆಗೆ ವಿದೇಶ ಪ್ರಯಾಣ ಮಾಡುವ ಯೋಗವಿದೆ. ತರಕಾರಿ ಬೆಳೆಗಾರರಿಗೆ ಲಾಭ ಸಿಗಲಿದೆ.

ವೃಷಭ: ನಿಮ್ಮ ಜೀವನದಲ್ಲಿ ಪ್ರಭಾವ ಬೀರಲಿರುವ ಹಲವು ಹೊಸ ಜನರ ಪರಿಚಯದ ಲಾಭವಾಗಲಿದೆ, ಅದನ್ನು ಸದುಪಯೋಗಿಸಿಕೊಳ್ಳಿ. ಉದ್ಯೋಗಹೀನರಿಗೆ ಉದ್ಯೋಗ ಲಾಭವಾಗಲು ದುರ್ಗಾಪರಮೇಶ್ವರಿಯನ್ನು ಆರಾಧಿಸಿ.

ಮಿಥುನ: ರಾಜಕೀಯ ವರ್ಗದವರಿಗೆ ಸದ್ಯದಲ್ಲೇ ಉನ್ನತ ಸ್ಥಾನಮಾನ ದೊರಕುವುದು. ಶಿಸ್ತುಬದ್ಧ ಜೀವನ ಹದವರಿತ ಭೋಜನ ಮುನ್ನಡೆಗೆ ಸಹಕಾರಿಯಾಗುತ್ತದೆ. ಸ್ತ್ರೀ ರೋಗ ಸಂಬಂಧಿತ ಔಷಧಿ ತೆಗೆದುಕೊಳ್ಳುವುದು ಉತ್ತಮ.

ಕರ್ಕಾಟಕ: ಈ ದಿನ ನಿಮ್ಮನ್ನು ಬಾಧಿಸುವ ಸಮಸ್ಯೆ ಹೂ ಎತ್ತಿದಂತೆ ಬಗೆಹರಿಯಲಿದೆ. ರಾಜಕೀಯ ವ್ಯಕ್ತಿಗಳ ಹಿಂದೆ ತಿರುಗುವುದು ವ್ಯರ್ಥವೆಂದು ಅರಿವಾಗಲಿದೆ. ಸಂಗೀತಗಾರರಿಗೆ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಸಿಗುವುದು.

ಸಿಂಹ: ಕೃಷಿಯ ಸಂಶೋಧನೆಯಲ್ಲಿ ತೊಡಗಿರುವವರಿಗೆ ಹೊಸ ಸವಾಲುಗಳು ಎದುರಾಗುತ್ತವೆ. ನಿಮ್ಮ ಮಕ್ಕಳ ನಡುವಳಿಕೆ ನಿಮಗೆ ಸರಿಬಾರದಂತಾಗಿ, ಅಸಮಾಧಾನವೂ ಆಗಬಹುದು. ವಿದೇಶಿ ಹೂಡಿಕೆಯಲ್ಲಿ ನಷ್ಟ ನೋಡುವಿರಿ.

ಕನ್ಯಾ: ನಿಮ್ಮ ಆರ್ಥಿಕ ಸಂಕಷ್ಟಕ್ಕೆ ಪತ್ನಿಯ ಅಣ್ಣ-ತಮ್ಮಂದಿರು ನೆರವಾಗುವರು. ಕೆಲಸದಲ್ಲಿ ನೀವು ನಾಲ್ಕಾರು ವಿಷಯ ಗಮನಿಸುವುದರಿಂದ ಅಪೂರ್ಣತೆ ಉಂಟಾಗಲಿದೆ. ಉತ್ತಮ ಕಂಪೆನಿಗಳೊಂದಿಗೆ ಪಾಲುದಾರಿಕೆ ಸಿಗಲಿದೆ.

ತುಲಾ: ಹೊರಗುತ್ತಿಗೆ ವ್ಯವಹಾರಗಳಲ್ಲಿ ಶ್ರಮ, ಒತ್ತಡ ಜಾಸ್ತಿ ಎನಿಸಿದರೂ ಅವುಗಳಿಂದ ವರಮಾನ ಹೆಚ್ಚಲಿದೆ. ನಿಮ್ಮ ದೌರ್ಬಲ್ಯವನ್ನು ನೀವಾಗಿಯೇ ಇತರರ ಮುಂದೆ ಪ್ರದರ್ಶಿಸಿಕೊಂಡು ಕಷ್ಟಕ್ಕೊಳಗಾಗಬೇಡಿ. ಕೃಷ್ಣನ ಸ್ಮರಿಸಿ.

ವೃಶ್ಚಿಕ: ಪುರುಷ ಪ್ರಧಾನ ಕುಟುಂಬದಲ್ಲಿ ವಾಸಿಸುತ್ತಿರುವ ಮಹಿಳೆಯರಿಗೆ ನಿಮ್ಮ ಗೌರವವು ತೀರ ಕಡಿಮೆಯಾದಂತೆ ಅನ್ನಿಸಬಹುದು, ದುಃಖವಾಗಲಿದೆ. ಕೃತಕವಾದ ನಗುವಿನ ಮುಖವಾಡವು ಇಂದು ಕಳಚುವ ಸಾಧ್ಯತೆ ಇದೆ.

ಧನು: ನಿಮ್ಮ ಕುಟುಂಬದ ಭಿನ್ನಾಭಿಪ್ರಾಯಗಳನ್ನು ಬೇರೆಯವರಲ್ಲಿ ಹೇಳಿಕೊಳ್ಳಬೇಡಿ. ನಿಮ್ಮ ಅನಿವಾರ್ಯದ ರಾತ್ರಿಯ ಸಂಚಾರದಲ್ಲಿ ಹೆಚ್ಚಿನ ಜಾಗ್ರತೆ ಇರಲಿ. ಭಗವಂತನ ಕೆಲವು ಮುನ್ಸೂಚನೆಗಳನ್ನು ಪರಾಮರ್ಶಿಸಿ.

ಮಕರ: ಸ್ವತ್ತು ಕೊಳ್ಳುವ ವಿಚಾರದಲ್ಲಿ ಕಾನೂನಿನ ಸಲಹೆ ಅವಶ್ಯವಾಗಿ ಪಡೆಯಿರಿ. ಅನ್ನ ಸಂತರ್ಪಣೆಯಿಂದ ಸಂತೃಪ್ತಿ, ಹಣ ಕಾಸಿನ ಪರಿಸ್ಥಿತಿ ಉತ್ತಮವಾಗಿರಲಿದೆ. ಚರ್ಮ ಸಂಬಂಧವಾದ ಅನಾರೋಗ್ಯ ಎದುರಾಗಬಹುದು.

ಕುಂಭ: ಮುದ್ದಾಗಿ ಸಾಕಿದ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಪರ ಊರಿಗೆ ಕಳುಹಿಸುವ ವಿಚಾರವೇ ಪೋಷಕರಿಗೆ ಅರಗಿಸಿಕೊಳ್ಳಲಾಗದ ತುತ್ತಾಗುತ್ತದೆ. ಗೃಹಾಲಂಕಾರ ವಸ್ತುಗಳ ವ್ಯಾಪಾರದಿಂದ ಅಧಿಕ ಲಾಭವನ್ನು ಕಾಣುವಿರಿ.

ಮೀನ: ಸರ್ಕಾರಿ ಉದ್ಯೋಗದವರಿಗೆ ಅಧಿಕಾರಿಗಳಿಂದ ಹೆಚ್ಚಿನ ಒತ್ತಡ ಎದುರಾಗಲಿದೆ. ವಿದೇಶದಲ್ಲಿರುವ ಮಗನ ಅನಾರೋಗ್ಯದ ಸ್ಥಿತಿ ನಿಮ್ಮನ್ನು ಚಿಂತೆಗೆ ತಳ್ಳುವುದು. ಬಹು ಸಮಯದ ಸಮಸ್ಯೆಗಳಿಗೆ ಉತ್ತರ ಸಿಗಬಹುದು.

ಗುಂಡಣ್ಣ



ರಾಜ್ಯದ 12 ನದಿಗಳು ಮಲಿನ

ನಗರ ಮತ್ತು ಪಟ್ಟಣಗಳ ಕೊಳಚೆ ನೀರು, ಕೈಗಾರಿಕೆಗಳ ತ್ಯಾಜ್ಯಗಳಿಂದ ಮಾಲಿನ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ನಗರ ಮತ್ತು ಪಟ್ಟಣ ಪ್ರದೇಶಗಳ ಕೊಳಚೆ ನೀರು ಹಾಗೂ ಆಯಾ ಜಲಾನಯನ ಪ್ರದೇಶಗಳಲ್ಲಿನ ಕೈಗಾರಿಕೆಗಳ ತ್ಯಾಜ್ಯ ಸೇರುತ್ತಿರುವುದರಿಂದ 12 ನದಿಗಳು ಕಲುಷಿತಗೊಂಡಿವೆ.

ರಾಜ್ಯದ 17 ನದಿಗಳು ಕಲುಷಿತಗೊಂಡಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು (ಸಿಪಿಸಿಬಿ) 2022ರಲ್ಲಿ ಜಲಶಕ್ತಿ ಸಚಿವಾಲಯಕ್ಕೆ ವರದಿ ಸಲ್ಲಿಸಿತ್ತು. ರಾಜ್ಯದ ನದಿಗಳು ಮಲಿನಗೊಂಡಿರುವ ಕುರಿತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ. ಎನ್‌ಜಿಟಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಯಮಿತವಾಗಿ ಪ್ರಗತಿ ವರದಿ ಸಲ್ಲಿಸುತ್ತಿದೆ.

ಗಂಗಾ ಮಾಲಿನ್ಯದ ರಾಷ್ಟ್ರೀಯ ಮಿಷನ್‌ನ ಕೇಂದ್ರ ಮೇಲ್ವಿಚಾರಣಾ ಸಮಿತಿಗೆ ಪತ್ರ ಬರೆದಿರುವ ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿ, 'ಮಲಿನ ನದಿಗಳ ಪಟ್ಟಿಯಲ್ಲಿದ್ದ ಅಘನಾಶಿನಿ, ದಕ್ಷಿಣ ಪಿನಾಕಿನಿ, ಶರಾವತಿ ಹಾಗೂ ಗಂಗಾವಳಿ ನದಿಗಳಲ್ಲಿ ಕರಗಿದ ಆಮ್ಲಜನಕದ (ಬಿಒಡಿ) ಪ್ರಮಾಣ 3 ಮಿಲಿಗ್ರಾಂ/ಲೀಟರ್ ದಾಟಿಲ್ಲ. ಹೀಗಾಗಿ, ಈ ನದಿಗಳನ್ನು ಮಲಿನ ನದಿಗಳ ಪಟ್ಟಿಯಿಂದ ಕೈಬಿಡಬೇಕು' ಎಂದು ಕೋರಿದ್ದಾರೆ. ಜತೆಗೆ, ಎನ್‌ಜಿಟಿಗೂ ವರದಿ ಸಲ್ಲಿಸಿದ್ದಾರೆ.

ನದಿಗಳ ಮಾಲಿನ್ಯ ಕಡಿಮೆ ಮಾಡಲು ಕ್ರಿಯಾಯೋಜನೆ ಸಿದ್ಧಪಡಿಸುವಂತೆ ಪ್ರಾದೇಶಿಕ ಕಚೇರಿಗಳಿಗೆ ನಿರ್ದೇಶನ ನೀಡಲಾಗಿದ್ದು, ಈ ಕೆಲಸ ಪ್ರಗತಿಯಲ್ಲಿದೆ. ಕ್ರಿಯಾಯೋಜನೆ ಸಿದ್ಧಗೊಂಡ ಬಳಿಕ ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದ್ದಾರೆ.

ಕಲುಷಿತ ನದಿಗಳು (ಮಿ.ಗ್ರಾಂ/ಲೀ)

ನದಿ	ಎಲ್ಲೆಲ್ಲಿ ಕಲುಷಿತ	ಗರಿಷ್ಠ ಬಿಒಡಿ
ಅರ್ಕಾವತಿ	ಕನಕಪುರ, ತಿಪ್ಪಗೊಂಡನಹಳ್ಳಿ ಜಲಾಶಯ	10
ಲಕ್ಷ್ಮಣತೀರ್ಥ	ಹುಣಸೂರು	5.6
ಭದ್ರಾ	ಭದ್ರಾವತಿಯಿಂದ ಹೊಳೆಹೊನ್ನೂರು	03
ತುಂಗಭದ್ರಾ	ಹೊನ್ನಾಳಿ, ಹರಿಹರ, ಕೂಡ್ಲಿ	2.8
ಕಾವೇರಿ	ಶ್ರೀರಂಗಪಟ್ಟಣ, ರಂಗನತಿಟ್ಟು	03
ಕಬಿನಿ	ನಂಜನಗೂಡಿನ ಉದ್ದಕ್ಕೂ	3.5
ಕಾಗಿನಾ	ಶಹಾಬಾದ್	03
ಕೃಷ್ಣಾ	ನಾರಾಯಣಪುರ, ಆಲಮಟ್ಟಿ, ತಿಂತಣಿ	03
ಶಿಂಷಾ	ಹಲಗೂರು, ಮದ್ದೂರು	06
ಭೀಮಾ	ಗಂಗಾಪುರದಿಂದ ಯಾದಗಿರಿ	03
ನೇತ್ರಾವತಿ	ಮಂಗಳೂರು, ಉಪ್ಪಿನಂಗಡಿ	2.6
ತುಂಗಾ	ಶಿವಮೊಗ್ಗ	4.8

2.29 ಕೋಟಿ ರಾಜ್ಯದಲ್ಲಿ ನಗರ ಪ್ರದೇಶದಲ್ಲಿರುವ ಜನರು

3356 ದಶಲಕ್ಷ ಲೀಟರ್ ಪ್ರತಿನಿತ್ಯ ಕೊಳಚೆ ನೀರು ಸಂಗ್ರಹ

183 ರಾಜ್ಯದಲ್ಲಿರುವ ತ್ಯಾಜ್ಯ ನೀರು ಸಂಸ್ಕರಣ ಘಟಕಗಳು (ಎಸ್‌ಟಿಪಿ)

2693 ದಶಲಕ್ಷ ಲೀಟರ್ ಈ ಎಸ್‌ಟಿಪಿಗಳಲ್ಲಿ ತ್ಯಾಜ್ಯ ನೀರು ಸಂಸ್ಕರಣೆ

663 ದಶಲಕ್ಷ ಲೀಟರ್ ಸಂಸ್ಕರಣೆಯಾಗದ ಕೊಳಚೆ ನೀರು

'ಬಿಜೆಪಿಗರಿಗೆ ದಲಿತರ ಜಮೀನು ಹಂಚಿದ ಅಶೋಕ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಬಡ ರೈತರಿಗೆ ಮೀಸಲಿಟ್ಟಿದ್ದ ಜಮೀನನ್ನು ಬಿಜೆಪಿ ನಾಯಕ ಆರ್. ಅಶೋಕ ಅವರು ಬಗರ್‌ಹುಕುಂ ಸಮಿತಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಮೇಯರ್, ಮಾಜಿ ಮೇಯರ್ ಹಾಗೂ ಮಾಜಿ ಉಪ ಮೇಯರ್‌ಗಳಿಗೆ ಹಂಚಿಕೆ ಮಾಡಿದ್ದರು ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

'1998ರಿಂದ 2006ರವರೆಗೆ ಅಶೋಕ ಅವರು ಬೆಂಗಳೂರು ದಕ್ಷಿಣ ತಾಲ್ಲೂಕು ಬಗರ್‌ಹುಕುಂ ಭೂ-ಸಕ್ರಮೀಕರಣ ಸಮಿತಿ ಅಧ್ಯಕ್ಷರಾಗಿದ್ದರು. ಈ ವೇಳೆ ಅವರು ಕಾನೂನುಬಾಹಿರವಾಗಿ ಅನರ್ಹ ಫಲಾನುಭವಿಗಳಿಗೆ ಜಮೀನು ಮಂಜೂರು ಮಾಡಿದ್ದಾರೆ' ಎಂದು ಆರೋಪಿಸಿ ಎ.ಆನಂದ ಎಂಬವರು ಎಸಿಬಿಗೆ ದೂರು ನೀಡಿದ್ದರು. ಈ ದೂರು ಆಧರಿಸಿ ಎಸಿಬಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

'ಜಮೀನು ಹಂಚಿಕೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಇದು ನನ್ನ ವಿರುದ್ಧ ರಾಜಕೀಯ ದುರುದ್ದೇಶದಿಂದ ದಾಖಲಿಸಿರುವ ಪ್ರಕರಣ. ಆದ್ದರಿಂದ ರದ್ದುಪಡಿಸಬೇಕು' ಎಂದು ಕೋರಿ ಅಶೋಕ ಅವರು ಹೈಕೋರ್ಟ್‌ ಮೆಟ್ಟಿಲೇರಿದ್ದರು.

ತನಿಖೆ ಮುಂದುವರಿಸಲು ಎಸಿಬಿಗೆ ಹೈಕೋರ್ಟ್ 2018ರಲ್ಲಿ ಹಸಿರು ನಿಶಾನೆ ತೋರಿಸಿತ್ತು. ಇದನ್ನು ಪ್ರಶ್ನಿಸಿ ಅಶೋಕ ಅವರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಪೀಠವು ಪ್ರಮಾಣಪತ್ರ ಸಲ್ಲಿಸುವಂತೆ ಲೋಕಾಯುಕ್ತ ಹಾಗೂ ರಾಜ್ಯ ಸರ್ಕಾರಕ್ಕೆ ಸೂಚಿಸಿತ್ತು. ವಕೀಲ ಡಿ.ಎಲ್. ಚಿದಾನಂದ ಮೂಲಕ ಗೃಹ ಇಲಾಖೆ ಪ್ರಮಾಣಪತ್ರ ಸಲ್ಲಿಸಿದೆ. ನ್ಯಾಯಮೂರ್ತಿ ಸಂಜಯ್ ಕರೋಲ್ ಹಾಗೂ ಎನ್.ಕೋಟೀಶ್ವರ್ ಸಿಂಗ್ ಅವರ ಪೀಠವು ಪ್ರಕರಣದ ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿದೆ.

'1997ರಿಂದ 2006ರ ಅವಧಿಯಲ್ಲಿ ಬಗರ್ ಹುಕುಂ ಯೋಜನೆಯಡಿ ಪ್ರಧಾನವಾಗಿ ಬಿಜೆಪಿ ಮುಖಂಡರು ಅಥವಾ ಅವರ ಕುಟುಂಬದವರಿಗೆ ಹಂಚಿಕೆ ಮಾಡಲಾಗಿತ್ತು. ನೈಜ ಫಲಾನುಭವಿಗಳಿಗೆ ಅನ್ಯಾಯವೆಸಗಿ ರಾಜಕಾರಣಿಗಳಿಗೆ ಜಾಗ ಮಂಜೂರು ಮಾಡಿದ್ದರು' ಎಂದು ಸರ್ಕಾರ ಆರೋಪಿಸಿದೆ.

'ಸಾರ್ವಜನಿಕ ಸಂಪನ್ಮೂಲಗಳ ದುರ್ಬಳಕೆ ಮಾಡಿ ಅನರ್ಹರಿಗೆ ಬೇಕಾಬಿಟ್ಟಿಯಾಗಿ ಭೂಮಿ ಹಂಚಲಾಗಿದೆ. ಈ ಮೂಲಕ ಸರ್ಕಾರದ ಖಜಾನೆಗೆ ನೂರಾರು ಕೋಟಿ ನಷ್ಟ ಉಂಟು ಮಾಡಲಾಗಿದೆ. ಅರ್ಜಿದಾರರ ವಿರುದ್ಧದ ಆರೋಪಗಳು ಗಂಭೀರವಾಗಿದ್ದು, ಪಾರದರ್ಶಕವಾಗಿ ಸಮಗ್ರ ತನಿಖೆ ನಡೆಸಬೇಕು. ಹೀಗಾಗಿ, ಮೇಲ್ಮನವಿಯನ್ನು ವಜಾಗೊಳಿಸಬೇಕು' ಎಂದೂ ಕೋರಿದೆ.

'ಸುಪ್ರೀಂ'ಗೆ ರಾಜ್ಯ ಸಲ್ಲಿಸಿದ ಪ್ರಮಾಣಪತ್ರದಲ್ಲೇನಿದೆ?

- ಅಶೋಕ ಅವರು ಅಧಿಕಾರ ದುರುಪಯೋಗಪಡಿಸಿಕೊಂಡು ತಮ್ಮ ಪಕ್ಷದ ಸಹೋದ್ಯೋಗಿ ಡಿ. ವೆಂಕಟೇಶಮೂರ್ತಿ (ಮಾಜಿ ಮೇಯರ್) ಹಾಗೂ ಅವರ ಪತ್ನಿ ಕೆ.ಪ್ರಭಾ ಅವರಿಗೆ ತಲಾ ನಾಲ್ಕು ಎಕರೆಯನ್ನು ಕಾನೂನುಬಾಹಿರವಾಗಿ ಹಂಚಿಕೆ ಮಾಡಿದ್ದರು
- ನಿಯಮಗಳನ್ನು ಉಲ್ಲಂಘಿಸಿ ತಗಚಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ 60ರಲ್ಲಿ 4.20 ಎಕರೆಯನ್ನು ಸಂದೀಪ್ ಬಾಬು ಎಂಬವರಿಗೆ ಮಂಜೂರು ಮಾಡಿದ್ದರು
- ಅಗರ ಗ್ರಾಮದ ಸರ್ವೆ ಸಂಖ್ಯೆ 91ರಲ್ಲಿ ನಾಲ್ಕು ಎಕರೆ ಜಾಗವನ್ನು ಸುಗುಮಾ ಹಾಗೂ ಅವರ ಪುತ್ರ ಕಾರ್ತಿಕ್ ಎಂಬವರಿಗೆ ಹಂಚಿಕೆ ಮಾಡಿದ್ದರು. ಹಂಚಿಕೆಯ ಸಂದರ್ಭದಲ್ಲಿ ಕಾರ್ತಿಕ್‌ಗೆ ಕೇವಲ ಮೂರು ವರ್ಷ ವಯಸ್ಸಾಗಿತ್ತು
- ಬಗರ್‌ಹುಕುಂ ಯೋಜನೆಯಡಿ ಬಿಬಿಎಂಪಿ ವ್ಯಾಪ್ತಿಯಿಂದ 18 ಕಿ.ಮೀ. ಒಳಗೆ ಜಮೀನು ಮಂಜೂರು ಮಾಡುವಂತಿಲ್ಲ. ಆದರೆ, ಬಿಬಿಎಂಪಿ ವ್ಯಾಪ್ತಿಯಲ್ಲೇ ಅನರ್ಹರಿಗೆ ಜಮೀನು ನೀಡಲಾಗಿತ್ತು

ಕರ್ನಾಟಕ ಸರ್ಕಾರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ) ಸರ್ಕಾರಿ ಶಿಶುಮಂದಿರ
ಡಾ। ಎಂ.ಹೆಚ್. ಮರೀಗೌಡ ರಸ್ತೆ, ಕಿದ್ವಾಯಿ ಆಸ್ಪತ್ರೆ ಪಕ್ಕ, ಬೆಂಗಳೂರು-560029
ಇಮೇಲ್ : shishu.mandira@yahoo.in ದೂರವಾಣಿ ಸಂಖ್ಯೆ : 080-26569344

ಕ್ರ.ಸಂ : ಸ.ಶಿ.ಮಂ.ಬೆಂ(ನ),ಪ್ರಚಾರ,ನಿವಾಸಿ,2021-22 ದಿನಾಂಕ : 16/09/2025

ಪಾಲಕರ ಪತ್ತೆಗಾಗಿ ನೆರವು ಕೋರಿಕೆ

ಕ್ರ. ಸಂ	ಮಕ್ಕಳ ವಿವರ	
1.	ಮಗುವಿನ ಹೆಸರು	ನವನೀತ್
2.	ಮಗುವಿನ ವಯಸ್ಸು	04 ವರ್ಷ 2 ತಿಂಗಳು
3.	ತಂದೆ ಅಥವಾ ತಾಯಿಯ ಹೆಸರು	ಅಂಬುಜಾ ಆರ್ ಸಾವನುಕರ್ ಮತ್ತು ಪವನ್
4.	ಹುಟ್ಟಿದ ದಿನಾಂಕ	02.07.2021
5.	ಎತ್ತರ	102.ಸೆ.ಮೀ
6.	ದೇಹದ ಬಣ್ಣ ಮತ್ತು ಗುರುತಿಸುವ ಚಹರೆ	ಗೋಧಿ ಬಣ್ಣ
7.	ಮಾನಸಿಕ ಮತ್ತು ದೈಹಿಕ ಸ್ಥಿತಿ	ಸಾಧಾರಣ
8.	ಯಾರನ್ನು ಸಂಪರ್ಕಿಸಬೇಕಾದವರ ವಿವರ: ಅಧೀಕ್ಷಕರು, ಸರ್ಕಾರದ ಶಿಶುಮಂದಿರ, ಡಾ.ಎಂ.ಹೆಚ್. ಮರಿಗೌಡ ರಸ್ತೆ, ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯ ಹತ್ತಿರ ಬೆಂಗಳೂರು-560029. ದೂರವಾಣಿ ಸಂಖ್ಯೆ-6364656354	

ಸಹಿ/-
ಅಧೀಕ್ಷಕರು, ಸರ್ಕಾರಿ ಶಿಶುಮಂದಿರ,
ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು ಜಿಲ್ಲೆ.
DIPR/CP/2842/Zen/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ
ಕ್ರಸಂ: ಪಿಬಿ/ಕಾಲುಸಂಕ/ಅಧಿಸೂಚನೆ: 2025-26/01553 ದಿನಾಂಕ: 15.09.2025

ಇ-ಟೆಂಡರ್ ಅಧಿಸೂಚನೆ IFT-KW- 3
ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ-ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ-ಪ್ರೋಕ್‌ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.

ಒಟ್ಟು 1 ಕಾಮಗಾರಿ
(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 22-09-2025 (16.00 ಗಂಟೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 23-09-2025 (16.00 ಗಂಟೆವರೆಗೆ) (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24-09-2025 (16.30 ಗಂಟೆವರೆಗೆ) (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 25-09-2025 (16.00 ಗಂಟೆವರೆಗೆ)

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ
ಲೋಕೋಪಯೋಗಿ ಇಲಾಖೆ ವಿಭಾಗ, ಶಿರಸಿ (ಉತ್ತರ ಕನ್ನಡ ಜಿಲ್ಲೆ)
DIPR/ADK/KSMCA/507/25-26 dt.17.09.2025

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560 002
ದೂರವಾಣಿ: 080-22213530/22241325 ಫ್ಯಾಕ್ಸ್: 080-22214379
ಇ-ಮೇಲ್: kanbhavblr@gmail.com ವೆಬ್‌ಸೈಟ್: www.kannadasiri.in

No.: DKC-2023-24/SE0009 ದಿನಾಂಕ: 18.09.2025

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಧಿಕಾರಿಗಳ ಅಧಿಕೃತ ಕಚೇರಿ ಕರ್ತವ್ಯಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30 ಶಿವಾನಿ 2019, ಬೆಂಗಳೂರು ದಿ: 31.03.2022ರ ಆದೇಶದ ದರದನ್ವಯ ಮಾರುತಿ ಸ್ವಿಫ್ಟ್ ಡಿಸೈರ್/ಟೊಯೋಟ ಇಟಿಯೋಸ್ ವಾಹನಗಳನ್ನು ಚಾಲಕರನ್ನೊಳಗೊಂಡಂತೆ ಬಾಹ್ಯ ಮೂಲದಿಂದ ಬಾಡಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ 07 ವಾಹನಗಳನ್ನು ಒದಗಿಸಲು ಹಾಗೂ ಅವಶ್ಯಕತೆ ಇದ್ದಲ್ಲಿ ದಿನ ನಿತ್ಯ ಬಾಡಿಗೆ ಆಧಾರದ ಮೇಲೆ ಸೇವೆ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ-2000 ಅಡಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಹ ಸಂಸ್ಥೆಗಳಿಂದ ಅಲ್ಪಾವಧಿ ಮರು ಇ-ಟೆಂಡರ್ CALL-3 ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕಟಣೆ, ಷರತ್ತು ಮತ್ತು ನಿಬಂಧನೆಗಳು, ಇತರ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ಅಂತರ್ಜಾಲದ ಮೂಲಕ ಪಡೆದು ಸಲ್ಲಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್ ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ 18.09.2025**. 2) ಟೆಂಡರ್ ಡಾಕ್ಯುಮೆಂಟ್ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಅಂತಿಮ **ದಿನಾಂಕ 08.10.2025 ಸಂಜೆ 5.30 ಗಂಟೆ.** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 10.10.2025 ಬೆಳಗ್ಗೆ 11.00 ಗಂಟೆ.** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ 13.10.2025 ಬೆಳಗ್ಗೆ 11.00 ಗಂಟೆ.** 5) ಟೆಂಡರ್‌ಗೆ ಇಟ್ಟ ಇ.ಎಂ.ಡಿ. ಮೊತ್ತ **ರೂ.70,000/-** (ರೂಪಾಯಿ ಎಪ್ಪತ್ತು ಸಾವಿರ ಮಾತ್ರ). 6) ಟೆಂಡರ್ ಅಂದಾಜು ಮೊತ್ತ (12 ತಿಂಗಳಿಗೆ) **ರೂ.35,00,000/- (ರೂಪಾಯಿ ಮೂವತ್ತೈದು ಲಕ್ಷ ಮಾತ್ರ).**

ಸಹಿ/- ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2840/ಆಕಾರ್/2025-26

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.
ಸಂಖ್ಯೆ: ಕಗೃಮಂ/ಕಾ/ಹಂಚಿಕೆ-06/ಪ.ಪ್ರ/2025-26 ದಿನಾಂಕ: 17.09.2025

ಕಾಲಾವಕಾಶ ವಿಸ್ತರಣೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು **ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ತಾಲ್ಲೂಕು, ರಾಯಸಂದ್ರ ಗ್ರಾಮದಲ್ಲಿ ಅಭಿವೃದ್ಧಿಪಡಿಸಿರುವ ರಾಷ್ಟ್ರಕವಿ ಕುವೆಂಪು ವಸತಿ ಬಡಾವಣೆಯಲ್ಲಿ ಸುಸಜ್ಜಿತವಾದ ಎಲ್.ಐ.ಜಿ. ಮತ್ತು ಎಂ.ಐ.ಜಿ. ವರ್ಗದ ಮನೆಗಳ ನಿರ್ಮಾಣ ಯೋಜನೆ** ಕೈಗೊಳ್ಳಲು ಉದ್ದೇಶಿಸಿ ಬೇಡಿಕೆ ಸಮೀಕ್ಷೆಯಡಿ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ದಿನಾಂಕ: 09.08.2025ರ ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು, ಆರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.09.2025 ನಿಗದಿಪಡಿಸಲಾಗಿತ್ತು. ಆದರೆ ದಿನಾಂಕ: 15.09.2025ರಂದು ಮಂಡಳಿಯ ವೆಬ್‌ಸೈಟ್‌ನಲ್ಲಿ ತಾಂತ್ರಿಕ ದೋಷ ಉಂಟಾದ ಕಾರಣ ಸಾರ್ವಜನಿಕರು ಅರ್ಜಿ ಸಲ್ಲಿಸಲು ಅಡಚಣೆಯಾಗಿದ್ದರಿಂದ, **ಸಾರ್ವಜನಿಕ ಹಿತದೃಷ್ಟಿಯಿಂದ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ಮೊತ್ತವನ್ನು ಪಾವತಿಸಿ ಅರ್ಜಿ ಸಲ್ಲಿಸಲು ದಿನಾಂಕ: 18.09.2025 ಮತ್ತು 19.09.2025ರಂದು ಎರಡು ದಿನಗಳ ಕಾಲ ವಿಸ್ತರಿಸಲಾಗಿರುತ್ತದೆ.** ಉಳಿದಂತೆ ದಿನಾಂಕ: 30.07.2025ರ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಆಸಕ್ತಿ ಇರುವ ಸಾರ್ವಜನಿಕರು ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಿ ಆನ್‌ಲೈನ್ ಮೂಲಕ ಅರ್ಜಿ (Online Application) ಸಲ್ಲಿಸಬಹುದಾಗಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 19.09.2025.**

ಸಹಿ/- ಕಾರ್ಯದರ್ಶಿಗಳು
ಕಗೃಮಂ, ಬೆಂಗಳೂರು
DIPR/CP/YC/2861/2025-26

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ,
ಕ್ಯಾನ್ಸರ್ ಸಂಶೋಧನೆ ಮತ್ತು ತರಬೇತಿ ಕೇಂದ್ರ (ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಪ್ರಾದೇಶಿಕ ಅರ್ಬುದ ಸಂಶೋಧನಾ ಮತ್ತು ಚಿಕಿತ್ಸಾ ಕೇಂದ್ರ
Dr. M.H. Marigowda Road, Bangalore-560029
Ph: +91 080-2656 0722/2656 0723, 080-6669 7999

No:KMIO/MNT/AMCMOPL/457/2025-26/e-1577895,e-1883408, e-1706168 Date: 17.09.2025

e-PROCUREMENT TENDER NOTIFICATION

Online Tenders are invited in Two Bid System for the following through GOK KPP Portal tender for Kidwai Memorial Institute of Oncology.

Sl No.	Tender No. & Date	Name of the Items
1.	No.KMIO/MNT/AMC MEDICAL OXYGEN PIPE LINE/457/2025-26, DT:17.09.2025	Providing AMC Services for Medical Oxygen Pipe Line System at KMIO Estimated Cost:14.58 Lakhs
2.	No.KMIO/MNT/CMC FIRE HYDRANT/458/2025-26 DT:17.09.2025	Providing CMC Services for Fire Hydrant Systems Installed at Various blocks of KMIO Estimated Cost:17.10 Lakhs
3.	No.KMIO/MNT/ BATTERIES/459/2025-26 DT:17.09.2025	Supplying and Installation of On-Line UPS System Batteries on Buy Back offer for Old Batteries Estimated Cost:53.50 Lakhs

ಬಿಡ್ ದಾಖಲೆಗಳು ದಿನಾಂಕ: 22.09.2025 ರಿಂದ 14.10.2025ರ ವರೆಗೆ ಆನ್‌ಲೈನ್‌ನಲ್ಲಿ ಲಭ್ಯವಿರುತ್ತದೆ. ಬಿಡ್ಡರುಗಳು ಬಿಡ್ ದಾಖಲೆಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಬಹುದು ಮತ್ತು ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್‌ಗಳನ್ನು ಮತ್ತು ಶುಲ್ಕಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಬಹುದು. ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 14.10.2025ರ ಸಂಜೆ 4:00 ಗಂಟೆಯವರೆಗೆ. ಟೆಂಡರ್ ಅಂಗೀಕಾರ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕಾರ/ತಿರಸ್ಕಾರ/ರದ್ದುಗೊಳಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

ಸಹಿ/-
ಆರ್ಥಿಕ ಸಲಹೆಗಾರರು
ಡಿಐಪಿಆರ್/ಎಸ್‌ಐ/2838/2025-26

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ-1 /ವಿ.ಲೆ.ಶೀ /ಟೆಂಡರು /2025-26/962
ದಿನಾಂಕ 12-09-2025

ಅಲ್ಪಾವಧಿ ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2024-25 ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮ 5054 ಯೋಜನೆ ಮತ್ತು 2024-25 ನೇ ಸಾಲಿನ ಮುಖ್ಯಮಂತ್ರಿ ವಿಶೇಷ ಅನುದಾನ ಒಟ್ಟು 08 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಆಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ-
1.RDPR/2025-26/BD/WORK_INDENT16861/Call-2
2.RDPR/2025-26/BD/WORK_INDENT16862/Call-2
3.RDPR/2025-26/BD/WORK_INDENT17933/Call-2
4.RDPR/2025-26/BD/WORK_INDENT18022/Call-2
5.RDPR/2025-26/RD/WORK_INDENT18149/Call-2
6.RDPR/2025-26/RD/WORK_INDENT18090/Call-2
7.RDPR/2025-26/BD/WORK_INDENT17935/Call-2
8.RDPR/2025-26/BD/WORK_INDENT18023/Call-2

ಟೆಂಡರ್ ನಮೂನೆಗಳನ್ನು https://kppp.karnataka.gov.in ಅಂತರ್ಜಾಲದಲ್ಲಿ ದಿನಾಂಕ 12-09-2025 ರಿಂದ ದಿನಾಂಕ 19-09-2025 ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 19-09-2025 ರ 16.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ ದಿನಾಂಕ: 20-09-2025 ರಂದು 17.30 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (https://kppp.karnataka.gov.in) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/456/ಕೆಎಸ್‌ಎಂಸಿಎ/2025-26

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
(ಐ.ಎಂ.ಎ ಹಾಗೂ ಇತರೆ KPIDFE ವಂಚನೆ ಪ್ರಕರಣಗಳು)
3ನೇ & 4ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ ಗೋಪುರಗಳು, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-560001
ದೂರವಾಣಿ ಸಂ: 080-29565353/29604556। Email: splocaima21@gmail.com

ಸಂ:SPLOCA/ADM/PROC-03/12/2025-26 ದಿನಾಂಕ: 16.09.2025

ಪ್ರಕಟಣೆ

ವಿಷಯ:- ವಿಅಮಸಪ್ರಾ ಮತ್ತು ಇತರೆ ಸಕ್ಷಮ ಪ್ರಾಧಿಕಾರಗಳ ಕಚೇರಿಗೆ ಸಂಬಂಧಿಸಿದ ವಿವಿಧ ಹಗರಣ ಮೊಕದ್ದಮೆಗಳ ವಿಧಿವಿಜ್ಞಾನ ಲೆಕ್ಕಪರಿಶೋಧನೆ ನಡೆಸಲು ಹೆಸರಾಂತ ಸಂಸ್ಥೆಗಳಿಂದ ಟೆಂಡರ್ [ಆಸಕ್ತಿ ವ್ಯಕ್ತಪಡಿಸುವಿಕೆ] ಆಹ್ವಾನ

ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರ ಐಎಂಎ & ಇತರೆ ಕೆಪಿಐಡಿಎಫ್‌ಇ ಹಗರಣ ಮೊಕದ್ದಮೆಗಳು [ಇನ್ನು ಮುಂದೆ ವಿಅಮಸಪ್ರಾ] ಇವರು ಕೆಪಿಐಡಿ ಕಾಯ್ದೆಯಡಿಯಲ್ಲಿ ಕಂಪನಿಗಳ ವಿರುದ್ಧ ದಾಖಲಾಗಿರುವ ಪ್ರಕರಣಗಳಿಗೆ ಕ್ರಮ ಕೈಗೊಂಡಿರುವ ಸಂಬಂಧ ಸಕ್ಷಮ ಪ್ರಾಧಿಕಾರಗಳು ನಿಗದಿಪಡಿಸಿದಾಗ ವಿಅಮಸಪ್ರಾ ಮತ್ತು ಇತರೆ ಸಕ್ಷಮ ಪ್ರಾಧಿಕಾರಗಳ ಕಚೇರಿಗೆ ಸಂಬಂಧಿಸಿದ ವಿವಿಧ ಹಗರಣ ಮೊಕದ್ದಮೆಗಳ ವಿಧಿವಿಜ್ಞಾನ ಪರಿಶೋಧನೆ ನಡೆಸಲು ಈ ಕೆಳಕಂಡ ಅವಶ್ಯಕ ಮಾನದಂಡಗಳೊಂದಿಗೆ ಇ-ಟೆಂಡರಿಂಗ್ ಪದ್ಧತಿಯಡಿಯಲ್ಲಿ ಅರ್ಹ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರಮ ಸಂ.	ಅರ್ಹತೆ/ಅವಶ್ಯಕತೆಗಳು	ಅನುಭವ
1.	ನೋಂದಾಯಿತ ಸಿಎ ಸಂಸ್ಥೆಗಳು ಈ ಕೆಳಕಂಡ ನೈಪುಣ್ಯತೆ/ಪರಿಣಿತಿಯೊಂದಿಗೆ. ❖ ಸಂಬಂಧಿತ ಕಂಪನಿಗಳು/ಬ್ಯಾಂಕ್‌ಗಳು/ಸಹಕಾರಿ ಸಂಸ್ಥೆಗಳ ಹಣಕಾಸು ವಿಶ್ಲೇಷಣೆ ಮತ್ತು ವಿಧಿವಿಜ್ಞಾನ ಪರಿಶೋಧನೆ ಕ್ಷೇತ್ರದಲ್ಲಿ ❖ ನಿಧಿಯ ಪಥವನ್ನು ಗುರುತಿಸುವುದು, ಬ್ಯಾಂಕಿಂಗ್ ವಹಿವಾಟುಗಳ ಜಾಡು ಕಂಡುಹಿಡಿಯುವಿಕೆ ❖ ಪರಿಶೋಧನೆ ನಡೆಸುವುದು. ❖ ಬ್ಯಾಂಕ್ ವಹಿವಾಟುಗಳಿಗಾಗಿ ಪಾವತಿದಾರ ಫಲಾನುಭವಿ ವಿವರಗಳ ಸಂಗ್ರಹಣೆ ಮತ್ತು ಅದರಿಂದ ಸೃಜನೆಯಾಗಿರುವ ಸ್ವತ್ತುಗಳನ್ನು ಗುರುತಿಸುವುದು. ❖ ಆರ್‌ಬಿಐ, ಸೆಬಿ, ಇಡಿ, ಸಿಬಿಐ, ಐಟಿ ಇತ್ಯಾದಿ ವಿವಿಧ ಸರ್ಕಾರಿ ಸಂಸ್ಥೆಗಳಿಂದ ಮಾಹಿತಿಯನ್ನು ಸಂಗ್ರಹಿಸುವುದು ❖ ನಿಧಿ ವರ್ಗಾವಣೆಗಳನ್ನು ಪತ್ತೆಹಚ್ಚುವುದು, ನಗದು ವಹಿವಾಟುಗಳನ್ನು ವಿಶ್ಲೇಷಿಸುವುದು ❖ ದತ್ತಾಂಶಗಳನ್ನು ರಚಿಸುವುದು ಮತ್ತು ಮಾನ್ಯಗೊಳಿಸುವುದು. ❖ ಕ್ಲೇಮುಗಳ ವಿಶ್ಲೇಷಣೆ ಮತ್ತು ಪರಿಶೀಲನೆ ❖ ಪ್ರತಿ ಹಾಜರಾತಿಗೆ ಒಪ್ಪಂದದ 1% ಪಾವತಿಯ ಮೇಲೆ ಕಾನೂನು ವೇದಿಕೆಗಳಲ್ಲಿ ಪರಿಣಿತ ಪುರಾವೆಗಳನ್ನು ಒದಗಿಸುವುದು.	ಕನಿಷ್ಠ - 5 ವರ್ಷಗಳು, ಆದ್ಯತೆ - 10 ವರ್ಷಗಳು

ಕ್ರಮ ಸಂ.	ವೇಳಾಪಟ್ಟಿಯ ವಿವರಣೆ	ದಿನಾಂಕ
1.	ಅಧಿಸೂಚನೆ / ಜಾಹೀರಾತನ್ನು ಹೊರಡಿಸುವುದು.	18.09.2025
2.	ಇ-ಪ್ರೊಕ್‌ನಲ್ಲಿ ಆರ್‌ಎಫ್‌ಪಿ ದಾಖಲೆಯನ್ನು ಅಪ್‌ಲೋಡ್ ಮಾಡುವ ದಿನಾಂಕ	19.09.2025
3.	ಇ-ಪ್ರೊಕ್‌ನಲ್ಲಿ ಬಿಡ್ ದಾಖಲೆಯನ್ನು ಸಲ್ಲಿಸಲು ಕೊನೆಯ ದಿನಾಂಕ	20.09.2025 ಸಂಜೆ 5.00 ಗಂಟೆಗೆ
4.	SPLOCA ಕಚೇರಿಯಲ್ಲಿ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ	22.09.2025 ಬೆಳಿಗ್ಗೆ 11.00 ಗಂಟೆಗೆ

ಯಾವುದೇ ವಿಚಾರಣೆಗೆ: 0/o SPLOCA, ಐಎಂಎ & ಇತರ ಕೆಪಿಐಡಿ ಪ್ರಕರಣಗಳು, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ ಟವರ್ಸ್, ಬೆಂಗಳೂರು-560001. ಇ-ಮೇಲ್: splocaima21@gmail.com ದೂರವಾಣಿ ಸಂಖ್ಯೆ.080-29565353ಗೆ ಸಂಪರ್ಕಿಸಿ
ಟೆಂಡರ್, ನಿಯಮಗಳು ಮತ್ತು ಷರತ್ತುಗಳ ಕುರಿತು ವಿವರಗಳಿಗಾಗಿ https://kppp.karnataka.gov.in/#/portal/portal-home

ಸಹಿ/-
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ, ಐಎಂಎ ಹಾಗೂ
ಇತರೆ ಕೆಪಿಐಡಿ ವಂಚನೆ ಪ್ರಕರಣಗಳು, ಬೆಂಗಳೂರು
ಡಿಐಪಿಆರ್/ಸಿಪಿ/2856/ಸಿಸಿಎಲ್/2025-26

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಛೇರಿ, ಮೆಸ್ಕಾಂ ಭವನ, ಬಿಜೈ, ಮಂಗಳೂರು-575004
ದೂರವಾಣಿ: 0824-2885796, CIN: U40109 KA 2002 SGC 030425
ಕ್ರಮ ಸಂಖ್ಯೆ: MESCOM/IT/34/IT ದಿನಾಂಕ: 16.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ)

ಮ.ವಿ.ಸ.ಕಂ.ಯು ಅರ್ಹ ಬಿಡ್ಡುದಾರರಿಂದ **''ಮೆಸ್ಕಾಂನ ವಿವಿಧ ಕಛೇರಿಗಳಿಗೆ ಗಣಕಯಂತ್ರಗಳ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಗತಗೊಳಿಸುವಿಕೆ''** ಸೇವೆಗೆ ಟೆಂಡರ್ ವಿಚಾರಣೆ ಸಂಖ್ಯೆ: **MESCOM/2025-26/IND0136** ರನ್ವಯ ಟೆಂಡರನ್ನು ಆಹ್ವಾನಿಸುತ್ತಿದೆ.

ಆಸಕ್ತಿಯುಳ್ಳ ಅರ್ಹ ಬಿಡ್‌ದಾರರು ದಿನಾಂಕ 17.09.2025 ರಂದು ಅಥವಾ ನಂತರ https://kppp.karnataka.gov.in/ಗೆ ಲಾಗ್ ಆನ್ ಮಾಡಿ ವಿವರಗಳನ್ನು ಪಡೆಯಬಹುದಾಗಿದೆ. KPP ಪೋರ್ಟಲ್ ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91-8046010000/8068948777 ಗೆ ಅಥವಾ ಇ-ಮೇಲ್ ವಿಳಾಸ: support@eprochelpdesk.comಗೆ ಸಂಪರ್ಕಿಸಬಹುದಾಗಿದೆ.

ಸಹಿ/-
ಅಧೀಕ್ಷಕ ಇಂಜಿನಿಯರ್ (ವಿ)(ಯೋಜನೆ)
DIPR/DK/MPL/804/25-26

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ನಗರಸಭಾ ಕಾರ್ಯಾಲಯ, ಉಡುಪಿ
ಸಂಖ್ಯೆ:ಉನಸ:ಬಿ2:ಸಿಆರ್:2025-26 **ಟೆಂಡರು ಪ್ರಕಟಣೆ** ದಿನಾಂಕ: 15.09.2025

2025-26ನೇ ಸಾಲಿನ ಉದ್ಯಮ ನಿಧಿ ಮತ್ತು ನಗರಸಭಾ ನಿಧಿಯಡಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document KW - 1 & K.W -2 ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) E-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.
1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 29.09.2025 ಸಂಜೆ 5.00 ಗಂಟೆಗೆ
2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 30.09.2025 ಸಂಜೆ 5.01 ಗಂಟೆಗೆ

ಕ್ರ. ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ	ಕಾಮಗಾರಿ ಪೂರ್ತಿಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ)
2025-26ನೇ ಸಾಲಿನ ಉದ್ಯಮ ನಿಧಿ				
1	DMA/2025-26/OW/WORK_INDENT48697	5000000.00	100000.00	4 ತಿಂಗಳು
2025-26ನೇ ಸಾಲಿನ ನಗರಸಭಾ ನಿಧಿ				
2	DMA/2025-26/OW/WORK_INDENT48724	4180000.00	83600.00	4 ತಿಂಗಳು
3	DMA/2025-26/OW/WORK_INDENT48725	800000.00	20000.00	3 ತಿಂಗಳು
4	DMA/2025-26/OW/WORK_INDENT48719	1580000.00	39500.00	3 ತಿಂಗಳು

ಸಹಿ/- ಅಧ್ಯಕ್ಷರು, ಉಡುಪಿ ನಗರಸಭೆ ಸಹಿ/- ಪೌರಾಯುಕ್ತರು, ಉಡುಪಿ ನಗರಸಭೆ

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ.
ದೂ: ಸಂ: 08194-235464 ಇ-ಮೇಲ್: dhochitradurga@gmail.com
ಸಂಖ್ಯೆ: ಜಿ.ಆ.ಕು.ಕ.ಚಿ.; ಸಿ(1)/01/2025-26 ದಿನಾಂಕ: 16-09-2025

ಪ್ರಕಟಣೆ

ಚಿತ್ರದುರ್ಗ ಜಿಲ್ಲೆಯ ಅಧೀನದ ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಪ್ರಾ.ಆ.ಕೇಂದ್ರಗಳಲ್ಲಿ ಖಾಲಿ ಇರುವ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು, ಹಿರಿಯ ವೈದ್ಯಾಧಿಕಾರಿಗಳು, ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗೆ ಒಟ್ಟು 22 ಹುದ್ದೆಗಳಿಗೆ ಎಂ.ಬಿ.ಬಿ.ಎಸ್. ಪದವೀಧರ ವೈದ್ಯರನ್ನು ಹಾಗೂ ಸ.ಆ.ಕೇಂದ್ರಗಳಲ್ಲಿ ಖಾಲಿ ಇರುವ 02 ಮಕ್ಕಳ ತಜ್ಞರ ಹುದ್ದೆಗೆ ಮತ್ತು 09 ಅರವಳಿಕೆ ತಜ್ಞರ ಹುದ್ದೆಗಳಿಗೆ ಗುತ್ತಿಗೆ ಅಧಾರದ ಮೇಲೆ 1 ವರ್ಷದ ಅವಧಿಗೆ ಅಥವಾ ಖಾಯಂ ವೈದ್ಯರನ್ನು ನೇಮಿಸುವವರಿಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ರೋಸ್ಟರ್ ಕಂ ಮೆರಿಟ್ ಆಧಾರದ ಮೇಲೆ ಸಂದರ್ಶನದ ಮೂಲಕ ನೇಮಕ ಮಾಡಲು ಅರ್ಹ ಅಭ್ಯರ್ಥಿಗಳನ್ನು ಅಹ್ವಾನಿಸಲಾಗಿದೆ. ಈ ಸಂದರ್ಶನವು ದಿನಾಂಕ: 24-09-2025 ರಂದು ಏರ್ಪಡಿಸಲಾಗಿದೆ. ಇಚ್ಚೆಯುಳ್ಳ ಅಭ್ಯರ್ಥಿಗಳು ಬಯೋಡಾಟ, ತಜ್ಞತೆ ಹೊಂದಿದ ಪದವಿ ಪ್ರಮಾಣ ಪತ್ರ /ಅಂಕಪಟ್ಟಿಗಳು / ಎಂ.ಬಿ.ಬಿ.ಎಸ್. ವಿದ್ಯಾರ್ಹತೆಯ ಎಲ್ಲಾ ವರ್ಷದ ಅಂಕಪಟ್ಟಿಗಳು, ಹೌಸ್‌ಮೆನ್‌ಶಿಪ್ ಮುಗಿದ ಪ್ರಮಾಣ ಪತ್ರ, ಕಾನೂನು ಬದ್ಧವಾಗಿ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪಡೆದ ಪ್ರಮಾಣ ಪತ್ರ, ಕೆ.ಎಂ.ಸಿ. ಪ್ರಮಾಣ ಪತ್ರ, ಎಸ್.ಎಸ್.ಎಲ್.ಸಿ. ಪಿಯು.ಸಿ. ಗುರುತಿನ ಚೀಟಿ, ಜಾತಿ ಪ್ರಮಾಣ ಪತ್ರ ಸೇರಿದಂತೆ ಆಗತ್ಯ ದಾಖಲಾತಿಗಳ ಮೂಲ ಹಾಗೂ ದೃಡೀಕೃತ ಜೆರಾಕ್ಸ್ ಪ್ರತಿಗಳೊಂದಿಗೆ ಅರ್ಜಿಯನ್ನು ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಕಛೇರಿ, ಚಿತ್ರದುರ್ಗ ಇಲ್ಲಿಗೆ ಸಲ್ಲಿಸಿ ಸಂದರ್ಶನದ ದಿನಾಂಕದಂದು ಹಾಜರಾಗಲು ಸೂಚಿಸಿದೆ.

ಈ ಸಂದರ್ಶನವು ದಿನಾಂಕ: 24-09-2025 ರಿಂದ ಹುದ್ದೆಗಳ ನೇಮಕಾತಿ ಪೂರ್ಣಗೊಳ್ಳುವವರೆಗೆ ಪ್ರತಿದಿನ ನಡೆಯಲಿದೆ. ಆಯ್ಕೆಯಾದ ವೈದ್ಯರಿಗೆ ರೂ. 60000/-ಸಾವಿರ ಮತ್ತು ತಜ್ಞ ವೈದ್ಯರುಗಳಿಗೆ ರೂ.80000/- ಮಾಸಿಕ ವೇತನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ, ಚಿತ್ರದುರ್ಗ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ತಿಳಿಸಿದೆ.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.
DIPR/CTA/KSMCA/374/2025-26

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ,
ಕ್ರಸಂ: ಬಿಜಿಎಂ/ಡಿಯುಡಿಸಿ/5/ಸಿಆರ್-25/2021-22 ದಿನಾಂಕ:17-09-2025

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ ರವರು ಬೆಳಗಾವಿ ಜಿಲ್ಲೆ ನಿಪ್ಪಾಣ ನಗರಸಭೆಯ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ಯೋಜನೆಯಡಿ ಫಲಾನುಭವಿಗಳ ಮನೆಗಳಿಗೆ ಸೋಲಾರ್ ಲೈಟ್ ಸಿಸ್ಟಮ್ ಅಳವಡಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದ್ದು **(Tender No. DMA/2024-25/OW/WORK INDENT 29389/Call-3), ಟೆಂಡರ್ ಮೊತ್ತ ರೂ.232.50 ಲಕ್ಷ, ಟೆಂಡರ್ ಸಲ್ಲಿಸಲು ಕೊನೆಯ ದಿ:03-10-2025ರಂದು ಸಂಜೆ 5-00 ಘಂಟೆವರೆಗೆ ಹಾಗೂ ಟೆಂಡರ್ ತೆರೆಯುವ ದಿ:04-10-2025 ರಂದು ಸಂಜೆ 5-01 ಘಂಟೆ ನಂತರ ಸಮಯ ನಿಗಧಿಪಡಿಸಲಾಗಿದೆ.** ಟೆಂಡರ್ ವಿವರವನ್ನು https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-
ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ
DIPR/RO No-1042/2025-26

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ) ಬನಶಂಕರಿ, ಬೆಂಗಳೂರು-560070.
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ-1/ಟೆಂಡರ್/17/2025-26 ದಿನಾಂಕ: 16.09.2025

ಅಲ್ಪಾವಧಿ ಟೆಂಡರ್
ಕೆ.ಪಿ.ಪಿ.ಪಿ ಟೆಂಡರ್ ನೋಟಿಸ್, ದ್ವೀ-ಲಕೋಟೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ 4225-04-102-0-01(386) Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವೀ-ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ: 24.09.2025 ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. (**RDPR/2025-26/RD/WORK_INDENT16277 & RDPR/2025-26/RD/WORK_INDENT16281**) ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು
ವಾಸಾಸಂಇ/ವಾಪ್ರ/ಶಿರಡಿ ಸಾಯಿ/2841/2025-26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಚಿಕ್ಕಮಗಳೂರು.
E-Mail: zpedckm@rediffmail.com, ದೂರವಾಣಿ: 08262-220936
ಟೆಂಡರ್ ಪ್ರಕಟಣೆ ಸಂಖ್ಯೆ: 20/2025-26/1448 ದಿನಾಂಕ: 16.09.2025

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ತರೀಕೆರೆ ಮತ್ತು ಅಜ್ಜಂಪುರ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ ರೂ. 80.00 ಲಕ್ಷಗಳು ಮತ್ತು ಕನಿಷ್ಠ ಅಂದಾಜು ಮೊತ್ತ ರೂ. 17.33 ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document KW-1,2,3 ರಂತೆ ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್‌ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು ದಿನಾಂಕ: 15.09.2025 ರಿಂದ ದಿನಾಂಕ: 29.09.2025ರ ವರೆಗೆ ಸಂಜೆ 05:30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: 03.10.2025ರಂದು ಬೆಳಿಗ್ಗೆ 11:00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ: 09.10.2025 ರಂದು ಸಂಜೆ 05:05 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp.karnataka.gov.in website ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಚಿಕ್ಕಮಗಳೂರು

ಮಾರುತ ನಾಯಕ ನಾನಲ್ಲ: ವಿಜಯ್

ದುನಿಯಾ ವಿಜಯ್

ಎಸ್. ನಾರಾಯಣ್ ನಿರ್ದೇಶನದ 'ಮಾರುತ' ಸಿನಿಮಾ ಬಿಡುಗಡೆ ದಿನಾಂಕ ಘೋಷಣೆಯಾಗಿದೆ. ಚಿತ್ರವು ಅ.31ರಂದು ತೆರೆಕಾಣಲಿದೆ. ರಿಲೀಸ್ ದಿನಾಂಕ ಘೋಷಣೆ ಬೆನ್ನಲ್ಲೇ 'ಈ ಸಿನಿಮಾದ ನಾಯಕ ನಾನಲ್ಲ. ನಾನು ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ' ಎಂದು ದುನಿಯಾ ವಿಜಯ್ ಸ್ಪಷ್ಟಪಡಿಸಿದ್ದಾರೆ.

ಕೆ.ಮಂಜು ಹಾಗೂ ರಮೇಶ್ ಯಾದವ್ ಈಶಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಿಸಿರುವ ಈ ಚಿತ್ರದಲ್ಲಿ ಶ್ರೇಯಸ್ ಮಂಜು ಹಾಗೂ ಬೃಂದಾ ಆಚಾರ್ಯ ಜೋಡಿಯಾಗಿ ನಟಿಸಿದ್ದಾರೆ. ಸಾಧು ಕೋಕಿಲ, ನಿಶ್ವಿಕಾ ನಾಯ್ಡು, ರಂಗಾಯಣ ರಘು, ತಾರಾ ಅನುರಾಧ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ, ಮಂಜು ಪಾವಗಡ, ಚಿತ್ರಾ ಶೆಣೈ, ಸುಜಯ್ ಶಾಸ್ತ್ರಿ ಮುಂತಾದವರ ತಾರಾಬಳಗವಿರುವ ಈ ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಕ್ರೇಜಿಸ್ಟಾರ್ ರವಿಚಂದ್ರನ್ ಅವರೂ ನಟಿಸಿದ್ದಾರೆ.

'ನನ್ನನ್ನು ಈ ಸಿನಿಮಾದ ನಾಯಕ ಎಂದು ಬಿಂಬಿಸಲು ಪ್ರಯತ್ನ ಮಾಡಬೇಡಿ. ನಿರ್ಮಾಪಕ ಕೆ. ಮಂಜು ಮತ್ತು ನಿರ್ದೇಶಕ ಎಸ್. ನಾರಾಯಣ್ ಅವರ ಮೇಲೆ ಅಪಾರ ಅಭಿಮಾನ ಮತ್ತು ಗೌರವವಿದೆ. ಹೀಗಾಗಿ ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಆದರೆ ನಾಯಕ ನಾನಲ್ಲ. ಶ್ರೇಯಸ್ ಮಂಜು ಅವರನ್ನು ಚಿಕ್ಕ ವಯಸ್ಸಿನಿಂದ ಬಲ್ಲೆ. ಹೀಗಾಗಿ ಆತನಿಗೆ ಒಳಿತಾಗಲಿ ಎನ್ನುವ ಕಾರಣಕ್ಕೆ ನಟಿಸಿದ್ದೇನೆ' ಎನ್ನುವ ಸ್ಪಷ್ಟನೆಯನ್ನು ಪಿಆರ್‌ಒ ಮುಖಾಂತರ ವಿಜಯ್ ಕಳುಹಿಸಿದ್ದಾರೆ. ಸದ್ಯ ವಿಜಯ್ ಚೆನ್ನೈನಲ್ಲಿ ಸುಂದರ್ ಆ್ಯಕ್ಷನ್ ಕಟ್ ಹೇಳುತ್ತಿರುವ 'ಮೂಕುತಿ ಅಮ್ಮನ್–2' ಚಿತ್ರದ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದಾರೆ.

'ಭೀಮ' ಸಿನಿಮಾ ಬಳಿಕ 'ಸಿಟಿ ಲೈಟ್ಸ್' ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದ ದುನಿಯಾ ವಿಜಯ್ ಒಂದರ ಹಿಂದೆ ಒಂದು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. 'ಮೂಕುತಿ ಅಮ್ಮನ್-2' ಚಿತ್ರೀಕರಣದ ಜೊತೆಗೆ ತೆಲುಗಿನ ಖ್ಯಾತ ನಿರ್ದೇಶಕ ಪೂರಿ ಜಗನ್ನಾಥ್ ಮತ್ತು ತಮಿಳು ನಟ ವಿಜಯ್ ಸೇತುಪತಿ, ಸಂಯುಕ್ತಾ ಮೆನನ್, ಟಬು ನಟಿಸುತ್ತಿರುವ ಪ್ಯಾನ್ ಇಂಡಿಯಾ ಚಿತ್ರೀಕರಣದಲ್ಲಿ ವಿಜಯ್ ತೊಡಗಿಸಿಕೊಂಡಿದ್ದಾರೆ.

ವರ್ಷಾಂತ್ಯಕ್ಕೆ 'ಲ್ಯಾಂಡ್ ಲಾರ್ಡ್'

'ಜಡೇಶ್ ಕೆ.ಹಂಪಿ ನಿರ್ದೇಶನದ 'ಲ್ಯಾಂಡ್ ಲಾರ್ಡ್' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ದೊಡ್ಡಮಟ್ಟದಲ್ಲಿ ಈ ಚಿತ್ರ ಮೂಡಿಬರಲಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ವರ್ಷಾಂತ್ಯಕ್ಕೆ ಚಿತ್ರ ತೆರೆಗೆ ಬರುವ ಸಾಧ್ಯತೆ ಇದೆ' ಎಂದು ವಿಜಯ್ ಹೇಳಿದ್ದಾರೆ.

ಬೃಂದಾ, ಶ್ರೇಯಸ್

ಲವ್ ಯು ಮುದ್ದು ಟೈಟಲ್ ಟ್ರ್ಯಾಕ್

'ಕೆಮಿಸ್ಟ್ರಿ ಆಫ್ ಕರಿಯಪ್ಪ' ಸಿನಿಮಾ ನಿರ್ದೇಶಿಸಿದ್ದ ಕುಮಾರ್ ನಿರ್ದೇಶನದ 'ಲವ್ ಯು ಮುದ್ದು' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಇತ್ತೀಚೆಗೆ ಸಿನಿಮಾದ ಟೈಟಲ್ ಟ್ರ್ಯಾಕ್ ಬಿಡುಗಡೆಯಾಗಿದೆ.

ಅನಿರುದ್ಧ್ ಶಾಸ್ತ್ರಿ ಸಾಹಿತ್ಯ ಬರೆದು ಸಂಗೀತ ನೀಡಿರುವ ಹಾಡಿಗೆ ಸೋನು ನಿಗಮ್, ಐಶ್ವರ್ಯ ರಂಗರಾಜನ್ ಹಾಗೂ ಸುರಭಿ ಭಾರದ್ವಾಜ್ ದನಿಯಾಗಿದ್ದಾರೆ. 'ಅಜ್ಞಾತವಾಸಿ' ಸಿನಿಮಾ ಖ್ಯಾತಿಯ ನಟ ಸಿದ್ದು ಹಾಗೂ ರೇಷ್ಮಾ ಹಾಡಿಗೆ ಹೆಜ್ಜೆ ಹಾಕಿದ್ದಾರೆ. 'ಲವ್ ಯು ಮುದ್ದು' ಮಹಾರಾಷ್ಟ್ರದಲ್ಲಿ ನಡೆದ ನೈಜ ಪ್ರೇಮ ಕಥಾಹಂದರ ಒಳಗೊಂಡಿದೆ. ರಾಜೇಶ್ ನಟರಂಗ, ತಬಲಾ ನಾಣಿ, ಗಿರೀಶ್ ಶಿವಣ್ಣ, ಶ್ರೀವತ್ಸ ಮತ್ತು ಉಷಾ ತಾರಾಬಳಗದಲ್ಲಿದ್ದಾರೆ. ಕಿಶನ್ ಟಿ.ಎನ್. ಚಿತ್ರ ನಿರ್ಮಾಣ ಮಾಡಿದ್ದಾರೆ. ಕೃಷ್ಣ ದೀಪಕ್ ಛಾಯಾಚಿತ್ರಗ್ರಹಣ, ಅನಿರುದ್ಧ್ ಶಾಸ್ತ್ರಿ ಸಂಗೀತ ನಿರ್ದೇಶನ ಹಾಗೂ ಸಿ.ಎಸ್. ದೀಪು ಸಂಕಲನ ಚಿತ್ರಕ್ಕಿದೆ. ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಚಿತ್ರತಂಡ ತೊಡಗಿದೆ. ಕಾರ್ಕಳ, ಕುಮಟಾ, ಬೆಂಗಳೂರು ಸುತ್ತಮುತ್ತ 45 ದಿನಗಳ ಶೂಟಿಂಗ್ ನಡೆಸಲಾಗಿದೆ.

ರೇಷ್ಮಾ, ಸಿದ್ದು

ವಿಷ್ಣುವರ್ಧನ್

ವಿಷ್ಣುವರ್ಧನ್ 75ನೇ ಜನ್ಮದಿನ

ಇಂದು (ಸೆ.18) ನಟ ವಿಷ್ಣುವರ್ಧನ್ ಅವರ 75ನೇ ಜನ್ಮದಿನ. ಕಳೆದ ವರ್ಷದವರೆಗೂ ಅಭಿಮಾನ್ ಸ್ಟುಡಿಯೊದ ಆವರಣದಲ್ಲಿದ್ದ ವಿಷ್ಣುವರ್ಧನ್ ಅವರ ಸ್ಮಾರಕದ ಜಾಗದಲ್ಲೇ ಅವರ ಜನ್ಮದಿನ ಆಚರಿಸಲಾಗುತ್ತಿತ್ತು. ಸಾವಿರಾರು ಅಭಿಮಾನಿಗಳು ಅಲ್ಲಿಗೆ ಭೇಟಿ ನೀಡಿ ನೆಚ್ಚಿನ ನಟನಿಗೆ ಪುಷ್ಪನಮನ ಸಲ್ಲಿಸಿ, ಪೂಜೆ ಮಾಡುತ್ತಿದ್ದರು.

ಇದೀಗ ಅಲ್ಲಿದ್ದ ಸ್ಮಾರಕವನ್ನು ತೆರವುಗೊಳಿಸಲಾಗಿದೆ. ಅಭಿಮಾನ್ ಸ್ಟುಡಿಯೊ ಆವರಣದಲ್ಲಿ ಜನ್ಮದಿನ ಆಚರಣೆಗೆ ಸಲ್ಲಿಸಲಾಗಿದ್ದ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ. ಹೀಗಾಗಿ ಈ ಬಾರಿ ಜನ್ಮದಿನವನ್ನು ಎಲ್ಲಿ ಆಚರಿಸಬೇಕು ಎನ್ನುವ ಪ್ರಶ್ನೆ ಅಭಿಮಾನಿಗಳಲ್ಲಿ ಇತ್ತು. ಇದಕ್ಕೆ ಉತ್ತರ ದೊರಕಿದೆ.

ಸ್ಟುಡಿಯೊಗೆ ಸಮೀಪವಾಗಿಯೇ ಒಂದು ಜಾಗದಲ್ಲಿ ಜನ್ಮದಿನ ಆಚರಣೆ, ಅನ್ನದಾನ, ರಕ್ತದಾನ, ನೇತ್ರದಾನ ಪ್ರತಿಜ್ಞೆ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲು ಡಾ.ವಿಷ್ಣು ಸೇನಾ ಸಮಿತಿ ನಿರ್ಧರಿಸಿದೆ. 'ಸ್ಟುಡಿಯೊದಿಂದ 200 ಮೀ. ದೂರದಲ್ಲಿ, ಜೆಎಸ್‌ಎಸ್ ಮಹಾವಿದ್ಯಾಪೀಠ ಗೇಟ್‌ಗೆ ಸಮೀಪ ಇರುವ ಜಾಗದಲ್ಲಿ ಜನ್ಮದಿನಾಚರಣೆ ಕಾರ್ಯಕ್ರಮ ನಡೆಯಲಿದೆ. ಅಲ್ಲೊಂದು ತಾತ್ಕಾಲಿಕ ಮಂಟಪ ನಿರ್ಮಾಣ ಮಾಡಿ ವಿಷ್ಣುವರ್ಧನ್ ಅವರ ಪುತ್ಥಳಿ ಇರಿಸಿದ್ದೇವೆ. ಬೆಳಗ್ಗೆ 8ರಿಂದ ಸಂಜೆ 6ರವರೆಗೆ ಇಲ್ಲಿಗೆ ಅಭಿಮಾನಿಗಳು ಬರಬಹುದು. ಯಾರೂ ಸ್ಟುಡಿಯೊಗೆ ಹೋಗುವುದು ಬೇಡ. ಆ ಜಾಗವನ್ನು ಕಾನೂನು ಮೂಲಕವೇ ನಮ್ಮದಾಗಿಸಿಕೊಳ್ಳೋಣ' ಎಂದು ಸಮಿತಿಯ ವೀರಕಪುತ್ರ ಶ್ರೀನಿವಾಸ್ ತಿಳಿಸಿದ್ದಾರೆ.

ವಿಷ್ಣುವರ್ಧನ್ ಅವರ 25 ಅಡಿ ಎತ್ತರದ ಪುತ್ಥಳಿಯನ್ನೊಳಗೊಂಡ ದರ್ಶನ ಕೇಂದ್ರವನ್ನು ಕೆಂಗೇರಿ ಸಮೀಪ ಅರ್ಧ ಎಕರೆ ಜಾಗದಲ್ಲಿ ನಿರ್ಮಾಣ ಮಾಡಲು ನಟ ಸುದೀಪ್ ನಿರ್ಧರಿಸಿದ್ದಾರೆ. ಸುದೀಪ್, ವೀರಕಪುತ್ರ ಶ್ರೀನಿವಾಸ್, ಅಶೋಕ್ ಖೇಣಿ ಮತ್ತು ಅಭಿಮಾನಿಗಳ ನೇತೃತ್ವದಲ್ಲಿ ನಿರ್ಮಾಣವಾಗುತ್ತಿರುವ ಈ ದರ್ಶನ ಕೇಂದ್ರದ ನೀಲನಕ್ಷೆಯೂ ಸೆ.18ರಂದು ಬಿಡುಗಡೆಯಾಗಲಿದೆ.

ಉಣ್ಣಿ ಮುಕುಂದನ್

ಮೋದಿ ಪಾತ್ರದಲ್ಲಿ ಉಣ್ಣಿ ಮುಕುಂದನ್

ಪ್ರಧಾನಿ ನರೇಂದ್ರ ಮೋದಿ ಜೀವನಚರಿತ್ರೆ ಸಿನಿಮಾವಾಗಿ ತೆರೆ ಮೇಲೆ ಬರಲಿದೆ. ಈ ಹಿಂದೆ ಬಾಲಿವುಡ್ ನಟ ವಿವೇಕ್ ಒಬೆರಾಯ್ 'ಮೋದಿ'ಯಾಗಿ 'ಪಿಎಂ ನರೇಂದ್ರ ಮೋದಿ' ಸಿನಿಮಾದಲ್ಲಿ ನಟಿಸಿದ್ದರು. ಇದೀಗ ಮಲಯಾಳದ ಉಣ್ಣಿ ಮುಕುಂದನ್ 'ಮೋದಿ'ಯಾಗಿ 'ಮಾ ವಂದೇ' ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಪ್ರಧಾನಿ ಮೋದಿ ಜನ್ಮದಿನದಂದು(ಸೆ.17) ಹೊಸ ಸಿನಿಮಾ ಘೋಷಣೆಯಾಗಿದೆ. ಸಿಲ್ವರ್ ಕ್ಯಾಸ್ಟ್ ಕ್ರಿಯೇಷನ್ಸ್ ಎಂಬ ನಿರ್ಮಾಣ ಸಂಸ್ಥೆ ಈ ಸಿನಿಮಾ ಘೋಷಿಸಿದ್ದು, ಇದು ಮೋದಿಯವರ ಜೀವನ ಆಧಾರಿತ ಸಿನಿಮಾವಾಗಿದೆ ಎಂದಿದೆ ಚಿತ್ರತಂಡ. ವೀರ್ ರೆಡ್ಡಿ ಎಂ. ನಿರ್ಮಿಸಲಿರುವ ಈ ಚಿತ್ರವನ್ನು ಕ್ರಾಂತಿ ಕುಮಾರ್ ಸಿ.ಎಚ್. ನಿರ್ದೇಶಿಸಲಿದ್ದಾರೆ. 'ಈ ಚಿತ್ರವು ಅವರ ವೈಯಕ್ತಿಕ ಮತ್ತು ರಾಜಕೀಯ ಜೀವನ ಮತ್ತು ಸತ್ಯ ಘಟನೆಗಳ ಆಧಾರದ ಮೇಲೆ ಮೂಡಿ ಬರಲಿದೆ. ಚಿತ್ರವನ್ನು ಪ್ಯಾನ್ ಇಂಡಿಯಾ ರಿಲೀಸ್ ಮಾಡುತ್ತಿದ್ದು, ಇಂಗ್ಲಿಷ್‌ನಲ್ಲೂ ನಿರ್ಮಿಸಲಾಗುವುದು. ಮೋದಿ ಮತ್ತು ಅವರ ತಾಯಿ ಹೀರಾಬೆನ್ ನಡುವಿನ ಬಾಂಧವ್ಯವನ್ನು ಚಿತ್ರದಲ್ಲಿ ಭಾವನಾತ್ಮಕವಾಗಿ ತೋರಿಸಲಾಗುವುದು. ರಾಷ್ಟ್ರಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ನಾಯಕನ ಗಮನಾರ್ಹ ಪ್ರಯಾಣವನ್ನು ನಾವು ಪ್ರೇಕ್ಷಕರೆದುರಿಗೆ ತರಲಿದ್ದೇವೆ' ಎಂದಿದ್ದಾರೆ ವೀರ್ ರೆಡ್ಡಿ.

ಮೋದಿ, ಉಣ್ಣಿ ಮುಕುಂದನ್

ಪಾತ್ರದ ಕುರಿತು ಮಾತನಾಡಿರುವ ಉಣ್ಣಿ ಮುಕುಂದನ್, 'ಅಹಮದಾಬಾದ್‌ನಲ್ಲಿ ಬೆಳೆದ ನಾನು ಮೋದಿಯವರನ್ನು ಮೊದಲು ಕಂಡಿದ್ದು ಮುಖ್ಯಮಂತ್ರಿಯಾಗಿ. 2023ರ ಏಪ್ರಿಲ್‌ನಲ್ಲಿ ಮೊದಲ ಬಾರಿ ಅವರನ್ನು ಮುಖತಃ ಭೇಟಿಯಾದೆ. ಇದು ಶಾಶ್ವತವಾಗಿ ನೆನಪಿನಲ್ಲಿ ಉಳಿಯುವ ಭೇಟಿ. ನಟನಾಗಿ ಈ ಪಾತ್ರದೊಳಗೆ ಇಳಿಯುತ್ತಿರುವುದಕ್ಕೆ ಬಹಳ ಖುಷಿ ಹಾಗೂ ಸ್ಫೂರ್ತಿಯಾಗುತ್ತಿದೆ. ಅವರ ರಾಜಕೀಯ ಜೀವನವೇ ಅದ್ಭುತ. ಈ ಸಿನಿಮಾದಲ್ಲಿ ಅವರ ರಾಜಕೀಯ ಜೀವನಕ್ಕಿಂತ ಹೆಚ್ಚಾಗಿ ತಾಯಿಯೊಂದಿಗಿನ ಅವರ ಬಾಂಧವ್ಯವನ್ನು ನಾವು ಪರಿಚಯಿಸಲಿದ್ದೇವೆ' ಎಂದಿದ್ದಾರೆ.

ಮೇಘಸ್ಫೋಟ: ಸಾವಿನ ಸಂಖ್ಯೆ 21ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರಾಖಂಡದಲ್ಲಿ ಸಂಭವಿಸಿದ ಮೇಘಸ್ಫೋಟ ಮತ್ತು ಭಾರಿ ಮಳೆಯಿಂದಾಗಿ ಮೃತಪಟ್ಟವರ ಸಂಖ್ಯೆ ಬುಧವಾರ 21ಕ್ಕೆ ಏರಿಕೆಯಾಗಿದೆ. 14 ಮಂದಿ ನಾಪತ್ತೆಯಾಗಿದ್ದಾರೆ.

ರಾಯಪುರದ ಸಂಗ್ ನದಿಯಲ್ಲಿ ಎರಡು ಮೃತದೇಹ ಮತ್ತು ಅಸನ್ ನದಿಯಲ್ಲಿ ಒಂದು ಮೃತದೇಹ ಪತ್ತೆಯಾಗಿದೆ ಎಂದು ವರದಿಗಳು ತಿಳಿಸಿವೆ. ಸಹಸ್ತ್ರಧಾರ ಬಳಿಯ ಫುಲೆಟ್ ಗ್ರಾಮದಲ್ಲಿ ಆರು ಮಂದಿ ಅವಶೇಷಗಳಡಿ ಸಿಲುಕಿದ್ದಾರೆ. ಪ್ರವಾಹ ಪೀಡಿತ ಗ್ರಾಮಗಳಾದ ಮಜಡಾ, ಚಹಮ್‌ಸರಿ ಮತ್ತು ಜಮಡಾದಲ್ಲಿನ ನಿವಾಸಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ಹಲವಾರು ಕಡೆ ಭೂಕುಸಿತ ಸಂಭವಿಸಿ, ರಸ್ತೆಗಳಿಗೆ ಅಪಾರ ಹಾನಿಯಾಗಿರುವುದರಿಂದ ಡೆಹ್ರಾಡೂನ್‌ನಿಂದ ಪ್ರಸಿದ್ಧ ಪ್ರವಾಸಿತಾಣಗಳಾದ ಮಸೂರಿ ಮತ್ತು ಸಹಸ್ತ್ರಧಾರಕ್ಕೆ ಬುಧವಾರವೂ ವಾಹನ ಸಂಚಾರ ಸ್ಥಗಿತಗೊಂಡಿದೆ. ಬದರೀನಾಥ ಹೆದ್ದಾರಿಯಲ್ಲಿ ವಾಹನವೊಂದು ಮಗುಚಿಬಿದ್ದ ಪರಿಣಾಮ ಏಳು ಮಂದಿಗೆ ಗಾಯಗಳಾಗಿದ್ದು, ಒಬ್ಬರು ನಾಪತ್ತೆಯಾಗಿದ್ದಾರೆ. ಮೇಘಸ್ಫೋಟ ಮತ್ತು ಮಳೆಯಿಂದಾಗಿ ಡೆಹ್ರಾಡೂನ್ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಭಾರಿ ಹಾನಿಯಾಗಿದೆ.

ಮಸೂರಿಯಲ್ಲಿ ಸಿಲುಕಿರುವ 2,500 ಪ್ರವಾಸಿಗರು

ಡೆಹ್ರಾಡೂನ್(ಪಿಟಿಐ): ಮೇಘಸ್ಫೋಟ ಹಾಗೂ ಭಾರಿ ಮಳೆಯಿಂದಾಗಿ ಡೆಹ್ರಾಡೂನ್ ಮತ್ತು ಮಸೂರಿ ನಡುವಿನ ರಸ್ತೆ ಸಂಪರ್ಕ ಕಡಿತಗೊಂಡಿದೆ. ಹೀಗಾಗಿ ಮಸೂರಿಯಲ್ಲಿ ಅಂದಾಜು 2,500 ಪ್ರವಾಸಿಗರು ಬುಧವಾರ ಸಿಕ್ಕಿಹಾಕಿಕೊಂಡಿದ್ದಾರೆ

'ಡೆಹ್ರಾಡೂನ್–ಮಸೂರಿ ಮಾರ್ಗದ ಹಲವೆಡೆ ರಸ್ತೆಗಳಿಗೆ ಹಾನಿಯಾಗಿದೆ. ದುರಸ್ತಿ ಬಳಿಕ ರಸ್ತೆಗಳನ್ನು ಸಂಚಾರಕ್ಕೆ ಮುಕ್ತಗೊಳಿಸುವವರೆಗೆ, ತಾವು ಉಳಿದುಕೊಂಡಿರುವ ಹೋಟೆಲ್ ಅಥವಾ ಹೋಂಸ್ಟೇಗಳಲ್ಲಿಯೇ ಪ್ರವಾಸಿಗರು ಇರಬೇಕು' ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಕೊಲ್ಹುಖೇತ್ ಬಳಿ ತಾತ್ಕಾಲಿಕ ಸೇತುವೆ ನಿರ್ಮಿಸಿ, ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಸಿದ್ಧತೆ ನಡೆಯುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಡೆಹ್ರಾಡೂನ್‌ನಲ್ಲಿ ಹೋಟೆಲ್ ಕಟ್ಟಡವೊಂದಕ್ಕೆ ಭಾರಿ ಹಾನಿಯಾಗಿದೆ ಪಿಟಿಐ ಚಿತ್ರ

ಅಸ್ಸಾಂ ಬಿಜೆಪಿ ಘಟಕದ ವಿಡಿಯೊ: ಓವೈಸಿ ಟೀಕೆ

ಹೈದರಾಬಾದ್ (ಪಿಟಿಐ): ಅಸ್ಸಾಂನ ಬಿಜೆಪಿ ಘಟಕ ಸಾಮಾಜಿಕ ಮಾಧ್ಯಮದಲ್ಲಿ ಅಪ್‌ಲೋಡ್ ಮಾಡಿರುವ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ವಿಡಿಯೊ ಕ್ಲಿಪ್ ಅಸಹ್ಯಕರವಾಗಿದೆ ಎಂದು ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಟೀಕಿಸಿದ್ದಾರೆ.

'ಬಿಜೆಪಿ ಇಲ್ಲದಿದ್ದರೆ ಅಸ್ಸಾಂ ಮುಸ್ಲಿಂ ಬಹುಸಂಖ್ಯಾತ ರಾಜ್ಯವಾಗುತ್ತದೆ ಎಂಬಂತೆ ವಿಡಿಯೊವನ್ನು ಎಐ ಮೂಲಕ ಚಿತ್ರೀಕರಿಸಲಾಗಿದೆ. ಭಾರತದಲ್ಲಿ ಮುಸ್ಲಿಮರ ಅಸ್ತಿತ್ವವೇ ಕೇಸರಿ ಪಕ್ಷಕ್ಕೆ ಸಮಸ್ಯೆಯಾಗಿದ್ದು, ಮುಸ್ಲಿಂ ಮುಕ್ತ ಭಾರತ ಮಾಡಬೇಕು ಎಂಬುದು ಅದರ ಕನಸಾಗಿದೆ' ಎಂದು 'ಎಕ್ಸ್'ನಲ್ಲಿ ಅವರು ಆರೋಪಿಸಿದ್ದಾರೆ. 'ಈ ವಿಡಿಯೊ ಬಿಜೆಪಿಯ ಅಸಹ್ಯಕರ ಹಿಂದುತ್ವದ ಸಿದ್ಧಾಂತ ಬಹಿರಂಗಪಡಿಸುತ್ತದೆ. ಇದನ್ನು ಹೊರತುಪಡಿಸಿ ಅವರಿಗೆ ಭಾರತದ ಬಗ್ಗೆ ಯಾವುದೇ ದೃಷ್ಟಿಕೋನ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ' ಎಂದು ಕಿಡಿಕಾರಿದ್ದಾರೆ.



ಅಸಾದುದ್ದೀನ್

ಚಿಟಿಕೆ ಸುದ್ದಿ

ಛೋಟಾ ರಾಜನ್ ಜಾಮೀನು ರದ್ದು

ಛೋಟಾ ರಾಜನ್

ನವದೆಹಲಿ (ಪಿಟಿಐ): ಹೋಟೆಲ್ ಉದ್ಯಮಿ ಜಯಾ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ಪಾತಕಿ ಛೋಟಾ ರಾಜನ್‌ಗೆ ನೀಡಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ಬುಧವಾರ ರದ್ದುಗೊಳಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರು ಇದ್ದ ಪೀಠವು ಬಾಂಬೆ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ, ಸಿಬಿಐ ಸಲ್ಲಿಸಿದ್ದ ಮೇಲ್ಮನವಿಯನ್ನು ಪುರಸ್ಕರಿಸಿತು.

'ರಾಜನ್ 27 ವರ್ಷ ತಲೆಮರೆಸಿಕೊಂಡಿದ್ದ. ನಾಲ್ಕು ಪ್ರಕರಣಗಳಲ್ಲಿ ಅಪರಾಧಿಯಾಗಿದ್ದಾನೆ. ಇಂತಹ ವ್ಯಕ್ತಿಯ ಶಿಕ್ಷೆಯನ್ನು ಏಕೆ ಅಮಾನತುಗೊಳಿಸಲಾಗಿದೆ' ಎಂದು ನ್ಯಾಯಪೀಠ ಹೇಳಿದೆ.

ಕೇಂದ್ರದ ದಬ್ಬಾಳಿಕೆ ವಿರುದ್ಧ ವಾಗ್ದಾಳಿ

ಕರೂರು (ತಮಿಳುನಾಡು) (ಪಿಟಿಐ): ತಮಿಳುನಾಡಿನ ಮೇಲೆ ಕೇಂದ್ರ ಸರ್ಕಾರದ ದಬ್ಬಾಳಿಕೆ ಕುರಿತು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಬುಧವಾರ ವಾಗ್ದಾಳಿ ನಡೆಸಿದರು.

ದೇಶಕ್ಕೆ ರಾಜ್ಯಗಳೇ ಅಡಿಪಾಯ. ಒಕ್ಕೂಟ ಸರ್ಕಾರ ಇದನ್ನು ಒತ್ತಿ ಹೇಳುತ್ತದೆ ಎಂದು ಹೇಳಿದರು.

ಎಂ.ಕೆ.ಸ್ಟಾಲಿನ್

'ತಮಿಳುನಾಡಿನ ಮೇಲೆ ಹಿಂದಿ ಹೇರಿಕೆ, ನೀಟ್‌ನಿಂದ ಹೊರಗುಳಿಯಲು ವಿನಾಯಿತಿ ನೀಡದಿರುವುದು, ರಾಜ್ಯಕ್ಕೆ ಶಿಕ್ಷಣ ನಿಧಿಯನ್ನು ಬಿಡುಗಡೆ ಮಾಡದಿರುವುದು, ಪುರಾತತ್ವ ಸಂಶೋಧನೆಗಳನ್ನು ಮರೆಮಾಚುವ ಕೆಲಸ ಬಿಜೆಪಿ ಮಾಡುತ್ತಿದೆ' ಎಂದು ಹೇಳಿದರು.

@SudhaWeekly
ಸುಧಾ

ಬಂಗಾರ, ಹೇಮ, ಕನಕ ಎಂದೆಲ್ಲ ಕರೆಸಿಕೊಳ್ಳುವ ಚಿನ್ನ ಇದೀಗ ಪ್ರತಿದಿನದ ಮಾರುಕಟ್ಟೆ ಸುದ್ದಿ. ಬೆಲೆ ಗಗನಮುಖಿಯಾಗಿರುವ ಚಿನ್ನ ಈಗ ಮಧ್ಯಮವರ್ಗಕ್ಕೆ ಗಗನಕುಸುಮ. ಜಾಗತಿಕ ಷೇರುಪೇಟೆಯಲ್ಲಿ ತಲ್ಲಣ ಉಂಟಾಗಿರುವ ಹಿನ್ನೆಲೆಯಲ್ಲಿ ಹಳದಿ ಲೋಹದ ಬೆಲೆ ಹಿಂದೆಂದೂ ಕಂಡು ಕೇಳದಷ್ಟು ಏರಿಕೆಯಾಗಿದೆ. ಹೀಗಾಗಿ ಚಿನ್ನ ಕೊಳ್ಳುವ ಬದಲಾಗಿ ಮಹಿಳೆಯರು ಪರ್ಯಾಯ ಲೋಹದ ಆಭರಣಗಳ ಖರೀದಿಯತ್ತ ಮುಖಮಾಡಿದ್ದಾರೆ. ಹಳದಿ ಲೋಹದ ಮೋಹಕ ಲೋಕದ ವಿಚಾರಗಳನ್ನು ವಿಶ್ಲೇಷಿಸುತ್ತಾ, ಚಿನ್ನದ ಬೆಲೆಯ ಬಗ್ಗೆ ಅವಲೋಕಿಸುತ್ತಾ, ಪರ್ಯಾಯ ಆಭರಣಗಳ ಮೇಲೆ ಬೆಳಕು ಚೆಲ್ಲುತ್ತಾ, ಬಂಗಾರದ ವಿದ್ಯಮಾನಗಳ ಬಗ್ಗೆ ಗಿರಕಿ ಹೊಡೆಯುತ್ತಾ ಸಮಗ್ರ ಮಾಹಿತಿ ನೀಡುವ ಪ್ರಯತ್ನ ಈ ವಾರದ 'ಸುಧಾ' ವಿಶೇಷ.

ನಿಮ್ಮ ಸಮೀಪದ ಅಂಗಡಿಗಳಲ್ಲಿ ಲಭ್ಯ

ಮಿಲ್‌ಫೋರ್ಡ್ ಸೌಂಡ್
ಕಣಿವೆಯೊಡಲ ವಿಸ್ಮಯ

ಸುರಕ್ಷಿತ ತಾಯ್ತನ
ಬಾಳು ನಂದನವನ!

ಕಸವೆಂಬ ರಸಾನುಭವ ಯಾತ್ರೆ

readerservice@deccanherald.co.in



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,239
ಇಂದಿನ ಅಂತ್ಯ: 25,330
ದಿನದ ಗರಿಷ್ಠ: 25,346
91

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹580
12 ಕ್ಕೆ ₹80
ಮೈಸೂರು: 100 ಕ್ಕೆ ₹585

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹388-679
ದ್ವಿತಳಿ (ಬಿ.ವಿ) ₹451-822

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹183
ಆರ್‌ಎಸ್‌ಎಸ್-5 ₹178
ಗುಡ್ ಲಾಟ್ ₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1340 (1350)
ಸೋಯಾ (ರಿಫೈನ್ಡ್) ₹1295 (1280)
ಸೂರ್ಯಕಾಂತಿ (ರಿಫೈನ್ಡ್) ₹1425 (1420)
ಪಾಮೋಲಿನ್ ₹1295 (1280)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹27800-28000
ಹಿರಿಯೂರು ₹18378-18378
ತುರುವೇಕೆರೆ ₹26000-27800

ಅಡಿಕೆ ಧಾರಣೆ

ಶಿವಮೊಗ್ಗ		ಸಿದ್ದಾಪುರ			
ಬೆಟ್ಟೆ	50609-69999	ಬಿಳಿಗೋಟು	24609-32689	ತಟ್ಟಬೆಟ್ಟೆ	34689-34689
ಗೊರಬಲು	19009-37069	ಚಾಲಿ	36500-43399	**ಕುಮಟಾ**	
ಹೊಸತು	53836-54599	ಕೋಕ	18319-26219	ಚಾಲಿ	38999-43599
ರಾಶಿ	47019-60299	ಕೆಂಪುಗೋಟು	25900-25900	ಚಿಪ್ಪು	26589-32229
ಸರಕು	57109-93106	ರಾಶಿ	42099-49399	ಕೋಕ	9099-26999
				ಫ್ಯಾಕ್ಟರಿ	5069-26129
				ಹೊಸಚಾಲಿ	37289-43809

ಅರ್ಥವ್ಯವಸ್ಥೆಗೆ ₹2 ಲಕ್ಷ ಕೋಟಿ

ಜಿಎಸ್‌ಟಿ ದರ ಪರಿಷ್ಕರಣೆಯ ಪರಿಣಾಮ ವಿವರಿಸಿದ ಸಚಿವೆ ನಿರ್ಮಲಾ

ವಿಶಾಖಪಟ್ಟಣ (ಪಿಟಿಐ): ಜಿಎಸ್‌ಟಿ ದರಗಳನ್ನು ಪರಿಷ್ಕರಿಸಿ ಜಾರಿಗೆ ತಂದಿರುವ ಸುಧಾರಣೆಯು ದೇಶದ ಅರ್ಥ ವ್ಯವಸ್ಥೆಗೆ ₹2 ಲಕ್ಷ ಕೋಟಿ ಹಣ ಸಿಗುವಂತೆ ಮಾಡಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ನಿರ್ಮಲಾ ಸೀತಾರಾಮನ್

ತೆರಿಗೆ ರೂಪದಲ್ಲಿ ಪಾವತಿ ಆಗಬಹುದಾಗಿದ್ದ ಹಣವು ಜನರ ಕೈಯಲ್ಲಿ ಉಳಿಯಲಿದೆ ಎಂದು ಅವರು ಇಲ್ಲಿ ಹೇಳಿದ್ದಾರೆ.

ಇಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ತೆರಿಗೆ ಸುಧಾರಣೆಗಳು ಜಾರಿಗೆ ಬಂದ ನಂತರದಲ್ಲಿ ಶೇ 12ರಷ್ಟು ತೆರಿಗೆ ಹಂತದಲ್ಲಿ ಇದ್ದ ಶೇ 99ರಷ್ಟು ಉತ್ಪನ್ನಗಳು ಶೇ 5ರ ಹಂತಕ್ಕೆ ಬರುತ್ತವೆ ಎಂದಿದ್ದಾರೆ. ಅಲ್ಲದೆ, ಶೇ 28ರಷ್ಟು ತೆರಿಗೆಯ ಹಂತದಲ್ಲಿ ಇದ್ದ ಶೇ 90ರಷ್ಟು ವಸ್ತುಗಳು ಶೇ 18ರಷ್ಟು ತೆರಿಗೆಯ ಹಂತಕ್ಕೆ ಬರುತ್ತವೆ ಎಂದು ನಿರ್ಮಲಾ ಹೇಳಿದ್ದಾರೆ.

ಎಫ್‌ಎಂಸಿಜಿ ವಲಯದ ಕೆಲವು ಬೃಹತ್ ಕಂಪನಿಗಳು ಸೇರಿದಂತೆ ಹಲವಾರು ಕಂಪನಿಗಳು ದರ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ಸೆಪ್ಟೆಂಬರ್ 22ಕ್ಕೂ (ಜಿಎಸ್‌ಟಿ ದರ ಪರಿಷ್ಕರಣೆ ಜಾರಿಗೆ ಬರುವ ದಿನ) ಮೊದಲೇ ವರ್ಗಾವಣೆ ಮಾಡಲು ಮುಂದೆ ಬಂದಿವೆ ಎಂದು ತಿಳಿಸಿದ್ದಾರೆ.

'ಹೊಸ ತೆರಿಗೆ ಹಂತಗಳಿಂದಾಗಿ ಅರ್ಥ ವ್ಯವಸ್ಥೆಗೆ ₹2 ಲಕ್ಷ ಕೋಟಿಯಷ್ಟು ಹಣವನ್ನು ನೀಡಿದಂತೆ ಆಗುತ್ತದೆ' ಎಂದು ಅವರು ಅಂದಾಜು ಮಾಡಿದ್ದಾರೆ.

2017–18ನೇ ಹಣಕಾಸು ವರ್ಷದಲ್ಲಿ ₹7.19 ಲಕ್ಷ ಕೋಟಿ ಆಗಿದ್ದ ಜಿಎಸ್‌ಟಿ ವರಮಾನವು 2025ರಲ್ಲಿ ₹22.08 ಲಕ್ಷ ಕೋಟಿಗೆ ಹೆಚ್ಚಳ ಕಂಡಿದೆ. ಜಿಎಸ್‌ಟಿ ಮಂಡಳಿಯು ಸಹಕಾರ ಒಕ್ಕೂಟ ವ್ಯವಸ್ಥೆಗೆ ಒಳ್ಳೆಯ ಉದಾಹರಣೆ. ಸ್ವಾತಂತ್ರ್ಯ ಬಂದ ನಂತರದಲ್ಲಿ ರಚನೆಯಾದ ಸಾಂವಿಧಾನಿಕ ಸಂಸ್ಥೆ ಇದೊಂದೇ ಎಂದಿದ್ದಾರೆ.

22 ರಾಜ್ಯಗಳಿಗೆ ₹3.6 ಲಕ್ಷ ಕೋಟಿ ಸಾಲ

50 ವರ್ಷಗಳ ಬಡ್ಡಿ ರಹಿತ ಹಣಕಾಸಿನ ನೆರವು ಯೋಜನೆಯ ಅಡಿಯಲ್ಲಿ 22 ರಾಜ್ಯಗಳಿಗೆ ಕಳೆದ ನಾಲ್ಕು ವರ್ಷಗಳಲ್ಲಿ ₹3.6 ಲಕ್ಷ ಕೋಟಿ ಸಾಲ ನೀಡಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

'22 ರಾಜ್ಯಗಳು ಇದನ್ನು ಬಳಸಿಕೊಂಡು, ಬಂಡವಾಳ ವೆಚ್ಚದಲ್ಲಿ ಶೇ 10ಕ್ಕಿಂತ ಹೆಚ್ಚು ಏರಿಕೆ ತೋರಿಸಿವೆ' ಎಂದು ನಿರ್ಮಲಾ ಮಾಹಿತಿ ನೀಡಿದ್ದಾರೆ.

ಸುದ್ದಿ 2 ನಿಮಿಷ

ವ್ಯಾಪಾರ ಮಾತುಕತೆ ಷೇರು ಸೂಚ್ಯಂಕ ಏರಿಕೆ

ಮುಂಬೈ (ಪಿಟಿಐ): ಐ.ಟಿ., ಬ್ಯಾಂಕಿಂಗ್ ಮತ್ತು ಆಟೊ ವಲಯದ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ಬುಧವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ.

ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಕುರಿತಾಗಿ ಅಮೆರಿಕದ ನಿಯೋಗ ಮತ್ತು ಭಾರತದ ನಡುವಿನ ಸಕಾರಾತ್ಮಕ ಮಾತುಕತೆಯು ಹೂಡಿಕೆದಾರರಲ್ಲಿ ಉತ್ಸಾಹ ಮೂಡಿಸಿದೆ. ಜೊತೆಗೆ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಿದೆ. ಇದು ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 313 ಅಂಶ ಏರಿಕೆಯಾಗಿ, 82,693ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 91 ಅಂಶ ಹೆಚ್ಚಳವಾಗಿ, 25,330ಕ್ಕೆ ಕೊನೆಗೊಂಡಿದೆ.

ಬ್ರೆಂಟ್ ಕಚ್ಚಾ ತೈಲ ದರವು ಶೇ 0.58ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರೆಲ್ ದರವು 68.07 ಡಾಲರ್ ಆಗಿದೆ.

3.36 ಲಕ್ಷ ಟನ್ ಯೂರಿಯಾ ಪೂರೈಕೆಗೆ ಸುರ್ಜೆವಾಲಾ ಆಗ್ರಹ

ನವದೆಹಲಿ: ರಾಜ್ಯಕ್ಕೆ ಹಂಚಿಕೆಯಾಗಿರುವ 3.36 ಲಕ್ಷ ಟನ್ ಯೂರಿಯಾವನ್ನು ಕೂಡಲೇ ಪೂರೈಕೆ ಮಾಡಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಕೇಂದ್ರ ಕೃಷಿ ಸಚಿವ ಶಿವರಾಜ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದಿದ್ದಾರೆ.

'ಕರ್ನಾಟಕದಲ್ಲಿ ಮುಂಗಾರು ಬೇಗ ಪ್ರಾರಂಭವಾಗಿದ್ದು ಸರಾಸರಿಗಿಂತ ಶೇ 3ರಷ್ಟು ಹೆಚ್ಚು ಮಳೆಯಾಗಿದ್ದರಿಂದ ಬಿತ್ತನೆಗೆ ನಿರೀಕ್ಷೆಗೂ ಮುಂಚೆ ಚಾಲನೆ ಸಿಕ್ಕಿದೆ. 2025-26ನೇ ಸಾಲಿನಲ್ಲಿ ರಾಜ್ಯದಲ್ಲಿ 114.40 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. 160.68 ಲಕ್ಷ ಟನ್ ಆಹಾರಧಾನ್ಯಗಳು ಮತ್ತು ಎಣ್ಣೆಕಾಳುಗಳ ಉತ್ಪಾದನಾ ಗುರಿ ಹೊಂದಲಾಗಿದೆ. ಮುಂಗಾರು ಹಂಗಾಮಿಗೆ 82.50 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ಹೊಂದಲಾಗಿದ್ದು 81.85 ಲಕ್ಷ ಹೆಕ್ಟೇರ್ ಬಿತ್ತನೆಯಾಗಿದೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

'ಮುಂಗಾರು ಹಂಗಾಮಿಗೆ 26.77 ಲಕ್ಷ ಟನ್ ರಸಾಯನಿಕ ರಸಗೊಬ್ಬರಗಳ ಅಗತ್ಯ ಇದೆ. 3.36 ಲಕ್ಷ ಟನ್ ಯೂರಿಯಾ ರಸಗೊಬ್ಬರ ಕೊರತೆ ಉಂಟಾಗಿದೆ. ಕರ್ನಾಟಕದ ಬೇಡಿಕೆಗೆ ಅನುಗುಣವಾಗಿ ಕೇಂದ್ರ ಸರ್ಕಾರ ರಸಗೊಬ್ಬರ ಪೂರೈಕೆ ಮಾಡಿಲ್ಲ. ರೈತರ ಹಿತ ಗಮನದಲ್ಲಿಟ್ಟುಕೊಂಡು ಕೂಡಲೇ ಯೂರಿಯಾ ಪೂರೈಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಚಿಟಿಕೆ ಸುದ್ದಿ

ಚಿನ್ನದ ದರ ₹1,300, ಬೆಳ್ಳಿ ₹1,670 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆ ಕಂಡಿವೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1,300 ಕಡಿಮೆಯಾಗಿ, ₹1,13,800ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ಬೆಲೆ (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹1,13,300 ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹1,670 ಕಡಿಮೆಯಾಗಿ, ₹1,31,200 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಮೆರಿಕದ ಫೆಡರಲ್ ಮುಕ್ತ ಮಾರುಕಟ್ಟೆ ಸಮಿತಿಯ ಹಣಕಾಸು ನೀತಿಗೆ ಸಂಬಂಧಿಸಿದ ನಿರ್ಧಾರವು ಪ್ರಕಟಗೊಳ್ಳಲಿದೆ. ಇದರಿಂದ ಹೂಡಿಕೆದಾರರು ಎಚ್ಚರಿಕೆ ನಡೆ ಅನುಸರಿಸಿದರು. ಲಾಭ ಗಳಿಸಲು ಹೂಡಿಕೆದಾರರು ಚಿನ್ನ ಮತ್ತು ಬೆಳ್ಳಿ ಮಾರಾಟಕ್ಕೆ ಮುಂದಾಗಿದ್ದರಿಂದ ಲೋಹದ ದರವು ಇಳಿಕೆ ಕಂಡಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಯೆಸ್ ಬ್ಯಾಂಕ್‌ನ ಷೇರು ಮಾರಾಟ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಖಾಸಗಿ ವಲಯದ ಯೆಸ್ ಬ್ಯಾಂಕ್‌ನಲ್ಲಿ ಹೊಂದಿದ್ದ ಷೇರುಗಳ ಪೈಕಿ ಶೇ 13.18 ರಷ್ಟನ್ನು ಜಪಾನಿನ ಸುಮಿಟೊಮೊ ಮಿಟ್ಸುಯಿ ಬ್ಯಾಂಕಿಂಗ್ ಕಾರ್ಪೊರೇಷನ್‌ಗೆ (ಎಸ್‌ಎಂಬಿಸಿ) ಮಾರಾಟ ಮಾಡಿದೆ.

ಈ ಷೇರುಗಳ ಮಾರಾಟಕ್ಕೆ ಪ್ರತಿಯಾಗಿ ₹8,888 ಕೋಟಿಯನ್ನು ಎಸ್‌ಎಂಬಿಸಿಯಿಂದ ಪಡೆಯಲಾಗಿದ್ದು, ಷೇರು ವಿಕ್ರಯ ಪೂರ್ಣಗೊಂಡಿದೆ ಎಂದು ಎಸ್‌ಬಿಐ ಬುಧವಾರ ಷೇರುಪೇಟೆಗೆ ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)

17-09-2025	
ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-99000
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1350 (1360)
ಒಂದು ವಾರದ ಡೆಲಿವರಿ	1345 (1355)
ಪಾಮ್ ವಾರದ ಡೆಲಿವರಿ	1293 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1345)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,09,700 (1,10,200)
ಬೆಳ್ಳಿ ಕೆ.ಜಿಗೆ	1,27,000 (1,29,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಟಿವಿಎಸ್‌ನಿಂದ ಎನ್‌ಟಿಒಆರ್‌ಕ್ಯು 150 ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಅತ್ಯಂತ ವೇಗದ ಮತ್ತು ಮೊದಲ ಹೈಪರ್ ಸ್ಪೋರ್ಟ್ ಸ್ಕೂಟರ್ ಟಿವಿಎಸ್ ಎನ್‌ಟಿಒಆರ್‌ಕ್ಯು 150 ಅನ್ನು ಟಿವಿಎಸ್ ಮೋಟರ್ ಕಂಪನಿ ಬಿಡುಗಡೆ ಮಾಡಿದೆ. ಈ ದ್ವಿಚಕ್ರ ವಾಹನ 6.3 ಸೆಕೆಂಡುಗಳಲ್ಲಿ 0-60 ಕಿ.ಮೀ ವೇಗ ಪಡೆದುಕೊಳ್ಳುವ ಸಾಮರ್ಥ್ಯ ಹೊಂದಿದೆ.

149.7 ಸಿಸಿ ರೇಸ್-ಟ್ಯೂನ್ಡ್ ಎಂಜಿನ್‌ನಿಂದ ನಡೆಸಲ್ಪಡುವ ಮತ್ತು ಸ್ಟೈಲ್ ಏರ್‌ಕ್ರಾಫ್ಟ್ ವಿನ್ಯಾಸದಿಂದ ಪ್ರೇರಿತವಾದ ಈ ಸ್ಕೂಟರ್‌ಅನ್ನು ಹೊಸ ಪೀಳಿಗೆಯ ಸವಾರರಿಗೆ ಅನುಕೂಲವಾಗುವಂತೆ ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ವಿನ್ಯಾಸಗೊಳಿಸಲಾಗಿದೆ. ಇದರ ವಿಶೇಷ ಪರಿಚಯಾತ್ಮಕ ಬೆಲೆ ₹1.19 ಲಕ್ಷ (ಎಕ್ಸ್-ಷೋರೂಂ) ಆಗಿದೆ ಎಂದು ಕಂಪನಿ ತಿಳಿಸಿದೆ.

ಅಲೆಕ್ಸಾ ಇಂಟಿಗ್ರೇಷನ್, ಸ್ಮಾರ್ಟ್‌ವಾಚ್ ಇಂಟಿಗ್ರೇಷನ್, ಲೈವ್ ಟ್ರ್ಯಾಕಿಂಗ್ ಸೇರಿ ಹಲವಾರು ವೈಶಿಷ್ಟ್ಯಗಳಿವೆ. ಈ ದ್ವಿಚಕ್ರ ವಾಹನ ಎರಡು ರೂಪಾಂತರಗಳಲ್ಲಿ ಇರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ರೋಲ್ಸ್-ರಾಯ್ಸ್‌ನ ಜಿಸಿಸಿ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ರೋಲ್ಸ್-ರಾಯ್ಸ್ ಕಂಪನಿಯು ಸ್ಥಾಪಿಸಿರುವ ಅತ್ಯಾಧುನಿಕ ಜಾಗತಿಕ ಸಾಮರ್ಥ್ಯ ಮತ್ತು ನಾವೀನ್ಯ ಕೇಂದ್ರವನ್ನು (ಜಿಸಿಸಿ) ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 'ರಾಜ್ಯದ ವೈಮಾಂತರಿಕ್ಷ ಉದ್ಯಮ ವಲಯದ ಕಾರ್ಯ ಪರಿಸರವನ್ನು ಸೃಷ್ಟಿಸುವಲ್ಲಿ ರೋಲ್ಸ್ ರಾಯ್ಸ್ ಕಂಪನಿಯು ಮೊದಲಿನಿಂದಲೂ ನಮ್ಮ ಜತೆಗಿದೆ' ಎಂದರು.

ನೂತನ ಜಿಸಿಸಿ ಕೇಂದ್ರವು ಕಂಪನಿಯ ಪಾಲಿಗೆ ಅತ್ಯಂತ ದೊಡ್ಡ ಮತ್ತು ಅತ್ಯಾಧುನಿಕ ಕೇಂದ್ರ. ಇಂತಹ ಉಪಕ್ರಮಗಳಿಂದಾಗಿ ಬೆಂಗಳೂರು ನಗರ

ವೈಮಾಂತರಿಕ್ಷ ವಲಯದ ಹೂಡಿಕೆಯಲ್ಲಿ ಜಗತ್ತಿನ ಮೊದಲ ಮೂರು ನಗರಗಳಲ್ಲಿ ಒಂದಾಗಿ ಬೆಳೆದಿದೆ. ಜಿಸಿಸಿ ಕೇಂದ್ರದಲ್ಲಿ 700 ಮಂದಿ ಕಾರ್ಯನಿರ್ವಹಿಸಲು ವ್ಯವಸ್ಥೆ ಮಾಡಲಾಗಿದೆ ಎಂದರು.

ರೋಲ್ಸ್ ರಾಯ್ಸ್ ಕಂಪನಿಯು ಭಾರತದಲ್ಲಿ 2,000ಕ್ಕೂ ಹೆಚ್ಚು ಎಂಜಿನಿಯರುಗಳನ್ನು ಹೊಂದಿದೆ. ಈ ಪೈಕಿ ಹೆಚ್ಚಿನವರು ಕರ್ನಾಟಕದಿಂದಲೇ ಕೆಲಸ ಮಾಡುತ್ತಿದ್ದಾರೆ. ಈ ಕಂಪನಿಯ ಜತೆಗೆ ಏಕಸ್, ಕಾಲಿನ್ಸ್ ಏರೋಸ್ಪೇಸ್, ವಿಪ್ರೊ, ಮಹೀಂದ್ರ, ಬೋಯಿಂಗ್, ಏರ್‌ಬಸ್ ಮತ್ತು ಫಿಕ್ಸೆಲ್ ಕಂಪನಿಗಳೂ ರಾಜ್ಯದಲ್ಲಿ ನೆಲೆಯೂರಿವೆ. ಇವು ಕ್ರಮವಾಗಿ ಪವರ್ ಸಿಸ್ಟಂ ಮತ್ತು ಪ್ರೊಪಲ್ಶನ್, ಸ್ಟ್ರಕ್ಚರಲ್ ಮತ್ತು ಮೆಕ್ಯಾನಿಕಲ್ ಬಿಡಿಭಾಗಗಳು, ವಿಶೇಷ ಪರಿಣತಿಯ ತಂತ್ರಜ್ಞಾನಗಳಲ್ಲಿ ಸಾಧನೆ ಮಾಡಿವೆ ಎಂದು ಹೇಳಿದರು.

'ರಾಜ್ಯದಲ್ಲಿ ವೈಮಾಂತರಿಕ್ಷ ಮತ್ತು ರಕ್ಷಣಾ ನೀತಿಯು ಆಕರ್ಷಕವಾಗಿದ್ದು, ಹೂಡಿಕೆದಾರರಿಗೆ ಒಳ್ಳೆಯ ಪ್ರೋತ್ಸಾಹನಾ ಭತ್ಯೆಗಳನ್ನು ಒಳಗೊಂಡಿದೆ. ಇದರ ಜತೆಗೆ ನಮ್ಮಲ್ಲಿರುವ ಸಂಶೋಧನಾ ಸಂಸ್ಕೃತಿಯು ಇದಕ್ಕೆ ಪೂರಕವಾಗಿ, ಬಲ ತುಂಬುತ್ತಿದೆ' ಎಂದು ಅವರು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ರೋಲ್ಸ್ ರಾಯ್ಸ್ ಸಿಎಫ್‌ಒ ಹೆಲೆನ್ ಮ್ಯಾಕಬೆ, ಬ್ರಿಟಿಷ್ ಹೈಕಮಿಷನರ್ ಲಿಂಡಿ ಕೆಮರಾನ್ ಇದ್ದರು.

ಜಿಎಸ್‌ಟಿ ದರ ಅಧಿಸೂಚನೆ ಪ್ರಕಟ

ನವದೆಹಲಿ (ಪಿಟಿಐ): ಸೆಪ್ಟೆಂಬರ್ 22ರಿಂದ ಅನ್ವಯ ಆಗುವ ಪರಿಷ್ಕೃತ ಕೇಂದ್ರ ಜಿಎಸ್‌ಟಿ (ಸಿಜಿಎಸ್‌ಟಿ) ದರವನ್ನು ಕೇಂದ್ರ ಹಣಕಾಸು ಸಚಿವಾಲಯವು ಅಧಿಸೂಚನೆಯಲ್ಲಿ ಪ್ರಕಟಿಸಿದೆ.

ಈಗ ರಾಜ್ಯಗಳು ಇದನ್ನು ಅನುಕರಿಸಬೇಕಿದ್ದು, ರಾಜ್ಯ ಜಿಎಸ್‌ಟಿ (ಎಸ್‌ಜಿಎಸ್‌ಟಿ) ದರವನ್ನು ಅವು ಅಧಿಸೂಚನೆಯಲ್ಲಿ ಪ್ರಕಟಿಸಬೇಕಿದೆ.

ಈಗ ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ನಾಲ್ಕು ಹಂತಗಳಲ್ಲಿ ತೆರಿಗೆ ವಿಧಿಸಲಾಗುತ್ತಿದೆ. ಸೋಮವಾರದಿಂದ (ಸೆ. 22) ಎರಡು ಹಂತಗಳಲ್ಲಿ ತೆರಿಗೆ ವಿಧಿಸಲಾಗುತ್ತದೆ. ಇದರ ಜೊತೆಗೆ ತಂಬಾಕು ಹಾಗೂ ಐಷಾರಾಮಿ ಉತ್ಪನ್ನಗಳಿಗೆ ಶೇ 40ರಷ್ಟು ತೆರಿಗೆ ಇರಲಿದೆ.

'ಕಲ್ಯಾಣ'ದ ಸರ್ವಾಂಗೀಣ ಅಭಿವೃದ್ಧಿ

ಒಂದನೇ ಪುಟದಿಂದ...

'ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದಲ್ಲಿ ಆಲಮಟ್ಟಿ ಜಲಾಶಯದ ಎತ್ತರವನ್ನು ಹೆಚ್ಚಿಸುವ ಮೂಲಕ 15 ಲಕ್ಷ ಎಕರೆಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಂಡಿದ್ದೇವೆ. ಮುಂದಿನ ಮೂರು ವರ್ಷಗಳಲ್ಲಿ ₹70 ಸಾವಿರ ಕೋಟಿ ಅನುದಾನ ವಿನಿಯೋಗಿಸಲಾಗುವುದು. ಇದರಿಂದ ರಾಯಚೂರು, ಯಾದಗಿರಿ, ಕೊಪ್ಪಳ, ಕಲಬುರಗಿ ಜಿಲ್ಲೆಗಳ ಒಣಭೂಮಿಗಳಿಗೂ ನೀರಾವರಿ ಸೌಲಭ್ಯ ಸಿಗಲಿದೆ' ಎಂದು ತಿಳಿಸಿದರು.

'ಕಲಬುರಗಿಯಲ್ಲಿ ಕಳೆದ ವರ್ಷ ನಡೆದ ಸಚಿವ ಸಂಪುಟದ ಸಭೆಯಲ್ಲಿ ₹11,770 ಕೋಟಿ ಮೊತ್ತದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿತ್ತು. ಅವುಗಳ ಪೈಕಿ ಬಹುತೇಕ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. 2013ರಿಂದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ಇದುವರೆಗೆ ಒಟ್ಟು ₹24,780 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, ₹14,000 ಕೋಟಿ ವೆಚ್ಚ ಮಾಡಲಾಗಿದೆ. ರಸ್ತೆ ಮತ್ತು ಸಂಪರ್ಕ ವ್ಯವಸ್ಥೆಗೆ ಶೇ 50ರಷ್ಟು, ಆರೋಗ್ಯ ಮತ್ತು ಶಿಕ್ಷಣ ವಲಯಕ್ಕೆ ಶೇ 39ರಷ್ಟು ಹಣ ವಿನಿಯೋಗಿಸಲಾಗಿದೆ' ಎಂದು ವರದಿ ಒಪ್ಪಿಸಿದರು.

'ಕಲ್ಯಾಣ ಕರ್ನಾಟಕಕ್ಕೆ ಸಂವಿಧಾನದ '371 ಜೆ' ಕಲಂನಡಿ ವಿಶೇಷ ಸ್ಥಾನಮಾನ ನೀಡಿದ ಬಳಿಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ 1,19,923 ಹುದ್ದೆಗಳನ್ನು ನೇರ ನೇಮಕಾತಿಗೆ ಗುರುತಿಸಲಾಗಿದ್ದು, 84,620 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಒಳಮೀಸಲಾತಿ ವಿಚಾರ ಬಗೆಹರಿದಿರುವುದರಿಂದ ಖಾಲಿ ಇರುವ ಹುದ್ದೆಗಳನ್ನು ಹಂತಹಂತವಾಗಿ ಭರ್ತಿ ಮಾಡುತ್ತೇವೆ. ಕಲ್ಯಾಣದಲ್ಲಿ ಖಾಲಿ ಇರುವ 5,267 ಶಿಕ್ಷಕರ ಹುದ್ದೆ ಭರ್ತಿಗೂ ಸೂಚನೆ ನೀಡಲಾಗಿದೆ' ಎಂದು ಹೇಳಿದರು.

'ಅಕ್ಷರ ಆವಿಷ್ಕಾರ', 'ಆರೋಗ್ಯ ಆವಿಷ್ಕಾರ', 'ಉದ್ಯೋಗ ಆವಿಷ್ಕಾರ', 'ಕಲ್ಯಾಣ ಪಥ'ದಂತಹ ಯೋಜನೆಗಳಿಗೆ ವೆಚ್ಚ ಮಾಡಿದ ಅನುದಾನದ ಲೆಕ್ಕವೊಪ್ಪಿಸಿದ ಸಿದ್ದರಾಮಯ್ಯ ಅವರು, ತಮ್ಮ ಸರ್ಕಾರ ಕಲ್ಯಾಣದಲ್ಲಿ 'ಪ್ರಗತಿಯ ಹೊಳೆ'ಯನ್ನೇ ಹರಿಸುತ್ತಿದೆ ಎಂದು ಪ್ರತಿಪಾದಿಸಿದರು.

ಸಚಿವರಾದ ಪ್ರಿಯಾಂಕ್ ಖರ್ಗೆ, ಬೈರತಿ ಸುರೇಶ್, ಡಿ.ಸುಧಾಕರ್, ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಪಾಲ್ಗೊಂಡಿದ್ದರು.

ಮತ್ತಷ್ಟು ಮೃತದೇಹಗಳ ಅವಶೇಷ ಪತ್ತೆ

ಒಂದನೇ ಪುಟದಿಂದ...

ಎಸ್‌ಐಟಿ ಅಧಿಕಾರಿಗಳು, ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ, ಕಂದಾಯ ಇಲಾಖೆ ಸಿಬ್ಬಂದಿ ಹಾಗೂ ಸ್ಥಳೀಯ ಗ್ರಾಮ ಪಂಚಾಯಿತಿ ಸಿಬ್ಬಂದಿಯನ್ನು ಒಳಗೊಂಡು 40ಕ್ಕೂ ಹೆಚ್ಚು ಮಂದಿ ಇದ್ದ ತಂಡವು ಶೋಧ ಕಾರ್ಯದಲ್ಲಿ ಭಾಗವಹಿಸಿತ್ತು. ಬೆಳಿಗ್ಗೆ 11.30ರ ಸುಮಾರಿಗೆ ತಂಡವು ಕಾಡಿನೊಳಗೆ ತೆರಳಿತು. ಮಧ್ಯಾಹ್ನದ 2.30ರ ಸುಮಾರಿಗೆ ಊಟದ ವಿರಾಮಕ್ಕಾಗಿ ಕಾಡಿನಿಂದ ಹೊರ ಬಂದ ತಂಡವು ಒಂದು ತಾಸಿನ ಬಳಿಕ ಮತ್ತೆ ಕಾಡಿನೊಳಗೆ ತೆರಳಿತು. ತಂಡವು ಕಾಡಿನಿಂದ ಹೊರ ಬರುವಾಗ ಸಂಜೆ 7 ಗಂಟೆ ದಾಟಿ, ಕತ್ತಲಾವರಿಸಿತ್ತು. ಮೃತದೇಹಗಳ ಅವಶೇಷಗಳನ್ನು ಎಸ್‌ಐಟಿ ಸಿಬ್ಬಂದಿ ಏಳೆಂಟು ಬಕೆಟ್‌ಗಳಲ್ಲಿ ಹಾಗೂ ಗೋಣಿಚೀಲಗಳಲ್ಲಿ ತುಂಬಿಕೊಂಡು ಒಯ್ದದ್ದು ಕಂಡುಬಂತು.

ಈ ಪ್ರಕರಣದ ಸಾಕ್ಷಿ ದೂರುದಾರ ಪೊಲೀಸರಿಗೆ ತಲೆಬುರುಡೆಯನ್ನು ಒಪ್ಪಿಸಿದ್ದ. ಆದರೆ, ಅದನ್ನು ಹೊರತೆಗೆದದ್ದು 'ನಾನಲ್ಲ' ಎಂದು ಎಸ್‌ಐಟಿ ಮುಂದೆ ಹೇಳಿಕೆ ನೀಡಿದ್ದ. ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಪಕ್ಕದ ಬಂಗ್ಲೆಗುಡ್ಡೆಯ ಕಾಡಿನಿಂದ ಹೊರತೆಗೆಯಲಾಗಿತ್ತು. ಆ ತಲೆಬುರುಡೆ ಇದ್ದ ಆ ಜಾಗವನ್ನು ಧರ್ಮಸ್ಥಳ ಗ್ರಾಮದ ಪಾಂಗಾಳದ ವಿಠಲ ಗೌಡ ತೋರಿಸಿದ್ದರು ಎಂಬುದು ತನಿಖೆಯಲ್ಲಿ ಗೊತ್ತಾಗಿತ್ತು. ಎಸ್‌ಐಟಿ ಅಧಿಕಾರಿಗಳು ವಿಠಲ ಗೌಡ ಅವರನ್ನು ಕೆಲ ದಿನಗಳ ಹಿಂದೆ ಕಾಡಿನ ಒಳಗೆ ಕರೆದೊಯ್ದು ಮಹಜರು ನಡೆಸಿದ್ದರು. ಈ ವೇಳೆ ನೆಲದ ಮೇಲೆಯೇ ಕೆಲವೆಡೆ ಮೃತದೇಹಗಳ ಅವಶೇಷ ಕಂಡು ಬಂದಿತ್ತು ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಕಾಡಿನಲ್ಲಿ ಬುರುಡೆ ಸಿಕ್ಕಿದ್ದ ಸ್ಥಳದ ಮಹಜರಿಗೆ ತೆರಳಿದ್ದಾಗ ಮತ್ತಷ್ಟು ಮೃತದೇಹಗಳಿಗೆ ಸಂಬಂಧಿಸಿದ ಅವಶೇಷಗಳು ಕಾಣಿಸಿದ್ದು, ಎಸ್‌ಐಟಿ ಅಧಿಕಾರಿಗಳೂ ಅವುಗಳನ್ನು ನೋಡಿದ್ದಾರೆ' ಎಂದು ವಿಠಲ ಗೌಡ ಅವರು ವಿಡಿಯೊ ಹೇಳಿಕೆಯೊಂದರಲ್ಲಿ ತಿಳಿಸಿದ್ದರು. ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಈ ನಡುವೆ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಸಮಾಲೋಚಿಸಿದ್ದ ಎಸ್‌ಐಟಿ ಅಧಿಕಾರಿಗಳು ಆ ಕಾಡಿನಲ್ಲಿ ಶೋಧ ಕಾರ್ಯ ನಡೆಸಲು ತೀರ್ಮಾನಿಸಿದ್ದರು.

ಧರ್ಮಸ್ಥಳ ಸ್ನಾನಘಟ್ಟದ ಪಕ್ಕದ ಬಂಗ್ಲೆಗುಡ್ಡೆ ಕಾಡಿನಲ್ಲಿ ಪತ್ತೆಯಾದ ಮೃತದೇಹಗಳ ಅವಶೇಷಗಳನ್ನು ಎಸ್‌ಐಟಿ ಅಧಿಕಾರಿಗಳು ಬುಧವಾರ ಬಕೆಟ್‌ಗಳಲ್ಲಿ ತುಂಬಿ ಕೊಂಡೊಯ್ದರು

ತನಿಖೆ ಯಾರಿಂದ?

ಕಾಡಿನಲ್ಲಿ ಮೃತದೇಹಗಳು ಸಿಕ್ಕರೂ ಈ ಬಗ್ಗೆ ಎಸ್‌ಐಟಿಯೇ ಆಳವಾಗಿ ತನಿಖೆ ನಡೆಸಲಿದೆಯೇ ಅಥವಾ ಅದರ ತನಿಖೆಯನ್ನು ಸ್ಥಳೀಯ ಪೊಲೀಸರು ನಡೆಸಲಿದ್ದಾರೆಯೇ ಎಂಬುದು ಕುತೂಹಲಕ್ಕೆ ಕಾರಣವಾಗಿದೆ.

'ಧರ್ಮಸ್ಥಳದ ಸ್ನಾನಘಟ್ಟದ ಪಕ್ಕದ ಕಾಡಿನಲ್ಲಿ ಸಿಕ್ಕ ಮೃತದೇಹಗಳ ಅವಶೇಷಗಳನ್ನು ಎಸ್‌ಐಟಿ ಈಗಾಗಲೇ ತನಿಖೆ ನಡೆಸುತ್ತಿರುವ ಪ್ರಕರಣದ ಭಾಗ ಎಂದು ಪರಿಗಣಿಸಿದರೆ, ಅವರೇ ತನಿಖೆ ನಡೆಸಬಹುದು. ಅದು, ಅವರ ತನಿಖೆಯ ವ್ಯಾಪ್ತಿಯಲ್ಲಿ ಇಲ್ಲ ಎಂದು ಪರಿಗಣಿಸಿದರೆ, ಅಲ್ಲಿ ಸಿಕ್ಕ ಅವಶೇಷಗಳನ್ನು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರಿಗೆ ಹಸ್ತಾಂತರಿಸಬಹುದು. ಆಗ ನಾವೇ ಅದರ ತನಿಖೆ ನಡೆಸಬೇಕಾಗಬಹುದು. ಈ ಬಗ್ಗೆ ಹಿರಿಯ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ' ಎಂದು ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ತಿಮರೋಡಿ ವಿರುದ್ಧ ಮತ್ತೆ ಎಫ್‌ಐಆರ್

ಒಂದನೇ ಪುಟದಿಂದ...

ಪ್ರಕರಣದ ಸಾಕ್ಷಿ ದೂರುದಾರ ತಾನು ಉಜಿರೆಯ ಮಹೇಶ್ ಶೆಟ್ಟಿ ತಿಮರೋಡಿ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದ ಬಗ್ಗೆ ಎಸ್‌ಐಟಿ ಅಧಿಕಾರಿಗಳ ಮುಂದೆ ಸ್ವ ಇಚ್ಛಾ ಹೇಳಿಕೆ ನೀಡಿದ್ದ. ಈ ಬಗ್ಗೆ ಎಸ್‌ಐಟಿ ಅಧಿಕಾರಿಗಳು ನ್ಯಾಯಾಲಯದಿಂದ ಶೋಧನಾ ವಾರಂಟ್ ಪಡೆದು ತಿಮರೋಡಿ ಮನೆಯಲ್ಲಿ ಆ.26ರಂದು ಶೋಧ ಕಾರ್ಯ ನಡೆಸಿದ್ದರು. ಈ ವೇಳೆ 2 ತಲವಾರು 1 ಬಂದೂಕು ಸೇರಿದಂತೆ ಒಟ್ಟು 44 ಸ್ವತ್ತುಗಳನ್ನು ವಶಕ್ಕೆ ಪಡೆದಿದ್ದರು. ಈ ಬಗ್ಗೆ ಬೆಳ್ತಂಗಡಿ ಠಾಣೆಯಲ್ಲಿ 1959ರ ಶಸ್ತ್ರಾಸ್ತ್ರ ಕಾಯ್ದೆಯ ಸೆಕ್ಷನ್ 25(1)(1-ಎ) (ಮಾರಕಾಸ್ತ್ರ ಸಂಗ್ರಹ) ಹಾಗೂ ಸೆಕ್ಷನ್ 25(1)(1-ಬಿ) (ಎ) ಅಡಿ (ಅಕ್ರಮವಾಗಿ ಮಾರಕಾಸ್ತ್ರ ಹೊಂದಿರುವುದು) ಎಫ್‌ಐಆರ್ ದಾಖಲಾಗಿದೆ.

ದಬ್ಬಾಳಿಕೆ ಆರೋಪ ಎನ್‌ಎಚ್‌ಆರ್‌ಸಿಗೆ ತಿಮರೋಡಿ ದೂರು

ಮಂಗಳೂರು: 'ಪೊಲೀಸರು ಅಧಿಕಾರ ದುರುಪಯೋಗಪಡಿಸಿಕೊಂಡು, ನನ್ನನ್ನು ಗುರಿಯಾಗಿಸಿ ದಬ್ಬಾಳಿಕೆ ನಡೆಸುತ್ತಿದ್ದಾರೆ' ಎಂದು ಆರೋಪಿಸಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ (ಎನ್‌ಎಚ್‌ಆರ್‌ಸಿ) ರಾಷ್ಟ್ರೀಯ ಹಿಂದೂ ಜಾಗರಣಾ ವೇದಿಕೆ ಅಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿ ದೂರು ನೀಡಿದ್ದಾರೆ.

'ನನ್ನ ವಿರುದ್ಧ ಬ್ರಹ್ಮಾವರ, ಕಾರ್ಕಳ ಮತ್ತು ಬೆಳ್ತಂಗಡಿ ಠಾಣೆಗಳಲ್ಲಿ ಒಟ್ಟು ನಾಲ್ಕು ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಸುಳ್ಳು ಆರೋಪ ಹೊರಿಸಿ, ರಾಜಕೀಯ ದುರುದ್ದೇಶದಿಂದ ದಾಖಲಿಸಿರುವ ಎಫ್‌ಐಆರ್‌ಗಳಿವು. ಅವುಗಳನ್ನು ತಕ್ಷಣವೇ ಹಿಂಪಡೆಯಬೇಕು. ಈ ಬಗ್ಗೆ ಸ್ವತಂತ್ರ ಹಾಗೂ ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ತನಿಖೆ ನಡೆಸಬೇಕು. ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಶಿಸ್ತುಕ್ರಮ ಕೈಗೊಳ್ಳಬೇಕು' ಎಂದು ಅವರು ಕೋರಿದ್ದಾರೆ.

'ನನಗೆ, ನನ್ನ ಕುಟುಂಬಕ್ಕೆ, ಸಂಘಟನೆಯ ಕಾರ್ಯಕರ್ತರಿಗೆ ರಕ್ಷಣೆ ಒದಗಿಸಬೇಕು. ಹೋರಾಟಗಾರರನ್ನು ಹಾಗೂ ರಾಜಕೀಯ ವಿರೋಧಿಗಳನ್ನು ಮಟ್ಟಹಾಕಲು ಕ್ರಿಮಿನಲ್ ಕಾನೂನುಗಳ ದುರ್ಬಳಕೆ ತಡೆಯಲು ಸರ್ಕಾರ ಹಾಗೂ ಗೃಹಸಚಿವಾಲಯಗಳು ಸುಧಾರಣಾ ಕ್ರಮಗಳನ್ನು ಜಾರಿಗೊಳಿಸುವಂತೆ ಆಯೋಗವು ಶಿಫಾರಸು ಮಾಡಬೇಕು' ಎಂದು ಅವರು ಮನವಿ ಮಾಡಿದ್ದಾರೆ.

ಭಾರತ, ಚೀನಾ ಅಕ್ರಮ ಮಾದಕವಸ್ತು ಸಾಗಣೆ ದೇಶಗಳು: ಅಮೆರಿಕ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾ, ಅಫ್ಗಾನಿಸ್ತಾನ, ಭಾರತ ಮತ್ತು ಪಾಕಿಸ್ತಾನ ಸೇರಿದಂತೆ 23 ದೇಶಗಳನ್ನು ಪ್ರಮುಖ ಮಾದಕವಸ್ತು ಸಾಗಣೆ ಅಥವಾ ಅಕ್ರಮ ಮಾದಕವಸ್ತು ಉತ್ಪಾದಕ ರಾಷ್ಟ್ರಗಳ ಪಟ್ಟಿಯಲ್ಲಿ ಹೆಸರಿಸಿದ್ದಾರೆ.

ಅಕ್ರಮ ಮಾದಕವಸ್ತು ಮತ್ತು ಅದಕ್ಕೆ ಬಳಕೆಯಾಗುವ ರಾಸಾಯನಿಕಗಳನ್ನು ತಯಾರಿಸುವ ಹಾಗೂ ಸಾಗಿಸುವ ಮೂಲಕ ಈ ದೇಶಗಳು ಅಮೆರಿಕ ಮತ್ತು ಅದರ ಪ್ರಜೆಗಳ ಸುರಕ್ಷತೆಗೆ ಬೆದರಿಕೆ ಹಾಕುತ್ತಿವೆ ಎಂದು ಅವರು ಹೇಳಿದ್ದಾರೆ. ಈ ಕುರಿತ ಅಧ್ಯಕ್ಷ ಟ್ರಂಪ್ ಅವರ ನಿರ್ಣಯವನ್ನು ಸೋಮವಾರ ಕಾಂಗ್ರೆಸ್‌ಗೆ ಸಲ್ಲಿಸಲಾಗಿದೆ.

ಬಹಾಮಾಸ್, ಬೆಲೀಜ್, ಬೊಲಿವಿಯಾ, ಬರ್ಮಾ, ಕೊಲಂಬಿಯಾ, ಕೋಸ್ಟರಿಕಾ, ಡೊಮಿನಿಕನ್ ರಿಪಬ್ಲಿಕ್, ಈಕ್ವೆಡಾರ್, ಎಲ್ ಸಾಲ್ವಡಾರ್, ಗ್ವಾಟೆಮಾಲಾ, ಹೈಟಿ, ಹಾಂಡುರಾಸ್, ಜಮೈಕಾ, ಲಾವೋಸ್, ಮೆಕ್ಸಿಕೊ, ನಿಕರಾಗುವಾ, ಪನಾಮಾ, ಪೆರು, ವೆನೆಜುವೆಲಾ ದೇಶಗಳೂ ಈ ಪಟ್ಟಿಯಲ್ಲಿ ಸೇರಿವೆ.

ಕಿರ್ಕ್ ಹತ್ಯೆ ಬಗ್ಗೆ ಚೀಟಿ ಬರೆದಿದ್ದ ಆರೋಪಿ

ಪ್ರೊವೊ (ಎಪಿ): 'ನನಗೆ ಚಾರ್ಲಿ ಕಿರ್ಕ್ ಅವರನ್ನು ಆಯ್ಕೆ (ಹತ್ಯೆ) ಮಾಡುವ ಅವಕಾಶ ಲಭಿಸಿದೆ. ಕೆಲವು ದ್ವೇಷಗಳನ್ನು ಮಾತುಕತೆಯಿಂದ ಬಗೆಹರಿಸಲು ಸಾಧ್ಯವಿಲ್ಲ' ಎಂದು ಚೀಟಿಯೊಂದರಲ್ಲಿ ಬರೆದು, ಅದನ್ನು ಮನೆಯ ಕೀಬೋರ್ಡ್ ಕೆಳಗೆ ಇರಿಸಿ ಆರೋಪಿ ಟೈಲರ್ ರಾಬಿನ್‌ಸನ್ (22) ಮನೆಯಿಂದ ಹೊರಹೋಗಿದ್ದ.

ತನ್ನೊಂದಿಗೆ ಸಹ ಜೀವನ ನಡೆಸುತ್ತಿರುವ ಪ್ರಣಯ ಸಂಗಾತಿಗೆ ಈ ಚೀಟಿ ತೆರೆದು ನೋಡುವಂತೆ ಕೃತ್ಯದ ಬಳಿಕ ಸಂದೇಶ ಕಳುಹಿಸಿದ್ದ. ಸಂಗಾತಿ ಈ ಚೀಟಿ ತೆರೆದು ನೋಡಿ ಅಚ್ಚರಿಯಿಂದ, 'ಗುಂಡಿಕ್ಕಿರುವುದು ನೀನೇನಾ?' ಎಂದು ಕೇಳಿದಾಗ. 'ಹೌದು ನಾನೇ, ಕ್ಷಮಿಸಿ' ಎಂದು ತಪ್ಪೊಪ್ಪಿಕೊಂಡಿದ್ದ.

ಅಮೆರಿಕದ ಪ್ರಮುಖ ಬಲಪಂಥೀಯ ಕಾರ್ಯಕರ್ತ ಚಾರ್ಲಿ ಕಿರ್ಕ್ ಹತ್ಯೆ ಪ್ರಕರಣದ ಕುರಿತು ತನಿಖೆ ನಡೆಸುತ್ತಿರುವ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಯಲ್ಲಿ ಈ ಸಂಗತಿ ಬಹಿರಂಗಗೊಂಡಿದೆ.

ಸದ್ಯ ಟೈಲರ್ ರಾಬಿನ್‌ಸನ್ ಪೊಲೀಸರ ವಶದಲ್ಲಿದ್ದಾನೆ. ಮಂಗಳವಾರ ಆತ ಜೈಲಿನಿಂದಲೇ ವಿಡಿಯೊ ಕರೆ ಮೂಲಕ ವಿಚಾರಣೆ ಎದುರಿಸಿದನು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 9019427194

ಮನೆಯಿಂದಲೇ ಕೆಲಸ. ಕಂಪನಿಗಳಿಗೆ ಬೇಕಾಗಿದ್ದಾರೆ. ವಿದ್ಯಾರ್ಥಿಗಳಿಗೆ, ಪುರುಷರಿಗೆ, ಮಹಿಳೆಯರಿಗೆ (ವಿದ್ಯಾರ್ಹತೆಯಿಲ್ಲದವರಿಗೂ) 18,200 ರಿಂದ 35,000. ಕೊರಿಯರ್ ಸೌಲಭ್ಯವಿದೆ. 9916065497

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 04.10.2025 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯ ಪ್ರವಾಸ.03.10.2025 12ದಿನಗಳು ಅಖಂಡ ಮಹಾರಾಷ್ಟ್ರ (ಮುಂಬಯಿ ಅಷ್ಟವಿನಾಯಕ,ಶಿರಡಿ ಜ್ಯೋತಿರ್ಲಿಂಗ).23.10.2025 6ದಿನಗಳು ಒರಿಸ್ಸಾ,ಕಲ್ಕತ್ತಾ ಪ್ರವಾಸ.25.10.2025 10 ದಿನಗಳು ಅಖಂಡ ರಾಜಸ್ಥಾನ ಪ್ರವಾಸ.25.10.2025 21.11.2025 12/15/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್ ಸಿಸ್ಟರ್ಸ್) ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ. 25.09.2025 10,24.10.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಂಚಲಿಂಗ್. 8073824856 9206979202, 9035598467

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 16.12.2025 ರಿಂದ 7ದಿನಗಳು ಶಿರಡಿ ಪಂಡರಾಪುರ ಶನಿಸಿಂಗಾಪುರ ನಾಸಿಕ್ ಪಂಚವಟಿ ಕೊಲ್ಹಾಪುರ ಎಲ್ಲೋರ 4 ಜ್ಯೋತಿರ್ಲಿಂಗಗಳು. 9448390735, 9449721678

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನಿರ್ಣಾಯಕ ಕ್ರಮ ಕೈಗೊಳ್ಳಿ: ಮಾನವೀಯ ಸಹಕಾರ ನೀಡುವ ಸಂಸ್ಥೆಗಳಿಂದ ಕರೆ • ದಾಳಿಗೆ 16 ಬಲಿ

ಮುಕ್ಕಾಲು ಪಾಲು ಗಾಜಾ ನಗರ ಸುತ್ತುವರಿದ ಇಸ್ರೇಲ್

ಜೆರುಸಲೇಂ/ಅಡನ್ (ಎಪಿ): ಗಾಜಾ ನಗರದ ಕರಾವಳಿ ಭಾಗದ ದೊಡ್ಡ ಪ್ರದೇಶವೊಂದನ್ನು ಹೊರತುಪಡಿಸಿ ಉಳಿದ ಬಹುಭಾಗವನ್ನು ಇಸ್ರೇಲ್ ಸೇನೆಯು ಸುತ್ತುವರಿದಿದೆ. ಒಂದೆಡೆ, ಸಾವಿರಾರು ಪ್ಯಾಲೆಸ್ಟೀನಿಯನ್ನರು ನಗರವನ್ನು ತೊರೆಯುತ್ತಿದ್ದರೆ ಇನ್ನೊಂದೆಡೆ, ಇಸ್ರೇಲ್ ಭೂಸೇನೆಯು ಎರಡನೇ ದಿನವೂ ತನ್ನ ದಾಳಿಯನ್ನು ಮುಂದುವರಿಸಿದೆ.

ಇಸ್ರೇಲ್‌ನ ಭೂಸೇನೆಯು ಗಾಜಾ ನಗರದ ಮೇಲೆ ನಡೆಸುತ್ತಿರುವ ತೀವ್ರ ದಾಳಿಗೆ ಕನಿಷ್ಠ 16 ಮಂದಿ ಮೃತಪಟ್ಟಿದ್ದಾರೆ. ಇದರಲ್ಲಿ ಅರ್ಧದಷ್ಟು ಜನರು ಮಹಿಳೆಯರು ಮತ್ತು ಮಕ್ಕಳಾಗಿದ್ದಾರೆ. ಗಾಜಾದ ಆಸ್ಪತ್ರೆಯಲ್ಲಿದ್ದ 80 ರೋಗಿಗಳಿಗೆ ಈ ದಾಳಿಯ ಕಾರಣದಿಂದ ಹೊರಹೋಗುವಂತೆ ಹೇಳಲಾಗಿದೆ.

ಆಹಾರ, ನೀರು, ಔಷಧ ಸೇರಿದಂತೆ ಗಾಜಾ ಜನರಿಗೆ ಮೂಲಸೌಲಭ್ಯ, ನೆರವು ಒದಗಿಸುತ್ತಿರುವ ಅಂತರರಾಷ್ಟ್ರೀಯ ಮಟ್ಟದ ಸುಮಾರು 20 ಸಂಸ್ಥೆಗಳು ದಾಳಿಯನ್ನು ಕಟು ಮಾತುಗಳಲ್ಲಿ ಖಂಡಿಸಿವೆ. 'ಭೂಸೇನೆಯ ಕಾರ್ಯಾಚರಣೆಯು ನರಮೇಧದ ಯುದ್ಧವನ್ನು ವಿಸ್ತರಿಸಿದಂತೆ' ಎಂದಿರುವ ಕತಾರ್, ಇಸ್ರೇಲ್ ಮೇಲೆ ತೀವ್ರ ವಾಗ್ದಾಳಿ ನಡೆಸಿದೆ.

ಇಸ್ರೇಲ್ ಕಡೆಯ ಗಡಿಯಿಂದ ಸೆರೆಹಿಡಿದ ಗಾಜಾಪಟ್ಟಿಯ ಚಿತ್ರ – ಎಎಫ್‌ಪಿ ಚಿತ್ರ

'ಹುಥಿ ವಾಯು ಪ್ರದೇಶ ಸನ್ನದ್ಧ'

ಇರಾನ್ ಬೆಂಬಲಿತ ಹುಥಿ ಬಂಡುಕೋರರು ಸಕ್ರಿಯವಾಗಿರುವ ಬಂದರಿನ ಮೇಲೆ ಇಸ್ರೇಲ್ ಮಂಗಳವಾರ ದಾಳಿ ನಡೆಸಿತ್ತು. ಬಳಿಕ ಬಂಡುಕೋರರು ತಮ್ಮ ವಾಯು ರಕ್ಷಣಾ ವ್ಯವಸ್ಥೆಯನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿದ್ದಾರೆ.

'ಹೊಡೇಡ ಬಂದರಿನ ಮೂಲಕ ಇರಾನ್‌ನಿಂದ ಶಸ್ತ್ರಾಸ್ತ್ರಗಳು ಬಂಡುಕೋರರನ್ನು ತಲುಪುತ್ತಿವೆ. ಈ ಶಸ್ತ್ರಾಸ್ತ್ರಗಳನ್ನು ಇಸ್ರೇಲ್ ಮತ್ತು ಅದರ ಮಿತ್ರ ರಾಷ್ಟ್ರಗಳ ಮೇಲೆ ದಾಳಿ ನಡೆಸಲು ಬಳಸಿಕೊಳ್ಳಲಾಗುತ್ತದೆ' ಎಂದು ಇಸ್ರೇಲ್ ಹೇಳಿದೆ. 'ಇಸ್ರೇಲ್‌ನವರಿಗೆ ನಾವು ಚಳ್ಳೆಹಣ್ಣು ತಿನ್ನಿಸುತ್ತಿದ್ದೇವೆ. ನಾವು ಅವರಲ್ಲಿ ಗೊಂದಲ ಮೂಡುವಂತೆ ಮಾಡಿ, ದಾಳಿ ಮಾಡುವ ಮುನ್ನವೇ ನಮ್ಮ ವಾಯುಪ್ರದೇಶ ಬಿಟ್ಟು ಹೋಗುವಂತೆ ಮಾಡುತ್ತಿದ್ದೇವೆ' ಎಂದು ಹುಥಿ ಬಂಡುಕೋರ ಸಂಘಟನೆ ತಿಳಿಸಿದೆ.

'ಕಳೆದ ಕೆಲವು ದಿನಗಳಲ್ಲಿ ಗಾಜಾ ನಗರದ ಎತ್ತರದ ಕಟ್ಟಡಗಳನ್ನು ಗುರಿಯಾಗಿಸಿ ಸುಮಾರು 150ಕ್ಕೂ ಹೆಚ್ಚು ದಾಳಿಗಳನ್ನು ನಡೆಸಿದ್ದೇವೆ' ಎಂದು ಇಸ್ರೇಲ್ ಹೇಳಿಕೊಂಡಿದೆ. ಈ ಕಟ್ಟಡಗಳಲ್ಲಿ ಸಾವಿರಾರು ಪ್ಯಾಲೆಸ್ಟೀನಿಯನ್ನರು ಆಶ್ರಯ ಪಡೆದುಕೊಂಡಿದ್ದರು. 'ಕಣ್ಗಾವಲು ನಡೆಸಲು ಹಮಾಸ್ ಬಂಡುಕೋರರು ಇಂಥ ಕಟ್ಟಡಗಳನ್ನು ಬಳಸಿಕೊಳ್ಳುತ್ತಾರೆ' ಎಂದು ಇಸ್ರೇಲ್ ದೂರಿದೆ.

'ಕೇವಲ ಹೇಳಿಕೆಯಿಂದ ಪ್ರಯೋಜನವಿಲ್ಲ'

ಗಾಜಾದಲ್ಲಿ ನಡೆಯುತ್ತಿರುವ ಅತ್ಯಂತ ದೊಡ್ಡ ಮಾನವೀಯ ದುರಂತವನ್ನು ತಡೆಯಲು, ಇತರ ದೇಶಗಳು ತಮ್ಮೆಲ್ಲಾ ರಾಜಕೀಯ, ಆರ್ಥಿಕ ಮತ್ತು ಕಾನೂನಾತ್ಮಕ ತಂತ್ರವನ್ನು ಬಳಸಿಕೊಳ್ಳಬೇಕು. ದಾಳಿ ಖಂಡಿಸಿ ಹೇಳಿಕೆ ಕೊಡುವುದರಿಂದ, ಅರ್ಥಂಬರ್ಥ ಪರಿಣಾಮ ಬೀರುವ ಕ್ರಮಗಳಿಂದ ಪ್ರಯೋಜನವಿಲ್ಲ. ಇದಕ್ಕೊಂದು ನಿರ್ಣಾಯಕ ಕ್ರಮದ ಅಗತ್ಯವಿದೆ

ಮಾನವೀಯ ಸಹಕಾರ ಒದಗಿಸುವ ಸಂಸ್ಥೆಗಳು

ದಕ್ಷಿಣಕ್ಕೆ ತೆರಳಲು ಎಚ್ಚರಿಕೆ: ಉತ್ತರ ಗಾಜಾದಿಂದ ದಕ್ಷಿಣ ಗಾಜಾಗೆ ತೆರಳುವಂತೆ ಇಸ್ರೇಲ್ ಸೇನೆ ಈಗಾಗಲೇ ಎಚ್ಚರಿಕೆ ನೀಡಿದೆ. ಇದಕ್ಕಾಗಿ ಇನ್ನೊಂದು ಹೊಸ ಮಾರ್ಗವನ್ನು ತೆರೆದಿದೆ. 'ಈ ಮಾರ್ಗವು ಬುಧವಾರ ಸಂಜೆಯಿಂದ ಆರಂಭಗೊಂಡು ಎರಡು ದಿನ ತೆರೆದಿರಲಿದೆ' ಎಂದು ಇಸ್ರೇಲ್ ತಿಳಿಸಿದೆ.

ದೂರಸಂಪರ್ಕ ಸಂಪೂರ್ಣ ಕಡಿತ: 'ಉತ್ತರ ಗಾಜಾದ ಮುಖ್ಯ ದೂರಸಂಪರ್ಕ ಮೂಲಸೌಕರ್ಯದ ಮೇಲೆ ಇಸ್ರೇಲ್ ಸೇನೆಯು ನಿರಂತರವಾಗಿ ದಾಳಿ ನಡೆಸುತ್ತಿದೆ. ಇದರಿಂದಾಗಿ ಬುಧವಾರ ಬೆಳಿಗ್ಗೆಯಿಂದ ಇಲ್ಲಿನ ದೂರವಾಣಿ ಸಂಪರ್ಕ ಮತ್ತು ಅಂತರ್ಜಾಲ ಸಂಪರ್ಕ ಸಂಪೂರ್ಣ ಕಡಿತಗೊಂಡಿದೆ' ಎಂದು ಪ್ಯಾಲೆಸ್ಟೀನ್ ದೂರಸಂಪರ್ಕ ಪ್ರಾಧಿಕಾರ ಹೇಳಿದೆ.

ಅಂಕಿ ಅಂಶಗಳು

10 ಲಕ್ಷ
ಗಾಜಾದಲ್ಲಿ ವಾಸಿಸುತ್ತಿರುವವರ ಸಂಖ್ಯೆ

3.50 ಲಕ್ಷ
ಇಸ್ರೇಲ್ ಸೇನೆ ಪ್ರಕಾರ ಗಾಜಾ ನಗರವನ್ನು ತೊರೆದವರ ಸಂಖ್ಯೆ

2.38 ಲಕ್ಷ
ವಿಶ್ವ ಸಂಸ್ಥೆ ಅಂದಾಜಿಸಿದಂತೆ ಗಾಜಾ ನಗರವನ್ನು ತೊರೆದವರ ಸಂಖ್ಯೆ

2-3 ಸಾವಿರ
ಇಸ್ರೇಲ್ ಸೇನೆ ಪ್ರಕಾರ ಗಾಜಾ ನಗರದಲ್ಲಿ ಇನ್ನೂ ಉಳಿದುಕೊಂಡಿರುವ ಹಮಾಸ್ ಬಂಡುಕೋರರ ಸಂಖ್ಯೆ

‘ವಿಶ್ವ ಕಣ’ದಲ್ಲಿ ನೀರಜ್–ನದೀಂ ಹಣಾಹಣಿ

ಜಾವೆಲಿನ್ ಥ್ರೋ: ಭಾರತದ ‘ಚಾಂಪಿಯನ್ ಅಥ್ಲೀಟ್’ಗೆ ಕಠಿಣ ಪೈಪೋಟಿ

ಪ್ರಮುಖ ಅಂಶಗಳು
- 2023ರಲ್ಲಿ ಚಿನ್ನ ಜಯಿಸಿದ್ದ ನೀರಜ್, ಬೆಳ್ಳಿ ಗಳಿಸಿದ್ದ ನದೀಂ
- ಮಂಡಿನೋವಿಗೆ ಜುಲೈನಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದ ಪಾಕಿಸ್ತಾನದ ಅಥ್ಲೀಟ್
- ವಿಶ್ವ ಅಥ್ಲೆಟಿಕ್ಸ್ ಫೈನಲ್‌ನಲ್ಲಿ ಭಾರತದ ಸಚಿನ್ ಯಾದವ್

ಟೋಕಿಯೊ (ಪಿಟಿಐ): ವಿಶ್ವ ಅಥ್ಲೆಟಿಕ್ಸ್ ಅಂಗಳದಲ್ಲಿ ‘ಬದ್ಧ ಎದುರಾಳಿ’ ದೇಶಗಳಾದ ಭಾರತ ಮತ್ತು ಪಾಕಿಸ್ತಾನದ ಅಥ್ಲೀಟ್‌ಗಳು ಕಣಕ್ಕಿಳಿಯಲಿದ್ದಾರೆ. ಜಾವೆಲಿನ್ ಥ್ರೋ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಭಾರತದ ನೀರಜ್ ಚೋಪ್ರಾ ಮತ್ತು ಪಾಕಿಸ್ತಾನದ ಅರ್ಷದ್ ನದೀಂ ಅವರು ಮುಖಾಮುಖಿಯಾಗಲಿದ್ದಾರೆ.

2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿದ್ದ ನೀರಜ್ ಮತ್ತು ಹೋದ ವರ್ಷ ಪ್ಯಾರಿಸ್‌ನಲ್ಲಿ ನಡೆದಿದ್ದ ಒಲಿಂಪಿಕ್ ಕೂಟದಲ್ಲಿ ಚಾಂಪಿಯನ್ ಆಗಿದ್ದ ಅರ್ಷದ್ ಅವರಿಬ್ಬರ ಪೈಪೋಟಿ ಈಗ ಕುತೂಹಲಕ್ಕೆ ಕಾರಣವಾಗಿದೆ.

ಬುಧವಾರ ನಡೆದ ಎ ಗುಂಪಿನ ಅರ್ಹತಾ ಸುತ್ತಿನ ಮೊದಲ ಥ್ರೋನಲ್ಲಿಯೇ ನೀರಜ್ ಅವರು 84.50 ಮೀಟರ್ಸ್ ಸಾಧನೆ ಮಾಡಿ ಫೈನಲ್ ಸುತ್ತಿಗೆ ಲಗ್ಗೆ ಇಟ್ಟರು. 27 ವರ್ಷ ವಯಸ್ಸಿನ ನೀರಜ್ ಅವರು ಈ ಸುತ್ತಿನ ಮೊದಲ ಸ್ಪರ್ಧಿಯೂ ಆಗಿದ್ದು ತಮ್ಮ ಪ್ರಥಮ ಥ್ರೋನಲ್ಲಿಯೇ ಫೈನಲ್ ಅರ್ಹತೆ ಪಡೆದರು.

ಬಿ ಗುಂಪಿನಲ್ಲಿ ಸ್ಪರ್ಧಿಸಿದ್ದ ನದೀಂ ಅವರ ಫೈನಲ್ ಹಾದಿ ಸುಲಭವಾಗಿರಲಿಲ್ಲ. ಅವರು ಮೂರನೇ ಥ್ರೋನಲ್ಲಿ 85.28 ಮೀ ಸಾಧನೆ ಮಾಡಿ ಪದಕ ಸುತ್ತಿಗೆ ಲಗ್ಗೆಯಿಟ್ಟರು. ಅವರು ಇಲ್ಲಿ ಮೊದಲ ಥ್ರೋನಲ್ಲಿ 76.99 ಮೀ ಮತ್ತು ಎರಡನೇಯದ್ದರಲ್ಲಿ 74.17 ಮೀ ಥ್ರೋ ಮಾಡಿದರು. ಮೂರನೇ ಪ್ರಯತ್ನದಲ್ಲಿ ಅವರು ಅರ್ಹತಾ ಮಟ್ಟವನ್ನು ಸಾಧಿಸುವಲ್ಲಿ ಯಶಸ್ವಿಯಾದರು. 2023ರ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ನೀರಜ್ ಚಿನ್ನ ಮತ್ತು ನದೀಂ ಬೆಳ್ಳಿ ಜಯಿಸಿದ್ದರು.

ನಿಯಮದ ಪ್ರಕಾರ; 84.50 ಮೀ ಗುರಿಯನ್ನು ಸಾಧಿಸಿದವರು ಅಥವಾ ಅರ್ಹತಾ ಸುತ್ತಿನಲ್ಲಿ ಗರಿಷ್ಠ ಎಸೆತಗಳ ಸಾಧನೆ ಮಾಡಿದ 12 ಮಂದಿ ಫೈನಲ್ ಅರ್ಹತೆ ಪಡೆಯುತ್ತಾರೆ. ಗುರುವಾರ ಫೈನಲ್ ನಡೆಯಲಿದೆ.

ನದೀಂ ಅವರು ಪ್ಯಾರಿಸ್ ಕೂಟದ ನಂತರ ಕಳೆದ ಮೇ ತಿಂಗಳಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮಾತ್ರ ಭಾಗವಹಿಸಿದ್ದರು. ಕೊರಿಯಾದಲ್ಲಿ ನಡೆದಿದ್ದ ಆ ಕೂಟದಲ್ಲಿ ಅವರು ಚಿನ್ನದ ಪದಕ ಜಯಿಸಿದ್ದರು. ಜುಲೈನಲ್ಲಿ ಅವರು ಮೊಣಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಸಚಿನ್ ಫೈನಲ್‌ಗೆ: ಭಾರತದ ಮತ್ತೊಬ್ಬ ಅಥ್ಲೀಟ್ ಸಚಿನ್ ಯಾದವ್ ಅವರು ಎ ಗುಂಪಿನಲ್ಲಿ ಆರನೇ ಹಾಗೂ ಒಟ್ಟಾರೆಯಾಗಿ 10ನೇ ಸ್ಥಾನ ಪಡೆದು ಫೈನಲ್‌ಗೆ ಲಗ್ಗೆ ಇಟ್ಟರು. ಅವರು 83.67 ಮೀ ಥ್ರೋ ಮಾಡಿದ್ದರು.

ಭಾರತದ ಇನ್ನಿಬ್ಬರು ಅಥ್ಲೀಟ್‌ಗಳಾದ ರೋಹಿತ್ ಯಾದವ್ ಮತ್ತು ಯಶ್‌ವೀರ್ ಸಿಂಗ್ ಅವರು ಕ್ರಮವಾಗಿ 28 ಮತ್ತು 30ನೇ ಸ್ಥಾನ ಪಡೆದರು. ಎರಡೂ ಗುಂಪುಗಳಿಂದ ಒಟ್ಟು 37 ಸ್ಪರ್ಧಿಗಳು ಕಣದಲ್ಲಿದ್ದರು.

ಪೀಟರ್ಸ್‌ಗೆ ಅಗ್ರಸ್ಥಾನ: ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ (89.53ಮೀ) ಫೈನಲ್‌ಗೆ ಅರ್ಹತೆ ಪಡೆದವರ ಪಟ್ಟಿಯಲ್ಲಿ ಅತಿ ಹೆಚ್ಚು ದೂರ ಥ್ರೋ ಮಾಡಿದ ಸಾಧನೆ ಮಾಡಿದ್ದಾರೆ. ಅವರ ನಂತರದ ಸ್ಥಾನಗಳಲ್ಲಿ, ಕ್ರಮವಾಗಿ ಜೂಲಿಯನ್ ವೆಬರ್ (ಜರ್ಮನಿ; 87.21ಮೀ), ಜೂಲಿಯಸ್ ಯೆಗೊ (ಕೆನ್ಯಾ; 85.96ಮೀ), ಡೇವಿಡ್ ವೆಗ್ನರ್ (ಪೋಲೆಂಡ್; 85.67ಮೀ), ಅರ್ಷದ್ ನದೀಂ (ಪಾಕಿಸ್ತಾನ; 85.28 ಮೀ), ನೀರಜ್ ಚೋಪ್ರಾ (ಭಾರತ; 84.85ಮೀ), ಅಮೆರಿಕದ ಕರ್ಟಿಸ್ ಥಾಂಪ್ಸನ್ (84.72ಮೀ), ಯಾಕೂಬ್ ವಾಡ್ಲೆಚ್ (ಜೆಕ್ ಗಣರಾಜ್ಯ; 84.11ಮೀ), ಕೆಶೊರ್ನ್ ವಾಲ್ಕಾಟ್ (ಟ್ರಿನಿಡಾಡ್–ಟೊಬ್ಯಾಗೊ; 83.93ಮೀ), ಸಚಿನ್ ಯಾದವ್ (ಭಾರತ; 83.67ಮೀ), ಕ್ಯಾಮೆರಾನ್ ಎಂಸೆನ್‌ಟೈರ್ (ಆಸ್ಟ್ರೇಲಿಯಾ; 83.03ಮೀ), ರುಮೇಶ್ ತರಂಗಾ ಪಥಿರಾಗೆ (ಶ್ರೀಲಂಕಾ; 82.80ಮೀ) ಅವರು ಪೈಪೋಟಿ ನಡೆಸಲಿದ್ದಾರೆ.

ಸ್ಪರ್ಧೆ ಸಮಯ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ನೀರಜ್ ಚೋಪ್ರಾ
ಎಪಿ ಚಿತ್ರಗಳು


ಅರ್ಷದ್ ನದೀಂ

ಐಸಾಕ್ ನಾಡೆರ್‌ಗೆ ಅಚ್ಚರಿಯ ಚಿನ್ನ

ಟೋಕಿಯೊ (ಎಎಫ್‌ಪಿ): ಅಂತಿಮ ಕ್ಷಣಗಳಲ್ಲಿ ಅಮೋಘವಾಗಿ ಓಡಿದ ಪೋರ್ಚುಗಲ್‌ನ ಐಸಾಕ್ ನಾಡೆರ್, ಬ್ರಿಸ್ಟನ್ ಜೇಕ್ ವೈಟ್‌ಮನ್ ಅವರನ್ನು ಕೂದಲೆಳೆ ಅಂತರದಲ್ಲಿ ಹಿಂದೆಹಾಕಿ ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ 1500 ಮೀ. ಓಟದಲ್ಲಿ ಅಚ್ಚರಿಯ ರೀತಿ ಚಿನ್ನ ಗೆದ್ದುಕೊಂಡರು.

ಬುಧವಾರ ನಡೆದ ಈ ಓಟದಲ್ಲಿ 3ನಿ.34.10ಸೆ.ಗಳಲ್ಲಿ ಗುರಿತಲುಪಿದ ಐಸಾಕ್, 2022ರ ವಿಶ್ವ ಚಾಂಪಿಯನ್ ಓಟಗಾರರನ್ನು ಸೆಕೆಂಡಿನ 200ನೇ ಒಂದು ಭಾಗದಿಂದ ಹಿಂದೆಹಾಕಿದರು.

ಕ್ಯಾಥಿ ಮೂನ್‌ಗೆ ಚಿನ್ನ: ಅಮೆರಿಕದ ಕ್ಯಾಥಿ ಮೂನ್ ಮಹಿಳೆಯರ ವಿಭಾಗದ ಪೋಲ್‌ವಾಲ್ಟ್‌ನಲ್ಲಿ ಸತತ ಮೂರನೇ ಬಾರಿ ಚಿನ್ನ ಗೆದ್ದರು. 2021ರ ಒಲಿಂಪಿಕ್ ಚಾಂಪಿಯನ್ ಸಹ ಆಗಿರುವ ಅವರು 4.90 ಮೀ. ಎತ್ತರ ಜಿಗಿದರು. ಇದೇ ದೇಶದ ಸಾಂಡಿ ಮಾರಿಸ್ (4.85 ಮೀ.) ಬೆಳ್ಳಿ ಗೆದ್ದರು. ಕಂಚಿನ ಪದಕ ಸ್ಲೊವೇನಿಯಾದ ಟೀನಾ ಸುಟೆಜ್ (4.80 ಮೀ.) ಪಾಲಾಯಿತು. ಹಾಲಿ ಒಲಿಂಪಿಕ್ ಚಾಂಪಿಯನ್ ನೀನಾ ಕೆನಡಿ (ಆಸ್ಟ್ರೇಲಿಯಾ) ಅವರು ಕಾಲಿನ ಸ್ನಾಯು ಸಮಸ್ಯೆಯ ಕಾರಣ ಇಲ್ಲಿಗೆ ಬಂದಿರಲಿಲ್ಲ.

ಪಾಕ್ ತಂಡದ ‘ಹೈಡ್ರಾಮಾ’

• ಆರ್. ಕೌಶಿಕ್

ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕ ಸಲ್ಮಾನ್ ಆಘಾ ಅವರು ಮ್ಯಾಚ್ ರೆಫರಿ ಆ್ಯಂಡಿ ಪೈಕ್ರಾಫ್ಟ್ ಅವರಿಗೆ ಆಟಗಾರರ ಪಟ್ಟಿಯನ್ನು ನೀಡಿದರು ಎಪಿ/ಪಿಟಿಐ ಚಿತ್ರ

ದುಬೈ: ‘ಅವರು ಆಡ್ತಾರೆ. ಅವರು ಆಡಲ್ಲ..’ ಅತ್ತಿಂದಿತ್ತ ಶತಪಥ ಹಾಕಿದ ಪಾಕಿಸ್ತಾನ ತಂಡವು ಬುಧವಾರ ಮುಸ್ಸಂಜೆ ಯುಎಇ ವಿರುದ್ಧದ ಪಂದ್ಯವನ್ನು ಬಹಿಷ್ಕರಿಸುವ ತನ್ನ ನಿರ್ಧಾರವನ್ನು ತರಾತುರಿಯಲ್ಲಿ ಬದಲಿಸಿತು. ಒಂದೊಮ್ಮೆ ಬಹಿಷ್ಕಾರದ ನಿರ್ಧಾರಕ್ಕೆ ಗಟ್ಟಿಯಾಗಿ ಅಂಟಿಕೊಂಡಿದ್ದರೆ ಏಷ್ಯಾ ಕಪ್ ಟೂರ್ನಿಯಲ್ಲಿ ಪಾಕ್ ತಂಡದ ಅಭಿಯಾನಕ್ಕೆ ತೆರೆಬೀಳುತ್ತಿತ್ತು.

ಭಾನುವಾರ ನಡೆದ ಭಾರತ ಮತ್ತು ಪಾಕಿಸ್ತಾನ ಪಂದ್ಯದಲ್ಲಿ ನಡೆದಿದ್ದ ‘ಹಸ್ತಲಾಘವ ನಿರಾಕರಣೆ’ ವಿವಾದದ ಹಿನ್ನೆಲೆಯಲ್ಲಿ ಮ್ಯಾಚ್ ರೆಫರಿ ಆ್ಯಂಡಿ ಪೈಕ್ರಾಫ್ಟ್ ಅವರನ್ನು ವಜಾಗೊಳಿಸಬೇಕು ಎಂದು ಪಿಸಿಬಿ (ಪಾಕಿಸ್ತಾನ ಕ್ರಿಕೆಟ್ ಮಂಡಳಿ) ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಗೆ ಮನವಿ ಮಾಡಿತ್ತು. ಆದರೆ ಪಾಕ್ ಮನವಿಯನ್ನು ಐಸಿಸಿಯು ತಳ್ಳಿ ಹಾಕಿತ್ತು. ಬುಧವಾರ ಪಿಸಿಬಿಯು ಎರಡನೇ ಬಾರಿ ಪೈಕ್ರಾಫ್ಟ್ ವಿರುದ್ಧ ಮನವಿ ಸಲ್ಲಿಸಿತ್ತು. ಅದನ್ನೂ ಐಸಿಸಿಯು ತಿರಸ್ಕರಿಸಿತ್ತು. ಇದರಿಂದಾಗಿ ಪಾಕ್ ತಂಡವು ಗೊಂದಲಕ್ಕೊಳಗಾಯಿತು.

ಸ್ಥಳೀಯ ತಂಡ (ಯುಎಇ) ವಿರುದ್ಧದ ಪಂದ್ಯವನ್ನು ಬಹಿಷ್ಕರಿಸುವ ತನ್ನ ನಿರ್ಧಾರವನ್ನು ಬದಲಿಸಬೇಕೆ ಎಂಬ ಜಿಜ್ಞಾಸೆಯಲ್ಲಿ ಪಾಕ್ ತಂಡ ಹೊಯ್ದಾಡಿತು. ಏಕೆಂದರೆ ಎ ಗುಂಪಿನಿಂದ ಸೂಪರ್ ಫೋರ್ ಪ್ರವೇಶಿಸಲು ಪಾಕ್ ತಂಡವು ಈ ಪಂದ್ಯವನ್ನು ಜಯಿಸಲೇಬೇಕು. ಬಹಿಷ್ಕಾರ ಮಾಡಿದರೆ ಟೂರ್ನಿಯಿಂದ ಹೊರಬೀಳುವುದು ಖಚಿತವಾಗಿತ್ತು.

ಏಷ್ಯಾ ಕಪ್ 2025

ಸ್ಥಳೀಯ ಕಾಲಮಾನ ಸಂಜೆ 6.30ಕ್ಕೆ ಪಂದ್ಯ ಆರಂಭವಾಗಬೇಕು. 5 ಗಂಟೆಯಷ್ಟೊತ್ತಿಗೆ ಯುಎಇ ತಂಡವು ಮೈದಾನಕ್ಕೆ ಆಗಮಿಸಿತ್ತು. ಆದರೆ ಆ ಹೊತ್ತಿಗೆ ಸಲ್ಮಾನ್ ಆಘಾ ನಾಯಕತ್ವದ ಪಾಕ್ ಬಳಗವು ಹೋಟೆಲ್‌ನಲ್ಲಿಯೇ ಇತ್ತು. ಪಿಸಿಬಿ ಅಧ್ಯಕ್ಷ ಮೊಹಸಿನ್ ನಕ್ವಿ ಅವರು ತಂಡವನ್ನು ಹೋಟೆಲ್‌ನಲ್ಲಿಯೇ ಇರುವಂತೆ ಸೂಚಿಸಿದ್ದರು. ಅವರು ಲಾಹೋರ್‌ನಲ್ಲಿ ಪಾಕ್ ಕ್ರಿಕೆಟ್ ಮಂಡಳಿಯ ಮಾಜಿ ಅಧ್ಯಕ್ಷರಾದ ನಜಾಮ್ ಸೇಥಿ ಮತ್ತು ರಮೀಜ್ ರಾಜಾ ಅವರೊಂದಿಗೆ ಚರ್ಚೆ ನಡೆಸಿದರು.

ಸುಮಾರು 5.45ರ ಹೊತ್ತಿಗೆ ಪಂದ್ಯವು ನಡೆಯಲಿದೆ ಎಂಬ ವರ್ತಮಾನ ಹೊರಬಿತ್ತು. ಆದರೆ ನಿಗದಿತ ವೇಳೆಗಿಂತ ಒಂದು ಗಂಟೆ ತಡವಾಗಿ ಪಂದ್ಯ ಆರಂಭಿಸಲಾಗುವುದು ಎಂದೂ ಪ್ರಕಟಿಸಲಾಯಿತು. 6.30ರ ಹೊತ್ತಿಗೆ ಪಾಕ್ ತಂಡವು ಕ್ರೀಡಾಂಗಣಕ್ಕೆ ಬಂದಿಳಿಯಿತು. ಅರ್ಧ ಗಂಟೆ ನಂತರ ರೆಫರಿ ಪೈಕ್ರಾಫ್ಟ್ ಅವರು ಟಾಸ್ ಕಾರ್ಯ ನಿರ್ವಹಿಸಿದರು. ಈ ಸಂದರ್ಭದಲ್ಲಿ ಆಘಾ ಮತ್ತು ಯುಎಇ ನಾಯಕ ಕೈಕುಲುಕಿದರು. ಸ್ಥಳೀಯ ಕಾಲಮಾನ ರಾತ್ರಿ 7.30ಕ್ಕೆ (ಭಾರತೀಯ ಕಾಲಮಾನ; 9) ಪಂದ್ಯ ಆರಂಭವಾಯಿತು.

ಏಷ್ಯಾ ಕಪ್: ಭಾನುವಾರ ಭಾರತದ ಎದುರು ಮತ್ತೆ ಹಣಾಹಣಿ

ಸೂಪರ್ ಫೋರ್‌ಗೆ ಪಾಕಿಸ್ತಾನ

ದುಬೈ (ಪಿಟಿಐ): ಸಂಘಟಿತ ಬೌಲಿಂಗ್ ದಾಳಿ ನಡೆಸಿದ ಪಾಕಿಸ್ತಾನ ತಂಡವು ಬುಧವಾರ ಏಷ್ಯಾ ಕಪ್ ಎ ಗುಂಪಿನ ಪಂದ್ಯದಲ್ಲಿ 41 ರನ್‌ಗಳಿಂದ ಯುಎಇ ತಂಡವನ್ನು ಮಣಿಸಿತು. ಅದರೊಂದಿಗೆ ಸೂಪರ್ ಫೋರ್ ಹಂತಕ್ಕೂ ಪ್ರವೇಶ ಪಡೆಯಿತು.

ಇದರೊಂದಿಗೆ ಭಾನುವಾರ ಸೂಪರ್ ಫೋರ್ ಹಂತದ ಬಹು ನಿರೀಕ್ಷಿತ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯಕ್ಕೆ ವೇದಿಕೆ ಸಿದ್ಧವಾಯಿತು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಪಾಕಿಸ್ತಾನ ತಂಡ, ಎದುರಾಳಿ ತಂಡದ ವೇಗಿ ಜುನೈದ್ ಸಿದ್ದೀಕ್ (18ಕ್ಕೆ4) ಹಾಗೂ ಭಾರತ ಮೂಲದ ಸ್ಪಿನ್ನರ್ ಸಿಮ್ರನ್‌ಜೀತ್ ಸಿಂಗ್ (26ಕ್ಕೆ3) ಪರಿಣಾಮಕಾರಿ ಬೌಲಿಂಗ್ ದಾಳಿಯಿಂದಾಗಿ 146 ರನ್ ಗಳಿಸಲಷ್ಟೇ ಶಕ್ತವಾಯಿತು.

ಸವಾಲಿನ ಗುರಿ ಬೆನ್ನಟ್ಟಿದ ಅನನುಭವಿ ಯುಎಇ ತಂಡವು ಪಾಕಿಸ್ತಾನದ ಸಂಘಟಿತ ಬೌಲಿಂಗ್ ದಾಳಿ ಎದುರಿಸುವಲ್ಲಿ ವಿಫಲವಾಯಿತು. ವಿಕೆಟ್ ಕೀಪರ್ ರಾಹುಲ್ ಚೋಪ್ರಾ (35; 35ಎ) ಹೊರತುಪಡಿಸಿದರೆ, ಉಳಿದ್ಯಾವ ಬ್ಯಾಟರ್‌ಗಳೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಹೀಗಾಗಿ, ಯುಎಇ 17.4 ಓವರ್‌ಗಳಲ್ಲಿ 105 ರನ್‌ಗಳಿಗೆ ಆಲೌಟ್ ಆಯಿತು.

ಪಾಕಿಸ್ತಾನದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಶಾಹೀನ್ ಅಫ್ರಿದಿ
ಎಎಫ್‌ಪಿ ಚಿತ್ರ

ಬ್ಯಾಟಿಂಗ್‌ನಲ್ಲೂ ಉಪಯುಕ್ತ ಕೊಡುಗೆ ನೀಡಿದ್ದ ಶಾಹೀನ್ ಅಫ್ರಿದಿ (29 ರನ್ ಹಾಗೂ 16ಕ್ಕೆ2) ಅವರು ಬೌಲಿಂಗ್‌ನಲ್ಲೂ ಮಿಂಚಿದರು.

ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ತಂಡಕ್ಕೆ ಫಖರ್ ಜಮಾನ್ (50; 36) ಅವರು ನಾಯಕ ಸಲ್ಮಾನ್ ಆಘಾ(20; 27ಎ) ಜೊತೆಗೆ ನಾಲ್ಕನೇ ವಿಕೆಟ್‌ಗೆ 61 ರನ್ ಜತೆಯಾಟವಾಡಿ ಆಸರೆಯಾಗಿದ್ದರು. 18.5 ಓವರ್‌ಗಳಲ್ಲಿ 128 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡಿದ್ದ ಪಾಕಿಸ್ತಾನಕ್ಕೆ ಶಾಹೀನ್ ಅಫ್ರಿದಿ ಅವರು (29; 14ಎ) ಕೊನೆಯ ಓವರ್‌ನಲ್ಲಿ ಎರಡು ಸಿಕ್ಸರ್, ಒಂದು ಬೌಂಡರಿ ಸಹಿತ 18 ರನ್ ಸಿಡಿಸಿ, ಸವಾಲಿನ ಮೊತ್ತ ಕಲೆಹಾಕುವಲ್ಲಿ ನೆರವಾದರು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 146 (ಫಖರ್ ಜಮಾನ್ 50, ಶಾಹೀನ್ ಅಫ್ರಿದಿ 29; ಜುನೈದ್ ಸಿದ್ದೀಕ್ 18ಕ್ಕೆ4, ಸಿಮ್ರನ್‌ಜೀತ್ ಸಿಂಗ್ 26ಕ್ಕೆ3) ಯುಎಇ: 17.4 ಓವರ್‌ಗಳಲ್ಲಿ 105 (ರಾಹುಲ್ ಚೋಪ್ರಾ 35, ಶಾಹೀನ್ ಅಫ್ರಿದಿ 16ಕ್ಕೆ2, ಹ್ಯಾರಿಸ್ ರವೂಫ್ 19ಕ್ಕೆ2, ಅಬ್ರಾರ್ ಅಹಮದ್ 13ಕ್ಕೆ2)

ಪ್ರಧಾನಿ ಮೋದಿಗೆ ಜೆರ್ಸಿ ಉಡುಗೊರೆ ನೀಡಿದ ಮೆಸ್ಸಿ

ನವದೆಹಲಿ (ಪಿಟಿಐ): ಅರ್ಜೆಂಟೀನಾದ ಫುಟ್‌ಬಾಲ್ ತಾರೆ ಲಯೊನೆಲ್ ಮೆಸ್ಸಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ 75ನೇ ವರ್ಷದ ಹುಟ್ಟುಹಬ್ಬಕ್ಕೆ 2022ರ ವಿಶ್ವಕಪ್ ಟೂರ್ನಿಯಲ್ಲಿ ಧರಿಸಿದ್ದ ಜೆರ್ಸಿಯನ್ನು ಉಡುಗೊರೆಯಾಗಿ ಕಳುಹಿಸಿದ್ದಾರೆ.

ಈ ಬಗ್ಗೆ ‘ಗೋಟ್ (GOAT - Greatest Of All Time) ಟೂರ್ ಆಫ್ ಇಂಡಿಯಾ 2025’ (ಸಾರ್ವಕಾಲಿಕ ಮಹಾನ್ ಆಟಗಾರನ ಭಾರತ ಪ್ರವಾಸ) ಕಾರ್ಯಕ್ರಮದ ಸಂಘಟಕ ಸತದ್ರು ದತ್ತಾ ಅವರು ಬುಧವಾರ ಮಾಹಿತಿ ನೀಡಿದ್ದಾರೆ.

‘ಭಾರತ ಭೇಟಿ ಸಂಬಂಧ ಮೆಸ್ಸಿ ಅವರೊಂದಿಗೆ ಕಳೆದ ಫೆಬ್ರುವರಿಯಲ್ಲಿ ಮಾತನಾಡುವ ವೇಳೆ, ಪ್ರಧಾನಿ ಮೋದಿಯವರ 75ನೇ ಹುಟ್ಟುಹಬ್ಬದ ಬಗ್ಗೆ ಪ್ರಸ್ತಾಪಿಸಿದ್ದೆ. ಆಗ, ಹಸ್ತಾಕ್ಷರವುಳ್ಳ ಜೆರ್ಸಿಯನ್ನು ಪ್ರಧಾನಿಯವರಿಗೆ ಉಡುಗೊರೆಯಾಗಿ ನೀಡುವುದಾಗಿ ಮೆಸ್ಸಿ ಹೇಳಿದ್ದರು’ ಎಂದು ದತ್ತಾ ಪಿಟಿಐಗೆ ತಿಳಿಸಿದ್ದಾರೆ.

‘ಉಡುಗೊರೆಯು ಇನ್ನು ಎರಡು ಮೂರು ದಿನಗಳಲ್ಲಿ ಪ್ರಧಾನಿಯವರಿಗೆ ತಲುಪಲಿದೆ’ ಎಂದೂ ಹೇಳಿದ್ದಾರೆ.

ಆಸ್ಟ್ರೇಲಿಯಾ ಎದುರಿನ ಏಕದಿನ ಸರಣಿ • ಕ್ರಾಂತಿ ಗೌಡ್‌ಗೆ 3 ವಿಕೆಟ್

ಸ್ಮೃತಿ ಮಂದಾನ ಶತಕ, ಭಾರತಕ್ಕೆ ಜಯ

ಮುಲ್ಲನಪುರ (ಪಂಜಾಬ್) (ಪಿಟಿಐ): ಸ್ಮೃತಿ ಮಂದಾನ ಅವರು ಏಕದಿನ ಕ್ರಿಕೆಟ್‌ನಲ್ಲಿ ಭಾರತದ ಪರ ಎರಡನೇ ಅತಿ ವೇಗದ ಶತಕ ಬಾರಿಸಿದರು. ಅವರ ಬಿರುಸಿನ ಶತಕದ ನೆರವಿನಿಂದ ಭಾರತ ಬುಧವಾರ ನಡೆದ ಮಹಿಳೆಯರ ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡದ ಮೇಲೆ 102 ರನ್‌ಗಳ ಭಾರಿ ಜಯ ದಾಖಲಿಸಿತು.

ಇದರಿಂದ ಮೂರು ಪಂದ್ಯಗಳ ಸರಣಿ 1–1 ಸಮನಾಯಿತು. ಮೂರನೇ ಏಕದಿನ ಪಂದ್ಯ ಇದೇ 20ರಂದು ನವದೆಹಲಿಯಲ್ಲಿ ನಡೆಯಲಿದೆ.

91 ಎಸೆತಗಳಲ್ಲಿ 14 ಬೌಂಡರಿ, ನಾಲ್ಕು ಸಿಕ್ಸರ್‌ಗಳ ನೆರವಿನಿಂದ 117 ರನ್ ಹೊಡೆದ ಸ್ಮೃತಿ ಅವರು ಭಾರತ 292 ರನ್ ಪೇರಿಸಲು ನೆರವಾದರು. ಇದು ಆಸ್ಟ್ರೇಲಿಯಾ ತಂಡದ ವಿರುದ್ಧ ಭಾರತದ ಅತ್ಯಧಿಕ ಮೊತ್ತ. ಈ ಪಂದ್ಯದಲ್ಲೂ ಕೆಲವು ಕ್ಯಾಚುಗಳನ್ನು ಕೈಚೆಲ್ಲಿದರೂ ಆತಿಥೇಯರು 40.5 ಓವರುಗಳಲ್ಲಿ ಪ್ರವಾಸಿ ತಂಡವನ್ನು 190 ರನ್ನಿಗೆ ಆಲೌಟ್ ಮಾಡುವಲ್ಲಿ ಯಶಸ್ವಿಯಾದರು..

ಆಸ್ಟ್ರೇಲಿಯಾ ತಂಡ ಗುರಿ ಎದುರಿಸುವಲ್ಲಿ ಆರಂಭದಿಂದಲೇ ಪರದಾಡಿತು. ಮೊದಲ 10 ಓವರುಗಳಾಗುವಷ್ಟರಲ್ಲಿ ತಂಡ ಕೇವಲ 25 ರನ್ ಗಳಿಸಿದ್ದು, 2 ವಿಕೆಟ್‌ಗಳನ್ನೂ ಕಳೆದುಕೊಂಡಿತ್ತು. ಭಾರತದ ಸಾಂಘಿಕ ದಾಳಿಯೆದುರು ಆಸ್ಟ್ರೇಲಿಯಾ ಹೆಚ್ಚಿನ ಹೋರಾಟ ತೋರಲಿಲ್ಲ.

ವೇಗಿ ಕ್ರಾಂತಿ ಗೌಡ್ 9.5 ಓವರುಗಳಲ್ಲಿ 28 ರನ್ನಿಗೆ 3 ವಿಕೆಟ್ ಪಡೆದು ಗೆಲುವಿನಲ್ಲಿ ಮಿಂಚಿದರು. ದೀಪ್ತಿ ಶರ್ಮಾ 2 ವಿಕೆಟ್ ಪಡೆದು ಬೆಂಬಲ ನೀಡಿದರು. ತಂಡಕ್ಕೆ ಮರಳಿದ ರೇಣುಕಾ ಠಾಕೂರ್ ಎರಡನೇ ಓವರಿನಲ್ಲೇ ಜಾರ್ಜಿಯಾ ವೊಲ್ ಅವರ ವಿಕೆಟ್ ಪಡೆದು ಪ್ರವಾಸಿ ತಂಡಕ್ಕೆ ಪೆಟ್ಟು ನೀಡಿದರು. ಅನುಭವಿಗಳಾದ ಎಲಿಸ್ ಪೆರಿ (44) ಮತ್ತು ಅನ್ನಾಬೆಲ್ ಸದರ್‌ಲ್ಯಾಂಡ್ (45) ಬಿಟ್ಟರೆ ಉಳಿದವರಿಂದ ಪ್ರತಿರೋಧ ಎದುರಾಗಲಿಲ್ಲ. ಅನ್ನಾಬೆಲ್‌ಗೆ ಎರಡು ಜೀವದಾನಗಳೂ ದೊರೆತವು.

ಇದಕ್ಕೆ ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಭಾರತಕ್ಕೆ ಯುವತಾರೆ ಪ್ರತಿಕಾ ಮತ್ತು ಅನುಭವಿ ಎಡಗೈ ಆಟಗಾರ್ತಿ ಸ್ಮೃತಿ 11 ಓವರುಗಳಲ್ಲಿ 70 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದ್ದರು.

ಸ್ಮೃತಿ 77 ಎಸೆತಗಳಲ್ಲಿ ಮೂರಂಕಿ ಮೊತ್ತ ತಲುಪಿದರು. ಭಾರತದ ಅತಿ ವೇಗದ ಶತಕ ಹೊಡೆದ ಆಟಗಾರ್ತಿ ಎಂಬ ದಾಖಲೆಯೂ ಅವರ ಹೆಸರಿನಲ್ಲೇ ಇದೆ. ಜನವರಿಯಲ್ಲಿ ಐರ್ಲೆಂಡ್ ವಿರುದ್ಧ ರಾಜಕೋಟ್‌ನಲ್ಲಿ ಅವರು 70 ಎಸೆತಗಳಲ್ಲಿ ಶತಕ ದಾಖಲಿಸಿದ್ದರು.

ಹರ್ಲೀನ್ ಡಿಯೋಲ್ (10) ಮತ್ತು ನಾಯಕಿ ಹರ್ಮನ್‌ಪ್ರೀತ್ (17) ಉತ್ತಮ ಆರಂಭದ ಲಾಭ ಪಡೆಯಲಿಲ್ಲ. ಮಂದಾನ ನಾಲ್ಕನೆಯವರಾಗಿ ನಿರ್ಗಮಿಸಿದ ಮೇಲೆ ಸ್ಕೋರಿಂಗ್ ವೇಗ ಕೊಂಚ ತಗ್ಗಿತು. ಆದರೆ ದೀಪ್ತಿ ಶರ್ಮಾ (40, 53ಎ) ಮತ್ತು ರಿಷಾ ಘೋಷ್ (29, 33ಎ) ಅವರು ತಂಡದ ಮೊತ್ತವನ್ನು 300ರ ಸಮೀಪ ತಲುಪಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 49.5 ಓವರುಗಳಲ್ಲಿ 292 (ಪ್ರತಿಕಾ ರಾವಲ್ 25, ಸ್ಮೃತಿ ಮಂದಾನ 117, ದೀಪ್ತಿ ಶರ್ಮಾ 40, ರಿಚಾ ಘೋಷ್ 29, ಸ್ನೇಹ ರಾಣಾ 24; ಆ್ಯಷ್ಲೆ ಗಾರ್ಡನರ್ 39ಕ್ಕೆ2, ಡಾರ್ಸಿ ಬ್ರೌನ್ 42ಕ್ಕೆ3); ಆಸ್ಟ್ರೇಲಿಯಾ: 40.5 ಓವರುಗಳಲ್ಲಿ 190 (ಎಲ್ಲಿಸ್ ಪೆರಿ 44, ಅನ್ನಾಬೆಲ್ ಸದರ್‌ಲ್ಯಾಂಡ್ 45; ಕ್ರಾಂತಿ ಗೌಡ 28ಕ್ಕೆ3, ದೀಪ್ತಿ ಶರ್ಮಾ 24ಕ್ಕೆ2).

ಪಂದ್ಯದ ಆಟಗಾರ್ತಿ: ಸ್ಮೃತಿ ಮಂದಾನ.

ಶತಕ ಬಾರಿಸಿ ಸಂಭ್ರಮಿಸಿದ ಸ್ಮೃತಿ ಮಂದಾನ ಪಿಟಿಐ ಚಿತ್ರ

ರಣಜಿ ಟ್ರೋಫಿ: ಹುಬ್ಬಳ್ಳಿ, ಶಿವಮೊಗ್ಗದಲ್ಲಿ ಪಂದ್ಯಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡವು ಈ ಬಾರಿ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ತನ್ನ ಮೊದಲ ಪಂದ್ಯವನ್ನು ಸೌರಾಷ್ಟ್ರದ ವಿರುದ್ಧ ಆಡಲಿದೆ. ಈ ಪಂದ್ಯವು ರಾಜ್‌ಕೋಟ್‌ನಲ್ಲಿ ನಡೆಯಲಿದೆ.

ಅಕ್ಟೋಬರ್ 15ರಿಂದ ಆರಂಭವಾಗಲಿರುವ ಲೀಗ್ ಹಂತದಲ್ಲಿ ಕರ್ನಾಟಕವು ಒಟ್ಟು ಏಳು ಪಂದ್ಯಗಳನ್ನು ಆಡಲಿದೆ. ಅದರಲ್ಲಿ ಮೂರು ತವರಿನಲ್ಲಿ ನಡೆಯಲಿವೆ. ಶಿವಮೊಗ್ಗದಲ್ಲಿ ಗೋವಾ ಎದುರು ಹಾಗೂ ಹುಬ್ಬಳ್ಳಿಯಲ್ಲಿ ಚಂಡೀಗಡದ ಎದುರು ಪಂದ್ಯಗಳನ್ನು ಆಡಲಿದೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಮಧ್ಯಪ್ರದೇಶವನ್ನು ಕರ್ನಾಟಕ ಎದುರಿಸಲಿದೆ.

ಬಿಸಿಸಿಐ ಡಾಟ್‌ಕಾಮ್‌ನಲ್ಲಿ ಪ್ರಕಟಿಸಿರುವ ಕರ್ನಾಟಕದ ವೇಳಾಪಟ್ಟಿ ಇಂತಿದೆ: ಸೌರಾಷ್ಟ್ರ ವಿರುದ್ಧ (ರಾಜ್‌ಕೋಟ್; ಅ.15 ರಿಂದ 18), ಗೋವಾ ವಿರುದ್ಧ (ಶಿವಮೊಗ್ಗ; ಅ.25ರಿಂದ 28), ಕೇರಳದ ಎದುರು (ತಿರುವನಂತಪುರ; ನ. 1ರಿಂದ 4), ಮಹಾರಾಷ್ಟ್ರ ವಿರುದ್ಧ (ನಾಸಿಕ್; ನ 8ರಿಂದ 11), ಚಂಡೀಗಡ ವಿರುದ್ಧ (ಹುಬ್ಬಳ್ಳಿ; ನ 16 ರಿಂದ 19), ಮಧ್ಯಪ್ರದೇಶ ಎದುರು (ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು; ಜ.22 ರಿಂದ 25), ಪಂಜಾಬ್ ಎದುರು (ಚಂಡೀಗಡ; ಜ 29 ರಿಂದ ಫೆ. 1).

ಭಾರತ ಎ ತಂಡಕ್ಕೆ ಜಗದೀಶನ್ ಆಸರೆ

ಲಖನೌ (ಪಿಟಿಐ): ಎನ್. ಜಗದೀಶನ್ ಅವರು ಅಮೋಘ ಅರ್ಧಶತಕದ ಮೂಲಕ ಆಸ್ಟ್ರೇಲಿಯಾ ಎ ತಂಡದ ವಿರುದ್ಧ ಭಾರತ ಎ ತಂಡದ ಹೋರಾಟಕ್ಕೆ ಬಲ ತುಂಬಿದರು.

ಏಕನಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ‘ಟೆಸ್ಟ್’ ಪಂದ್ಯದ ಎರಡನೇ ದಿನದಾಟದ ಅಂತ್ಯಕ್ಕೆ ಭಾರತ ತಂಡವು 30 ಓವರ್‌ಗಳಲ್ಲಿ 1 ವಿಕೆಟ್‌ಗೆ 116 ರನ್ ಗಳಿಸಿದೆ. ಜಗದೀಶನ್ (ಬ್ಯಾಟಿಂಗ್ 50) ಮತ್ತು ಸಾಯಿ ಸುದರ್ಶನ್ (ಬ್ಯಾಟಿಂಗ್ 20) ಕ್ರೀಸ್‌ನಲ್ಲಿದ್ದಾರೆ.

ಆಸ್ಟ್ರೇಲಿಯಾ ಎ ತಂಡವು ಬೆಳಿಗ್ಗೆ ಮೊದಲ ಇನಿಂಗ್ಸ್‌ನಲ್ಲಿ 98 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 532 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಗ್ಲೆನ್ ಫಿಲಿಪ್ (ಔಟಾಗದೇ 123; 87ಎ, 4X18, 6X4) ಮತ್ತು ಲಿಯಾಮ್ ಸ್ಕಾಟ್ (81; 122ಎ, 4X8, 6X2) ಅವರು ತಂಡದ ಮೊತ್ತವನ್ನು ಬೆಳೆಸಿದರು. ಮೊದಲ ದಿನವಾದ ಮಂಗಳವಾರ ಆಸ್ಟ್ರೇಲಿಯಾ ತಂಡವು 5 ವಿಕೆಟ್‌ಗಳಿಗೆ 337 ರನ್ ಗಳಿಸಿತ್ತು. ಸ್ಯಾಮ್ ಕೋನ್ಸ್ಟಾಸ್ ಅವರು ಗಳಿಸಿದ ಶತಕದಿಂದಾಗಿ ದೊಡ್ಡ ಮೊತ್ತ ಪೇರಿಸಿತ್ತು. ಮಂಗಳವಾರ ಈ ಮೊತ್ತಕ್ಕೆ ಮತ್ತೆ 195 ರನ್‌ಗಳನ್ನು ಸೇರಿಸಲು ಫಿಲಿಪ್ ಮತ್ತು ಲಿಯಾಮ್ ಆಟದಿಂದ ಸಾಧ್ಯವಾಯಿತು.

ಇನಿಂಗ್ಸ್ ಆರಂಭಿಸಿದ ಭಾರತ ಎ ತಂಡಕ್ಕೆ ಅಭಿಮನ್ಯು ಈಶ್ವರನ್ (44) ಮತ್ತು ಜಗದೀಶನ್ 88 ರನ್ ಜತೆಯಾಟದೊಂದಿಗೆ ಉತ್ತಮ ಆರಂಭ ನೀಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ ಎ: 98 ಓವರ್‌ಗಳಲ್ಲಿ 6ಕ್ಕೆ532 ಡಿಕ್ಲೇರ್ಡ್ (ಲಿಯಾಮ್ ಸ್ಕಾಟ್ 81, ಜೋಶ್ ಫಿಲಿಪ್ ಔಟಾಗದೇ 123, ಗುರ್ನೂರ್ ಬ್ರಾರ್ 87ಕ್ಕೆ2, ಹರ್ಷ ದುಬೆ 141ಕ್ಕೆ3) ಭಾರತ: 30 ಓವರ್‌ಗಳಲ್ಲಿ 1 ವಿಕೆಟ್‌ಗೆ 116 (ಅಭಿಮನ್ಯು ಈಶ್ವರನ್ 44, ಎನ್. ಜಗದೀಶನ್ ಬ್ಯಾಟಿಂಗ್ 50)

ಕಂಚಿನ ಪದಕಕ್ಕೆ ಅಂತಿಮ್ ಸೆಣಸಾಟ

ವಿಶ್ವ ಕುಸ್ತಿ: ಹೊರಬಿದ್ದ ಜ್ಯೋತಿ ಬೆರಿವಾಲ್, ರಾಧಿಕಾ

ಝಾಗ್ರೆಬ್ (ಕ್ರೊವೇಷ್ಯಾ), (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಬೆಳ್ಳಿ ವಿಜೇತೆ ಲೂಸಿಯಾ ಯೆಪೆಝ್ ಗುಝ್ಮನ್ ಅವರ ಎದುರು ಬುಧವಾರ ಸೆಮಿಫೈನಲ್‌ನಲ್ಲಿ ಸೋಲನುಭವಿಸಿದ ಭಾರತದ ಅಂತಿಮ್ ಪಂಘಲ್ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್ ಮಹಿಳೆಯರ 53 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕಕ್ಕಾಗಿ ಸೆಣಸಾಡಲಿದ್ದಾರೆ.

ಮನಿಷಾ ಭಾನವಾಲಾ (62 ಕೆ.ಜಿ) ಅವರು ರೆಪೆಷಾಜ್ ಮೂಲಕ ಪದಕದ ಆಸೆಯನ್ನು ಜೀವಂತವಾಗಿರಿಸಿಕೊಂಡಿದ್ದಾರೆ. ಆದರೆ ರಾಧಿಕಾ (68 ಕೆ.ಜಿ) ಮತ್ತು ಜ್ಯೋತಿ ಬೆರಿವಾಲ್ ಅವರು ಈ ಪ್ರತಿಷ್ಠಿತ ಕೂಟದ ಐದನೇ ದಿನ ಆರಂಭದ ಹಂತದಲ್ಲಿ ಹೊರಬಿದ್ದರು.

2023ರ ಆವೃತ್ತಿಯಲ್ಲಿ ಕಂಚಿನ ಪದಕ ಗೆದ್ದಿದ್ದ ಅಂತಿಮ್, ಈ ಬಾರಿ ಸ್ಪೇನ್‌ನ ಕಾರ್ಲಾ ಜುಮೆ ಸೊನೆರ್ ಅವರನ್ನು ಕೇವಲ 23 ಸೆಕೆಂಡುಗಳಲ್ಲಿ ಸೋಲಿಸಿ ಉತ್ತಮ ಆರಂಭ ಮಾಡಿದ್ದರು. ಕ್ವಾರ್ಟರ್‌ಫೈನಲ್‌ನಲ್ಲಿ ಚೀನಾದ ಝೂಂಗ್ ಅವರನ್ನು 9–8 ರಿಂದ ಸೋಲಿಸಲು ಅಂತಿಮ ಕ್ಷಣದವರೆಗೆ ಪರಿಶ್ರಮಪಡಬೇಕಾಯಿತು. ಆದರೆ ಈಕ್ವೆಡೋರ್‌ನ ಗುಝ್ಮನ್ ಅವರು ಸೆಮಿಫೈನಲ್‌ನಲ್ಲಿ ಹಿಡಿತ ಸಾಧಿಸಿ ಭಾರತದ ಪೈಲ್ವಾನ್ ವಿರುದ್ಧ 5–3ರಲ್ಲಿ ಜಯಗಳಿಸಿದರು. ತಾಂತ್ರಿಕ ಕೌಶಲದಲ್ಲೂ ಗುಝ್ಮನ್ ಮುಂದಿದ್ದರು.


ಅಂತಿಮ್ ಪಂಘಲ್

ಮನಿಷಾ ಅವರು 0–8 ರಿಂದ ಉತ್ತರ ಕೊರಿಯಾದ ಒಕ್ ಜು ಕಿಮ್ ಎದುರು ಹೆಚ್ಚಿನದೇನನ್ನೂ ಸಾಧಿಸಲಾಗಲಿಲ್ಲ. ಕಿಮ್ ನಂತರ ಫೈನಲ್‌ವರೆಗೆ ತಲುಪಿದ ಕಾರಣ ಮನಿಷಾ ಅವರಿಗೆ ರೆಪೆಷಾಜ್ ಮೂಲಕ ಪದಕ ಗೆಲ್ಲುವ ಅವಕಾಶ ಜೀವಂತವಾಗಿ ಉಳಿಯಿತು.

ಪ್ರಿಕ್ವಾರ್ಟರ್‌ಗೆ ಸಾತ್ವಿಕ್– ಚಿರಾಗ್

ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್: ಲಕ್ಷ್ಯ ಸೇನ್ ನಿರ್ಗಮನ

ಶೆಂಜೆನ್ (ಚೀನಾ), (ಪಿಟಿಐ): ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ, ಚೀನಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಅಂತಿಮ 16ರ ಸುತ್ತನ್ನು ತಲುಪಿತು. ಆದರೆ ಸಿಂಗಲ್ಸ್‌ನಲ್ಲಿ ಭಾರತದ ಅಗ್ರ ಆಟಗಾರ ಲಕ್ಷ್ಯ ಸೇನ್ ಮೊದಲ ಸುತ್ತನ್ನು ದಾಟಲು ಸಾಧ್ಯವಾಗಲಿಲ್ಲ.

ಹೋದ ವಾರವಷ್ಟೇ ಹಾಂಗ್‌ಕಾಂಗ್ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದ ಸಾತ್ವಿಕ್– ಚಿರಾಗ್ ಅವರು ಡಬಲ್ಸ್ ಮೊದಲ ಸುತ್ತಿನಲ್ಲಿ ಮಲೇಷ್ಯಾದ ಜುನೈದಿ ಅರಿಫ್– ರಾಯ್ ಕಿಂಗ್ ಯಾಪ್ ಅವರನ್ನು 24–22, 21–13 ರಿಂದ ಸೋಲಿಸಿದರು. ಗೆಲ್ಲಲು ಭಾರತದ ಜೋಡಿ 42 ನಿಮಿಷ ತೆಗೆದುಕೊಂಡಿತು.

ಹಾಂಗ್‌ಕಾಂಗ್‌ನಲ್ಲಿ ಸಿಂಗಲ್ಸ್ ಫೈನಲ್ ತಲುಪಿದ್ದ ಲಕ್ಷ್ಯ ಸೇನ್ 11–21, 10–21ರಲ್ಲಿ ಫ್ರಾನ್ಸ್‌ನ ಟೋಮಾ ಜೂನಿಯರ್ ಪೊಪೊವ್ ಅವರಿಗೆ ಮಣಿದರು. ಇದರೊಂದಿಗೆ ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಅಂತ್ಯಗೊಂಡಿತು. ಕನ್ನಡಿಗ ಆಯುಷ್ ಶೆಟ್ಟಿ ಮಂಗಳವಾರವೇ ಮೊದಲ ಸುತ್ತಿನ ಪಂದ್ಯದಲ್ಲಿ ಸೋಲನುಭವಿಸಿದ್ದರು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಧ್ರುವ್ ಕಪಿಲ ಮತ್ತು ತನಿಶಾ ಕ್ರಾಸ್ಟೊ ಜೋಡಿಯೂ ಬೇಗ ನಿರ್ಗಮಿಸಿತು. ಎರಡನೇ ಶ್ರೇಯಾಂಕದ ಸ್ಥಳೀಯ ಜೋಡಿ ಫೆಂಗ್ ಯಾನ್ ಝೆ– ಹುವಾಂಗ್ ಡಾಂಗ್ ಪಿಂಗ್ 21–19, 21–13 ರಿಂದ ಕಪಿಲ– ತನಿಶಾ ಜೋಡಿಯನ್ನು ಹಿಮ್ಮೆಟ್ಟಿಸಿ 16ರ ಸುತ್ತನ್ನು ತಲುಪಿತು.

ಚುಟುಕು ಸುದ್ದಿ

ವಾಲಿಬಾಲ್: ಎಎಲ್‌ವಿ ತಂಡಕ್ಕೆ ಸುಲಭ ಜಯ

ಬೆಂಗಳೂರು: ಎಎಲ್‌ವಿ ತಂಡವು ರಾಜ್ಯ ಫುಟ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ಎ. ಲೋಕೇಶ್ ಗೌಡ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಸೀನಿಯರ್ ವಾಲಿಬಾಲ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ ಲೀಗ್ ಪಂದ್ಯದಲ್ಲಿ ಬುಧವಾರ 3–0ಯಿಂದ ಎಸ್‌ಎಚ್‌ಬಿ ತಂಡವನ್ನು ನಿರಾಯಾಸವಾಗಿ ಸೋಲಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ದಿನದ ಮತ್ತೊಂದು ಪಂದ್ಯದಲ್ಲಿ ಎಸ್‌ಡಿಎಂ ತಂಡವು 3–2ರಿಂದ ಪಿಒಎಸ್ ವಿರುದ್ಧ ಗೆಲುವು ಸಾಧಿಸಿತು.

ಮಹಿಳೆಯರ ವಿಭಾಗದ ಪಂದ್ಯದಲ್ಲಿ ಪಿಒಎಸ್ ತಂಡವು 3–0ಯಿಂದ ಎಂಸಿಸಿ ತಂಡವನ್ನು ಸುಲಭವಾಗಿ ಮಣಿಸಿತು.

ಕುತೂಹಲ ಘಟ್ಟದಲ್ಲಿ ಕೋಲ್ಟ್ಸ್–ಬರೋಡ ಪಂದ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ಕೇವಲ 54 ರನ್ ಅಂತರದಲ್ಲಿ 8 ವಿಕೆಟ್ ಕಳೆದುಕೊಂಡ ಕೆಎಸ್‌ಸಿಎ ಕೋಲ್ಟ್ಸ್ ತಂಡ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದ ಮೂರನೇ ದಿನವಾದ ಬುಧವಾರ ಸಂಕಷ್ಟಕ್ಕೆ ಸಿಲುಕಿತು. ಕಡೆಯ ದಿನ ಬರೋಡ ಗೆಲುವಿಗೆ 216 ರನ್ ಬೇಕಿದೆ.

ಇಲ್ಲಿನ ಎಸ್‌ಡಿಎನ್ ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಕೋಲ್ಟ್ಸ್ ಎರಡನೇ ಇನಿಂಗ್ಸ್‌ನಲ್ಲಿ ಹರ್ಷಿಲ್ ಧರ್ಮಾನಿ (105; 144 ಎ, 4x12, 6x2) ಶತಕ ಸಿಡಿಸಿದರೆ, ನಾಯಕ ಅನೀಶ್ವರ್ ಗೌತಮ್ (92; 107 ಎ, 4X14, 6X1) ಶತಕದ ಹೊಸ್ತಿಲಲ್ಲಿ ಎಡವಿದರು.

ಈ ಇಬ್ಬರು ಔಟಾಗುತ್ತಲೇ ಉಳಿದ ಬ್ಯಾಟರ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು. ತಂಡವು 382 ರನ್‌ಗೆ ಪತನಗೊಂಡಿತು. ಬರೋಡ ಪರ ರಸಿಕ್ ದಾರ್ 3 ಹಾಗೂ ಭಾರ್ಗವ್ ಭಟ್, ಲಕ್ಷಿತ್, ಪ್ರದೀಪ್ ಯಾದವ್ ತಲಾ ಎರಡು ವಿಕೆಟ್ ಪಡೆದರು.

ಕೆಎಸ್‌ಸಿಎ ಕೋಲ್ಟ್ಸ್ ತಂಡದ ಪರ ಶತಕ ಸಿಡಿಸಿದ ಹರ್ಷಿಲ್ ಧರ್ಮಾನಿ
ಪ್ರಜಾವಾಣಿ ಚಿತ್ರ

358 ರನ್‌ಗಳ ಗುರಿ ಬೆನ್ನತ್ತಿದ ಬರೋಡ ದಿನದಂತ್ಯಕ್ಕೆ 2 ವಿಕೆಟ್‌ಗೆ 142 ರನ್ ಗಳಿಸಿ ಉತ್ತಮ ಆರಂಭ ಮಾಡಿತು. ಆರಂಭಿಕ ಜ್ಯೋತ್ಸಿಲ್ ಸಿಂಗ್ 74 ಹಾಗೂ ಶಿವಾಲಿಕ್ ಶರ್ಮ 35 ರನ್ ಗಳಿಸಿ ಗುರುವಾರಕ್ಕೆ ಆಟ ಕಾಯ್ದುಕೊಂಡರು.

ಸಂಕ್ಷಿಪ್ತ ಸ್ಕೋರ್: ಎಸ್‌ಡಿಎನ್ ಆರ್‌ಡಬ್ಲ್ಯು ಕ್ರೀಡಾಂಗಣ: ಮೊದಲ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 47.3 ಓವರ್‌ಗಳಲ್ಲಿ 184; ಬರೋಡ ಕ್ರಿಕೆಟ್ ಸಂಸ್ಥೆ: 59 ಓವರ್‌ಗಳಲ್ಲಿ 209; ಎರಡನೇ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 92.3 ಓವರ್‌ಗಳಲ್ಲಿ 382 (ಹರ್ಷಿಲ್ ಧರ್ಮಾನಿ 105, ಅನೀಶ್ವರ್ ಗೌತಮ್ 92. ರಸಿಕ್ ದಾರ್ 51ಕ್ಕೆ 3); ಬರೋಡ ಕ್ರಿಕೆಟ್ ಸಂಸ್ಥೆ: 56 ಓವರ್‌ಗಳಲ್ಲಿ 2ಕ್ಕೆ 142 (ಜ್ಯೋತ್ಸ್ನಿಲ್ ಸಿಂಗ್ ಔಟಾಗದೇ 74, ಶಿವಾಲಿಕ್ ಶರ್ಮ ಔಟಾಗದೇ 35)

ಎಸ್‌ಜೆಸಿಇ ಕ್ರೀಡಾಂಗಣ, ಮೈಸೂರು: ಮೊದಲ ಇನಿಂಗ್ಸ್: ಆಂಧ್ರ ಕ್ರಿಕೆಟ್ ಸಂಸ್ಥೆ: 23.2 ಓವರ್‌ಗಳಲ್ಲಿ 87; ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ: 105.1 ಓವರ್‌ಗಳಲ್ಲಿ 455; ಎರಡನೇ ಇನಿಂಗ್ಸ್: ಆಂಧ್ರ ಕ್ರಿಕೆಟ್ ಸಂಸ್ಥೆ: 129.2 ಓವರ್‌ಗಳಲ್ಲಿ 500 (ಅಭಿಷೇಕ್ ರೆಡ್ಡಿ 107, ಹೇಮಂತ್ ರೆಡ್ಡಿ 105, ಅಶ್ವಿನ್ ಹೆಬ್ಬಾರ್ 83. ಮೃದುಲ್ ಸುರೋಚ್ 110ಕ್ಕೆ 3); ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ: 1 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೆ 8.

ಪ್ರೊ ಕಬಡ್ಡಿ ಲೀಗ್: ರೇಡಿಂಗ್‌ನಲ್ಲಿ ಮಿಂಚಿದ ನೀರಜ್ ನರ್ವಾಲ್

ದಬಂಗ್ ಡೆಲ್ಲಿಗೆ ಸತತ ಆರನೇ ಜಯ

ಜೈಪುರ: ವಿರಾಮದ ವೇಳೆಯ ಹಿನ್ನಡೆಯಿಂದ ಚೇತರಿಸಿಕೊಂಡ ದಬಂಗ್ ಡೆಲ್ಲಿ ಕೆ.ಸಿ. ತಂಡ ಬುಧವಾರ ನಡೆದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿತು. ಇದು ಡೆಲ್ಲಿ ತಂಡಕ್ಕೆ ಸತತ ಆರನೇ ಜಯವಾಗಿದ್ದು ಲೀಗ್‌ನಲ್ಲಿ ಅಗ್ರಸ್ಥಾನ ಬಲಪಡಿಸಿಕೊಂಡಿದೆ.

ಸವಾಯಿ ಮಾನ್‌ಸಿಂಗ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡ 33–29 ಪಾಯಿಂಟ್‌ಗಳಿಂದ ಜಯಗಳಿಸಿತು. ವಿರಾಮದ ವೇಳೆ ವಿಜೇತರು 9–14ರಲ್ಲಿ ಐದು ಪಾಯಿಂಟ್‌ಗಳ ಹಿನ್ನಡೆ ಅನುಭವಿಸಿದ್ದರು.

ವಿರಾಮದ ನಂತರ ರೇಡರ್ ನೀರಜ್ ನರ್ವಾಲ್ ಮಿಂಚಿ ಒಟ್ಟು 9 ಪಾಯಿಂಟ್ಸ್ ಕಲೆಹಾಕಿದರು. ಅವರ ಶ್ರಮ ವ್ಯರ್ಥವಾಗದಂತೆ, ರಕ್ಷಣೆಯ ವಿಭಾಗದಲ್ಲಿ ಸೌರಭ್ ನಂದಲ್ ಮತ್ತು ಫಝೆಲ್ ಅತ್ರಾಚಲಿ ಹೈಫೈವ್‌ಗಳ ಮೂಲಕ ಗಮನಸೆಳೆದರು.

ಟೈಟನ್ಸ್ ಆರಂಭದಲ್ಲಿ ವಿಜಯ್ ಮಲಿಕ್ ಅವರ ಕೆಲವು ರೇಡ್‌ಗಳ ಮೂಲಕ ಮುನ್ನಡೆ ಪಡೆಯಿತು. ಇದಕ್ಕೆ ಪೂರಕವಾಗಿ ಶುಭಂ ಶಿಂದೆ ಅವರ ಟ್ಯಾಕಲ್‌ಗಳೂ ತಂಡದ ನೆರವಿಗೆ ಬಂದು 4–0 ಮುನ್ನಡೆ ಪಡೆಯಿತು. ಈ ಅಂತರ ಕ್ರಮೇಣ 5–2ಕ್ಕೆ ಇಳಿಯಿತು. ವಿರಾಮದ ನಂತರ ಡೆಲ್ಲಿ ತಂಡ ನಿಯಂತ್ರಣ ಸಾಧಿಸಿತು.

ದಿನದ ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು 43–32ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಸುಲಭವಾಗಿ ಮಣಿಸಿತು.

ಡೆಲ್ಲಿ ತಂಡದ ರೇಡರ್‌ನನ್ನು ಹಿಡಿದ ತೆಲುಗು ಟೈಟನ್ಸ್ ಆಟಗಾರರು

ತೀವ್ರ ಹೋರಾಟ ಕಂಡ ಲೀಗ್

ಈ ಬಾರಿಯ ಪ್ರೊ ಕಬಡ್ಡಿ ಲೀಗ್‌ನ ಮೊದಲ 28 ಪಂದ್ಯಗಳಲ್ಲಿ ಅರ್ಧಕ್ಕೂ ಹೆಚ್ಚು ಪಂದ್ಯಗಳ ಫಲಿತಾಂಶ ಐದು ಅಥವಾ ಅದಕ್ಕಿಂತ ಕಡಿಮೆ ಅಂತರದಲ್ಲಿ ನಿರ್ಣಯಗೊಂಡಿರುವುದು ತೀವ್ರ ಪೈಪೋಟಿಯನ್ನು ಬಿಂಬಿಸಿದೆ.

ಕೇವಲ ಎಂಟು ಪಂದ್ಯಗಳಲ್ಲಷ್ಟೇ ಗೆಲುವಿನ ಅಂತರ 10 ಪಾಯಿಂಟ್‌ಗಳಿಗಿಂತ ಹೆಚ್ಚಾಗಿತ್ತು. ಕಳೆದ ಬಾರಿ (17) ಹೋಲಿಸಿದಲ್ಲಿ ಈ ಬಾರಿ 24 ಸೂಪರ್ ಟೆನ್‌ಗಳು ದಾಖಲಾಗಿರುವುದು ತಂಡಗಳು ಆಕ್ರಮಣಕಾರಿ ಆಟಕ್ಕೆ ಒತ್ತು ನೀಡಿರುವುದನ್ನು ಸೂಚಿಸಿದೆ. ಐದು ಪಂದ್ಯಗಳು ಗೋಲ್ಡನ್ ರೈಡ್‌ನಲ್ಲಿ ಇತ್ಯರ್ಥವಾಗಿವೆ.

ಗುರುವಾರದ ಪಂದ್ಯಗಳು:
ಜೈಪುರ ಪಿಂಕ್ ಪ್ಯಾಂಥರ್ಸ್– ಬೆಂಗಾಲ್ ವಾರಿಯರ್ಸ್ (ರಾತ್ರಿ 8)
ಯು ಮುಂಬಾ– ಪುಣೇರಿ ಪಲ್ಟನ್ (ರಾತ್ರಿ 9)

MARUTI SUZUKI ARENA
FOR THE ONES
WHO HAVE IT ALL
PRESENTING
VICTORIS
GOT IT ALL
VICTORIS
INTRODUCTORY PRICE
₹10 49 900*
LIMITED PERIOD ONLY
ALL-ROUND SAFETY
IMMERSIVE IN-CAR EXPERIENCE
EFFORTLESS TECHNOLOGY
CRAFTED INTERIORS
VERSATILE FUEL OPTIONS
Dolby ATMOS | Infinity by HARMAN
Level 2 ADAS with 10+ Features
+ 6 Airbags Standard
+ All Wheel Disc Brakes
Dolby Atmos 5.1 Surround Sound
+ Smartplay Pro X 25.65 cm
+ Alexa Auto Voice AI & 35+ In-built Apps
Smart Powered Tailgate with Gesture Control
+ Ventilated Front Seats
+ 8-way Powered Driver Seat
64-Colour Ambient Lighting
+ Panoramic Sunroof
+ Plush Leatherette Seats
Underbody S-CNG
+ Strong Hybrid with EV Mode
+ All Grip Select (4X4)
SCAN AND CONNECT TO A SHOWROOM NEAR YOU
E-BOOK TODAY AT WWW.MARUTISUZUKI.COM
CONTACT US AT 1800-102-1800
Applicable T&C available at your nearest dealership. Creative visualization. Car colour may vary due to printing on paper. Images used are for illustration purposes only. ADAS features are for driver assistance only. Driver is responsible for safe and attentive driving. Features may vary by model/conditions. For details on functioning of safety features including airbags, kindly refer to the Owner's Manual. Trademarks/logos being displayed belong to the respective owners. Infinity is the trademark of HARMAN International Industries, Incorporated. Dolby, Dolby Audio, Dolby Atmos and the double-D symbol are registered trademarks of Dolby Laboratories Licensing Corporation. Amazon, Alexa, and all related marks are trademarks of Amazon.com, Inc. or its affiliates. *Price for ex-showroom Delhi for Lxi (Petrol variant) applicable from 22nd September 2025.
VICTORIS